ಜನಪದ ಪಕ್ಷಿ



ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

ಜಾನಪದ ವರ್ಷ - 95

(1995ರಲ್ಲಿ ಪ್ರಕಟವಾದ ಜಾನಪದ ಕೃತಿ/ಲೇಖನಗಳ ಸಮೀಕ್ಷೆ)

ಸಂಪಾದಕರು:

ಡಾ. ಎಸ್.ಪಿ. ಪದ್ಮಪ್ರಸಾದ್

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ನೃಪತುಂಗ ರಸ್ತೆ, ಬೆಂಗಳೂರು - 560 002

JANAPADA VARSHA-95- (FOLKLORE YEAR-95) - An anthology of articles reviewing folklore publications in Kannada during 1995. Ed. Dr. S.R. PADMA PRASAD, Principal, T.V.V. College of Education, Madhugiri - 572 132, Published by Karnataka Janapada and Yakshagana Academy, Nrupatunga Road, BANGALORE 560 002.

First Pub: 1997 Pages: 8 + 128 Price: 25-00

© ಪ್ರಕಾಶಕರು

ಪ್ರತಿಗಳಿಗಾಗಿ:
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕೆನರಾ ಫೈನಾನ್ಸ್
ಕಾರ್ಪೋರೇಷನ್ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು 560 002.

ಬೆಲೆ ರೂ: 25-00

ಮುದ್ರಕರು:
ರಶ್ಮಿ ಮುದ್ರಣ,
ಸುಧಾಮನಗರ, ಬೆಂಗಳೂರು 560 027. ದೂರವಾಣಿ: 2243550

ಅಧ್ಯಕ್ಷರ ನುಡಿ

ಕರ್ನಾಟಕ ಅಪಾರ ಜಾನಪದ ಸಂಪತ್ತಿನ ಸಮೃದ್ಧಾಗಣ ಎಂಬ ಮಾತು ಈಗಾಗಲೇ ಸಂದೇಶಕ್ಕೆ ಎಡೆ ಇಲ್ಲದಂತೆ ಸಾಬೀತಾಗಿದೆ. ಜಾನಪದ ಹಾಡು, ಕತೆ, ಗಾದೆ ಮುಂತಾದವುಗಳು ಭಾಷೆ, ಲಯ, ಗೇಯತೆ ಕಥನ ವೈಶಿಷ್ಟ್ಯ, ಕಲ್ಪನ ಶೀಲನೆ, ಚಾತುರ್ಯ ವಿಶಿಷ್ಟ ಜೀವನ ದೃಷ್ಟಿ-ಮುಂತಾದವುಗಳಿಂದ ಆಕರ್ಷಿತರಾಗಿ ಹಿರಿಯ ತಲೆಮಾರಿನ ಜಾನಪದ ವಿದ್ವಾಂಸರು ಒಂದು ಬಗೆಯ ಪ್ರೀತಿ ಮತ್ತು ಮುಗ್ಧ ಕುತೂಹಲಗಳಿಂದ ಜಾನಪದ ಸಾಹಿತ್ಯವನ್ನು ಸಂಗ್ರಹ ಮಾಡತೊಡಗಿದರು. ಸುಮಾರು 5 ದಶಕಗಳಿಗೂ ಮೀರಿ ಇಂತಹ ಸಂಗ್ರಹ ಅಧಿಕವಾಗುತ್ತಲೇ ಬಂದು, ಈಗ ಸಂಗ್ರಹದ ಹಂತವನ್ನು ಧಾಟಿ ಅಧ್ಯಯನ, ವಿಶ್ಲೇಷಣೆ, ವಿಮರ್ಶೆ, ಸಂಶೋಧನೆಗಳ ಹಂತಕ್ಕೆ ಮತ್ತು ಅನ್ಯಜ್ಞಾನ ಶಿಸ್ತುಗಳ ಜೊತೆಯಲ್ಲಿ ಜಾನಪದವನ್ನು ತೌಲನಿಕವಾಗಿ ತೂಗಿ ನೋಡುವ ಅಧ್ಯಾನಿಕ ವೈಚಾರಿಕ ಹಂತಕ್ಕೆ ತಲುಪಿದೆ. ಇದರಿಂದಾಗಿ ಜಾನಪದ ಕ್ಷೇತ್ರದಲ್ಲಿ ಪ್ರಕಟವಾಗುತ್ತಿರುವ ಪುಸ್ತಕಗಳ ಸಂಖ್ಯೆಯು ಹೆಚ್ಚುತ್ತಾ ಇದೆ. ವಿದ್ಯಾರ್ಥಿಗಳು, ಅಧ್ಯಾಪಕರು, ಖಾಸಗಿ ಆಸಕ್ತರೂ, ಸಂಶೋಧಕರು, ಅನ್ಯಶಿಸ್ತುಗಳ ವಿಧ್ವತ್ ಜನರು ಈ ಕ್ಷೇತ್ರದಲ್ಲಿ ಗಮನಾರ್ಹ ಸಂಖ್ಯೆಯಲ್ಲಿ ಪುಸ್ತಕಗಳನ್ನು ಹೊರತರುತ್ತಿದ್ದಾರೆ. ನಾಡಿನ ಎಲ್ಲೆಡೆ ಜಾನಪದ ಜಾಗೃತಿ ಅತ್ಯಂತ ಆರೋಗ್ಯಕರವಾಗಿ ಪ್ರಕಟವಾಗುತ್ತಿವೆ. ಆದರೆ ಬೇರೆ ಬೇರೆ ಹಂತಗಳಲ್ಲಿ ಪ್ರಕಟವಾಗುತ್ತಿರುವ ಜಾನಪದ ಗ್ರಂಥಗಳ ಸಂಖ್ಯೆ ಏನು? ಪ್ರಕಾರಗಳಾವುವು, ಗುಣಮಟ್ಟವೇನು? ಎಂಬುದರ ಖಚಿತ ಮಾಹಿತಿ ಜಾನಪದ ಆಸಕ್ತರಿಗೆ ನಿಖರವಾಗಿ ದೊರೆಯುತ್ತಿಲ್ಲ. ಪ್ರಕಟವಾಗುತ್ತಿರುವ ಜಾನಪದ ಗ್ರಂಥಗಳಲ್ಲಿ ಕಾವ್ಯ ಕತೆ ಕ್ಷೇತ್ರಕಾರ್ಯ ಅನುಭವ ವಿಚಾರ, ಸಮೀಕ್ಷೆ, ಪರಿಚಯ, ವಿಚಾರಗೋಷ್ಠಿಗಳ ಪ್ರಬಂಧಗಳು, ಲೇಖನ ಸಂಗ್ರಹಗಳು, ಸಂಪ್ರದಾಯ ಕ್ರೀಡೆ, ಜಾತ್ರೆ ಹಬ್ಬ-ಹರಿದಿನಗಳಿಗೆ ಸಂಬಂಧಿಸಿದ ಕೃತಿಗಳು ಸಾಕಷ್ಟು ಪ್ರಮಾಣದಲ್ಲಿ ಇವೆ. ಕರ್ನಾಟಕದಲ್ಲಿ ಜಾನಪದ ಅಧ್ಯಯನ ಒಂದು ಹೊಸ ಆಯಾಮಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ಜಾನಪದ ಜಗತ್ತಿನ ಲಿಖಿತ ಚಟುವಟಿಕೆಗಳ ಮಾಹಿತಿಯನ್ನು ಒಂದೆಡೆ ಕಲೆ ಹಾಕುವುದು ಅತ್ಯಗತ್ಯವಾಗಿದೆ. ಜಾನಪದ ಅಕಾಡೆಮಿ ಈಗಾಗಲೇ ಜಾನಪದ ಗಂಗೋತ್ರಿ ಮತ್ತು ಜನಪದಗಳೆಂಬ ಜಾನಪದ ಲೇಖನಗಳ ಸಂಗ್ರಹಗಳನ್ನು ಪ್ರಕಟಿಸುತ್ತಿದೆ. ಅದೇ ಇಡೀ

ವರ್ಷದಲ್ಲಿ ಪ್ರಕಟವಾಗುವ ಎಲ್ಲ ಬಗೆಯ ಜಾನಪದ ಕೃತಿ ಸಮೂಹದ ಪರಿಚಯ, ವಿಶ್ಲೇಷಣೆ ಮತ್ತು ಮೌಲ್ಯಮಾಪನಗಳು ಒಟ್ಟಾರೆಯಾಗಿ ನಡೆಯುತ್ತಿಲ್ಲ. ಈ ನಿಟ್ಟಿನ ಕೊರತೆಯನ್ನು ತುಂಬುವ ಸಲುವಾಗಿ ಅಕಾಡೆಮಿ ಆಯಾ ವರ್ಷದಲ್ಲಿ ಪ್ರಕಟವಾಗುವ ಜಾನಪದ ಕೃತಿಗಳ ಬಗೆಗಿನ ಮಾಹಿತಿಯನ್ನು ಜಾನಪದ ವರ್ಷ ಎಂಬ ಹೆಸರಿನಲ್ಲಿ ಪ್ರಕಟಿಸಲು ಯೋಚಿಸಿದೆ. ಈ ದಿಸೆಯಲ್ಲಿ ಜಾನಪದ ವರ್ಷ 95 ಒಂದು ಆರಂಭಿಕ ಪ್ರಯತ್ನವಾಗಿ ಈಗಾಗಲೇ ಹೊರಬಂದಿದೆ.

ಜಾನಪದ ವರ್ಷ-95 ಈ ಕೃತಿಯನ್ನು ನಮ್ಮ ಖ್ಯಾತ ಜಾನಪದ ವಿದ್ವಾಂಸರಲ್ಲಿ ಒಬ್ಬರಾದ ಡಾ. ಎಸ್.ಪಿ. ಪದ್ಮಪ್ರಸಾದ್ ಅವರು ಸಿದ್ಧಪಡಿಸಿದ್ದಾರೆ. ಆಯಾ ವರ್ಷದಲ್ಲಿ ಪ್ರಕಟವಾಗುವ ಜಾನಪದ ಪುಸ್ತಕಗಳ ಸಂಪೂರ್ಣ ಮಾಹಿತಿಯ ಕೊರತೆ ಇರುವ ಸಂದರ್ಭದಲ್ಲಿ 95ರಲ್ಲಿ ಪ್ರಕಟವಾಗಿರುವ ಜಾನಪದ ಕೃತಿಗಳ ಒಟ್ಟಾರೆ ಸಮೀಕ್ಷೆಯನ್ನು ಈ ಮೂಲಕ ಅವರು ಮತ್ತು ಇತರ ವಿಮರ್ಶಕ ವಿದ್ವಾಂಸರು ಪ್ರಸ್ತುತಪಡಿಸಿದ್ದಾರೆ. 95ರಲ್ಲಿ ಪ್ರಕಟವಾಗಿರುವ ಎಲ್ಲ ಕೃತಿಗಳ ಮಾಹಿತಿ ಇಲ್ಲಿ ಲಭ್ಯವಾಗಿದೆ ಎಂದು ಹೇಳಲಾಗದಿದ್ದರೂ ಮುಖ್ಯ ಕೃತಿಗಳನ್ನಾದರೂ ಉಲ್ಲೇಖಿಸುವ, ಪರಿಚಯಿಸುವ, ವಿಮರ್ಶಿಸುವ ಮತ್ತು ಮೌಲ್ಯಮಾಪನ ಮಾಡುವ ಪ್ರಾಮಾಣಿಕ ಪ್ರಯತ್ನವನ್ನು ಡಾ: ಪದ್ಮಪ್ರಸಾದ್ ಮತ್ತು ಗೆಳೆಯರು ಈ ಕೃತಿಯಲ್ಲಿ ಬಿಂಬಿಸಿದ್ದಾರೆ. ಅವರ ಈ ಪ್ರಯತ್ನದಲ್ಲಿ ಜಾನಪದದ ಬಗ್ಗೆಯೇ ಮತ್ತು ಕರ್ನಾಟಕದಲ್ಲಿ ಅದು ಅರಳುತ್ತಿರುವ ಬಗೆಗೆ ಅವರಿಗಿರುವ ಪ್ರಾಮಾಣಿಕ ಕಾಳಜಿ ಮಾತ್ರವಲ್ಲದೇ, ಕನ್ನಡ ಪುಸ್ತಕ ಪ್ರಕಾಶನದ ಮತ್ತು ಮಾಹಿತಿಯ ಅವ್ಯವಸ್ಥೆಯ ನಡುವೆಯೂ ಅವರು ದೊರಕಿಸಿಕೊಂಡಿರುವ ಕೃತಿಗಳ ಬಗೆಗಿನ ಆಳವೂ, ಸೂಕ್ಷ್ಮವೂ ಆದ ಓದು ನಿಷ್ಪಕ್ಷಪಾತವಾದ ಸಮೀಕ್ಷಾ ಕೌಶಲ, ಗುಣಗ್ರಹಣ ಶಕ್ತಿ ಮತ್ತು ಜಾನಪದದ ಹಲವು ಬಗೆಗಳ ಖಚಿತ ಅರಿವು ಇಲ್ಲಿ ಎದ್ದು ಕಾಣುತ್ತವೆ. ಪ್ರಕಟಿತ ಪುಸ್ತಕಗಳನ್ನು ವೈಜ್ಞಾನಿಕವಾಗಿ ವರ್ಗೀಕರಿಸಿ ಸಮೀಕ್ಷಿಸುವ ದಿಶೆಯಲ್ಲಿ ಇದೊಂದು ಮುಖ್ಯ ಪ್ರಯತ್ನವಾಗಿದೆ. ಇಂಥದೊಂದು ಪುಸ್ತಕವನ್ನು ಅಕಾಡೆಮಿಗಾಗಿ ಸಿದ್ಧಮಾಡಿಕೊಟ್ಟ ಡಾ: ಎಸ್.ಪಿ. ಪದ್ಮಪ್ರಸಾದ್ ಅವರಿಗೆ ಮತ್ತು ಅವರ ಗೆಳೆಯರಿಗೆ ಹಾರ್ದಿಕ ಕೃತಜ್ಞತೆಗಳು. ಮುಂಬರುವ ಕೃತಿಗಳಲ್ಲಿ ಕರ್ನಾಟಕ ಜಾನಪದದ ಲಿಖಿತ ಚಟುವಟಿಕೆಗಳ ಸಂಪೂರ್ಣ ಮಾಹಿತಿಯನ್ನು ದೊರಕಿಸಿಕೊಡಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುವುದು. ಇದರಿಂದಾಗಿ ಜಾನಪದ ಕೃತಿಗಳನ್ನು ಅಧ್ಯಯನ ಮಾಡುವವರಿಗೆ ಒಂದು ಮಾಹಿತಿ ಗ್ರಂಥ ದೊರೆಯುವಂತೆ ಮಾಡಬೇಕೆಂಬುದೇ ನಮ್ಮ ಕಳಕಳಿ. ಕರ್ನಾಟಕ ಜಾನಪದದ ಅಧ್ಯಯನ ಶೀಲ ಬಂಧುಗಳು ಈ ನಿಟ್ಟಿನಲ್ಲಿ ಪೂರಕ ಸಲಹೆ ಸೂಚನೆಗಳನ್ನು ನೀಡಬೇಕೆಂದು ಕೋರುತ್ತೇನೆ. ಈ ಕೃತಿಯನ್ನು ಸುಂದರವಾಗಿ ಅಚ್ಚು ಮಾಡಿಕೊಟ್ಟ ರಶ್ಮಿ ಮುದ್ರಣಾಲಯದ ಸಿಬ್ಬಂದಿಗೆ ಅಕಾಡೆಮಿ ತನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತದೆ.

ಡಾ: ಎಚ್.ಜೆ. ಲಕ್ಕಪ್ಪಗೌಡ

ಅಧ್ಯಕ್ಷರು

ಪರಿವಿಡಿ

1. ಪ್ರಸ್ತಾವನೆ

2. 'ಕರ್ನಾಟಕ ಜಾತ್ರೆಗಳು' - ಪುಸ್ತಕಮಾಲೆ ೭
   ಎಸ್.ಜಿ. ಸಿದ್ಧರಾಮಯ್ಯ

3. ಸಂಶೋಧನೆ, ವಿಮರ್ಶೆ ೨೨
   ಡಾ. ಎಸ್.ಪಿ. ಪದ್ಮಪ್ರಸಾದ್

4. ಜಾನಪದ ಕಥಾ ಸಂಗ್ರಹಗಳು ೩೮
   ಡಾ. ಜಿ.ಎಂ. ಹೆಗಡೆ

5. ಜೀವನಚರಿತ್ರೆಗಳು ಮತ್ತು ಸಂಸ್ಮರಣ ಗ್ರಂಥಗಳು ೬೨
   ಡಾ. ಟಿ. ಗೋವಿಂದರಾಜು

6. ಜನಪದ ಗೀತ ಸಂಗ್ರಹಗಳು ೭೬
   ಎಂ.ಎಲ್. ನರಸಿಂಹಮೂರ್ತಿ

7. ಗಾದೆಗಳು, ಒಡಪುಗಳು ೮೦
   ಪಿ. ರಾಮಕೃಷ್ಣ

8. ಪತ್ರಿಕಾ ಲೇಖನಗಳು ೮೩
   ಡಾ. ಎಸ್.ಪಿ. ಪದ್ಮಪ್ರಸಾದ್

9. ಸಂಕೀರ್ಣ ೯೭
   ಡಾ. ಕಮಲಾ ಹಂಪನಾ

<u>ಅನುಬಂಧಗಳು</u>

1. ಜಾನಪದ ಗ್ರಂಥಸೂಚಿ - 1995
2. ಜಾನಪದ ಲೇಖನಸೂಚಿ - 1995
3. ಲೇಖಕರ ವಿಳಾಸಗಳು

ಪ್ರಸ್ತಾವನೆ

1995ರ ಕನ್ನಡ ಪ್ರಕಟಣೆಗಳ ಪೈಕಿ ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಮ್ಮ ದೃಷ್ಟಿ ಹಾಯಿಸಿದರೆ ಅನೇಕ ಸ್ವಾರಸ್ಯಕರ ಅಂಶಗಳು ನಮ್ಮ ಗಮನಕ್ಕೆ ಬರುತ್ತವೆ. ಈ ಅಂಶಗಳು ನಮ್ಮ ಜಾನಪದ ಅಧ್ಯಯನದ ದಿಕ್ಕುದೆಸೆ ಸ್ಥಿತಿಗತಿಗಳತ್ತಲೂ ಬೆಟ್ಟು ಮಾಡುತ್ತವೆ.

ನಮ್ಮ ಗಮನಕ್ಕೆ ಬಂದಂತೆ ಈ ಸಾಲಿನಲ್ಲಿ ಪ್ರಕಟವಾದ ಜಾನಪದ ಗ್ರಂಥಗಳ ಸಂಖ್ಯೆ ನಲವತ್ತೈದು. ಇದು ಡೆಮ್ಮಿ ಅಷ್ಟದಳದಲ್ಲಿ ಆರು ಸಾವಿರ ಪುಟಗಳನ್ನು ಮೀರುತ್ತದೆ. ಹಿಂದಿನ ವರ್ಷಗಳ ಪ್ರಕಟಣೆಗಳ ಸಂಖ್ಯೆ ಸರಾಸರಿ ಮೂವತ್ತೈದು. ಹಾಗಾದರೆ ಈ ಬಾರಿ ಸಂಖ್ಯೆ ಹೆಚ್ಚಿದೆ - ಎಂದು ಬೀಗುವಂತಿಲ್ಲ. ಕಾರಣ - ಈ ಬಾರಿ ಸಂಖ್ಯೆ ಹೆಚ್ಚಾಗಲು ಮುಖ್ಯ ಕಾರಣ ಕ.ಜಾ.ಯ. ಅಕಾಡೆಮಿ ದೊಡ್ಡ ಪ್ರಮಾಣದಲ್ಲಿ ಜಾನಪದ ಪ್ರಕಟಣೆಗಳನ್ನು ಹೊರತಂದಿರುವುದು. ಪ್ರಕಟಿತ ನಲವತ್ತೈದು ಪುಸ್ತಕಗಳ ಪೈಕಿ ಹದಿನಾರು ಈ ಅಕಾಡೆಮಿಯ ಪ್ರಕಟಣೆಗಳೇ. ಇದರ ನಂತರದ ಸ್ಥಾನ ಮೂರು ಮಹಾಪ್ರಬಂಧಗಳನ್ನು ಪ್ರಕಟಿಸಿದ ಕನ್ನಡ ಸಾಹಿತ್ಯ ಪರಿಷತ್ತಿಗೆ. ಪ್ರಸಿದ್ಧ ಸಂಸ್ಥೆಗಳಾದ ಉಡುಪಿಯ ಪ್ರಾದೇಶಿಕ ರಂಗಕಲೆಗಳ ಅಭಿವೃದ್ಧಿ ಕೇಂದ್ರ ಹಾಗೂ ಕರ್ನಾಟಕ ಜಾನಪದ ಪರಿಷತ್ತು ಕೇವಲ ಒಂದೊಂದು ಕೃತಿಗಳನ್ನು ಮಾತ್ರ ಪ್ರಕಟಿಸಿವೆ. ಈ ಸಂಸ್ಥೆಗಳು ಪ್ರಕಟಣೆಯತ್ತ ಗಮನ ಕಡಿಮೆ ಮಾಡಿವೆ ಎಂದು ಇದರರ್ಥ. ವಿಶ್ವವಿದ್ಯಾಲಯಗಳ ಪ್ರಕಟಣಾ ವಿಭಾಗಗಳೂ ಈ ಕೆಲಸ ಬಿಟ್ಟೇಬಿಟ್ಟಿವೆಯೇನೋ. ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಉಪನ್ಯಾಸ ಮಾಲೆಯ ಒಂದು ಚಿಕ್ಕ ಪುಸ್ತಿಕೆಯನ್ನು ಬಿಟ್ಟರೆ ಬೇರೆ ಜಾನಪದ ಕೃತಿಗಳೇ ಈ ವರ್ಷ ವಿಶ್ವವಿದ್ಯಾಲಯಗಳಿಂದ ಪ್ರಕಟವಾದಂತಿಲ್ಲ.

ಅಂದರೆ ನಮ್ಮ ಜಾನಪದ ಪ್ರಕಟಣೆಗಳ ಬಹುಪಾಲು ಕಾರ್ಯಸಂಘಟಿತರಲ್ಲದ, ಸ್ವಂತ ಮಾರಾಟದ ಅಥವಾ ಪ್ರಚಾರದ ವ್ಯವಸ್ಥೆ ಅಷ್ಟಾಗಿ ಇಲ್ಲದ, ಬರೆದ ಸಂಕಟಕ್ಕೆ ಪ್ರಕಟಿಸಲೇಬೇಕಾಗಿರುವ ಅನಿವಾರ್ಯತೆಗೆ ಸಿಕ್ಕಿಕೊಂಡ ಲೇಖಕರ ವೈಯಕ್ತಿಕ

(ಅನಿವಾರ್ಯ) ಶ್ರಮದ ಫಲವೇ ಆಗಿದೆ. ಪ್ರಕಟಿತ ಕೃತಿಗಳ ಪೈಕಿ ಅರ್ಧದಷ್ಟು ಇಂಥ ವೈಯಕ್ತಿಕ ಪ್ರಕಟಣೆಗಳು.

ಸಮೀಕ್ಷಾ ವರ್ಷದ ತುಂಬ ಸಮಾಧಾನ ತರುವ ಸಂಗತಿ ಎಂದರೆ ಈ ಪ್ರಕಟಣೆಗಳ ವಿಷಯ ವೈವಿಧ್ಯತೆ. ನಲವತ್ತೈದು ಕೃತಿಗಳ ಪೈಕಿ ಸುಮಾರು ಇಪ್ಪತ್ತು ಕೃತಿಗಳು ಸಂಶೋಧನೆ, ವಿಮರ್ಶೆ ವಿಶ್ಲೇಷಣೆಗಳಿಗೆ ಸಂಬಂಧಿಸಿದವು. ಬಹುಶಃ ಹಿಂದಿನ ಯಾವ ವರ್ಷದಲ್ಲೂ ಈ ವಿಭಾಗದಲ್ಲಿ ಇಷ್ಟೊಂದು ಕೃತಿಗಳು ಪ್ರಕಟವಾಗಿಲ್ಲವೆಂದು ಕಾಣುತ್ತದೆ. ಈ ಪೈಕಿ ಐದು ಪಿ.ಎಚ್.ಡಿ ನಿಬಂಧಗಳು. ಈ ಐದರ ಪೈಕಿ ಡಾ. ಎಂ.ಜಿ. ಈಶ್ವರಪ್ಪನವರ - "ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ" ಕೃತಿ ಅತ್ಯುತ್ತಮವಾದುದೆಂದು ನನ್ನ ಅಭಿಪ್ರಾಯ.

ಹಬ್ಬ, ಆಚರಣೆಗಳನ್ನು ಕುರಿತಂತೆ ಈ ಬಾರಿ ಎಂಟು ಪುಸ್ತಕಗಳು ಪ್ರಕಟವಾಗಿರುವುದೊಂದು ವಿಶೇಷ. ಇವೆಲ್ಲವೂ ಜಾತ್ರೆಗಳನ್ನು ಕುರಿತವು. ಇವುಗಳಲ್ಲಿ ಏಳು-ಅಕಾಡೆಮಿಯ ವಿಶೇಷ ಪುಸ್ತಕಮಾಲೆಯಲ್ಲಿ ಪ್ರಕಟವಾದ ಕೃತಿಗಳಾದರೆ, ಜಾತ್ರೆಗಳನ್ನು ಸಮಾಜ ಶಾಸ್ತ್ರೀಯ ದೃಷ್ಟಿಯಿಂದ ಅಧ್ಯಯನ ಮಾಡಿರುವ ಡಾ. ಚಂದ್ರಶೇಖರ ದಾಮ್ಲೆಯವರ ಕೃತಿಯೂ ಉಪಯುಕ್ತವಾಗಿದ್ದು ಉಡುಪಿಯ ಆರ್.ಆರ್.ಸಿ.ಯ ಪ್ರಕಟಣೆಯಾಗಿದೆ.

ಯಕ್ಷಗಾನಕ್ಕೆ ಸಂಬಂಧಿಸಿದಂತೆ ಮೂರು ಪುಸ್ತಕಗಳು ಪ್ರಕಟವಾಗಿವೆ.

ಜನಾಂಗಿಕ ಅಧ್ಯಯನಕ್ಕೆ ಸಂಬಂಧಿಸಿದಂತೆ ಮೂರು ಕೃತಿಗಳು ಪ್ರಕಟವಾಗಿದ್ದು ಇವು ಬಂಟರು, ಮ್ಯಾಸನಾಯಕರು ಹಾಗೂ ಹೆಳವರಿಗೆ ಸಂಬಂಧಿಸಿದ ಅಧ್ಯಯನಗಳಾಗಿವೆ. ಗ್ರಾಮದ ಅಧ್ಯಯನಕ್ಕೆ ಸಂಬಂಧಿಸಿದಂತೆ ಒಂದೇ ಒಂದು ಕೃತಿ ಪ್ರಕಟವಾಗಿದೆ. ಪ್ರಾದೇಶಿಕ ಅಧ್ಯಯನದ ಒಂದೇ ಕೃತಿ 'ಕೋಟರವರು' ಪ್ರಕಟವಾಗಿದೆ.

ಪ್ರಕಟಣೆಗೆ ಸಂಬಂಧಿಸಿದಂತೆ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ಜನಪದ ಸಾಹಿತ್ಯದ ಮೂಲಸಾಮಗ್ರಿಯನ್ನು, ಅಂದರೆ - ಕಥೆ, ಗೀತೆ, ಗಾದೆ ಇತ್ಯಾದಿಗಳನ್ನು ಸಂಗ್ರಹದ ಪ್ರಕಟಣೆಗಳು ತುಂಬಾ ಕಡಿಮೆಯಾಗಿರುವುದು. ಕತೆ ಹಾಗೂ ಗೀತೆಗಳ ತಲಾ ಎರಡು ಸಂಗ್ರಹಗಳು ಪ್ರಕಟವಾಗಿದ್ದರೆ, ಒಡಪುಗಳ ಒಂದು ಸಂಕಲನ ಪ್ರಕಟವಾಗಿದೆ. ಗಾದೆಗಳ ಸಣ್ಣ ಸಂಗ್ರಹ ಒಂದೇಒಂದು ಪ್ರಕಟವಾಗಿದ್ದು ಅದೇನೂ ಅಷ್ಟು ಚೆನ್ನಾಗಿಲ್ಲ. ಸಂಗ್ರಹಗಳ ಅಧ್ಯಯನ ಪೂರ್ಣ ಪ್ರಸ್ತಾವನೆಗಳೊಡನೆ ಸಾಹಿತ್ಯ ಸಂಗ್ರಹಗಳು ಹೆಚ್ಚು ಸಂಖ್ಯೆಯಲ್ಲಿ ಪ್ರಕಟವಾಗಬೇಕಾದ ಅಗತ್ಯ ಇನ್ನೂ ಇದೆ.

1995ರ ಪ್ರಕಟಣೆಗಳ ಪೈಕಿ ಅತ್ಯುತ್ತಮವೆಂದು ನಾನು ಗ್ರಹಿಸುವುದು 'ಸಿರಿ' ಗ್ರಂಥವನ್ನು. ಡೆಮಿ ಚತುರ್ವರ್ಥಾಕಾರದಲ್ಲಿ ನಾನೂರ್ಕೆವತ್ತು ಪುಟಗಳಷ್ಟಾಗುವ ಈ

ಕೃತಿ ಅಮೃತ ಸೋಮೇಶ್ವರ ಅವರ ಅಭಿನಂದನ ಸಂಪುಟ. ಅವರ ಬಗ್ಗೆ ಅಭಿನಂದನೆ, ನೆನಪುಗಳಿರುವ ಕೆಲವು ಲೇಖನಗಳನ್ನು ಬಿಟ್ಟರೆ (ಸುಮಾರು 80 ಪುಟ) ಉಳಿದ ಇಡೀ ಗ್ರಂಥ ದಕ್ಷಿಣ ಕನ್ನಡ ಜಿಲ್ಲೆಯ ಜಾನಪದಕ್ಕೆ ಸಂಬಂಧಿಸಿದ ಅಧ್ಯಯನ ಪೂರ್ಣ ಲೇಖನಗಳಿಂದ ಕೂಡಿದೆ. ಉತ್ತಮ ಮುದ್ರಣ, ಚಿತ್ರಗಳಿಂದ ಕೂಡಿದ ಇಂಥ ಗ್ರಂಥದ ಪ್ರಕಟಣೆ ಒಂದು ಸಾಹಸವೇ ಸರಿ. ಇದರಲ್ಲಿಯೂ ಯಕ್ಷಗಾನಕ್ಕೆ ಸಂಬಂಧಿಸಿದಂತೆ ಕೆಲವು ಲೇಖನಗಳಿವೆ. ಇದೊಂದು ಸುಂದರ ಸಾರ್ಥಕ ಸಂಪುಟ.

ಜಾನಪದಕ್ಕೆ ಸಂಬಂಧಿಸಿದಂತೆ ಕನ್ನಡದ ಪ್ರಮುಖ ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟವಾದ ಲೇಖನಗಳ ಸಂಖ್ಯೆ, ನಮ್ಮ ಗಮನಕ್ಕೆ ಬಂದಿರುವಂತೆ ನಲವತ್ತೊಂರು. ಇವುಗಳಲ್ಲಿ ಹೆಚ್ಚಿನವು ಟಿಪ್ಪಣಿ ರೂಪದವು. ನಮ್ಮ ಜನಪ್ರಿಯ ಪತ್ರಿಕೆಗಳಲ್ಲಿ ಪ್ರಕಟವಾಗುವ ಜನಪದ ಲೇಖನಗಳಲ್ಲಿ ಆಕರ್ಷಕ, ವಿಸ್ಮಯಕರ ಅಂಶಗಳ ಬಗೆಗೇ ಹೆಚ್ಚು ಒತ್ತು ಇರುವಂತೆ ಕಾಣುತ್ತದೆ. 'ಜಾನಪದ ಜಗತ್ತು' ಪತ್ರಿಕೆ ಕೂಡಾ ಸಮಯಕ್ಕೆ ಸರಿಯಾಗಿ ಪ್ರಕಟವಾಗಲಾರದೆ, ವಿದ್ವತ್ ಲೇಖನಗಳಿಗಿಂತ ಹೆಚ್ಚಾಗಿ ಸುದ್ದಿ ಪ್ರಚಾರ ಮತ್ತಿತರ ಅಲ್ಪ ಮೌಲ್ಯದ ಬರಹಗಳಿಗೇ ಸ್ಥಾನ ಕೊಡಬೇಕಾಗಿ ಬಂದಿರುವುದು ಅದಕ್ಕಿರುವ ಬೆಂಬಲದ ಕೊರತೆಯಿಂದಲೇ ವಿಶ್ವವಿದ್ಯಾಲಯದ ತ್ರೈಮಾಸಿಕಗಳೂ ಸಮಯಕ್ಕೆ ಸರಿಯಾಗಿ ಹೊರಬರದೆ ಅಲ್ಲಿಯೂ ಜಾನಪದ ವಿದ್ವತ್ ಲೇಖನಗಳ ಪ್ರಕಟಣೆಗೆ ಇಂಬು ಸಿಗದಂತಾಗಿದೆ. ಒಟ್ಟಿನಲ್ಲಿ ಅಧ್ಯಯನಪೂರ್ಣವಾದ ಜಾನಪದ ಲೇಖನಗಳಿಗೆ ಇಂದು ಸರಿಯಾದ ವೇದಿಕೆಯೇ ಕನ್ನಡದಲ್ಲಿ ಇಲ್ಲವಾಗಿದೆ. 'ಜಾನಪದ ಗಂಗೋತ್ರಿ' ಇಂಥ ಅವಕಾಶಗಳನ್ನೂ ಕಲ್ಪಿಸಿದೆಯಾದರೂ ಇಲ್ಲಿಯೂ ಸಮಯಪಾಲನೆ ಅಗತ್ಯ. ಜೊತೆಗೆ, ಇದೊಂದೇ ನಿಯತಕಾಲಿಕ ಈ ಕೆಲಸ ಮಾಡಿದರೆ ಸಾಲದು. ಇಷ್ಟೊಂದು ಜನ ಕೆಲಸಗಾರರಿರುವ ಈ ದೊಡ್ಡ ನಾಡಿನಲ್ಲಿ ಇಡೀ ವರ್ಷಕ್ಕೆ 20-25 ವಿದ್ವತ್‌ಪೂರ್ಣ ಲೇಖನಗಳು ಪ್ರಕಟವಾಗುವ ಅವಕಾಶ ಇಲ್ಲವೆಂದಾದರೆ ಈ ಕ್ಷೇತ್ರದ ಬೆಳವಣಿಗೆ ಆಗುವುದಾದರೂ ಹೇಗೆ?

ಸಮೀಕ್ಷಾ ವರ್ಷದ ಜಾನಪದ ಕೃತಿಗಳು ಎಲ್ಲೆಲ್ಲಿಂದ ಪ್ರಕಟವಾಗಿವೆ ಎಂಬುದನ್ನು ಗಮನಿಸಿದರೂ ಕೆಲವು ಸ್ವಾರಸ್ಯಕರ ಸಂಗತಿಗಳು ಹೊರಬೀಳುತ್ತವೆ. ಇಡೀ ಉತ್ತರ ಕರ್ನಾಟಕದಿಂದ ಒಟ್ಟು ಎಂಟು ಕೃತಿಗಳು ಮಾತ್ರ ಪ್ರಕಟವಾಗಿವೆ. (ಆದರೆ ಅಲ್ಲಿನ ಲೇಖಕರು ಬರೆದ ಕೆಲವು ಕೃತಿಗಳು ಬೆಂಗಳೂರಿನಿಂದ ಪ್ರಕಟವಾಗಿವೆ. ಆ ಮಾತು ಬೇರೆ) ಕರಾವಳಿ ಕರ್ನಾಟಕದಿಂದಲೂ ಅಷ್ಟೇ ಸಂಖ್ಯೆಯ ಕೃತಿಗಳೂ ಪ್ರಕಟವಾಗಿವೆ. ಉಳಿದ ಸುಮಾರು 29 ಕೃತಿಗಳು ದಕ್ಷಿಣ ಕರ್ನಾಟಕದಿಂದ ಪ್ರಕಟವಾಗಿವೆ (ಇದರಲ್ಲಿ ಅಕಾಡೆಮಿ ಹಾಗೂ ಕ.ಸಾ.ಪ. ಪ್ರಕಟಣೆಗಳೂ ಸೇರಿವೆ)

ಜಿಲ್ಲೆಗಳ ಪೈಕಿ - ಅತಿ ಹೆಚ್ಚು ಜಾನಪದ ಕೃತಿಗಳನ್ನು ಪ್ರಕಟಿಸಿದ ಶ್ರೇಯಸ್ಸು ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದೆ. ಈ ಜಿಲ್ಲೆಯಿಂದ ಕನಿಷ್ಠ ಆರು ಕೃತಿಗಳು 1995ರಲ್ಲಿ

ಪ್ರಕಟವಾಗಿವೆ. ಈ ಆರೂ ಕೂಡಾ ಅಧ್ಯಯನ ಕೃತಿಗಳು ಎಂಬುದೂ ಗಮನಾರ್ಹ. ಅಂದರೆ-ಸಾಹಿತ್ಯ ಸಂಗ್ರಹಗಳು ಈ ವರ್ಷದಲ್ಲಿ ಈ ಜಿಲ್ಲೆಯಿಂದ ಪ್ರಕಟವಾದಂತಿಲ್ಲ. ಪುಟ ಸಂಖ್ಯೆಯ ದೃಷ್ಟಿಯಿಂದ - ಕನ್ನಡದಲ್ಲಿ ಈ ವರ್ಷ ಪ್ರಕಟವಾದ ಜಾನಪದ ಸಂಬಂಧಿ ಸಾಹಿತ್ಯದಲ್ಲಿ ನಾಲ್ಕನೇ ಒಂದು ಭಾಗದಷ್ಟು ಇದೊಂದೇ ಜಿಲ್ಲೆಯಿಂದ ಬಂದಿದೆ.

ಸಮೀಕ್ಷಾ ವರ್ಷದಲ್ಲಿ ಒಬ್ಬರೇ ಲೇಖಕರಿಂದ ಪ್ರಕಟವಾದ ಅತಿ ಹೆಚ್ಚು ಸಂಖ್ಯೆಯ ಕೃತಿಗಳೆಂದರೆ ಮೂರು. ತಲಾ ಮೂರು ಕೃತಿಗಳನ್ನು ಪ್ರಕಟಿಸಿದ ಇಬ್ಬರು ಪುಣ್ಯವಂತ ಲೇಖಕರಿದ್ದಾರೆ. ಅವರೆಂದರೆ - ಹಿರಿಯ ಲೇಖಕರಾದ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಡಾ. ಎಲ್.ಆರ್. ಹೆಗಡೆ ಹಾಗೂ ಮೈಸೂರಿನ ಡಾ. ಪಿ.ಕೆ. ರಾಜಶೇಖರ ಅವರು. ಹೆಗಡೆಯವರು ಎರಡು ಜಾನಪದ ವೈದ್ಯ ಹಾಗೂ ಗಾದೆಗಳ ಸಂಗ್ರಹವೊಂದನ್ನು ಪ್ರಕಟಿಸಿದ್ದರೆ, ರಾಜಶೇಖರ ಅವರು ಮೂರು ಜನಪದ ಕಾವ್ಯಕೃತಿಗಳನ್ನು ಪ್ರಕಟಿಸಿದ್ದಾರೆ.

ಈ ಸಮೀಕ್ಷೆಗಾಗಿ ಹಣ ಕೊಟ್ಟು ಪುಸ್ತಕ ಕೊಳ್ಳುತ್ತೇನೆಂದರೂ ಅವನ್ನು ದೊರಕಿಸಿಕೊಳ್ಳುವುದು ಕಷ್ಟವಾಯಿತು. ಅಂದಮೇಲೆ ಜಾನಪದಾಸಕ್ತರು ತಮಗೆ ಬೇಕಾದ ಪುಸ್ತಕಗಳ ಬಗ್ಗೆ ಮಾಹಿತಿ ಸಿಕ್ಕರೂ ದೊರಕಿಸಿಕೊಳ್ಳುವುದಕ್ಕೆ ಇನ್ನೂ ಕಷ್ಟವಾದೀತು. ಪುಸ್ತಕ ವ್ಯಾಪಾರಿಗಳು ಪ್ರಖ್ಯಾತರಲ್ಲದ ಲೇಖಕರ ಪುಸ್ತಕಗಳನ್ನು ಮಾರಾಟಕ್ಕೆ ಕೊಳ್ಳುವುದೇ ಇಲ್ಲ. ''ಇಟ್ಟು ಹೋಗಿ; ಮಾರಾಟವಾದರೆ ಹಣ ಕೊಡುತ್ತೇವೆ'' ಎನ್ನುತ್ತಾರೆ. ಆಮೇಲೆ ಕೇಳಲು ಹೋದಾಗ ''ಆ ಪುಸ್ತಕ ಎಲ್ಲಿಯೋ ಇದೆ, ಹುಡುಕುತ್ತೇವೆ. ಇನ್ನೊಮ್ಮೆ ಬನ್ನಿ'' ಎನ್ನುತ್ತಾರೆ. ಒಟ್ಟಿನಲ್ಲಿ ಲೇಖಕ/ಪ್ರಕಾಶಕನಿಗೆ ಪುಸ್ತಕವೂ ಇಲ್ಲ, ಹಣವೂ ಇಲ್ಲ.

ಸದ್ಯಕ್ಕೆ ಇದಕ್ಕೊಂದು ಸರಳ ಪರ್ಯಾಯ ವ್ಯವಸ್ಥೆ ಮಾಡಬಹುದು. ಕನ್ನಡದಲ್ಲಿ ಪ್ರಕಟವಾಗುವ ಎಲ್ಲ ಜಾನಪದ ಗ್ರಂಥಗಳ ತಲಾ ಇಪ್ಪತ್ತೈದು ಪ್ರತಿಗಳನ್ನು ಮಾತ್ರ ಅಕಾಡೆಮಿ ಎರವಲಾಗಿ ಮಾರಾಟಕ್ಕೆ ಪಡೆದು ತನ್ನ ಪ್ರಕಟಣೆಗಳ ಜೊತೆಗೆ ತನ್ನ ಕಚೇರಿಯ ಮಾರಾಟ ಕೌಂಟರಿನಲ್ಲಿ ಇಡುವುದು. ಯಾವುದೇ ವ್ಯಕ್ತಿ ತನಗೆ ಬೇಕಾದ ಜಾನಪದ ಪುಸ್ತಕಕ್ಕಾಗಿ ಅಕಾಡೆಮಿಗೆ ಬರೆದು ಹಣ ಕಳುಹಿಸಿ ತರಿಸಿಕೊಳ್ಳುವುದು ಸುಲಭವಾಗಬೇಕು. ಇದಕ್ಕೆ ಹೆಚ್ಚಿನ ಸ್ಥಳವಾಗಲೀ ಸಿಬ್ಬಂದಿಯಾಗಲೀ ಬೇಕಾಗಿಲ್ಲ. ಒಂದು ವರ್ಷದ ನಂತರ ಮಾರಾಟವಾಗದ ಪ್ರತಿಗಳನ್ನು ಆಯಾ ಲೇಖಕರಿಗೆ ಹಿಂದಿರುಗಿಸಬಹುದು. ಇನ್ನೂ ಉತ್ತಮ ವ್ಯವಸ್ಥೆ ಸಾಧ್ಯವಾಗುವ ತನಕ ಇಂಥ ಒಂದು ಸಣ್ಣ ಕೆಲಸವನ್ನು ಅಕಾಡೆಮಿ ನಿರ್ವಹಿಸುವುದು ಕಷ್ಟವಾಗಬಾರದು.

ಒಟ್ಟಿನಲ್ಲಿ - ನಮ್ಮ ಜಾನಪದ ಅಧ್ಯಯನ ಸ್ಥೂಲತೆಯಿಂದ ಸೂಕ್ಷ್ಮತೆಯ ಕಡೆಗೆ ಸಾಗಿದೆ. ಉಪೇಕ್ಷಿತ ವಿಷಯಗಳ ವಿವರ ಅಧ್ಯಯನದತ್ತ ನಮ್ಮ ಅಧ್ಯಯನಕಾರರ ಗಮನ ಸಾಗಿದೆ. ಸಣ್ಣ ಸಣ್ಣ ಸಂಖ್ಯೆಯಲ್ಲಿರುವ ಜನಸಮುದಾಯಗಳ ಅಧ್ಯಯನವು ಮುಖ್ಯವಾಗಿ ಪಿ.ಎಚ್.ಡಿ ನಿಬಂಧಗಳಿಗಾಗಿ ನಡೆದಿದೆ.

ಇನ್ನೂ ಒಂದು ಅಂಶ ಗಮನಿಸಬೇಕಾದದ್ದಿದೆ. ಜಾನಪದ ಕ್ಷೇತ್ರದಲ್ಲಿ ಹಿರಿಯರೆನ್ನಿಸಿಕೊಂಡಿರುವ, ಸಾಕಷ್ಟು ಸರಕನ್ನು ತಮ್ಮ ಕಲೆಯಲ್ಲಿ ತುಂಬಿಕೊಂಡಿರುವ ನಮ್ಮ ನಡುವಿರುವ ಅನೇಕ ಹಿರಿಯ ಲೇಖಕರ ಯಾವೊಂದು ಜಾನಪದ ಕೃತಿಯೂ ಈ ವರ್ಷ ಪ್ರಕಟವಾಗಿಲ್ಲ. ಇದಕ್ಕೆ ಮುಖ್ಯ ಕಾರಣ - ಪ್ರಕಟಣೆಗೆ ಇನ್ನೂ ಕೂಡಾ ಸ್ವತಃ ಹಣ ತೊಡಗಿಸಲು ಅವರಿಂದ ಸಾಧ್ಯವಿಲ್ಲದಿರುವುದೇ ಆಗಿರಬಹುದು. ಇಂಥ ಸ್ಥಿತಿ ಜಾನಪದರ ಶಿಸ್ತುಪೂರ್ಣ - ಅಧ್ಯಯನದ ನೆಲೆಗಳು ಇನ್ನೂ ಗಟ್ಟಿಗೊಳ್ಳಬೇಕಾಗಿರುವ ಕನ್ನಡದಲ್ಲಿರುವುದು ಅಪೇಕ್ಷಣೀಯವಲ್ಲ. ಇಂಥವರ ಕೃತಿಗಳ ಪ್ರಕಟಣೆಗೆ ಸಹಾಯಧನ ನೀಡಿ ಒಂದಷ್ಟು ಪ್ರತಿಗಳನ್ನೂ ಕೊಳ್ಳುವ ಕೆಲಸ ಅಕಾಡೆಮಿಯಿಂದಲೂ ನಡೆಯುವುದು ಅಪೇಕ್ಷಣೀಯ.

ಒಂದು ವರ್ಷದಲ್ಲಿ ಪ್ರಕಟವಾದ ಎಲ್ಲ ಜಾನಪದ ಕೃತಿ/ಲೇಖನಗಳನ್ನೂ ಸಮೀಕ್ಷಿಸಿ ಅವುಗಳ ಬಗ್ಗೆ ವಿವರವಾದ ಮಾಹಿತಿ ಒಂದೆಡೆ ಸಿಗುವಂತಾಗಲೆಂಬ ಒಳ್ಳೆಯ ಉದ್ದೇಶದಿಂದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 'ಜಾನಪದ ವರ್ಷ' ಮಾಲಿಕೆಯನ್ನು ಈಚೆಗೆ ಆರಂಭಿಸಿದೆ. ಅದರಲ್ಲಿ 1995ರ ಕೃತಿಗಳನ್ನು ಪರಿಚಯಿಸುವ ಗ್ರಂಥವನ್ನು ಸಂಪಾದಿಸುವ ಹೊಣೆಗಾರಿಕೆಯನ್ನು ಅಕಾಡೆಮಿ ನನ್ನ ಮೇಲೆ ವಿಶ್ವಾಸವಿಟ್ಟು ನನಗೆ ವಹಿಸಿದೆ. ಇದಕ್ಕಾಗಿ ನಾನು ಕೃತಜ್ಞ.

ಹಲವು ಮೂಲಗಳಿಂದ ಮಾಹಿತಿ ಸಂಗ್ರಹಿಸಿ, ಪುಸ್ತಕಗಳನ್ನು ತರಿಸಿಕೊಂಡು, ವಿಮರ್ಶೆ ಬರೆಯಬಲ್ಲ ಲೇಖಕ ಮಿತ್ರರನ್ನು ಹುಡುಕಿ ಅವರಿಗೆ ಒಂದೊಂದು ಪ್ರಕಾರದ ಪುಸ್ತಕಗಳನ್ನು ಕುರಿತು ಬರೆಯುವಂತೆ ಕೇಳಿಕೊಳ್ಳಲಾಯಿತು. ಅನಿವಾರ್ಯವಾದಲ್ಲಿ ಸ್ವತಃ ಕೂತು ಬರೆಯಬೇಕಾಯಿತು. ಎಲ್ಲ ಹಂತಗಳನ್ನೂ ದಾಟಿ ಈ ಗ್ರಂಥ ಈಗ ನಿಮ್ಮ ಮುಂದಿದೆ.

1996ರ ಜನವರಿಯ ವೇಳೆಗೇ ಈ ಗ್ರಂಥವನ್ನು ಸಿದ್ಧಪಡಿಸಿಕೊಡಲು ಅಕಾಡೆಮಿ ನನಗೆ ಹೇಳಿತ್ತಾದರೂ ಪುಸ್ತಕಗಳನ್ನು ಸಂಗ್ರಹಿಸುವ ಕೆಲಸವೇ ಮಾರ್ಚಿನವರೆಗೂ ಮುಗಿಯಲಿಲ್ಲ. ನಾವು ಲೇಖನ ಬರೆಯಲು ಒಪ್ಪಿಸಿದ ಲೇಖಕರ ಅನಾನುಕೂಲಗಳು ಬೇರೆ. ಹೀಗೆಲ್ಲಾ ಆಗಿ ಜೂನ್ ವೇಳೆಗೆ ಹಸ್ತಪ್ರತಿ ಸಿದ್ಧಗೊಂಡಿದೆ. ಈ ವಿಳಂಬಕ್ಕಾಗಿ ನಾನು ಅಕಾಡೆಮಿ ಹಾಗೂ ಜಾನಪದಾಸಕ್ತರ ಕ್ಷಮೆ ಕೋರುವೆ.

ಈ ಕೆಲಸವನ್ನು ನನಗೆ ಒಪ್ಪಿಸಿದ ಅಕಾಡೆಮಿಯ ಅಧ್ಯಕ್ಷ ಪ್ರೊ. ಎಚ್.ಜೆ. ಲಕ್ಕಪ್ಪಗೌಡರಿಗೂ ಸದಸ್ಯರಿಗೂ ನಾನು ಕೃತಜ್ಞ. 1995ರ ಪ್ರಕಟಣೆಗಳ ಕುರಿತು ದೀರ್ಘ ಪಟ್ಟಿ ಕಳುಹಿಸಿ ಸಹಕರಿಸಿದವರು ಪ್ರೊ. ಎ.ವಿ. ನಾವಡ ಹಾಗೂ ಡಾ. ಕೆ.ಎ. ಚಿನ್ನಪ್ಪಗೌಡ ಅವರುಗಳು. ಇವರಿಗೂ ನನ್ನ ನಮನಗಳು ಸಲ್ಲುತ್ತವೆ.

ಇಷ್ಟಾದರೂ ನಮ್ಮ ಗಮನಕ್ಕೆ ಬಾರದ ಕೆಲವಾದರೂ ಪುಸ್ತಕಗಳು, ಲೇಖನಗಳು ಉಳಿದಿವೆ ಎಂಬುದು ನಮಗೆ ಅರಿವಿದೆ. ಈ ಕೊರತೆ ಉಳಿಯುವುದು ಅನಿವಾರ್ಯ. ಇಲ್ಲಿನ ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಆಯಾ ಲೇಖಕರದ್ದೇ ವಿನಃ ಅಕಾಡೆಮಿ ಅದಕ್ಕೆ ಹೊಣೆಯಲ್ಲ ಎಂಬುದನ್ನೂ ಸ್ಪಷ್ಟಪಡಿಸಬಯಸುವೆ.

ಎಸ್.ಪಿ. ಪದ್ಮಪ್ರಸಾದ
ಸಂಪಾದಕ

'ಕರ್ನಾಟಕದ ಜಾತ್ರೆಗಳು' - ಪುಸ್ತಕಮಾಲೆ

ಎಸ್.ಜಿ. ಸಿದ್ಧರಾಮಯ್ಯ

ಗ್ರಾಮೀಣ ಜಾತ್ರೆಗಳು ಪುರಾಣಗಳ ಪುನರಭಿನಯ ರೂಪಗಳು. ಆ ಪುರಾಣ ಶಿಷ್ಟ ಮೂಲದಲ್ಲಿ; ಜನಪದರ ಬದುಕಿನ ಒಡಲಾಳದ ಜೀವರಕ್ತವಾಗಿರುವುದು. ಜಾತ್ರೆಗಳ ಆಚರಣಾ ವಿಧಿವಿಧಾನಗಳನ್ನು ಒಳನೋಟ ಹರಿಸಿ ಅಧ್ಯಯನ ಮಾಡಿದರೆ ತಳಸಂಸ್ಕೃತಿಗಳ ಮೂಲರೂಪವನ್ನು ಕಾಣಬಹುದು. ಜೊತೆಗೆ ಕಾಲಾಂತರದಲ್ಲಿ ಆ ಮೂಲ ಸ್ವರೂಪದ ಮೇಲೆ ಅನ್ಯ ಪ್ರಭಾವಗಳು ನಡೆಸಿರಬಹುದಾದ ಕಾರಣ ಪರಿಣಾಮಗಳನ್ನು ಗುರುತಿಸಬಹುದು. ಶ್ರೇಣೀಕೃತ ವ್ಯವಸ್ಥೆಯ ರೀತಿನೀತಿಗಳ ಆಗುಹೋಗುಗಳು ಜಾತ್ರೆಗಳ ಮೂಲಸ್ವರೂಪದ ಮೇಲೆ ಸಾಕಷ್ಟು ಆಕ್ರಮಣ ನಡೆಸಿವೆ. ಹೀಗಾಗಿ ಜಾತ್ರೆಗಳು ಸಂಕೀರ್ಣ ರೀತಿಯಲ್ಲಿ ಶ್ರೇಣೀಕೃತ ವ್ಯವಸ್ಥೆಯ ಜಾತಿವರ್ಗಗಳ ಸಂಘರ್ಷವನ್ನು ಅಂತರ್ಗತಗೊಳಿಸಿಕೊಂಡು ಆಚರಿತವಾಗುತ್ತವೆ. ಜಾತ್ರೆಗಳಲ್ಲಿ ಇಡೀ ಸಮುದಾಯದ ಎಲ್ಲ ಜಾತಿಯ ಜನರು ಭಾಗವಹಿಸಿದರೂ ಅದನ್ನು ಭಾವೈಕ್ಯತೆಯ ಮಾದರಿ ಎಂದು ಗುರುತಿಸಲಾಗದು. ಕಾರಣ ಹೊರತೋರಿಕೆಗೆ ಅದು ಜಾತಿಗಳ ಸಮ್ಮಿಲನದಂತೆ ಕಂಡುಬರುತ್ತದೆ. ಆದರೆ ತೇರಿನ ಎದುರು ವಾಲಗ ನುಡಿಸುವವನಿಂದ ಹಿಡಿದು ಪತ್ತ ಹಿಡಿಯುವವನನ್ನೂ ಒಳಗೊಂಡು ತೇರಿನ ಮೇಲೆ ಗಂಟೆ ಬಾರಿಸುವವನ ವರೆಗೆ ಎಲ್ಲ ಕೈಂಕರ್ಯಗಳೂ ಜಾತಿವಾರು ನೀತಿಯಲ್ಲಿಯೇ ಹಂಚಲ್ಪಟ್ಟಿರುತ್ತವೆ. ಈ ಮೂಲಕ ಜಾತಿ ನೀತಿಯ ಸಾಮಾಜಿಕ ಸ್ಥಿತಿಯನ್ನು ಗಟ್ಟಿಗೊಳಿಸುವ ಆಚರಣೆಗಳಾಗಿರುತ್ತವೆ.

ಭಾರತದ ಸಾಮಾಜಿಕ ಸಂದರ್ಭದಲ್ಲಿ ಯಾವುದೇ ಜಾತ್ರೆಯನ್ನು ಅಧ್ಯಯನ ಮಾಡುವ ಜಾನಪದ ತಜ್ಞನಿಗೆ ಶ್ರೇಣೀಕೃತ ಸಾಮಾಜಿಕ ಸ್ವರೂಪದ ವಸ್ತುಸ್ಥಿತಿಯ ಅರಿವಿಲ್ಲದಿದ್ದರೆ, ಅಧ್ಯಯನ ಅಪವ್ಯಾಖ್ಯೆಗೆ ಒಳಗಾಗುವ ಅಪಾಯದಿಂದ ಕೂಡಿರುತ್ತದೆ.

ಕರ್ನಾಟಕ ಜಾನಪದ ಅಕಾಡೆಮಿಯು 'ಕರ್ನಾಟಕದ ಜಾತ್ರೆಗಳು' ಮಾಲೆಯನ್ನು ಆರಂಭಿಸಿ ಕೆಲವು ಗ್ರಾಮೀಣ ದೇವದೇವತೆಯರ ಜಾತ್ರೆ ಕುರಿತು ಕೃತಿಗಳನ್ನು ಪ್ರಕಟಿಸಿರುವುದು

ಸ್ತುತ್ಯಾರ್ಹ ಕಾರ್ಯ. ಈ ಮಾಲೆಯಲ್ಲಿ ಬಂದಿರುವ ಏಳು ಪುಸ್ತಕಗಳನ್ನು ಓದಿದಾಗ ಬಹಳಷ್ಟು ನಿರಾಸೆ ಉಂಟಾಗುತ್ತದೆ. ಕಾರಣ ಅಲ್ಲಿನ ಬಹುತೇಕ ಲೇಖಕರಿಗೆ ಒಂದು ಸಂಸ್ಕೃತಿಯನ್ನು ಅಧ್ಯಯನ ಮಾಡುವುದಕ್ಕೆ ಅಗತ್ಯವಾಗಿ ಬೇಕಾದ ಪ್ರಾಥಮಿಕ ಜ್ಞಾನವೂ ಇಲ್ಲದಿರುವುದು. ಜಾತ್ರೆಗಳೆಂದರೆ ಮೈಕೊಡಲನ್ನು ನಿಮಿರಿಸಿಕೊಂಡು ವೈಭವೀಕರಣದ ಶಬ್ದಜಾಲದಲ್ಲಿ ತೌಡುಕಟ್ಟುವ ಸಾಂಪ್ರದಾಯಿಕ ಚಟಕ್ಕೆ ಬಿದ್ದಿರುವುದು ಇಲ್ಲಿಯ ಬಹಳಷ್ಟು ಬರಹಗಳ ದುರಂತ. ''ಅನೇಕ ಸುಪ್ರಸಿದ್ಧ ತೀರ್ಥಕ್ಷೇತ್ರಗಳಿರುವ ನಾಡು ಪುಣ್ಯಭೂಮಿಯದು. ಹಿಂದಿನಿಂದಲೂ ಭಾರತೀಯರು ತೀರ್ಥಕ್ಷೇತ್ರಗಳಲ್ಲಿ ಭಗವಂತನ ಅಂಶವನ್ನು ಮನಗಾಣುತ್ತ ಶ್ರೇಯಸ್ಸನ್ನು ಪಡೆಯುತ್ತಾ ಬಂದಿದ್ದಾರೆ. ಜನಮನದ ಮಾಲಿನ್ಯಗಳನ್ನು ಕಳೆದು ಜೀವನದಲ್ಲಿ ಪುಣ್ಯಮಯ ಜೀವಕಳೆಯನ್ನು ಉದ್ದೀಪನಗೊಳಿಸಿ ಬೆಳಗುವುದಕ್ಕೆ ಪವಿತ್ರಕ್ಷೇತ್ರಗಳು ಒಂದು ಸಾಧನ.'' (ದೇವರ ಗುಡ್ಡ - ಡಾ॥ ಎಸ್.ಎನ್. ಭದ್ರಾಪೂರ)

''ಜಾತ್ರೆಗಳಲ್ಲಿ ಜನಪದರು ಪೂಜೆ ಹರಕೆಗಳನ್ನು ದೇವರಿಗೆ ಒಪ್ಪಿಸಿ ಆತ್ಮರಕ್ಷಣೆ ಮಾಡಿಕೊಳ್ಳುತ್ತಾರೆ. ಖರೀದಿ ಬಿಕರಿ ಮಾಡುತ್ತಾರೆ. ಇದರಿಂದ ಧಾರ್ಮಿಕ ಶಾತ್ವಿಕ ಸಾಮಾಜಿಕ ಮತ್ತು ರಾಜಕೀಯ ಬಾಂಧವ್ಯಗಳು ಕುದುರುತ್ತವೆ. ಪರಸ್ಪರ ಸಂಬಂಧಗಳು ಬೆಳೆಯುತ್ತವೆ. ದೋಷಗಳೆಲ್ಲವೂ ಅಳಿಯುತ್ತವೆ. ಆತ್ಮ ಪರಿಶುದ್ಧವಾಗುತ್ತದೆ. ಧರ್ಮ ವೈಯಕ್ತಿಕ ಆಚರಣೆಯಾಗುತ್ತದೆ.'' (ವೀರಭದ್ರ- ಜಗನ್ನಾಥ ಹೆಬ್ಬಾಳೆ)

''ಎಲ್ಲಾ ಜಾತಿಕೋಮಿನವರ ಜನ ಸೇರುವ ಭಾವೈಕ್ಯದ ತಾಣ. ಕಿವಿಗಿಂಪು ನೀಡುವ ಜಾನಪದ ಸಂಗೀತ ಮೊಳಗುವ ಕ್ಷೇತ್ರ. ಭಕ್ತಿಯ ಮಹಾಪೂರದ ನೆಲೆ.'' (ಮಲೆಯ ಮಾದೇಶ್ವರ - ಡಾ॥ ಬಿ.ಎಸ್. ಸ್ವಾಮಿ)

ಮೇಲಿನ ಉದ್ಧರಣೆಗಳು ಈ ಮಾಲೆಯಲ್ಲಿನ ಕೆಲವು ಲೇಖಕರ ದೃಷ್ಟಿಧೋರಣೆಗಳನ್ನು ಬಿಂಬಿಸಿದರೆ ಇದಕ್ಕೆ ಭಿನ್ನವಾಗಿ ಒಂದು ಸಂಸ್ಕೃತಿಯ ಅಧ್ಯಯನಕ್ಕೆ ಅಗತ್ಯವಾಗಿ ಬೇಕಾದ ವೈಜ್ಞಾನಿಕ ವೈಚಾರಿಕ ದೃಷ್ಟಿಯನ್ನೊಳಗೊಂಡ ಕೆಲವರ ಬರಹ ಮಾಲೆಯ ಉದ್ದೇಶವನ್ನು ಸಾರ್ಥಕಪಡಿಸುವಂತಿರುವುದು ಸಮಾಧಾನದ ಸಂಗತಿ.

''ಬಹುತೇಕ ಜಾತ್ರೆಗಳಲ್ಲಿ ನಮ್ಮ ಪರಂಪರೆಯ ಆಚರಣೆಗಳ ಪಳೆಯುಳಿಕೆಗಳು ಮಾತ್ರ ಕಂಡುಬರುತ್ತವೆ.''

''ಒಂದು ಜನಾಂಗದ ಜೀವನ ರೀತಿಯ ಬಯಕೆಗಳಿಗೆ ಪೂರಕವಾಗಿ ಆಚರಣೆಗಳು ರೂಪುಗೊಳ್ಳುತ್ತವೆ. ಮಾನವನ ಮನಸ್ಸಿನ ವರ್ತನೆಯು ವಿವಿಧ ರೂಪು ರೇಖೆಗಳನ್ನು ಆಚರಣೆಗಳು ಪ್ರಕಟಗೊಳಿಸುತ್ತವೆ. ಸಮಾಜದ ಬದಲಾವಣೆಯೊಂದಿಗೆ ಆಚರಣೆಯ ವಿಧಾನಗಳೂ ಬದಲಾಗುತ್ತ ಹೋಗುತ್ತವೆ.'' (ಮಧುಗಿರಿಯ ದಂಡಿನ ಮಾರಮ್ಮ- ಎಂ.ಎಲ್. ನರಸಿಂಹಮೂರ್ತಿ)

''ಪೂಜಾರರು ಮತ್ತು ದೇವಾಲಯದ ವಿವಿಧ ಹಕ್ಕುದಾರರು ಹೇಳುವ ಕಥೆಗಳು ಪೌರಾಣಿಕವಾಗಿದ್ದು ನಮ್ಮ ಎಲ್ಲಾ ದೇವತೆಗಳಿಗೂ ಅನ್ವಯವಾಗುವಂತಹವು.''

''ಈ ಗ್ರಾಮದೇವತೆಗಳನ್ನು ಸೃಷ್ಟಿಸಿ ಪ್ರತಿಸ್ಥಾಪಿಸುತ್ತಾರೆನ್ನುವುದಕ್ಕಿಂತ ಅವು ನಾನಾಕಾರಣದಿಂದ ಆ ಜನರ ಮಧ್ಯದಿಂದಲೇ ಬಂದದ್ದೆಂದು ಕಂಡುಬರುತ್ತದೆ.'' - (ಹೆತ್ತಗೋನಹಳ್ಳಿ ಮಾಯಮ್ಮ - ಹೆಚ್.ಆರ್. ಚೇತನ)

''ಸೂಕ್ಷ್ಮವಾಗಿ ಅವಲೋಕಿಸಿದರೆ ಚಂಡಿಯೇ ಚಾಮುಂಡಿಯಾದ ದುರ್ಗಿಯೇ ದುರ್ಗವ್ವನಾದ ಬೆಳವಣಿಗೆ ಒಡೆದು ಕಾಣಿಸುತ್ತ ಆರ್ಯದ್ರಾವಿಡ ಸಂಘರ್ಷದ ಫಲವಾಗಿ ಕೂಡ ಇವರು ಗೋಚರಿಸುತ್ತಾರೆ. ಕಲ್ಲನ್ನ ಪೂಜಿಸುತ್ತಿದ್ದ ಮಾನವ ಕಲಾಪರಿಣತಿ ಪಡೆದ ಮೇಲೆ ನಿರಾಕಾರದಿಂದ ಸಾಕಾರತೆಯ ಕಡೆಗೆ ಲಕ್ಷ್ಯ ಹರಿಸಿದ. ವಿವಿಧ ವಾಹನಗಳನ್ನೇರಿದ, ವಿವಿಧ ಆಯುಧಗಳನ್ನು ಹಿಡಿದ ದೇವಿಯರ ಮೂರ್ತಿಗಳ ಆವಿಷ್ಕಾರ ಆಗಿನಿಂದ ಆರಂಭ.'' (ಸವದತ್ತಿ ಯಲ್ಲಮ್ಮ - ಡಾ॥ ಕಮಲಾ ಹೆಮ್ಮಿಗೆ)

ಈ ಮೇಲಿನ ಉದ್ಧರಣೆಗಳು ಶಾಬ್ದಿಕ ಬಡಬಡಿಕೆಗಳಾಗದೆ ಗಂಭೀರ ಭಾವದ ಆಲೋಚನೆಯ ಫಲಗಳಾಗಿವೆ. ಇಲ್ಲಿಯ ವಿಚಾರ ದೃಷ್ಟಿಯನ್ನು ಒಪ್ಪುವುದು ಬಿಡುವುದು ಬೇರೆಯ ಮಾತು. ಆದರೆ ಸಂವಾದಕ್ಕೆ ಎಡೆಕೊಡುವ ಅಧ್ಯಯನದ ಒಳನೋಟಗಳನ್ನು ಈ ಬರಹಗಳು ಒಳಗೊಂಡಿರುವುದು ಬಹಳ ಮುಖ್ಯವಾದ ಸಂಗತಿ. ಜಾನಪದದ ಅಧ್ಯಯನಕ್ಕೆ ತೊಡಗಿದಾಗ ಕ್ಷೇತ್ರಕಾರ್ಯ ಮಾಡಿದಂತೆ ಪ್ರತಿ ವಿವರಗಳನ್ನು ಗಮನಿಸಿ ದಾಖಲಿಸುವುದು ಅಧ್ಯಯನದ ಪ್ರಥಮ ಭಾಗವಾದರೆ, ಹಾಗೆ ದಾಖಲಿಸಿದ ವಸ್ತುವಿವರವನ್ನು ವಿವಿಧ ಜ್ಞಾನಶಾಖೆಗಳ ಪರಿಧಿಯಲ್ಲಿ ಪರಿಶೀಲಿಸಿ ವಿಶ್ಲೇಷಿಸುವುದು ಅದರ ಮುಂದಿನ ಬೆಳವಣಿಗೆ. ಈ ಎರಡೂ ಕ್ರಿಯೆಗಳು ಭಿನ್ನವಾಗಿ ಜರುಗುವ ಕ್ರಿಯೆಗಳು ಅನ್ನುವುದಕ್ಕಿಂತ ಒಂದಕ್ಕೊಂದು ಪೂರಕವಾಗಿ ನಡೆಯುವ ಕ್ರಿಯಾವಿಧಿಗಳು.

ಕರ್ನಾಟಕ ಜಾನಪದ ಅಕಾಡೆಮಿಯು ಪ್ರಕಟಿಸಿರುವ ಈ ಮಾಲೆಯ ಏಳೂ ಕೃತಿಗಳ ಬರಹದಲ್ಲಿ ಆಯಾ ಲೇಖಕರ ದೃಷ್ಟಿ ಧೋರಣೆಗಳು ಹೇಗೆ ಅವರವರ ಅಧ್ಯಯನದ ಟೊಳ್ಳುಗಟ್ಟಿತನವನ್ನು ಮನಗಾಣಿಸುತ್ತವೆ ಎಂಬುದನ್ನು ಕೃತಿನಿಷ್ಠರಾಗಿ ನೋಡುವುದು ಉಚಿತ.

ದೇವರಗುಡ್ಡ : ಡಾ॥ ಎಸ್.ಎನ್. ಭದ್ರಾಪೂರ

ರಾಣಿಬೆನ್ನೂರು ತಾಲ್ಲೂಕಿನ ದೇವರಗುಡ್ಡ ಒಂದು ಐತಿಹಾಸಿಕ ಸ್ಥಳ. ಗುಡ್ಡದ ಮೇಲಿರುವ ದೇವಸ್ಥಾನಕ್ಕೆ ಸುತ್ತಲಿನ ಭಕ್ತಾದಿಗಳು ನಡೆದುಕೊಳ್ಳುವ ಕಾರಣದಿಂದಾಗಿ ಗುಡ್ಡಕ್ಕೆ ಸಾಂಸ್ಕೃತಿಕ ಮಹತ್ವವಿದೆ. ಪುರಾಣ ಮತ್ತು ಇತಿಹಾಸಗಳ ಹಿನ್ನೆಲೆಯನ್ನು ಒಳಗೊಂಡಂತೆ ದಂತಕಥೆ ಐತಿಹ್ಯ ನಂಬಿಕೆ ಇತ್ಯಾದಿ ಸಮೃದ್ಧ ಜಾನಪದ ಸಂಪತ್ತನ್ನು ಒಳಗೊಂಡ ಈ ಕ್ಷೇತ್ರದ ಬಗ್ಗೆ ಡಾ॥ ಎಸ್.ಎನ್. ಭದ್ರಾಪೂರ ಅವರು ಕ್ಷೇತ್ರಕಾರ್ಯ ನಡೆಸಿದಂತೆ ದೇವರಗುಡ್ಡ ಕೃತಿ ರಚಿಸಿದ್ದಾರೆ.

ಐತಿಹಾಸಿಕ ಸಾಂಸ್ಕೃತಿಕ ಮಹತ್ವವನ್ನೊಳಗೊಂಡ ಈ ಸ್ಥಳದ ಬಗ್ಗೆ ಭದ್ರಾಪೂರ ಅವರು ಪುರಾಣ ಸಂಬಂಧ ಕಥೆಯನ್ನು ಪ್ರಸ್ತಾಪಿಸಿದರೂ ಆ ಪ್ರಸ್ತಾಪ ಇತ್ತ ಸೂಕ್ತ ಮಾಹಿತಿಯಾಗುವುದಕ್ಕೆ ಬೇಕಾದ ಪೂರ್ಣವಿವರಗಳ ದಾಖಲಾತಿಯೂ ಆಗದೆ, ಅತ್ತ ಅಧ್ಯಯನ ದೃಷ್ಟಿಯನ್ನು ಒಳಗೊಂಡ ವಿಶ್ಲೇಷಣಾ ರೀತಿಯೂ ಆಗದೆ ಅಸಂಬದ್ಧ ಪ್ರಸ್ತಾಪ ಮಾತ್ರವಾಗಿ ನಿರೂಪಿತವಾಗಿದೆ.

"ಈ ದೇವರಿಗೆ ಕರ್ನಾಟಕದ ಮೂಲೆಮೂಲೆಯಿಂದಲೂ ಭಕ್ತಾದಿಗಳು ನಡೆದುಕೊಳ್ಳುತ್ತಾರೆ. ಯಾವುದೇ ಜಾತಿಭೇದವಿಲ್ಲ. ಪ್ರತಿ ಹುಣ್ಣಿಮೆಗೊಂದು ಸಾರೆ ಜಾತ್ರೆಯ ರೂಪದಲ್ಲಿ ಜನರು ಸೇರುತ್ತಾರೆ. ಅದರಲ್ಲಿ ಸೀಗೆಹುಣ್ಣಿಮೆ ಕಾರಹುಣ್ಣಿಮೆ ಭಾರತಹುಣ್ಣಿಮೆಗೆ ಹೆಚ್ಚಿನ ಪ್ರಮಾಣದಲ್ಲಿ ಜನರು ಸೇರುವುದುಂಟು. ವರ್ಷಕ್ಕೊಂದು ಸಾರಿ ಮಾನೌಮಿಯಲ್ಲಿ ದನಗಳ ಜಾತ್ರೆ ಸೇರುತ್ತದೆ. ಕರ್ನಾಟಕದ ಎಲ್ಲ ಕಡೆಯಿಂದಲೂ ದನಗಳು ಬಂದು ಸೇರುತ್ತವೆ. ಸುಮಾರು ಹದಿನೈದು ದಿನಗಳ ಕಾಲ ಈ ಜಾತ್ರೆ ನಡೆಯುತ್ತದೆ."

"ದೇವರಗುಡ್ಡ ಕ್ಷೇತ್ರದಲ್ಲಿ ಸಾಮಾನ್ಯವಾಗಿ ಹಲವಾರು ಜಾತಿಯ ಜನರು ವಾಸವಾಗಿದ್ದಾರೆ. ತಾವು ಬೇರೆ ಬೇರೆ ಜಾತಿಯವರೆಂದು ಬಗೆಯದೆ ಎಲ್ಲ ಜಾತಿಯ ಜನರು ಸಹೋದರರು ಎಂಬ ಭ್ರಾತೃತ್ವ ಭಾವನೆಯಿಂದ ಬಾಳುತ್ತಿದ್ದಾರೆ. ಇವರು ಪರಸ್ಪರ ಸಹಕರಿಸುವ ವ್ಯವಸ್ಥೆಗೆ ಹೊಂದಿಕೊಂಡು ಜೀವನ ಸುಮಧುರವಾಗಿ ನಡೆಸುತ್ತಿದ್ದಾರೆ. ಇವರ ಮಾತು ನಡೆನುಡಿ ಎಲ್ಲ ಶ್ರೀಕ್ಷೇತ್ರದ ಪ್ರಭಾವದಿಂದಲೋ ಏನೋ ಅತ್ಯಂತ ನಯನಾಜೂಕಾದ ಸುಮಧುರವಾದ ಮಾತುಗಳು ಇವರ ನಾಲಿಗೆಯಲ್ಲಿ ನೃತ್ಯ ಮಾಡುತ್ತಿರುತ್ತವೆ. ಬಡವಬಲ್ಲಿದ ಮೇಲುಕೀಳೆಂಬ ಭಾವನೆ ಇಲ್ಲಿ ವ್ಯಕ್ತವಾಗುವುದಿಲ್ಲ. ಅಂದರೆ ವಿವಿಧ ಜನರು ಕೂಡಿ ಪರಸ್ಪರವಾಗಿ ಒಂದು ಎಂಬ ಭಾವನೆಯಿಂದ ದೇವರ ಗುಡ್ಡ ಕ್ಷೇತ್ರದಲ್ಲಿ ವಾಸಿಸುತ್ತಿದ್ದಾರೆ."

"ಸರಸ ಜನನ

ವಿರಸ ಮರಣ

ಎಂಬ ಮಾತನ್ನು ಅರ್ಥಮಾಡಿಕೊಂಡು ಅತಿ ಸರಳವಾದ ಸುಂದರವಾದ ಜೀವನ ಸಾಗಿಸುವ ಜನರಿದ್ದಾರೆ." -ಹೀಗೆ ಈ ಕೃತಿಯಲ್ಲಿ ವಸ್ತುಸ್ಥಿತಿಗೆ ಕುರುಡಾದ ವೈಭವೀಕರಣ ಶೈಲಿಯ ಕಾರಿಕೆ ಹೇರಳವಾಗಿ ಸಾಗಿದೆ. ಬಹಳ ಮುಖ್ಯವಾದ ಸಂಗತಿ ಎಂದರೆ ಒಂದು ನಿರ್ದಿಷ್ಟ ವಿಷಯವನ್ನು ಕುರಿತು ಪ್ರಸ್ತಾಪಿಸುವ ಭಾಗದಲ್ಲೂ ಕೂಡ ಇವರು ವಿಷಯನಿಷ್ಠರಾಗಿ ವಿಚಾರ ಮಂಡಿಸುವುದಿಲ್ಲ. ಹೊಟ್ಟೆ ತುಂಬಿದ ಹಸು ಕಚ್ಚು ಮೇಯುವ ರೀತಿಯಲ್ಲಿ ನೆನಪಿಗೆ ಸಿಕ್ಕಿದ್ದನ್ನು ಹೇಳುತ್ತಾ ಹೋಗುತ್ತಾರೆ. ಉದಾಹರಣೆಗೆ- ದೇವರ ಗುಡ್ಡದ ಭೌಗೋಳಿಕ ಪರಿಚಯ ಕೊಡುತ್ತಾ, ಸಾಮಾಜಿಕ ಜೀವನದ ಚಿತ್ರಣ ನೀಡುತ್ತಾರೆ. ಹಾಗೆಯೇ ಸಾಮಾಜಿಕ ಹಿನ್ನೆಲೆಯ ಬಗ್ಗೆ ಬರೆಯುತ್ತಾ

ಅಸಂಬದ್ಧ ಭಾಷಣ ರೀತಿಯ ಅರ್ಥಹೀನ ಉಕ್ತಿಮಾಲೆಗಳನ್ನು ಪೋಣಿಸುತ್ತಾರೆ. ಒಂದು ಸಂಸ್ಕೃತಿಯ ಅಧ್ಯಯನಕ್ಕೆ ಬೇಕಾದ ಪ್ರಾಥಮಿಕ ತಿಳಿವಳಿಕೆ ಕೂಡ ಇವರ ಬರಹದಲ್ಲಿ ಇಲ್ಲ ಎಂಬುದಕ್ಕೆ ಈ ಕೆಳಗಿನ ಮಾತುಗಳನ್ನೇ ಉದಾಹರಿಸಬಹುದು.

''ಹಬ್ಬಗಳು ಹಿಂದೂ ಜೀವನದ ಇಡೀ ರಚನೆಗೆ ಶಾಶ್ವತವಾದ ಆಧ್ಯಾತ್ಮಿಕ ಸತ್ಯಗಳು. ಪ್ರಾಚೀನ ಹಿಂದೂ ಋಷಿಗಳು ಸಾಕ್ಷಾತ್ಕರಿಸಿಕೊಂಡ ಸತ್ಯಗಳು. ಈ ಶಕ್ತವಾದ ಜೀವನ ರಚನೆಯ ಅತ್ಯಂತ ಪ್ರಮುಖ ಅಂಗಗಳಲ್ಲಿ ಹಬ್ಬಗಳು ಸೇರುತ್ತವೆ.''

''ಹಿಂದೂಗಳಿಗೆ ಧರ್ಮವೇ ಬಾಳಿನ ಉಸಿರು. ಕರ್ಮದ ಕುಶಲತೆಯೇ ಬಾಳಿನ ತಂತ್ರ. ಜ್ಞಾನಪೂರ್ಣ ಜಗಜ್ಯೋತಿಯ ಅರಿವೇ ತುತ್ತತುದಿ. ಅಂತೆಯೇ ಹಬ್ಬ ಹರಿದಿನಗಳ ಆಚರಣೆಯು ಸಹ ವಿಶಿಷ್ಟವಾಗಿದೆ''

''ಹಬ್ಬಗಳೆಂದರೆ ಕೇವಲ ಉಂಡುಉಟ್ಟು ತೇಗಿ ನಲಿದಾಡುವ ಕೆಲಸವಲ್ಲ. ವ್ರತನಿಯಮಗಳನ್ನು ಎಲ್ಲ ದಿನಗಳಲ್ಲಿಯೂ ಆಚರಿಸಲು ಅಸಾಧ್ಯವೂ ಅವಕಾಶವಿಲ್ಲದಿರುವುದೂ ವಾಸ್ತವವಾದ್ದರಿಂದ ಈ ನಿಯಮಪರಿತ ದಿನಗಳಲ್ಲಾದರೂ ದೇಹದಂಡನೆಯ ಮೂಲಕ ನಮಗೆ ನಾವೇ ಆತ್ಮಸಂಗಾತಿಗಳಾಗುವ ಕೆಲಸ ಮಾಡಬೇಕು. ಇದಕ್ಕಾಗಿ ಸ್ನಾನಸಂಧ್ಯಾವಂದನೆ ಜಪತಪ ಪೂಜೆಗಳು ಇತ್ಯಾದಿಗಳ ಮೂಲಕ ಭಕ್ತಿಯನ್ನು ತೋರಿಸಬಹುದು. ಕೇವಲ ಬಾಹ್ಯ ಶುದ್ಧಿಗಿಂತ ಅಂತಃಶುದ್ಧಿ ಮುಖ್ಯವಾದದ್ದು''

''ಹಬ್ಬ ಹರಿದಿನಗಳು ಭಕ್ತಿಜ್ಞಾನ ಕರ್ಮಗಳ ಕೂಡಲ ಸಂಗಮ ಕ್ಷೇತ್ರಗಳು''

''ಹಿಂದೂ ಧರ್ಮದಲ್ಲಿ ವರ್ಷವೊಂದಕ್ಕೆ ಅಸಂಖ್ಯಾತ ಹಬ್ಬಗಳಿರುವುದರಿಂದ ಆಧ್ಯಾತ್ಮಿಕ ಆಲೋಚನೆ ಭಾವನೆಗಳ ಪ್ರವಾಹ ವರ್ಷವೆಲ್ಲ ನಿರಂತರವಾಗಿ ಮುಂದುವರಿಯುವ ಹಬ್ಬಗಳಲ್ಲಿ ಉಪವಾಸ ವ್ರತ ಜಯಂತಿಗಳು ಮುಖ್ಯವಾದ ಗುರಿಗಳೆಂದರೆ ಹೃದಯವನ್ನು ಶುದ್ಧ ಮಾಡುವುದು.''

ಪ್ರಸಾದದ ಬಗ್ಗೆ ಬರೆಯುತ್ತಾ-

''ಪ್ರಸಾದವು ೮೪ ಕೋಟಿ ಜೀವರಾಶಿಗೆ ಉತ್ತಮವಾದ ಜ್ಞಾನದ ಅರಿವಿನ ಚಿಂತನದ ದಾರಿಯನ್ನು ತೋರಿಸುತ್ತದೆ.''

ಇಂಥ ಅಪ್ರಬುದ್ಧ ಅವೈಜ್ಞಾನಿಕ ಅವಿಚಾರಿತ ಹೇಳಿಕೆಗಳಿಂದ ತುಂಬಿರುವ ಈ ಕೃತಿ ದೇವರಗುಡ್ಡದ ಬಗ್ಗೆ ವಸ್ತುಸ್ಥಿತಿಯ ಪ್ರಾಥಮಿಕ ಮಾಹಿತಿಯನ್ನು ಒದಗಿಸದೆ ಅಸಂಬದ್ಧ ಪ್ರಲಾಪದ ಅರ್ಥಹೀನಕಾರಿಕೆಯಾಗಿದೆ.

ಸವದತ್ತಿ ಯಲ್ಲಮ್ಮ : ಡಾ ॥ ಕಮಲ ಹೆಮ್ಮಿಗೆ

ಡಾ ॥ ಕಮಲ ಹೆಮ್ಮಿಗೆಯವರ 'ಸವದತ್ತಿ ಯಲ್ಲಮ್ಮ' ಹಲವು ವಿಚಾರಗಳ ನೆಲೆಯಲ್ಲಿ ಪ್ರಶ್ನೆಗಳನ್ನು ಮೂಡಿಸುತ್ತಾ ಕುತೂಹಲ ಸೆಳೆಯುವ ಕೃತಿ. ಇವರು

ಕ್ಷೇತ್ರಕಾರ್ಯವನ್ನು ಸಾಕಷ್ಟು ಶ್ರಮವಹಿಸಿ ನಡೆಸಿದ್ದಾರೆ. ಆದರೆ ಸಂಗ್ರಹಿಸಿದ ಎಲ್ಲ ಮಾಹಿತಿಗಳನ್ನು ಸಂಯೋಜಿಸುವಾಗ ಒಂದು ಕ್ರಮಬದ್ಧ ರೀತಿ ಇಲ್ಲದೆ ಇರುವುದು ಕೃತಿಯ ಮುಖ್ಯ ಕೊರತೆ. ಈ ಕೊರತೆ ಎಷ್ಟರಮಟ್ಟಿಗೆ ಬೆಳೆದಿದೆ ಎಂದರೆ ಇಡೀ ಪುಸ್ತಕದ ತುಂಬಾ ಎರಡು ಮೂರು ವಾಕ್ಯಗಳ ತುಂಡು ತುಂಡು ರಚನೆಗಳೇ ಜಾಸ್ತಿ ಇವೆ. ಈ ತುಂಡು ರಚನೆಗಳಲ್ಲಿ ತೊಂಡು ಮೇಯುವ ಆರುಗಡ್ಡಿಯ ಕಚ್ಚು ಬೆಳೆ ಕಾಣಿಸುತ್ತದೆ.

ಜಮದಗ್ನಿ ತೀರಿಕೊಂಡಾಗ ಎಲ್ಲಮ್ಮ ಕಿಚ್ಚು ಹಾಯ್ದುದ್ದನ್ನು ಕುರಿತು ಹೇಳುತ್ತಾ ''ವಿಧವೆಯರ ಸಹಗಮನ ಆಗ ಧರ್ಮಸಮ್ಮತೋ ಆಗಿತ್ತು. ಇದು ಪುರುಷ ಪ್ರಧಾನ ಸಮಾಜದ ಧೋರಣೆಗೆ ಸಂಕೇತವಾಗಿದೆ'' - ಎಂದು ಹೇಳುತ್ತಾರೆ. ಈ ಹೇಳಿಕೆ ಅರ್ಧಸತ್ಯ. ಕಾರಣ ತಳಸ. ಸಳ್ಕೃತಿಗಳ ಇಂಥ ಆಚರಣೆಗಳನ್ನು ಕುರಿತು ಮಾತನಾಡುವಾಗ ಇಂಥ ಆಚರಣೆಗಳು ಯಾವ ಮೂಲದಿಂದ ಬಂದವು ಎಂಬ ಸಂಶೋಧನಾದೃಷ್ಟಿ ಅಗತ್ಯ. ಅನ್ಯ ಸಂಸ್ಕತಿಯ ದೃಷ್ಟಿ ಧೋರಣೆಗಳನ್ನು ತಳಸಂಸ್ಕೃತಿಯೊಂದು ಆಕ್ರಮಣ ಅಥವಾ ಸಂಸ್ಕೃತೀಕರಣ ಇತ್ಯಾದಿ ಯಾವುದೇ ಪ್ರಭಾವದಿಂದಾಗಿ ಅನುಕರಿಸುವುದಕ್ಕೆ ತೊಡಗಿರುವಾಗ ಈ ಅನುಕರಣೆಯನ್ನೇ ತಳಸಂಸ್ಕೃತಿಯ ಮೂಲದ್ದೆಂದು ಪುಷ್ಟೀಕರಿಸಿ ವ್ಯಾಖ್ಯಾನಿಸುವ ಅಪಾಯವಿರುತ್ತದೆ. ಮಾತೃಪ್ರಧಾನ ಕುಟುಂಬ ವ್ಯವಸ್ಥೆಯ ತಳಸಂಸ್ಕೃತಿಗಳ ನೆಲೆಯಲ್ಲಿ ಈ ರೀತಿಯ ಆಚರಣೆಗಳಿಗಿಂತ ವಿಧವಾವಿವಾಹ ಉಡಿಕೆ ಮದುವೆಯಂಥ ಜೀವಪರ ಆಚರಣೆಗಳನ್ನು ಕಾಣಬಹುದು. ಇಂಥ ಜೀವಪರ ಆಶಯಗಳನ್ನೇ ಕೆಟ್ಟ ಆಚರಣೆಗಳೆಂದು ಕಂಡು ಸಹಗಮನ ವಿಧವಾಪದ್ಧತಿಗಳನ್ನೇ ಪವಿತ್ರವೆಂದು ಭಾವಿಸುವ ದೃಷ್ಟಿ ಬೆಳೆಸಿದ ಆರ್ಯ ವ್ಯವಸ್ಥೆಯ ಬಗ್ಗೆ ಇಲ್ಲಿ ಉಲ್ಲೇಖಿಸಿ ಪರಾಮರ್ಶಿಸಿ ವಿವರಿಸುವುದು ಅಗತ್ಯವೆನ್ನಿಸುತ್ತದೆ.

ಎಲ್ಲಮ್ಮನ ಹಾಡುಗಳಲ್ಲಿ ಅವಳನ್ನು 'ಧಾರ್ವಾಡ ಸೀಮೆ ಕೊರವಂಜಿ' ಎಂದು ಕರೆದಿರುವುದನ್ನು ಕುರಿತು- ''ಇದೆಲ್ಲದರ ಅರ್ಥ ಸವದತ್ತಿಗೆ ಬರಲು ತ್ರಾಸಾಗುವವರು ಸಮೀಪದ ಎಲ್ಲಮ್ಮನ ಗುಡಿಗೆ ಹೋಗಬಹುದು ಎಂಬುದು-'' ಎಂದು ವ್ಯಾಖ್ಯಾನಿಸುತ್ತಾರೆ. ಈ ವಿಚಾರದಲ್ಲಿಯೂ ಕೂಡ ಇವರ ಸಂಗತಿಯ ಪಾರ್ಶ್ವವನ್ನು ಮಾತ್ರ ಕಾಣಿಸಿ ವಿರಮಿಸುತ್ತಾರೆ. ಜನಪದಕ್ಕೆ ದೈವ ಸ್ಥಾವರವಲ್ಲ, ಜಂಗಮ. ಮೂಲವಿಗ್ರಹಗಳಿಗೆ ಪ್ರತಿಯಾಗಿ ಮೆರೆದೇವರನ್ನು ಹೊತ್ತು ಮೆರೆದ ಸಂಸ್ಕೃತಿ ಜನಪದರದ್ದು. ಅದರಲ್ಲೂ ಮಾತೃದೇವತೆಗಳೆಲ್ಲ ಮೆರೆದೇವತೆಯರೇ. ಆ ದೇವಿಯರು ಊರಾಡುತ್ತಾರೆ. ಊರನಡುವೆ ಊರೊಕ್ಕಲ ಬೀದಿಬೀದಿಗಳಲ್ಲಿ ಸಾಗಿ ಮನೆಮನೆಗಳ ಮುಂದೆ ಪೂಜೆಗೊಳ್ಳುತ್ತಾರೆ. ಇವೆಲ್ಲದರ ಜತೆಗೆ ತಮ್ಮ ಭಕ್ತರುಗಳ ಮೇಲೆ ಮೈದುಂಬಿ ಅಡ್ಡಾಡುತ್ತಾರೆ.

ಡಾ॥ ಕಮಲ ಹೆಮ್ಮಿಗೆಯವರು ಎಲ್ಲಮ್ಮನಿಗೆ ಸಂಬಂಧಪಟ್ಟಂತೆ ಬರೀ ಕ್ಷೇತ್ರಕಾರ್ಯವನ್ನು ಮಾತ್ರ ಮಾಡದೆ ಹಲವು ಕೃತಿಗಳಲ್ಲಿ ದೇವಿಯ ಬಗೆಗೆ

ಪ್ರಸ್ತಾಪಿತವಾಗಿರುವ ವಿಷಯವನ್ನು ಸಂಗ್ರಹಿಸಿ ಈ ಎಲ್ಲ ಮೂಲದ ವಿವರಗಳ ನೆಲೆಯಲ್ಲಿ ಸಾಂಸ್ಕೃತಿಕ ಧಾರ್ಮಿಕ ವಿಚಾರವಿಮರ್ಶೆಗೆ ತೊಡಗಿರುವುದು ಮೆಚ್ಚಬೇಕಾದ ವಿಚಾರ.

''ಕಿರಿಯ ಪರಂಪರೆಯ ದೇವತೆ ಎಲ್ಲಮ್ಮ ಬೃಹತ್ ಪರಂಪರೆಯೊಂದಿಗೆ ಸಾಧಿತವಾದ ಸಂಪರ್ಕದಿಂದ ಶಿಷ್ಟ ಜನಪದರಿಬ್ಬರಿಗೂ ಬೇಕಾದಳು. ಬ್ರಾಹ್ಮಣರೊಂದಿಗೆ ಜೈನ ವೀರಶೈವರೂ ಸೇರಿ ಆಕೆಯ ಆರಾಧನೆ ನಡೆಸಿದರು.''-ಎನ್ನುವ ಇವರ ಅಭಿಪ್ರಾಯ ಚಾರಿತ್ರಿಕ ಸತ್ಯವನ್ನು ತಪ್ಪು ವಾಖ್ಯೆಗೆ ಒಳಗು ಮಾಡಿದಂತೆ ಮೂಡಿದ ಹೇಳಿಕೆಯಾಗಿದೆ. ಇದು ಬ್ರಾಹ್ಮಣರೊಂದಿಗೆ ಜೈನರು ವೀರಶೈವರು ಸೇರಿ ಆರಾಧನೆ ನಡೆಸಿದ್ದಲ್ಲ, ಜೈನರು ವೀರಶೈವರು ತಾವು ಧರ್ಮಾಂತರ ಹೊಂದುವ ಮುಂಚೆಯೇ ಈ ದೇವಿಯ ಆರಾಧಕರಾಗಿದ್ದವರು. ಮೂಲವನ್ನು ಬಿಡಲಾರದೆ ಭೀತಿ ಕಾರಣವಾಗಿ ಅಲ್ಲಿಯ ನಂಬಿಕೆ ಆಚರಣೆಗಳನ್ನು ಹಾಗೇ ಇಳಿಸಿಕೊಂಡು ಬಂದು ಕಾಲಾಂತರದಲ್ಲಿ ಹೊಸದರ ಜತೆ ಅದನ್ನು ಸಮೀಕರಿಸಿಕೊಳ್ಳುವ ಪ್ರಕ್ರಿಯೆ ನಡೆದಿದೆ. ಜನ್ನನ ಯಶೋಧರ ಚರಿತೆ ಮತ್ತು ಶರಣರ ವಚನಗಳನ್ನು ಈ ವಿಚಾರಕ್ಕಾಗಿ ಮತ್ತೊಮ್ಮೆ ಓದುವುದು.

ಜಮದಗ್ನಿ ಪತ್ನಿಯ ಶೀಲ ಶಂಕಿಸಿದಾಗ ಆಕೆಯ ತಲೆಕಡಿಯಲು ತನ್ನ ನಾಲ್ಕು ಮಕ್ಕಳಿಗೆ ಆಜ್ಞಾಪಿಸಿದ. ಆದರೆ ಅವರು ಅದಕ್ಕೆ ಒಪ್ಪಲಿಲ್ಲ. ಆಗ ಸಿಟ್ಟಿಗೆದ್ದ ಜಮದಗ್ನಿ ನೀವೆಲ್ಲ ನಪುಂಸಕರಾಗಿ ಎಂದು ಶಪಿಸಿದನಂತೆ. ಈ ವಿಚಾರ ಕುರಿತು ಡಾ॥ ಕಮಲ ಅವರು ''ಇದನ್ನು ಜೋಗಪ್ಪರು ತಮ್ಮ ಪ್ರತಿಷ್ಠೆ ಹೆಚ್ಚಿಸಿಕೊಳ್ಳಲು ಹಾಕಿರುವ ಸಾಧ್ಯತೆ ಇದೆ''- ಎಂದು ವ್ಯಾಖ್ಯಾನಿಸುತ್ತಾರೆ. ಮತ್ತು ಮೆಟ್ಟಿಲು ಹತ್ತುವಾಗ ಆಯಾಸವಾಗಬಾರದೆಂಬ ನಂಬಿಕೆಯಿಂದ ಈ ಘೋಷಣೆ ಹಾಕುತ್ತಾರೆ ಎಂದು ಜೋಗಪ್ಪಗಳು ಉಧೋ ಉಧೋ ಯಲ್ಲಮ್ಮ ಎಂದು ಕೂಗುವುದಕ್ಕೆ ಕಾರಣ ಹುಡುಕುತ್ತಾರೆ.

ತಾಯಿಯ ತಲೆಕಡಿಯದ ಮಕ್ಕಳನ್ನು ಮಾತೃ ಪ್ರಧಾನ ಸಂಸ್ಕೃತಿಯ ನೆಲೆಯಿಂದ ನೋಡಿದರೆ ಬೇರೆಯ ಅರ್ಥಶಕ್ತಿ ಇರುವ ಸಾಧ್ಯತೆ ಇದೆ. ''ಅಂಬರದ ಉಟಿಗೆ ಹನ್ನೆರಡನೇ ಶತಮಾನದ ಶರಣೆ ಅಕ್ಕ ಮಹಾದೇವಿಯ ಬತ್ತಲಿನಿಂದ ಪ್ರೇರಿತವಾದದ್ದು.''- ಎಂದು ಇವರು ತೀರ್ಮಾನಿಸುತ್ತಾರೆ. ಆದರೆ ಇಷ್ಟು ಗಟ್ಟಿಯಾದ ತೀರ್ಮಾನ ಕೊಡುವ ಮುಂಚೆ ತಕ್ಕ ಸಾಕ್ಷ್ಯಾಧಾರಗಳನ್ನು ಸಮರ್ಥನೆಗಳನ್ನು ಒದಗಿಸುವುದಿಲ್ಲ. ಯಾವ ವಿಷಯವನ್ನು ಪ್ರತಿಪಾದಿಸುವಾಗಲೂ ವಿಷಯದ ಬಗೆಗಿನ ತನ್ನ ತಿಳಿವನ್ನು ಸ್ಪಷ್ಟಗೊಳಿಸದೆ ಸಮರ್ಥನೀಯವಾಗಿ ಮಂಡಿಸದೆ ಹೀಗೆ ದುಡುಕಿ ಆಡುವ ನುಡಿಗಳು ಇಡೀ ಬರಹಕ್ಕೆ ಲಘುತ್ವವನ್ನು ತಂದುಕೊಡುತ್ತವೆ. ಕಮಲ ಅವರು ಏನೋ ಹೇಳಲು ತೊಡಗಿ ಮಧ್ಯೆ ಮಧ್ಯೆ ಇಂಥ ಒಂದೊಂದು ವಿಚಾರ ಹರಿಯಬಿಟ್ಟು ಸಲೀಸಾಗಿ ಮತ್ತಿನ್ನೇನೋ ವಿಚಾರ ಪ್ರಸ್ತಾಪಿಸುತ್ತಾ ಮುಂದೇ ಸಾಗುತ್ತಾರೆ. ಒಂದು ವಿಷಯದ ಬಗ್ಗೆ ವಿವರ ನೀಡುವುದಕ್ಕೆ ತೊಡಗಿದಾಗ ಕ್ಷೇತ್ರಕಾರ್ಯದಲ್ಲಿ ಲಭ್ಯವಾದ ಮಾಹಿತಿಯಷ್ಟನ್ನು ಕ್ರಮಬದ್ಧವಾಗಿ

ಒದಗಿಸಿದರೂ ಅದು ಎಷ್ಟೋ ಅನುಕೂಲ. ಅದರ ಬಗ್ಗೆ ಸಾಮಾಜಿಕ ಧಾರ್ಮಿಕ ಸಾಂಸ್ಕೃತಿಕ ವಿಶ್ಲೇಷಣೆ ನಡೆಸುವುದಾದರೆ ಅದು ವೈಜ್ಞಾನಿಕ ಶಿಸ್ತಿನ ಸಂಶೋಧನಾ ಶ್ರಮದ ಫಲವಾಗಬೇಕು.

ಸವದತ್ತಿ ಯಲ್ಲಮ್ಮನನ್ನ ಕುರಿತು ಡಾ॥ ಕಮಲ ಅವರು ನಡೆಸಿರುವ ಅಧ್ಯಯನ ಶ್ರಮಪೂರ್ಣವಾದುದು. ಇವರ ಎಷ್ಟೋ ವಿಚಾರಗಳು ಪ್ರಶ್ನೆಗಳನ್ನು ಹುಟ್ಟಿಸುತ್ತವೆ. ಒಟ್ಟಿನಲ್ಲಿ ಚಿಂತನೆಗೆ ಸಾಕಷ್ಟು ಗ್ರಾಸವನ್ನು ಒದಗಿಸಬಲ್ಲ ಆಲೋಚನೆಗಳಿಂದ ಕೂಡಿರುವ ಕೃತಿ.

ವೀರಭದ್ರ: ಡಾ॥ ಜಗನ್ನಾಥ ಹೆಬ್ಬಾಳೆ

ಬೀದರ್ ಜಿಲ್ಲೆಯ ಹುಮನಾಬಾದದಲ್ಲಿರುವ ವೀರಭದ್ರ ದೇವಾಲಯದ ಬಗ್ಗೆ ಜಗನ್ನಾಥ ಹೆಬ್ಬಾಳೆಯವರು ಕೃತಿ ರಚನೆ ಮಾಡಿದ್ದಾರೆ. 'ವೀರಭದ್ರನ ಕುರಿತು'- ಎಂಬ ಮೊದಲ ಭಾಗದಲ್ಲಿ ಇವರು ವೀರಭದ್ರನ ಬಗ್ಗೆ ಹೇಳುವುದಕ್ಕಿಂತ ಜಾತ್ರೆಗಳ ಬಗ್ಗೆ ಅವುಗಳು ಸಾಧಿಸುವ ಭಾವೈಕ್ಯತೆಯ ಮಹತ್ವದ ಬಗ್ಗೆ ಹೇಳುತ್ತಾರೆ. 'ವೀರಭದ್ರ ಯಾರು' ಎಂಬ ಪ್ರಶ್ನೆ ಹಾಕಿಕೊಂಡ ಎರಡನೇ ಭಾಗದಲ್ಲಿ ಪುರಾಣ ಕಥೆಯನ್ನು ಪ್ರಸ್ತಾಪಿಸುತ್ತಾ ವೀರಶೈವ ಧರ್ಮದಲ್ಲಿ ವೀರಭದ್ರನಿಗಿರುವ ವಿಶೇಷತೆ ಬಗ್ಗೆ ಹೇಳುತ್ತಾರೆ. ಆದರೆ ವೀರಭದ್ರ ಪುರಾಣದಲ್ಲಿ ಅಂತರ್ಗತವಾಗಿರುವ ಧಾರ್ಮಿಕ ಸಂಘರ್ಷವನ್ನು ಗ್ರಹಿಸುವಲ್ಲಿ ಇವರ ಆಸಕ್ತಿ ಮೊಂಡಾಗುತ್ತದೆ.

ವೀರಭದ್ರನಿಗೆ ಸಂಬಂಧಿಸಿದ ಹಲವು ಪುರಾಣ ಪ್ರಸಂಗಗಳ ಜತೆಗೆ ಜನಪದ ಪುರಾಣ ಘಟನೆಗಳನ್ನು ದಾಖಲಿಸುವ ಪ್ರಯತ್ನ ಮಾಡಿದ್ದಾರೆ. ಈ ಎಲ್ಲ ಸಂಗ್ರಹಗಳನ್ನು ಅನುಬಂಧದಲ್ಲಿ ಕೊಟ್ಟಿರುವುದು ಸರಿಯಾದ ಕ್ರಮ.

ತ್ರಿಪದಿಗಳಲ್ಲಿ ಜಾತ್ರೆ ಎಂಬ ಭಾಗದಲ್ಲಿ ಬೇರೆ ಬೇರೆ ದೇವರುಗಳಿಗೆ ಸಂಬಂಧಿಸಿದ ತ್ರಿಪದಿಗಳನ್ನು ಕಲೆಹಾಕಿ ನಿರೂಪಣೆ ನೀಡಿದ್ದಾರೆ. ಇದಕ್ಕಿಂತ ನೇರವಾಗಿ ವೀರಭದ್ರ ದೇವರ ಜಾತ್ರೆಯ ಸಂದರ್ಭದಲ್ಲಿ ಬಳಕೆಯಾಗುವ ಹಾಡುಗಳನ್ನು ಮಾತ್ರ ಗಮನಿಸಿದಂತೆ ಸಾಂಸ್ಕೃತಿಕ ಸಾಮಾಜಿಕ ಸ್ಥಿತ್ಯಂತರವನ್ನು ಸಂಘರ್ಷ ಸ್ವರೂಪವನ್ನು ಪರಿಚಯಿಸಿದ್ದರೆ ಕೃತಿಗೆ ಇನ್ನೂ ಹೆಚ್ಚಿನ ಮಹತ್ವ ಬರುತ್ತಿತ್ತು. ಒಡುಪುಗಳಲ್ಲಿ ಜಾತ್ರೆ ಎಂಬ ಅನುಬಂಧ ಭಾಗದಲ್ಲಿ ವಿವಿಧ ಆಕರ ಮೂಲಗಳಿಂದ ಜಾತ್ರೆಗೆ ಸಂಬಂಧಿಸಿದ ಒಡಪು ಗಾದೆ ನುಡಿಕಟ್ಟುಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಜಾತ್ರೆ ಕುರಿತು ಅಧ್ಯಯನ ಮಾಡುವವರಿಗೆ ಇದೊಂದು ಉಪಯುಕ್ತ ಆಕರ. ಸಾಕಷ್ಟು ಜನ ಮಾಹಿತಿಕಾರರನ್ನು ಭೇಟಿಯಾಗಿ ಗ್ರಂಥಗಳನ್ನು ಅಧ್ಯಯನ ಮಾಡಿ ಶ್ರಮವಹಿಸಿ ರಚಿಸಿರುವ ಕೃತಿ ವೀರಭದ್ರ. ''ಎಲ್ಲ ಧರ್ಮಗಳ ಮೂಲೋದ್ದೇಶ ಒಂದೇ ಆದರೂ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಪ್ರಯತ್ನ ನಡೆಯುತ್ತಲೇ ಇದೆ,'' - ಎಂಬ ವಾಸ್ತವಿಕ ಸಂಗತಿಯನ್ನು ವೈಚಾರಿಕ ಎಚ್ಚರದಲ್ಲಿ ಗ್ರಹಿಸುವ ಈ ಲೇಖಕರು ವೀರಭದ್ರನ ಬಗ್ಗೆ ಇದೇ ಭಾವದ ಒಳನೋಟ

ಬೀರಿ ವಿಮರ್ಶಿಸಿದ್ದಾರೆ. ನಮ್ಮ ಸಾಮಾಜಿಕ ಸಂಘರ್ಷದ ಎಷ್ಟೋ ಒಳಸುಳಿಗಳನ್ನು ಪರಿಚಯಿಸಬಹುದಿತ್ತು. ಆ ವಿಚಾರವನ್ನು ಕಟ್ಟಿಕೊಡುವಲ್ಲಿ ಲೇಖಕರ ದೃಷ್ಟಿ ಸೋತಿರುವುದನ್ನು ಹೇಳಲೇಬೇಕಾಗಿದೆ. ಆದರೆ ಇವರ ಮಾಹಿತಿ ಸಂಗ್ರಹದಲ್ಲಿ ಈ ವಿಚಾರಕ್ಕೆ ಸಂಬಂಧಪಟ್ಟ ವಿಷಯ ಸಾಕಷ್ಟಿರುವುದನ್ನು ಗಮನಿಸಬಹುದು. ಒಟ್ಟಿನಲ್ಲಿ ವೀರಭದ್ರನನ್ನು ಕುರಿತು ಅಧ್ಯಯನ ಮಾಡ ಬಯಸುವವರಿಗೆ ಇದೊಂದು ಗಮನಾರ್ಹ ಪರಾಮರ್ಶನ ಕೃತಿ.

ಇಂಡವಾಳು ಹಿರಿಯಮ್ಮ: ಡಾ. ಗಿರಿಜಮ್ಮ

ಮಾನವಳಾಗಿದ್ದರೂ ಅಸಮಾನ್ಯಕಾರ್ಯವನ್ನು ಸಾಧಿಸಿ ದೇವಿಯ ಸ್ಥಾನವನ್ನು ಪಡೆದು ಅಂದಿನಿಂದ ಇಂದಿನವರೆಗೂ ಸಾವಿರಾರು ಜನರಿಂದ ಪೂಜೆಗೊಂಡು ಸ್ತುತ್ಯಾರ್ಹಗಳಾಗಿರುವ ಇಂಡವಾಳು ಹಿರಿಯಮ್ಮನ ಬಗ್ಗೆ ಡಾ॥ ಗಿರಿಜಮ್ಮನವರು ಕ್ಷೇತ್ರಕಾರ್ಯ ಮಾಡಿ ಕೃತಿ ರಚಿಸಿದ್ದಾರೆ.

ಎಲ್ಲ ಗ್ರಾಮೀಣ ದೇವತೆಯವರ ಬಗ್ಗೆ ಇರುವ ಕಥೆಗಳನ್ನು ಗಮನ-ದಲ್ಲಿಟ್ಟುಕೊಂಡೇ ಗಿರಿಜಮ್ಮನವರು ಇಂಡವಾಳು ಹಿರಿಯಮ್ಮನ ಬಗೆಗಿನ ಕಥೆಯನ್ನು ಗುರುತಿಸುತ್ತಾರೆ. ಇದು ಮೆಚ್ಚಬೇಕಾದ ವಿಚಾರ. ದೇವಿಯ ಬಗ್ಗೆ ಜನಪದದಲ್ಲಿಯೇ ಪ್ರಚಲಿತವಿರುವ ಗೀತೆಯನ್ನು ಆಧರಿಸಿ ಆ ದೇವಿ ಸಾಂಸ್ಕೃತಿಕ ಮಹತ್ವವನ್ನು ಲೇಖಕಿ ನಿರೂಪಿಸಿದ್ದಾರೆ.

''ಒಂದಾನೊಂದು ಕಾಲದಲ್ಲಿ ಹಿರಿಯಮ್ಮ ದೇವಾಂಶ ಸಂಭೂತಳಾಗಿ ದುಷ್ಟನಿಗ್ರಹ ಮಾಡಿ, ಕಷ್ಟಕಾರ್ಪಣ್ಯಗಳನ್ನು ಕಳೆಯಿಸಿ ಸಂಕಷ್ಟದಲ್ಲಿರುವವರನ್ನು ರಕ್ಷಿಸಿಯೋ, ಊರಿನ ಪುರೋಭಿವೃದ್ಧಿಗಾಗಿ ಪ್ರಾಣತ್ಯಾಗ ಮಾಡಿಯೋ ಕುಟುಂಬದ ಗೌರವವನ್ನು ಕಾಪಾಡಿಕೊಳ್ಳುವುದಕ್ಕೋ ಸೆಣಸಾಡಿ ತನ್ನ ಮನೆ ಕುಟುಂಬದ ಗ್ರಾಮ ಹಾಗು ಊರಿನ ಸಮಸ್ತ ಜನರಿಗೆ ಮಾದರಿಯಾಗಿ ನಡೆದು ಹಿರಿತನಗಳಿಸಿ ಕೊನೆಗೆ ಹಿರಿಯಮ್ಮನಾಗಿ ಮಹತ್ಕಾರ್ಯವನ್ನು ಸಾಧಿಸಿ ದೇವ ಮಾನವಳಾಗಿ ಜನರ ಮನಸ್ಸಿನಲ್ಲಿ ಬೇರೂರಿರುವಳು''-ಎಂದು ಸಾಮಾಜಿಕ ಸಂದರ್ಭದಲ್ಲಿ ಹಿರಿಯಮ್ಮನ ಬದುಕು ಪಡೆದುಕೊಂಡ ಸಾಂಸ್ಕೃತಿಕ ಮಹತ್ವವನ್ನು ಸರಿಯಾಗಿಯೇ ಗುರುತಿಸಿದ್ದಾರೆ. ಆದರೆ ''ಹಿರಿಯಮ್ಮ ತನಗೆ ಸಲ್ಲಿಸಬೇಕಾಗಿರುತ್ತಿದ್ದ ಪೊಗದಿಗಳನ್ನು ಕಡ್ಡಾಯವಾಗಿ ಕಟ್ಟಳೆಗಳ ಮೂಲಕ ಒಂದು ಕಾಲಕ್ಕೆ ಆಯಾಯ ವರ್ಗಗಳಿಂದ ನಿರ್ದಾಕ್ಷಿಣ್ಯವಾಗಿ ವಸೂಲಿ ಮಾಡುತ್ತಿದ್ದಳು..... ದೇವಿಯನ್ನು ಮೆರೆಸುವ ಸಂದರ್ಭದಲ್ಲಿ ಊರಗೌಡರೇ ಮುಂದಲಾರತಿಯನ್ನು (ಮೊದಲಾರತಿ) ಎತ್ತಬೇಕು. ಅನಂತರವೇ ಮೆರವಣಿಗೆ. ಆಗಲೇ ದೇವಿಗೆ ಸಮಾಧಾನ''-ಎಂದು ನಿರೂಪಿಸುತ್ತಾರೆ. ಲೇಖಕಿಯ ಈ ಮಾತು ಅಧ್ಯಯನ ಸಂದರ್ಭದಲ್ಲಿ ತಾಳಬೇಕಾಗಿರುವ ವೈಜ್ಞಾನಿಕ ದೃಷ್ಟಿಯ ಕೊರತೆಯನ್ನು ಕಾಣಿಸುತ್ತದೆ. ತನಗೆ ಸಲ್ಲಬೇಕಾಗಿದ್ದ ಪೊಗದಿಗಳನ್ನು ಹಿರಿಯಮ್ಮ ಕಡ್ಡಾಯವಾಗಿ ವಸೂಲಿ ಮಾಡುತ್ತಿದ್ದಳು

ಎಂಬ ವಿಷಯ ಹೇಳುವಾಗ ಆ ಆಚರಣೆಯಲ್ಲಿ ನಿರತರಾಗಿರುವ ಜನರು ಸ್ವತಃ ತಾವೇ ಆಡುವ ಒಳಗಿನ ರೀತಿಯ ಮಾತಿನಂತೆ ಈ ವಿಷಯ ಪ್ರತಿಪಾದನೆ ಇದೆ. ಊರಗೌಡನ ಮೊದಲು ಮಂಗಳಾರತಿಯ ವಿಚಾರ ಕೂಡ ಊಳಿಗಮಾನ್ಯ ವ್ಯವಸ್ಥೆಯ ನೀತಿ ನಮ್ಮ ಧಾರ್ಮಿಕ ಸಂದರ್ಭದಲ್ಲಿ ಹೇಗೆ ಹಕ್ಕಿನ ರೀತಿಯಾಗಿ ಆಚರಿತವಾಗುತ್ತಿತ್ತು ಎಂಬ ಅಂಶವನ್ನು ವ್ಯಂಜಿಸುವುದೇ ಆಗಿದೆ. ಇಲ್ಲೆಲ್ಲ ದೇವಿಯ ನೆಲೆ ಮುಖ್ಯವಾಗದೆ ದೇವಿಯ ಸುತ್ತಲಿದ್ದ ಸಮುದಾಯದಲ್ಲಿ ವರ್ಗ ವರ್ಣ ಪ್ರಜ್ಞೆಗಳು ಹೇಗೆ ನಂಬಿಕೆಗಳಾಗಿ ಆಚರಣೆಗಳಾಗಿ ಗಟ್ಟಿಗೊಂಡಿವೆ ಎಂಬುದು ಮುಖ್ಯವಾಗುತ್ತದೆ. ಹೀಗಾಗಿ ಲೇಖಕಿ ಇಂಥ ವಿವರಗಳನ್ನು ವಿಶ್ಲೇಷಿಸುವಾಗ ಆಚರಣೆಯಲ್ಲಿ ಪಾಲ್ಗೊಳ್ಳುವ ಭಕ್ತರ ಸ್ಥಾನದಲ್ಲಿ ನಿಲ್ಲದೆ ಮಾನಸಿಕ ದೂರವನ್ನು ಕಾಯ್ದುಕೊಂಡ ಸಂಶೋಧಕನ ನೆಲೆಯಲ್ಲಿ ನಿಂತು ವಿಷಯವನ್ನು ಪರಿಭಾವಿಸುವುದು ಅಗತ್ಯವಿದೆ. ಈ ಕುಂದನ್ನು ಬಿಟ್ಟರೆ ಮಿಕ್ಕಂತೆ ಸಾಕಷ್ಟು ಶ್ರಮವಹಿಸಿ ಕ್ಷೇತ್ರ-ಕಾರ್ಯ ಮಾಡಿರುವ ಲೇಖಕಿ ಸಂಗ್ರಹಿಸಿದ ಮಾಹಿತಿಯನ್ನು ಒಪ್ಪವಾಗಿ ಕ್ರಮವಾಗಿ ನಿರೂಪಿಸಿದ್ದಾರೆ. ಸುತ್ತಲಿನ ಬೇರೆ ಬೇರೆ ದೇವದೇವತೆಯರ ಬಗ್ಗೆ ಕೂಡ ವಿವರಗಳನ್ನು ಉಚಿತವಾದ ರೀತಿಯಲ್ಲಿ ಸಂಗ್ರಹಿಸಿ ಬಳಸಿಕೊಂಡಿರುವುದು ಮೆಚ್ಚಬೇಕಾದ ಅಂಶ. ಜಾತ್ರೆಯ ವಿವರಗಳನ್ನು ಸಾಕಷ್ಟು ವಿವರಪೂರ್ಣವಾಗಿ ಕಲೆಹಾಕಿದ್ದಾರೆ. ಪ್ರಾಸಂಗಿಕವಾಗಿ ಜಾತ್ರೆಯ ಸಂದರ್ಭದಲ್ಲಿ ಬಳಕೆಯಾಗುವ ಹಾಡುಗಳನ್ನು ಉದ್ಧರಿಸಿದ್ದಾರೆ. ಅನುಬಂಧದಲ್ಲಿ ದೇವಿಗೆ ಸಂಬಂಧಿಸಿದ ಸಾಹಿತ್ಯ ಸೃಷ್ಟಿಯನ್ನು ಸಂಗ್ರಹಿಸಿದ್ದಾರೆ.

ಜಾತಿವಾರು ನೀತಿಯಲ್ಲಿ ಜಾತ್ರೆಯ ಕೈಂಕರ್ಯಗಳು ಹೇಗೆ ನಿರ್ವಹಿಸಲ್ಪಡುತ್ತಿವೆ ಎಂಬ ಬಗ್ಗೆ ಮಾಹಿತಿ ನೀಡಿದ್ದಾರೆ.

ಇದೇ ಕೃತಿಯಲ್ಲಿ ಹೆಬ್ಬೆರಳು ಹಿರಿಯಮ್ಮನ ಬಗ್ಗೆ ಕೂಡ ಪ್ರತ್ಯೇಕ ಅಧ್ಯಯನ ನಡೆಸಿ ವಿವರಣೆ ಸಹಿತವಾದ ಮಾಹಿತಿಯನ್ನು ಒದಗಿಸಿದ್ದಾರೆ. ಕರ್ನಾಟಕದ ಜಾತ್ರೆಗಳ ಬಗ್ಗೆ ಸಂಶೋಧನೆ ಮಾಡುವ ಯಾವುದೇ ವಿದ್ಯಾರ್ಥಿಗೆ ಇದೊಂದು ಉಪಯುಕ್ತ ಪರಾಮರ್ಶನ ಗ್ರಂಥ ಎಂಬುದರಲ್ಲಿ ಎರಡು ಮಾತಿಲ್ಲ.

ಹೆತ್ತಗೋನಹಳ್ಳಿ ಮಾಯಮ್ಮ: ಎಚ್.ಆರ್. ಚೇತನ

ಎಚ್.ಆರ್. ಚೇತನ ಅವರು ಕ್ರಮಬದ್ಧ ರೀತಿಯಲ್ಲಿ ವಿಷಯ ಸಂಗ್ರಹಿಸಿ, ಸಂಗ್ರಹಿಸಿದ ಮಾಹಿತಿಯನ್ನು ಗೋಜಲಿಲ್ಲದಂತೆ ನಿರೂಪಿಸಿರುವ ರೀತಿ ವಿಶಿಷ್ಟವಾಗಿದೆ.

ಗ್ರಾಮದೇವತೆಗಳ ಬಗ್ಗೆ ಇರುವ ಐತಿಹ್ಯಗಳೆಲ್ಲ ಹೆಚ್ಚುಕಡಿಮೆ ಸಮಾನ ರೀತಿಯಲ್ಲಿ ಹರಿಯುತ್ತವೆ. ಈ ಐತಿಹ್ಯಗಳು ಆಯಾ ದೇವತೆಗಳ ಉಗಮಕ್ಕೆ ಕಾರಣವನ್ನು ಕಾಣಿಸುವ ಕಥಾಕಿಂಡಿಗಳೂ ಆಗಿರುತ್ತವೆ. ಕೆಲವು ಕಡೆಗಳಲ್ಲಿ ಎಲ್ಲ ಕಥೆಗಳೂ ಅಲ್ಪಸ್ವಲ್ಪ ಮಾರ್ಪಾಟಿನೊಂದಿಗೆ ಒಬ್ಬಳೇ ದೇವತೆಯ ಸುತ್ತ ಹಬ್ಬಿ ಬೆಳೆದಿರುವುದೂ ಉಂಟು. ಅಂಥವುಗಳಲ್ಲಿ ಪ್ರಮುಖವಾಗಿ ಪ್ರತಿಲೋಮಕ್ಕೆ ಸಂಬಂಧಿಸಿದಂತೆ ಇರುವ ಕಥೆ

ಗಮನಾರ್ಹವಾದುದು. ಈ ಪ್ರತಿಲೋಮ ಎನ್ನುವುದು ವಿವಾಹ ಇಲ್ಲ ಅಪಹರಣ ಇವೆರಡರಲ್ಲಿ ಯಾವುದಾದರೂ ಒಂದಕ್ಕೆ ಸಂಬಂಧಿಸಿದಂತೆ ಇರುತ್ತದೆ. ಈ ಎಲ್ಲ ಅಂಶಗಳನ್ನು ಗಮನಿಸಿದಂತೆ ಮಾಯಮ್ಮನ ಬಗೆಗಿನ ಐತಿಹ್ಯಗಳನ್ನು ವಿವರಿಸುವಾಗ ಎಚ್.ಆರ್. ಚೇತನ ಅವರು ದ್ರಾವಿಡ ಮೂಲದ ಪ್ರಾಚೀನತೆಯ ಕಡೆಗೆ ಆಲೋಚನೆ ಬೆಳೆಸಿರುವುದು ಸಮಂಜಸವಿದೆ. ಬೇರೆಯವರ ಹಾಗೆ ಐತಿಹ್ಯಗಳನ್ನು ನಿರ್ದಿಷ್ಟ ಗ್ರಾಮ ದೇವತೆಯ ಮಿತನೆಲೆಯಲ್ಲಿ ಮಾತ್ರ ಅನ್ವಯಿಸಿ ವೈಭವೀಕರಣದ ಶಬ್ದ ಜಾಲದಲ್ಲಿ ಮುಳುಗಿ ಕುರುಡಾಗದೆ ವಿಶಾಲ ದೃಷ್ಟಿ ಹರಿಸಿ ಸಾಂಸ್ಕೃತಿಕ ಸಂಘರ್ಷದ ವಿವೇಚನೆಗೆ ತೊಡಗಿರುವುದು ಅರ್ಥಪೂರ್ಣವಾಗಿದೆ.

ಹೆತ್ತಗೋನಹಳ್ಳಿಯ ಸುತ್ತ ಮಾಯಮ್ಮ ದೇವಿಯ ಕತೆಗೆ ಸಂಬಂಧಿಸಿದ ಹಳ್ಳಿಗಳನ್ನು ಗುರ್ತಿಸಿ ಅವುಗಳ ಸ್ಥೂಲ ಪರಿಚಯ ಮಾಡಿಕೊಡುತ್ತಾರೆ. ಆ ಹಳ್ಳಿಗಳ ಹೆಸರಿನ ನಿಷ್ಪತ್ತಿಯ ಬಗ್ಗೆ ಅವರು ಹರಿಸಿರುವ ಆಲೋಚನೆ ಕುತೂಹಲಕರವಾಗಿದೆ. ಅಲ್ಲದೆ ಈ ದೇವಿಯ ಜಾತ್ರೆಯ ಸಂದರ್ಭದಲ್ಲಿ ಆರಾಧನೆಗೆ ಸಂಬಂಧಿಸಿದಂತೆ ಆಯಾ ಗ್ರಾಮಗಳ ಜನರಿಗೆ ಅದರಲ್ಲೂ ಜಾತಿವಾರು ನೆಲೆಯಲ್ಲಿ ಹಂಚಿಕೆಯಾಗಿರುವ ಹಕ್ಕಿನ ರೂಪದ ಸವಲತ್ತುಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ. ಇವರು ಕ್ಷೇತ್ರಕಾರ್ಯ ಮಾಡಿದಂತೆ ವಿಷಯ ಸಂಗ್ರಹಿಸಿದ ರೀತಿ ಮತ್ತು ಅದನ್ನು ನಿರೂಪಿಸಿರುವ ಕ್ರಮ ನಡೆಸಿರುವ ವಿವೇಚನೆ ಉತ್ತಮವಾಗಿದೆ.

ಹಬ್ಬದ ಆಚರಣೆಗೆ ಸಂಬಂಧಿಸಿದಂತೆ ಪ್ರಾರಂಭದಿಂದ ಕೊನೆಯವರೆಗಿನ ವಿಧಿವಿಧಾನ ನಂಬಿಕೆ ನಡಾವಳಿ ಕುರಿತು ವಿವರಪೂರ್ಣ ಮಾಹಿತಿ ನೀಡಿದ್ದಾರೆ.

ಸೋಮನ ಕುಣಿತದ ಹಾಡು ಹುಟ್ಟಿದ್ದರ ಬಗ್ಗೆ ಇವರು ''ಸೋಮನ ಕುಣಿಯುವವರು ತಮಟೆ ಬಡಿಯುವವರು ಇವರಿಗೆಲ್ಲಾ ಮಧ್ಯೆ ಮಧ್ಯೆ ವಿಶ್ರಾಂತಿಯೂ ಬೇಕಾಗುತ್ತದೆ. ಈ ಕಾರಣಕ್ಕಾಗಿ ಹೊಗಳಿಕೆಯ ಪದಗಳು ಹುಟ್ಟಿಕೊಂಡಿರಬೇಕೆನಿಸುತ್ತದೆ.''- ಎಂದು ಹೇಳುತ್ತಾರೆ. ಇಂಥ ಹೇಳಿಕೆಗಳು ಸಾಂಸ್ಕೃತಿಕ ಮಹತ್ವವನ್ನರಿಯದ ಹೇಳಿಕೆಗಳಾಗುತ್ತವೆ. ಸೋಮನ ಕುಣಿತದ ಸಂದರ್ಭದಲ್ಲಿ ಹಾಡುವ ಪದಗಳನ್ನು ಗಮನಿಸಿದರೆ ಹಾಡುವ ಪದಕ್ಕೂ ಆಚರಿಸುವ ಕ್ರಿಯೆಗೂ ಸಾಂಸ್ಕೃತಿಕ ವಿಧಿಯ ನಖಮಾಂಸ ಸಂಬಂಧವಿರುವುದು ಗೊತ್ತಾಗುತ್ತದೆ.

ವಿಧಿ ನಿಷೇಧಗಳನ್ನು ಕುರಿತು ಬರೆಯುವಾಗ ದೊಡ್ಡಮ್ಮ ಸಸ್ಯಾಹಾರಿಯಾಗಿದ್ದು ಚಿಕ್ಕಮ್ಮ ಮಾಂಸಾಹಾರಿಯಾಗಿರುವುದನ್ನು ಕುರಿತು ಪ್ರಸ್ತಾಪಿಸುತ್ತಾರೆ. ಚಿಕ್ಕಮ್ಮ ಹರಿಜನರಿಗೆ ಸಂಬಂಧಿಸಿದ ದೇವತೆಯಾಗಿರುವುದು ಸಾಮಾಜಿಕ ಸಂದರ್ಭದಲ್ಲಿ ಮಹತ್ವಪೂರ್ಣವಾದ ಸಾಂಸ್ಕೃತಿಕ ವಿಚಾರ. ಈ ರೀತಿಯಲ್ಲಿ ಒಬ್ಬ ದೇವತೆ ಎರಡಾಗಿ ಚಿಕ್ಕಮ್ಮ-ದೊಡ್ಡಮ್ಮ ಎಂದಾಗಿರುವುದು ಸಾಮಾಜಿಕ ಸಂಘರ್ಷದ ಕಾರಣದಿಂದ ಎಂಬುದನ್ನು ಮರೆಯುವಂತಿಲ್ಲ. ಜಾತಿವಾರು ನೀತಿಯಲ್ಲಿ ಹಕ್ಕಿಗಾಗಿ ಎಲ್ಲಿ ಹೊಡೆದಾಟ ಬಡಿದಾಟಗಳಾಗಿವೆಯೋ ಅಲ್ಲಿ ಸಾವರಿಸಿಕೊಂಡು ಹೋಗುವ ಹೊಂದಾಣಿಕೆಯ ಶ್ರೇಣೀಕರಣ ಕಾರ್ಯಗಳು

ನಡೆದು ಜಾತಿನೀತಿಯ ಹಿತವನ್ನು ರಕ್ಷಿಸುವ ನ್ಯಾಯಧರ್ಮ ನಡೆದಿರುತ್ತದೆ. ಈ ವಸ್ತುಸಂಗತಿಗಳನ್ನು ಗ್ರಹಿಸುವಲ್ಲಿ ಲೇಖಕಿ ಕೊಂಚ ಸೋತಿದ್ದಾರೆ ಅನ್ನಿಸುತ್ತದೆ.

ಒಟ್ಟಿನಲ್ಲಿ ದೇವತೆ ಮತ್ತು ದೇವತೆಗೆ ಸಂಬಂಧಿಸಿದ ಜಾತ್ರೆಯ ವಿವರಗಳನ್ನು ಲೇಖಕಿ ತುಂಬಾ ಮನೋಜ್ಞವಾಗಿ ಕಟ್ಟಿಕೊಟ್ಟಿದ್ದಾರೆ. ಸಾಂಸ್ಕೃತಿಕ ವಿವರಗಳಿಗೆ ಸಾಮಾಜಿಕ ಧಾರ್ಮಿಕ ನೆಲೆಯ ಚಿಂತನೆ ಹರಿಸಿ ವಿಶ್ಲೇಷಿಸುವ ಪ್ರಯತ್ನ ನಡೆಸಿದ್ದಾರೆ. ಈ ಪುಸ್ತಕ ಮಾಲೆಯ ಉದ್ದೇಶವನ್ನು ಸಫಲಗೊಳಿಸುವ ನಿಟ್ಟಿನಲ್ಲಿ ಇದೊಂದು ಉತ್ತಮ ಪ್ರಯತ್ನದ ಕೃತಿ.

ಮಾಲೆಯ ಮಾದೇಶ್ವರ: ಡಾ॥ ಬಿ.ಎಸ್. ಸ್ವಾಮಿ

ಕರ್ನಾಟಕ ಜಾನಪದ ಕಾವ್ಯ ಪ್ರಪಂಚದಲ್ಲಿ ಮಲೆಯ ಮಾದೇಶ್ವರನನ್ನು ಕುರಿತ ಕಾವ್ಯ ವಿಶಿಷ್ಟವಾದುದು. ಆ ಕಾವ್ಯದ ವಿಶಿಷ್ಟತೆಗೆ ಕೇವಲ ಅದರ ಗುಣ ಮತ್ತು ಪ್ರಮಾಣಗಳು ಮಾತ್ರ ಕಾರಣವಲ್ಲ; ಅದರ ಜೀವಶಕ್ತಿಯಾಗಿರುವ ಮಲೆ ಮತ್ತು ಮಾದೇಶ್ವರರ ಬದುಕೂ ಅಷ್ಟೇ ಪ್ರಧಾನ ಎಂಬುದು ವಿದಿತ ಸತ್ಯ. ಈ ಬದುಕು ಇತಿಹಾಸಕ್ಕೆ ಸೇರಿ ಹೋದದ್ದಾದರೂ ಅದರ ಸಕಲ ಆಶಯಗಳೂ ಪುರಾಣರೂಪ ಪಡೆದಂತೆ ಬದುಕಿನ ಚಲನಶೀಲತೆಯಲ್ಲಿ ಸಾಂಸ್ಕೃತಿಕ ಚಿತ್ತಗಳಾಗಿ ವರ್ತಮಾನದ ಮಣ್ಣಿನಲ್ಲಿ ಪುನರಭೀತಗೊಳ್ಳುತ್ತಿವೆ. ಇಂಥ ಕ್ಷೇತ್ರ ಮತ್ತು ಕ್ಷೇತ್ರ ದೈವದ ಬಗ್ಗೆ ಅಧ್ಯಯನ ನಡೆಸಿದಂತೆ ಡಾ॥ ಬಿ.ಎಸ್. ಸ್ವಾಮಿಯವರು ತಂದಿರುವ ಮಲೆಯ ಮಾದೇಶ್ವರ ಪುಸ್ತಕ ಸ್ವಲ್ಪ ನಿರಾಸೆಯನ್ನುಂಟುಮಾಡುವ ಕೃತಿ.

ಅರ್ಥಪೂರ್ಣರೀತಿಯಲ್ಲಿ ಕ್ಷೇತ್ರಪರಿಚಯ ಮಾಡಿಕೊಟ್ಟಂತೆ ಪ್ರಾರಂಭವಾಗುವ ಈ ಕೃತಿ ಕ್ಷೇತ್ರಕಾರ್ಯ ನಡೆಸಿ ನೀಡಬಹುದಾದ ಅಗತ್ಯಮಾಹಿತಿಗಳನ್ನಾದರೂ ನೀಡುವುದಿಲ್ಲ. ಎರಡನೆಯ ಅಧ್ಯಯದ 'ಶಿಷ್ಯ-ಜಾತ್ರೆ'-ಎಂಬ ಹೆಸರೇ ಅದರೆಡೆಯಲ್ಲಿ ಅವರು ನೀಡಿರುವ ವಿವರಕ್ಕೆ ಅಸಂಬದ್ಧವಾಗಿದೆ.

''ಮಾದೇಶ್ವರನ ಬೆಟ್ಟದಲ್ಲಾಗುವ ಜಾತ್ರೆಗೆ ಜಾತಿಮತ ಭೇದವಿಲ್ಲ, ಎಲ್ಲಾ ಜಾತಿಕೋಮಿನವರ ಜನ ಸೇರುವ ಭಾವೈಕ್ಯದ ತಾಣ. ಕಿವಿಗಿಂಪು ನೀಡುವ ಜಾನಪದ ಸಂಗೀತ ಮೊಳಗುವ ಕ್ಷೇತ್ರ. ಭಕ್ತಿಯ ಮಹಾಪೂರದ ನೆಲೆ!'' ಇಂಥ ಮಾತುಗಳು ಶ್ರೇಣೀಕರಣ ವ್ಯವಸ್ಥೆಯ ಬಗ್ಗೆ ಒಳನೋಟ ಹರಿಸದೆ ಆಡುವ ಮಾತುಗಳಾಗುತ್ತವೆ.

ಜಾತ್ರೆ ಕುರಿತು ಇವರು ಹೇಳುವ ಸೂತ್ರ ಇಂತಿದೆ- ''ವ್ಯಾಪಾರ ವ್ಯವಹಾರಗಳೊಂದಿಗೆ ಜನಪದರ ಮನರಂಜನೆಯನ್ನು ವರ್ಷದ ಒಂದು ನಿರ್ದಿಷ್ಟ ಕಾಲದಲ್ಲಿ, ನಿರ್ದಿಷ್ಟ ಸ್ಥಳದಲ್ಲಿ ನಡೆಯುವ ಸಾಮಾಜಿಕ ಚಟುವಟಿಕೆಯೇ ಜಾತ್ರೆ''- ಈ ಹೇಳಿಕೆ ಅರ್ಧಸತ್ಯದ ಮಾತು. ವ್ಯವಹಾರ ಮನರಂಜನೆಗಳು ಜಾತ್ರೆಯಲ್ಲಿ ಕಾಲಾಂತರದಲ್ಲಿ ಸೇರಿದ ಬದಲಾವಣೆಯ ಬೆಳವಣಿಗೆಗಳು. ಜಾತ್ರೆಯ ಪ್ರಾರಂಭ

ಮಾತ್ರ ಧಾರ್ಮಿಕ ಸಾಂಸ್ಕೃತಿಕ ಮೂಲದ್ದು ಎಂಬುದನ್ನು ಮರೆಯುವಂತಿಲ್ಲ. ನಂಬಿಕೆ ಆರಾಧನೆಗಳು ಈ ಧರ್ಮ ಮತ್ತು ಸಂಸ್ಕೃತಿಯ ಮೂರ್ತ ಅಮೂರ್ತ ವಿಧಿಗಳು.

ಜಾತ್ರೆ ಕುರಿತು ಇವರು ನೀಡುವ ವಿಶ್ಲೇಷಣದಲ್ಲಿ ಕೂಡ ಒಂದು ಕ್ರಮಬದ್ಧ ರೀತಿಯ ವಿಷಯ ಪ್ರತಿಪಾದನೆ ಕಾಣುವುದಿಲ್ಲ. ಸಾಹಿತ್ಯದಲ್ಲಿ ಜಾತ್ರೆ ಎಂಬ ಭಾಗದಲ್ಲಿ ಮಣ್ಣದ ಗುರುಸಿದ್ಧ ಕವಿ ರಚಿಸಿರುವ 'ಮಾದೇಶ್ವರ ಸಾಂಗತ್ಯ' ಕೃತಿಯಲ್ಲಿ ವರ್ಣಿತವಾಗಿರುವ ಜಾತ್ರೆಯ ವರ್ಣನೆಯನ್ನು ಸಾರಾಂಶ ರೂಪದಲ್ಲಿ ಹೇಳುತ್ತಾರೆ. ನಿರ್ದಿಷ್ಟ ಜಾತ್ರೆಯ ಅಧ್ಯಯನದ ಸಂದರ್ಭದಲ್ಲಿ ಇದು ಅನುಬಂಧದ ವಿಷಯವಾಗುವುದು ಉಚಿತ, ಹಾಗೆಯೇ 'ಜನಪದ ಸಾಹಿತ್ಯದಲ್ಲಿ ಜಾತ್ರೆ'-ಎಂಬುದು ಕೂಡ ಸಂದರ್ಭದಿಂದ ಬೇರ್ಪಡಿಸಿ ಕೇವಲ ಸಾಹಿತ್ಯ ವರ್ಣನೆಯ ಸಾರಾಂಶ ವಿವರವಾಗಿ ಬೆಳೆಯಬೇಕಾದ ಅಗತ್ಯವಿರಲಿಲ್ಲ. ಏಕೆಂದರೆ ಈ ಸಾಹಿತ್ಯ ಕೂಡ ಜಾತ್ರೆಯ ಆಚರಣೆಯಲ್ಲಿ ಆರಾಧನೆಯ ಇತರ ಪರಿಕರಗಳಂತೆ ಅದು ಒಂದು ಪರಿಕರ (ಅಂಗ)ವೇ ಹೊರತು ಇದು ಕ್ರಿಯಾವಿಧಿಯಿಂದ ಬೇರೆ ಅಲ್ಲ. ಈ ಅರಿವು ಇಲ್ಲದ್ದರಿಂದಲೇ ''ಇಲ್ಲಿನ ಪದ್ಯಗಳನ್ನು ಗಮನಿಸಿದಾಗ ಯಾವ ಶಿಷ್ಟಸಾಹಿತ್ಯಕ್ಕೂ ಕಡಿಮೆ ಇಲ್ಲದಂತೆ ತ್ರಿಪದಿಗಳಲ್ಲಿ ಕಣ್ಣಿಗೆ ಕಟ್ಟಿದಂತೆ ಜಾತ್ರೆಯ ವರ್ಣನೆಯನ್ನು ಜಾನಪದ ಕವಿ ವರ್ಣಿಸಿದ್ದಾನೆ.'' - ಎಂಬಂಥ ಕ್ಲೀಷೆಯ ಮಾತುಗಳನ್ನು ಆಡುತ್ತಾರೆ. ಜಾತ್ರೆಯಲ್ಲಿ ನಡೆಯುವ ಕಂಸಾಳೆ ಮೇಳದ ಪೂರ್ಣ ವಿವರವನ್ನು ಲೇಖಕರು ಉತ್ತಮ ರೀತಿಯಲ್ಲಿ ನಿರೂಪಿಸಿದ್ದಾರೆ. ಕಂಸಾಳೆ ಮೇಳ ಶ್ರಮ ಮೂಲದ ಸಂಸ್ಕೃತಿಗೆ ಸೇರಿದ್ದು, ಆ ಸಂಸ್ಕೃತಿ ತಾನು ನಂಬಿದ ಧರ್ಮವನ್ನು ಪ್ರಚಾರ ಮಾಡಲು ಹೇಗೆ ಶ್ರಮಸಾರ್ಥಕತೆಯ ಕಾಯಕ ನೃತ್ಯವನ್ನು ಆರಿಸಿಕೊಂಡಿದೆ ಎಂಬುದು ಕಾಣುತ್ತದೆ. ಏಳು ಕಥೆಗಳನ್ನು ಏಳು ರಾತ್ರಿ ಹಾಡುವ ಭಕ್ತರ ನಿರರ್ಗಳತೆಯ ಬಗ್ಗೆ ಲೇಖಕರ ಗಮನಿಕ ಸಮಂಜಸವಿದೆ.

ಉತ್ಸವ ಆಚರಣೆಯ ಬಗ್ಗೆ ಕ್ಷೇತ್ರಕಾರ್ಯಗೈದು ನಿರೂಪಿಸಿರುವ ವಿವರಗಳಿವೆ. ಈ ವಿವರಗಳನ್ನು ಸಾಮಾಜಿಕ ಸಾಂಸ್ಕೃತಿಕ ಧಾರ್ಮಿಕ ಸಂಘರ್ಷದ ಒಳನೋಟಗಳಿಗೆ ಒಡ್ಡಿಕೊಂಡು ಅಧ್ಯಯನ ನಡೆಸುವ ದೃಷ್ಟಿ ಅಷ್ಟಾಗಿ ಇಲ್ಲದೆ ಹೋಗಿರುವುದು ಈ ಕೃತಿಯ ಬಹುದೊಡ್ಡ ಮಿತಿ.

ಮಧುಗಿರಿಯ ದಂಡಿನ ಮಾರಮ್ಮ: ಎಂ.ಎಲ್. ನರಸಿಂಹಮೂರ್ತಿ

ಕರ್ನಾಟಕದ ಜಾತ್ರೆಗಳು ಮೂಲೆಯಲ್ಲಿ ಬಂದಿರುವ ಬೇರೆಲ್ಲ ಕೃತಿಗಳಿಗಿಂತ ಈ ಕೃತಿ ಹೆಚ್ಚು ವೈಜ್ಞಾನಿಕ ದೃಷ್ಟಿಯನ್ನೊಳಗೊಂಡ ಒಂದು ಸಂಯಮಶೀಲ ಬರವಣಿಗೆ. ತಳಸಂಸ್ಕೃತಿಗಳ ಆಚಾರವಿಚಾರಗಳ ಮೂಲ ಸ್ವರೂಪವನ್ನು ಕುರಿತು ಲೇಖಕರಾದ ಮ.ಲ. ನರಸಿಂಹಮೂರ್ತಿಯವರು ಅರ್ಥಪೂರ್ಣ ಚರ್ಚೆ ನಡೆಸಿದ್ದಾರೆ. ಜನಪದ ಸಂಸ್ಕೃತಿಯೊಂದರ ಮೇಲೆ ಶಿಷ್ಟ ಸಂಸ್ಕೃತಿ ಮಾಡಿರಬಹುದಾದ ಆಕ್ರಮಣ ಪರಿಣಾಮಗಳನ್ನು ಕುರಿತು ಇವರು ಆಲೋಚಿಸುವ ಕ್ರಮಕೂಡ ಹೆಚ್ಚು ವೈಜ್ಞಾನಿಕವಾದುದು. ''...ಮಾರಮ್ಮ

ಈಕೆಯ ಬಲಿಗೆ ಸಂಬಂಧಿಸಿದಂತೆ ಏನೇ ಕಥೆಗಳಿದ್ದರೂ, ಅದು ಅಂತರ್ಜಾತಿ ವಿವಾಹಗಳನ್ನು ನಿಷೇಧಿಸುವ ಮತ್ತು ಜಾತಿ ಪದ್ಧತಿಯನ್ನು ಸಮರ್ಥಿಸಿಕೊಳ್ಳುವ ತಂತ್ರವೆಂಬುದನ್ನು ಯಾರೂ ಅಲ್ಲಗಳೆಯಲಾಗದು''-ಈ ಮಾತುಗಳು ಜಾನಪದವನ್ನು ಗ್ರಹಿಸಬೇಕಾದ ವೈಜ್ಞಾನಿಕ ವೈಚಾರಿಕ ನಿಳತತ್ವಕ್ಕೆ ಉತ್ತಮ ಮಾದರಿಗಳಂತಿವೆ.

'ದವನ' ಭಾಗದಿಂದ ಸಂಬಂಧಿಕ ಆಚರಣೆಗಳವರೆಗೆ ಲೇಖಕರು ಮಾಡಿಕೊಂಡಿರುವ ವಿಷಯವಿಂಗಡಣೆ ಕ್ಷೇತ್ರಕಾರ್ಯವನ್ನು ಕೈಗೊಳ್ಳುವ ಜಾನಪದ ತಜ್ಞನೊಬ್ಬನ ವೈಜ್ಞಾನಿಕ ಶಿಸ್ತಿಗೆ ಉತ್ತಮ ಉದಾಹರಣೆಯಾಗಿದೆ. ಜತೆಗೆ ವಿಷಯವನ್ನು ನಿರೂಪಿಸುವಾಗ ಸಂಗ್ರಹಿಸಿದ ಮಾಹಿತಿಗೆ ಪೂರಕವಾಗುವ ವಿರೋಧವಾಗುವ ಪ್ರಶ್ನಾವಳಿಗಳನ್ನು ಹಾಕಿಕೊಂಡಂತೆ ವಿಷಯಜ್ಞಾನವನ್ನು ಅಧ್ಯಯನಕ್ಕೆ ಒಡ್ಡಿಕೊಳ್ಳುವ ಇವರ ರೀತಿ ಅನನ್ಯವಾಗಿದೆ.

ಮಾರಮ್ಮ ಪದದ ಹುಟ್ಟನ್ನೇ ಕುರಿತು ಮೂರು ವಿವರಣೆಗಳನ್ನು ಹೇಳುತ್ತಾ ''ಈ ಪದದ ಹುಟ್ಟನ್ನು ಭಾಷಾಶಾಸ್ತ್ರದ ನಿಟ್ಟಿನಲ್ಲಿ ಮಾತ್ರ ಗಮನಿಸದೆ ಆಚರಣೆ ಆರಾಧನೆಗಳಂಥ ಜನಪದ ಸಂಸ್ಕೃತಿಯ ಹಿನ್ನೆಲೆಯಲ್ಲಿ ನೋಡಿದಾಗ ಇನ್ನೂ ಹೊಸ ಹೊಸ ವಿಷಯಗಳು ಹೊರಬರುವ ಸಾಧ್ಯತೆಗಳಿವೆ'' ಎನ್ನುವ ಇವರ ಮಾತು ಗಮನಾರ್ಹವಾದುದು. ವ್ಯಾಕರಣದ ಶಾಸ್ತ್ರದೃಷ್ಟಿಗೂ ಅತೀತವಾದ ಸತ್ಯಸಂಗತಿಗಳನ್ನು ಗ್ರಹಿಸಬಲ್ಲ ಮನಸ್ಸಿನ ಆರೋಗ್ಯಕರ ಚಿಂತನೆಯ ಜೀವದ್ರವ್ಯ ಈ ಮಾತುಗಳಲ್ಲಿದೆ.

ಮಧುಗಿರಿ ಮಾರಮ್ಮನ ಬಗ್ಗೆ ಇರುವ ಕಥೆ ಎಲ್ಲ ಮಾರಮ್ಮಗಳ ಕಥೆಯಂತೆಯೇ ಇದ್ದರೂ ಈ ಕಥೆಯಲ್ಲಿ ವಿವರಗಳು ಪ್ರಾದೇಶಿಕ ಮಹತ್ವವನ್ನು ಪಡೆದುಕೊಳ್ಳುವುದರ ಜತೆಗೆ ವರ್ಣವ್ಯವಸ್ಥೆಯ ಹುನ್ನಾರಗಳನ್ನು ಧ್ವನಿಪೂರ್ಣವಾಗಿ ವ್ಯಂಜಿಸುತ್ತಿವೆ. ಈ ಕಥೆಯನ್ನು ಸಂಗ್ರಹಿಸಿರುವ ಲೇಖಕರು ಯಾವುದೇ ವ್ಯಾಖ್ಯಾನ ನೀಡದಂತೆ ವಿಶ್ಲೇಷಣೆ ಮಾಡದಂತೆ ವಕ್ತೃ ಹೇಳಿದ ಕಥೆಯನ್ನು ಯಥಾವತ್ತಾಗಿ ಹಿಡಿದಿಟ್ಟಿದ್ದಾರೆ. ಜಾತಿ ವ್ಯವಸ್ಥೆಯ ಎಲ್ಲ ವಿವರಗಳೂ ಕಥೆಯಲ್ಲಿವೆ. ದುರಂತವೆಂದರೆ ಯಾವ ಜನಾಂಗ ತನ್ನ ಬದುಕಿನ ಕೊರಳಿಗೆ ಉರುಳಾಗಿರುವ ಈ ಜಾತಿ ನೀತಿ ವಿಧಗಳನ್ನು ವಿರೋಧಿಸಬೇಕೋ ಅದನ್ನೇ ಆಚರಣೆಯಂತೆ ಧಾರ್ಮಿಕ ವಿಧಿಯಾಗಿಸಿಕೊಂಡು ನಡೆಸಿಕೊಂಡು ಬರುತ್ತಿದೆ. ಈ ಎಲ್ಲ ಕಾರಣಗಳಿಗೆ ಕತೆಯ ಹಂದರದಲ್ಲೇ ಉತ್ತರಗಳೂ ಹುದುಗಿವೆ.

ಮಾರಮ್ಮನ ಕಥೆಗಳಲ್ಲಿರುವ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಗಮನಿಸಿದ ಲೇಖಕರು ''ಕರ್ನಾಟಕದ ಅಥವಾ ದಕ್ಷಿಣ ಭಾರತದಲ್ಲಿ ಪ್ರಚಲಿತವಿರುವ ಮಾರಮ್ಮನ ಕಥೆಗಳನ್ನೆಲ್ಲ ಸಂಕಲಿಸಿ ಒಂದು ಕೃತಿಯ ರೂಪದಲ್ಲಿ ಒಟ್ಟಾಗಿ ತಂದಾಗ ಪಾಠಾಂತರಗಳ ಬಗ್ಗೆ ವಿಶೇಷವಾದ ಅಧ್ಯಯನ ಮಾಡಲು ಸಾಧ್ಯವಾಗುತ್ತದೆ'' ಎನ್ನುತ್ತಾರೆ. ಜಾನಪದ ವಿಷಯವನ್ನು ಅಧ್ಯಯನಕ್ಕೆ ಒಳಗುಮಾಡುವಾಗ ಪಾಠಾಂತರ ಎಂಬ ದೃಷ್ಟಿಯೇ ವೈಜ್ಞಾನಿಕವಾದುದಲ್ಲ. ಕಾರಣ ಗ್ರಂಥಸಂಪಾದನೆಯ ಶಾಸ್ತ್ರೀಯ ಶಿಸ್ತಿಗೂ ಮೌಖಿಕ

ಸಂಪ್ರದಾಯದ ಈ ಅಭಿವ್ಯಕ್ತಿ ವಿಧಾನಕ್ಕೂ ಧ್ಯೇಯೋದ್ದೇಶಗಳ ಮೂಲದಲ್ಲೇ ಭಿನ್ನತೆಗಳಿವೆ. ಆದ್ದರಿಂದ ಪಾಠಾಂತರ ಎಂಬ ದೃಷ್ಟಿಬಿಟ್ಟು ನಂಬಿಕೆ ಆಚರಣೆಯ ಸಾಂಸ್ಕೃತಿಕ ನೆಲೆಯೂ ಸ್ಥಿತ್ಯಂತರಗಳ ಗ್ರಹಿಕೆಯ ಕಡೆಗೆ ಕಥೆ ಹೇಗೆ ಹರಿದಿದೆ ಎಂಬುದನ್ನು ನೋಡಬೇಕಾಗುತ್ತದೆ. ಜೊತೆಗೆ ಯಾವ ಯಾವ ಜಾತಿಯ ವಕ್ತೃವಿನ ಬಾಯಲ್ಲಿ ಈ ಕಥೆ ಹೇಗೆ ಹೇಗೆ ನಿರೂಪಿಸಲ್ಪಡುತ್ತಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ನಮ್ಮ ಶ್ರೇಣೀಕರಣದ ಸಾಮಾಜಿಕ ಮನೋಸ್ಥಿತಿಗಳನ್ನು ಬಿಂಬಿಸುವ ಸೂಕ್ಷ್ಮತೆಗಳು ಈ ನಿರೂಪಣೆಯ ವ್ಯತ್ಯಯದಲ್ಲಿ ಕಂಡುಬರುವುದು ಉಂಟು.

ಕೊನೆಯಲ್ಲಿ 'ಕಥೆಯ ಬಗ್ಗೆ' ಲೇಖಕರು ಗ್ರಹಿಸಿದಂತೆ ಹೇಳಿರುವ ಮಾತುಗಳು ವಿಚಾರಪೂರ್ಣವಾಗಿವೆ. ಜಾತ್ರೆಯಲ್ಲಿ ನಡೆಯುವ ಎಲ್ಲಾ ಆಚರಣೆಗಳ ಬಗ್ಗೆ ಇವರು ನೀಡುವ ಮಾಹಿತಿಗಳು ಸಮತೂಕದ ನಿರೂಪಣಾವಿಧಿಯಿಂದಾಗಿ ಗುಣಾತ್ಮಕ ಮಾಹಿತಿಗಳಾಗುತ್ತವೆ.

ಒಟ್ಟಿನಲ್ಲಿ ಇಡೀ ಕೃತಿ ಈ ಮಾಲೆಯಲ್ಲಿ ಬಂದಿರುವ ಎಲ್ಲ ಕೃತಿಗಳಿಗಿಂತ ವಿಶಿಷ್ಟವಾದುದಾಗಿದೆ. ಜಾನಪದವನ್ನು ಅಧ್ಯಯನ ಮಾಡುವುದಕ್ಕೆ ಅಗತ್ಯವಾಗಿರಬೇಕಾದ ವೈಜ್ಞಾನಿಕ ವೈಚಾರಿಕ ಎಚ್ಚರದ ವಿವೇಕ ದೃಷ್ಟಿ ಈ ಬರಹದ ಜೀವ ಸತ್ವವಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿಯು ಜಾತ್ರೆಗಳನ್ನು ಕುರಿತು ಪ್ರಕಟಿಸಿರುವ ಈ ಅಧ್ಯಯನ ಮಾಲೆಯ ಯೋಜನೆ ಸ್ತುತ್ಯಾರ್ಹವಾದುದು. ಕಾರಣ-ನಮ್ಮ ದೇಶದ ಇತಿಹಾಸವನ್ನು ಜನಸಾಮಾನ್ಯರ ಸಾಮಾಜಿಕ ಸಾಂಸ್ಕೃತಿಕ ನೆಲೆಯಲ್ಲಿ ಪುನರ್ರಚಿಸುವ ಹೊಣೆಗಾರಿಕೆಯಲ್ಲಿ ಇಂಥ ಅಧ್ಯಯನ ಯೋಜನೆಗಳು ಗಮನಹರಿಸಬೇಕಾಗಿರುವುದು ತುಂಬಾ ಅಗತ್ಯವಿದೆ.

ಶ್ರೇಣೀಕೃತ ವ್ಯವಸ್ಥೆಯ ಒಂದು ವರ್ಗದ ಹಿತಕ್ಕಾಗಿ ಪ್ರಭಾವೀ ಪ್ರಚಾರ ಮಾಧ್ಯಮಗಳಂತೆ ಬಳಕೆಯಾಗಿರುವ ವೀರಗಲ್ಲು ಮಾಸ್ತಿಕಲ್ಲು ಶಾಸನಗಳನ್ನು ಮುಖ್ಯ ಆಕಾರಗಳಾಗಿ ಬಳಸುವ ನಮ್ಮ ಇತಿಹಾಸಕಾರರು ಜನಸಾಮಾನ್ಯರ ಅಂಗಾಲಿನಿಂದ ನೆತ್ತಿವರೆಗಿನ ಜೀವನಾಭಿವ್ಯಕ್ತಿಯ ಈ ಸಾಂಸ್ಕೃತಿಕ ಅಭಿವ್ಯಕ್ತ ರೂಪಗಳನ್ನು ಇತಿಹಾಸ ರಚನೆಗೆ ಬಳಸಿಕೊಳ್ಳುವುದೇ ಇಲ್ಲ. ಹೀಗಾಗಿ ಈಗ ನಾವು ಓದುವ ಇತಿಹಾಸ ಕೆಲವು ವರ್ಗಗಳ ಹಿತಾಸಕ್ತಿ ನೆಲೆಯ ಪಾರ್ಶ್ವದೃಷ್ಟಿಯ ಇತಿಹಾಸವೇ ಆಗಿದೆ. ಜನಸಾಮಾನ್ಯರ ಸಾಮಾಜಿಕ ಸಾಂಸ್ಕೃತಿಕ ಧಾರ್ಮಿಕ ನೆಲೆಯ ನಿಜದ ಬಣ್ಣಗಳನ್ನು ಪರಿಚಯಿಸಲು ಜಾನಪದವನ್ನೇ ಆಶ್ರಯಿಸಬೇಕಾಗಿದೆ. ಶ್ರೇಣೀಕೃತ ಸಾಮಜದ ನಿಜವಾದ ಸ್ವರೂಪವನ್ನು ಪರಿಚಯಿಸಲು ಜನಪದ ಸಂಸ್ಕೃತಿಯ ವೈಜ್ಞಾನಿಕ ಅಧ್ಯಯನ ಆಗಬೇಕಿದೆ. ಈ ಅಧ್ಯಯನ ನಾಡಿನ ಇತಿಹಾಸವನ್ನು ಪುನರ್ರಚಿಸುವ ಹೊಣೆಗಾರಿಕೆಯಿಂದ ಕೂಡಿದ್ದಾಗಬೇಕಿದೆ. ಇಂಥ ಅಧ್ಯಯನ ಯೋಜನೆಗಳು ಈ ಹೊಣೆಗಾರಿಕೆಯಿಂದ ಕಾರ್ಯಪ್ರವೃತ್ತವಾದಾಗ ಮಾತ್ರ ಉದ್ದೇಶ ಸಫಲವಾಗುತ್ತದೆ.

ಸಂಶೋಧನೆ, ವಿಮರ್ಶೆ

ಡಾ. ಎಸ್.ಪಿ. ಪದ್ಮಪ್ರಸಾದ

1995ರಲ್ಲಿ ಪ್ರಕಟವಾದ ಜಾನಪದ ಕೃತಿಗಳ ಪೈಕಿ ಈ ವಿಭಾಗಕ್ಕೆ ಸೇರಿಸಬಹುದಾದ ಸುಮಾರು ಇಪ್ಪತ್ತು ಕೃತಿಗಳು ನನ್ನ ಗಮನಕ್ಕೆ ಬಂದಿವೆ. ಇವುಗಳ ಪೈಕಿ ಎರಡು-ಮೂರನ್ನು ಬಿಟ್ಟು ಉಳಿದೆಲ್ಲದನ್ನೂ ಸ್ವತಃ ಓದಲು ಸಾಧ್ಯವಾಗುವಂತೆ ಅವು ದೊರೆತಿವೆ.

ಒಂದು ವರ್ಷದಲ್ಲಿ ಪ್ರಕಟವಾದ ಜಾನಪದ ಕೃತಿಗಳ ಪೈಕಿ ಶೇ. 40ರಷ್ಟು ಸಂಶೋಧನೆ ಹಾಗೂ ವಿಮರ್ಶೆಗೆ ಸಂಬಂಧಿಸಿದೆ ಎಂದರೆ ನಿಜವಾಗಿಯೂ ಸಮಾಧಾನಪಡಬಹುದಾದ ಸಂಗತಿ. ಆ ಕ್ಷೇತ್ರದಲ್ಲಿ ಗಂಭೀರ ಅಧ್ಯಯನ ಗಟ್ಟಿಯಾಗಿ ಬೇರೂರಿದೆ ಎಂದು ಇದರರ್ಥ. ಇಷ್ಟು ಕೃತಿಗಳು ಹೊರಬರಲು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸಾಕಷ್ಟು ಸಂಖ್ಯೆಯಲ್ಲಿ ಇಂಥ ಗ್ರಂಥಗಳನ್ನು ಪ್ರಕಟಿಸಿರುವುದೂ ಮುಖ್ಯ ಕಾರಣ. ಇಲ್ಲದಿದ್ದರೆ ರಚಿತವಾದ ಗ್ರಂಥಗಳು ಕೊಳೆಯುತ್ತಿರಬೇಕಿತ್ತು. ಈ ಗ್ರಂಥಗಳ ಸಾಧ್ಯವಾದಷ್ಟು ವಿವರವಾದ ಪರಿಶೀಲನೆಗೆ ಇಲ್ಲಿ ಪ್ರಯತ್ನಿಸಲಾಗಿದೆ.

1. ತೇರದಾಳದ ಲಾವಣಿಕಾರರು: ಡಾ. ಸಂಗಮೇಶ ಬಿರಾದಾರ.

ಲಾವಣಿ ಸಾಹಿತ್ಯವು ಕನ್ನಡ ಜನಪದ ಸಾಹಿತ್ಯದಲ್ಲಿ ಸಾಕಷ್ಟು ದೊಡ್ಡ ಪ್ರಮಾಣದಲ್ಲೇ ಸ್ಥೂಲವಾಗಿ ಎಲ್ಲ ಭಾಷೆಯ ಲಾವಣಿಗಳಲ್ಲೂ ಕೆಲವು ಸಾಮಾನ್ಯ ಅಂಶಗಳಿದ್ದರೂ ಎದ್ದು ತೋರುವಂಥ ಭಿನ್ನತೆಗಳೂ ಇವೆ. ಕನ್ನಡದಲ್ಲಿಯೇ ವಿವಿಧ ಪ್ರದೇಶಗಳಲ್ಲಿ ಸೃಷ್ಟಿಗೊಂಡ ಲಾವಣಿಗಳು ತಮ್ಮ ವಿಶಿಷ್ಟ ಲಕ್ಷಣಗಳನ್ನು ಹೊಂದಿವೆ. ಆಶ್ಚರ್ಯವೆನ್ನಿಸುವಂತೆ ಒಂದೇ ಪ್ರದೇಶದಲ್ಲಿ ಹಲವು ಲಾವಣಿಕಾರರು ಆಗಿಹೋಗಿ ಆ ಪ್ರದೇಶದ್ದೇ ಅದೊಂದು ಲಾವಣಿ ಸಂಪ್ರದಾಯವನ್ನೇ ರೂಪಿಸಬಹುದು. ಉತ್ತರ ಕರ್ನಾಟಕದ ತೇರದಾಳ ಇಂಥ ಸಂಪ್ರದಾಯ ನೂರಾರು ಲಾವಣಿಕಾರರು ಹುಟ್ಟಿ

ಶ್ರೀಮಂತವಾದ ಒಂದು ಲಾವಣಿ ಪರಂಪರೆಯನ್ನು ನಿರ್ಮಿಸಿದರು. ಆದರೆ ಪರಂಪರೆಗೆ ಸಂಬಂಧಿಸಿದ ಮಾಹಿತಿಗಳ ಸಂಗ್ರಹ, ಅಧ್ಯಯನ ಈವರೆಗೆ ನಡೆದಿರಲಿಲ್ಲ. ಈಗ ಮೊದಲ ಬಾರಿಗೆ ಡಾ. ಸಂಗಮೇಶ ಬಿರಾದಾರರು ಈ ಕೆಲಸ ಮಾಡಿ ಈ ಕೃತಿಯನ್ನು ರಚಿಸಿದ್ದಾರೆ.

ಸುಮಾರು ಒಂದು ನೂರು ಪುಟಗಳ ಈ ಗ್ರಂಥವನ್ನು ರಚಿಸಲು ಲೇಖಕರು ಸಾಕಷ್ಟು ಅಧ್ಯಯನ, ಕ್ಷೇತ್ರಕಾರ್ಯ ನಡೆಸಿರಬೇಕೆಂಬುದು ಮೊದಲ ನೋಟಕ್ಕೆ ವ್ಯಕ್ತವಾಗುತ್ತದೆ. ಈ ಕೃತಿಯಲ್ಲಿ ಮುಖ್ಯವಾಗಿ ಏಳು ಅಧ್ಯಾಯಗಳಿವೆ. ಕನ್ನಡ ಲಾವಣಿ ಸಾಹಿತ್ಯ, ಕನ್ನಡ- ಮರಾಠಿ ತುಲನೆ, ಜೋಕ್ಯಶೆಪ್ಪ - ಸೈ ಸೌದಾಗರ, ಚತುರ ತುಕಾರಾಮ, ಮೋಪಗಾರ ಮನೆತನದ ಇತರ ಲಾವಣಿಕಾರರು, ತೇರದಾಳದ ಬೇರೆ ಲಾವಣಿಕಾರರು - ಇವು ಅಧ್ಯಾಯಗಳ ಹೆಸರುಗಳು. ಇದರ ಜೊತೆಗೆ ಪೀಠಿಕೆ, ಉಪಸಂಹಾರಗಳು, ವಕ್ತೃ ವಿವರ, ಚತುರ ತುಕಾರಾಮನ ವಂಶಾವಳಿಯ ಚಿತ್ರ - ಇವೂ ಇವೆ.

ಕನ್ನಡ ಲಾವಣಿ ಸಾಹಿತ್ಯ ಅಧ್ಯಾಯದಲ್ಲಿ ಅದರ ಹುಟ್ಟು, ಬೆಳವಣಿಗೆಯನ್ನು ವಿವಿಧ ಆಧಾರಗಳಿಂದ ನಿರೂಪಿಸಿದ್ದಾರೆ. ಆದರೆ ಇಲ್ಲಿ ಲೇಖಕರು ಕೊಡುವ "ಏಳನೆಯ ಶತಮಾನದಷ್ಟು ಹಿಂದಿನಿಂದಲೇ ಈ ಲಾವಣಿಯು ಕನ್ನಡ ಜಾನಪದ ಸಾಹಿತ್ಯದಲ್ಲಿ ಹಾಸುಹೊಕ್ಕಾಗಿ ಬೆಳೆದುಬಂದಿರುವಲ್ಲಿ ಅಚ್ಚರಿಪಡಬೇಕಾಗಿಲ್ಲ"-ಎಂಬ ನಿರ್ಣಯಕ್ಕೆ ಅವರು ಕೊಡುವ ಆಧಾರ ತುಂಬ ದುರ್ಬಲವಾದುದು. ಅವರೆನ್ನುತ್ತಾರೆ- "ಎರಡನೇ ಪುಲಕೇಶಿ ಕಾಲದಲ್ಲಿ ಪರ್ಷಿಯನ್ ದೊರೆ ಖುಸ್ರುವಿನ ರಾಯಭಾರಿ ಬಾದಾಮಿಗೆ ಬಂದ. ಈ ವೇಳೆಯಲ್ಲೇ ಈ ಶಬ್ದ ಕನ್ನಡದಲ್ಲಿ ಸೇರಿರಬೇಕು. ಸಮಾನವಾದ ಗುಣಧರ್ಮಗಳಿಂದ ಕೂಡಿದ ಹಾಡಿಗೆ ಅನ್ವರ್ಥಕವಾಗಿ ಬಂದಿರಬೇಕು. ಜನಪದದಲ್ಲಿ ಉಳಿದಿರಬೇಕು. ಮುಂದೆ ಶಾಹಿಯ ಆಳ್ವಿಕೆಯಲ್ಲಿ ವಿಶೇಷ ಪ್ರಚುರತೆ ಪಡೆದು ಇಂದು ತನ್ನದೆ ಆದ ವಿಶಿಷ್ಟ ಸ್ಥಾನವನ್ನು ಹೊಂದಿರಬೇಕು"

-ಇಂಥ 'ಇರಬೇಕು'ಗಳಿಂದ ಸಾಧುವಾದ ನಿರ್ಣಯ ಸಾಧ್ಯವಾಗುವುದಿಲ್ಲ. ರಾಯಭಾರಿಯೊಬ್ಬನ ಭೇಟಿಯ ಮುಖ್ಯ ಉದ್ದೇಶ ಎರಡು ರಾಜ್ಯಗಳ ನಡುವೆ ಅಲ್ಲಿನ ರಾಜರುಗಳ ನಡುವೆ ಸಂಸ್ಥೆಯನ್ನು ಬೆಳೆಸಿ, ತನ್ನ ದೊರೆಗೆ ಏನು ಬೇಕೋ ಅದು ಮಾಡಿಕೊಳ್ಳುವುದಾಗಿರುತ್ತದೆ. ಇದರ ಜೊತೆಗೆ ಆತ ಈ ದೇಶದ ಜನಜೀವನವನ್ನು ಆದಷ್ಟೂ ಗ್ರಹಿಸಿಕೊಂಡು ತನ್ನ ಜ್ಞಾನ ಹೆಚ್ಚಿಸಿಕೊಂಡು ಹಿಂದಿರುಗುತ್ತಾನೆ. ಸೀಮಿತ ಸಮಯ ಅವಕಾಶಗಳಿಂದ ಕೂಡಿದ ಈ ಸಂದರ್ಭದಲ್ಲಿ ಒಬ್ಬ ರಾಯಭಾರಿ ಬಂದು ಹೋದ ಕೂಡಲೇ ಎಲ್ಲಾ ಬಿಟ್ಟು 'ಲಾವಣಿ'ಗೆ ಸಮಾನವಾದ 'ಶಾಬಿರಕಿ' ಪರ್ಷಿಯನ್ ಶಬ್ದ ಇಲ್ಲಿ ಜನರಲ್ಲಿ ಸೇರಿಬಿಟ್ಟಿತ್ತು ಎಂಬುದರ ಬಗ್ಗೆ ಆ ರಾಯಭಾರಿ ಜನರಲ್ಲಿ ಮಾತನಾಡಿರಬೇಕು ಎಂಬುದು ತುಂಬ ದೂರದ ಊಹೆಯಾಗುತ್ತದೆ. 'ಆ ಕಾಲದಲ್ಲಿ ಸಮಾನವಾದ ಗುಣಧರ್ಮಗಳಿಂದ ಕೂಡಿದ ಹಾಡಿತ್ತು'-ಎನ್ನುವ ತಮ್ಮ ಅಭಿಪ್ರಾಯಕ್ಕೂ

ಅವರು ಆಧಾರ ಒದಗಿಸುವುದಿಲ್ಲ. ಇನ್ನೊಂದೆಡೆ ಬಿರಾದಾರರು 1162ರ 'ಕಾವ್ಯಾವಲೋಕನ'ದಲ್ಲಿ ಬರುವ ಬಾಜನ ಗಬ್ಬವು ಲಾವಣಿಯಾಗಿರಬೇಕು' ಎನ್ನುವುದೂ ಪ್ರಶ್ನಾರ್ಹವೇ. 'ಬಾಜನಗಬ್ಬ' ಎಂದರೆ ವಾದನಕ್ಕೆ ಸರಿಹೊಂದುವಂಥ ಕಾವ್ಯ ಎಂದಷ್ಟೆ ಅರ್ಥ. ವಾದನಕ್ಕೆ ಸರಿಹೊಂದುವಂಥ ಕಾವ್ಯ ಪ್ರಕಾರ ಲಾವಣಿ ಒಂದೇ ಅಲ್ಲ. ಮುಂದೆ ಪುಟ 13ರಲ್ಲಿ ಅವರು ಈ ಬಗ್ಗೆ ಮಾಡುವ ವಾದವೂ ಪ್ರಶ್ನಾರ್ಹವೇ ಆಗಿದೆ.

ಐತಿಹಾಸಿಕ ಆಧಾರಗಳಿಗೆ ಸಂಬಂಧಿಸಿದ ಈ ಕೆಲ ಅಂಶಗಳನ್ನು ಬಿಟ್ಟರೆ ಮುಂದೆಲ್ಲ ಲೇಖಕರು ಮುನ್ನಡೆದಿರುವುದು ಬಹುಮಟ್ಟಿಗೆ ಸಮರ್ಥಕವೂ ಶ್ರಮಪೂರ್ಣವೂ ಆದ ಹಾದಿಯಲ್ಲಿಯೇ ಆಗಿದೆ. ಲಾವಣಿಯ ಲಕ್ಷಣಗಳು, ಅದರ ವೈವಿಧ್ಯಗಳು, ವರ್ಗೀಕರಣ ಈ ವಿಚಾರಗಳನ್ನೂ ಕುರಿತು ವಿವರವಾಗಿ ನಿರೂಪಿಸಿದ್ದಾರೆ. ಇಲ್ಲೆಲ್ಲ ಲೇಖಕರ ನೇರವಾದ ಕ್ಷೇತ್ರ ಸಂಪರ್ಕದ ಅನುಭವ ಎದ್ದು ಕಾಣುತ್ತವೆ. ಇಲ್ಲಿನ ವಿಚಾರಗಳೆಲ್ಲ ಮಾನ್ಯಮಾಡತಕ್ಕವಾಗಿವೆ.

ಮುಂದಿನ ಅಧ್ಯಾಯ 'ಕನ್ನಡ-ಮರಾಠಿ ತುಲನೆ'ಯಲ್ಲಿ ಈ ಎರಡೂ ಭಾಷೆಗಳಲ್ಲಿ ಲಾವಣಿಯ ಕುರಿತು, ಅದರ ವಿವಿಧ ವರ್ಗಗಳು, ಭಾಗಗಳ ಕುರಿತು ಇರುವ ಶಬ್ದಗಳು ಹಾಗೂ ಲಕ್ಷಣಗಳ ತುಲನೆ ನಡೆಸಿದ್ದಾರೆ. ಲಾವಣಿಗಳು ಕನ್ನಡದಿಂದಲೇ ಮರಾಠಿಗೆ ಹೋಗಿರಬೇಕೆಂದು ಹೇಳಿ ಕೆಲವು ಸಾಧುವಾದ ಆಧಾರಗಳನ್ನು ಕೊಡುತ್ತಾರೆ. ಇದರ ನಂತರ ತೇರದಾಳದ ಬಗ್ಗೆ ಕೆಲವು ಉಪಯುಕ್ತ ಮಾಹಿತಿಗಳನ್ನು ನೀಡಿದ್ದಾರೆ.

ಇಷ್ಟೂ ಭಾಗವು (29 ಪುಟಗಳು) ತೇರದಾಳದ ಲಾವಣಿಕಾರರ ಪರಿಚಯಕ್ಕೆ ಒಂದು ಉಪಯುಕ್ತ ಪೂರ್ವರಂಗದಂತಿದೆ. ಇಲ್ಲಿಂದ ಮುಂದೆ ತೇರದಾಳದಲ್ಲಿ ಆಗಿ ಹೋದ ಕೆಲವು ಪ್ರಸಿದ್ಧ ಲಾವಣಿಕಾರರ ಬಗ್ಗೆ ಪರಿಚಯ ಲೇಖನಗಳಿವೆ.

ಈ ಪರಿಚಯ ಲೇಖನಗಳನ್ನು ಲೇಖಕರು ತೇರದಾಳಕ್ಕೂ, ಆ ಲಾವಣಿಕಾರರ ವಂಶಜರು ಇರುವ ಇತರ ಬೇರೆ ಬೇರೆ ಊರುಗಳಿಗೂ ಹೋಗಿ ಹಲವಾರು ವ್ಯಕ್ತಿಗಳನ್ನು ಸಂದರ್ಶಿಸಿ ಮಾಹಿತಿಗಳನ್ನು ಸಂಗ್ರಹಿಸಿ, ಬರೆದಿದ್ದಾರೆ. ಅನೇಕ ಸಂದರ್ಭಗಳಲ್ಲಿ ಸಂದರ್ಶನದ ಭಾಗಗಳನ್ನು ನೇರವಾಗಿ ಪ್ರಸ್ತುತಪಡಿಸುವುದರಿಂದ ಬರವಣಿಗೆ ಆಕರ್ಷಕವಾಗಿದೆ. ಇಂಥ ಐದು ಅಧ್ಯಾಯಗಳಿವೆ. ಅಲ್ಲಲ್ಲಿ ಅವರ ಲಾವಣಿಗಳನ್ನು ಉದ್ಧರಿಸಿದ್ದಾರೆ.

ಒಂದು ಗತ್ತುಗಾರಿಕೆಯುಳ್ಳ ಜಾನಪದ ಕಾವ್ಯ ಪ್ರಕಾರದ ಬಗೆಗೆ, ಸುಪುಷ್ಟವಾಗಿ ಅದನ್ನು ಬೆಳೆಸಿದ ಒಂದು ಸಮುದಾಯದ ಬಗ್ಗೆ ಕಷ್ಟದಿಂದ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸುವುದರ ಮೂಲಕ ಡಾ. ಸಂಗಮೇಶ ಬಿರಾದಾರರು ಕಳೆದೇಹೋಗಿದ್ದ ಜಾನಪದ ಸಾಹಿತ್ಯೇತಿಹಾಸವನ್ನು ಇಲ್ಲಿ ಪುನರ್‌ರಚಿಸಿಕೊಟ್ಟಿದ್ದಾರೆ. ನಾಲ್ಕೆಂಟು ಲಾವಣಿಗಳನ್ನು ಇಡಿಯಾಗಿ ಕೊನೆಯಲ್ಲಿ ಕೊಟ್ಟಿದ್ದರೆ ಚೆನ್ನಾಗಿತ್ತು. ತಮ್ಮ ಪ್ರಾಮಾಣಿಕ ಶ್ರಮಕ್ಕಾಗಿ ಲೇಖಕರು ಅಭಿನಂದನೀಯರು.

2. ಸಂಸ್ಕೃತಿ ವಿಕಾಸ: ಡಾ.ನಂ. ತಪಸ್ವೀ ಕುಮಾರ್

ನಾಲ್ಕು ನೂರು ಪುಟಗಳ ವ್ಯಾಪ್ತಿಯ ಈ ಬೃಹತ್ ಗ್ರಂಥ ಪೂರ್ಣ ನೇರವಾಗಿ ಜಾನಪದಕ್ಕೆ ಸಂಬಂಧಿಸಿದ್ದಲ್ಲ. ಬದಲಾಗಿ, ಅದರ ತಂದೆಯಂತಿರುವ ಮಾನವ ಶಾಸ್ತ್ರದ (ಅಂತ್ರೋಪಾಲಜಿ)ಗೆ ಸಂಬಂಧಿಸಿರುವಂತಹದು. ಜಾನಪದ ಇಡಿಯಾಗಿ ಮಾನವ ಶಾಸ್ತ್ರದ ಡೇರೆಯೊಳಗೆ ಸೇರಿಕೊಂಡಿದೆ. ಆದ್ದರಿಂದ ಮಾನವಶಾಸ್ತ್ರ, ಅದರಲ್ಲೂ ಸಂಸ್ಕೃತಿಯ ವಿಕಾಸವನ್ನು ಕುರಿತು ಚರ್ಚಿಸುವಾಗ ಪ್ರತ್ಯಕ್ಷ, ಪರೋಕ್ಷವಾಗಿ ಜಾನಪದ ವಿವೇಚನೆಯೂ ಬಂದೇ ಬರುತ್ತದೆ. ಈ ಗ್ರಂಥದಲ್ಲಿ ಸುಮಾರು ಒಂದು ನೂರು ಪುಟಗಳಷ್ಟು ನೇರವಾಗಿ ಜಾನಪದ ವಿಷಯಕವಾದ ವಿವೇಚನೆ ಇದೆ.

ಈ ಗ್ರಂಥದಲ್ಲಿ ಎರಡು ಮುಖ್ಯ ಭಾಗಗಳಿವೆ. ಮೊದಲನೇ ಭಾಗವು ಸಾಂಸ್ಕೃತಿಕ ಮಾನವಶಾಸ್ತ್ರಕ್ಕೆ ಸಂಬಂಧಿಸಿದ್ದರೆ ಎರಡನೇ ಭಾಗವು ಭೌತ ಮಾನವಶಾಸ್ತ್ರಕ್ಕೆ ಸಂಬಂಧಿಸಿದೆ. ಪ್ರತಿಯೊಂದು ಭಾಗದಲ್ಲೂ ಆರೇಳು ಅಧ್ಯಾಯಗಳಿವೆ.

ಇದರಲ್ಲಿ-ಜಾನಪದಕ್ಕೆ ಸಂಬಂಧಿಸಿದ ಅನೇಕ ವಿಚಾರಗಳು-ಐದು, ಆರು, ಮತ್ತು ಏಳನೇ ಅಧ್ಯಾಯಗಳಲ್ಲಿ ಬರುತ್ತವೆ. ಅಂದರೆ-ಸು. 100ನೇ ಪುಟದಿಂದ ಇನ್ನೂರನೇ ಪುಟದ ವರೆಗಿನ ಭಾಗದಲ್ಲಿ. ಇಲ್ಲಿ ನಾಗರಿಕತೆಯ ಸ್ವರೂಪ, ಪ್ರಭಾವ ಆಧುನೀಕರಣ, ಜನಪದ ಹಾಗೂ ಶಿಷ್ಟ ಸಂಸ್ಕೃತಿ, ಸಂಬಂಧ, ವ್ಯತ್ಯಾಸ, ಗ್ರಾಮೀಣ ನಾಗರಿಕ ಸಾಮಾಜಿಕ ಸಾಂಸ್ಕೃತಿಕ ವ್ಯವಸ್ಥೆ, ಜನಪದ ಸಂಸ್ಕೃತಿಯ ಮುಖ್ಯ ಲಕ್ಷಣಗಳು ಜಾನಪದರ ವಿಶ್ವದ ಪರಿಕಲ್ಪನೆ, ಬಂಧುತ್ವ, ವಿವಾಹ ಮತ್ತು ಕುಟುಂಬ, ರಕ್ತಬಾಂಧವ್ಯ, ಬಂಧುತ್ವದ ಬಗೆಗಳು, ಶಿಶುನಾಮ ಸಂಬೋಧನೆ, ದೂರವಿಡುವಿಕೆ, ಹೊರಬಾಂಧವ್ಯ, ಒಳಬಾಂಧವ್ಯ ವಿವಾಹಕ್ರಮ, ಧಾರ್ಮಿಕಾಚರಣೆಗಳು ಮಾಟ, ಮಂತ್ರ ವಿದ್ಯೆ-ಇತ್ಯಾದಿ ಇತ್ಯಾದಿ ಹಲವು ವಿಚಾರಗಳ ಬಗ್ಗೆ ಚರ್ಚೆ ಇದೆ.

ಈ ವಿಚಾರಗಳನ್ನು ಚರ್ಚಿಸುವಾಗ ತಪಸ್ವೀ ಕುಮಾರರು ಸ್ವಂತ ಕ್ಷೇತ್ರ ಕಾರ್ಯದ ಫಲವಾಗಿ ದೊರೆತ ಹೊಸ ಉದಾಹರಣೆಗಳನ್ನೋ ಹೊಸ ಅಂಶಗಳನ್ನೋ ನಮ್ಮೆದುರಿಗಿಟ್ಟು ಚರ್ಚಿಸುವುದಿಲ್ಲ. ಅವರ ಗಮನವೆಲ್ಲ ಈಗಾಗಲೇ ಆಯಾ ವಿಚಾರಗಳ ಬಗ್ಗೆ ತಿಳಿದುಬಂದಿರುವ, ಚರ್ಚಿತವಾಗಿರುವ ಅಂಶಗಳನ್ನೆಲ್ಲ ಒಪ್ಪವಾಗಿ ಒಂದೆಡೆ ಕ್ರೋಢೀಕರಿಸಿಟ್ಟು ಓದುಗರಿಗೆ, ವಿಶೇಷವಾಗಿ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅರ್ಥವಾಗುವ ಹಾಗೆ ಸುಲಭವಾಗಿ ತಿಳಿಯುವಂತೆ ಮಾಡುವುದು ಕಡೆಗಿದೆ. ಅದೇ ಪುಸ್ತಕದ ಉದ್ದೇಶ ಕೂಡಾ. ಅಷ್ಟು ಕೆಲಸವನ್ನವರು ಸರಿಯಾಗಿಯೇ ಮಾಡಿದ್ದಾರೆ. ಸಂಶಯಕ್ಕೆಡೆಯಿಲ್ಲದಂತೆ ಸರಳವಾಗಿ, ಮನ ಮುಟ್ಟುವ ಉದಾಹರಣೆಗಳೊಂದಿಗೆ ಅವರು ವಿಷಯವನ್ನು ನಿರೂಪಿಸುತ್ತಾ ಹೋಗಿದ್ದಾರೆ. ಜಾನಪದಕ್ಕೆ ಸಂಬಂಧಿಸಿದಂತೆಯೂ ಅಷ್ಟೆ ಹೊಸ ವಿಚಾರಗಳಾವುವೂ ಇಲ್ಲಿ ಇಲ್ಲ. ಆದರೆ ಮೇಲ್ಕಾಣಿಸಿದ ವಿಚಾರಗಳಿಗೆ ಸಂಬಂಧಿಸಿದಂತೆ ವಿವಿಧ ತಜ್ಞರ ಅಭಿಪ್ರಾಯಗಳೇನು, ಅವುಗಳು ಎಷ್ಟರಮಟ್ಟಿಗೆ ಸರಿ-ಎಂಬಂತಹ ವಿಚಾರಗಳು ಇಲ್ಲಿ ಖಂಡಿತಾ ದೊರೆಯುತ್ತವೆ-ಸರಿಯಾದ ನಿರೂಪಣೆಯೊಂದಿಗೆ.

3. ಯಕ್ಷಗಾನ ಪರಿಶೀಲನೆ: ಜಿ.ಎಸ್. ಭಟ್ಟ

ವಿವಿಧ ವಿಚಾರಗೋಷ್ಠಿಗಳಲ್ಲಿ ಮಂಡಿತವಾದ ಒಟ್ಟು ಹದಿನಾರು ಪ್ರಬಂಧಗಳು ಇಲ್ಲಿವೆ. ಇವುಗಳಲ್ಲಿ-ಕಲೆ ಮತ್ತು ಪ್ರದರ್ಶಕ ಕಲೆ, ಹಾಗೂ-ತೊಗಲು ಗೊಂಬೆಯಾಟ ಎಂಬೆರಡನ್ನು ಬಿಟ್ಟರೆ ಉಳಿದೆಲ್ಲವೂ ನೇರವಾಗಿ ಯಕ್ಷಗಾನಕ್ಕೆ ಸಂಬಂಧಿಸದವು. ಈ ಹದಿನಾರರಲ್ಲಿ ಎರಡು ಮಾತ್ರ ಯಕ್ಷಗಾನ ಕಲಾವಿದರಿಬ್ಬರ ಪರಿಚಯಕ ಲೇಖನಗಳು. ಉಳಿದವೆಲ್ಲ ವೈಚಾರಿಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳು. ಹೀಗಾಗಿ ಇದೊಂದು-ಜಾನಪದ ಪ್ರದರ್ಶಕ ಕಲೆಗಳನ್ನು ಕುರಿತ ವಿಶ್ಲೇಷಣಾತ್ಮಕ ಕೃತಿ ಎನ್ನಲಡ್ಡಿಯಿಲ್ಲ.

ಇಲ್ಲಿನ ಲೇಖನಗಳು-ಕರಾವಳಿ ಯಕ್ಷಗಾನ, ಯಕ್ಷಗಾನ ವೇಷಭೂಷಣಗಳು, ಯಕ್ಷಗಾನದ ಇತ್ತೀಚಿನ ಒಲವುಗಳು, ಅದರ ಶೈಕ್ಷಣಿಕ ಮೌಲ್ಯ, ಉತ್ತರ ಕನ್ನಡದ ಯಕ್ಷಗಾನದ ವೈಶಿಷ್ಟ್ಯ, ಉತ್ತರ ಕನ್ನಡ ಯಕ್ಷಗಾನದ ಕಲಾವಿದರ ಪರಂಪರೆ, ತಾಳ ಮದ್ದಳೆ, ಯಕ್ಷಗಾನದಲ್ಲಿ ಹನುಮಂತ, ಮೂಡಲಪಾಯ ಯಕ್ಷಗಾನ, - ಇತ್ಯಾದಿ ವಿಚಾರಗಳನ್ನು ಚರ್ಚಿಸಿವೆ.

ಇಲ್ಲಿನ ಲೇಖನಗಳಲ್ಲಿನ ಒಂದು ಸಾಮಾನ್ಯ ಅಂಶವೆಂದರೆ ಹಲವು ಕಡೆಗಳಿಂದ ಸಂಗ್ರಹಿಸಿರುವ ಪರಸ್ಪರ ಪೂರಕವಾದ ವಿಪುಲ ಮಾಹಿತಿ. ಅದು ಕೇವಲ ಓದಿನಿಂದ ದೊರೆಕೊಂಡದ್ದಲ್ಲ, ಓದಿನ ಜೊತೆಗೆ ತಮ್ಮ ಅಧ್ಯಯನ ವಿಷಯದ ಕಾರ್ಯಕ್ಷೇತ್ರ ದೊಂದಿಗಿನ ನೇರ ಸಂಪರ್ಕದಿಂದ ಪಡೆದುಕೊಂಡದ್ದು; ತಮಗೆ ತಿಳಿದಿರುವ ಅಂಶಗಳನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡು ತರ್ಕಬದ್ಧವಾಗಿ ಮಂಡನೆ ಮಾಡಿರುವ ಇಲ್ಲಿನ ಕ್ರಮ ಮೆಚ್ಚುವಂಥದು. ಬೊಂಬೆಗಳನ್ನು ತಯಾರಿಸುವ, ಅದಕ್ಕೆ ಬಣ್ಣ ಹಾಕುವ ಸಂಪ್ರದಾಯ ಕುರಿತಾಗಿ ಹೇಳುವಾಗ ಲೇಖಕರ ಖಚಿತ ಜ್ಞಾನ ಎದ್ದು ಕಾಣುತ್ತದೆ. ಎಲ್ಲಿಯೂ ಪಾಂಡಿತ್ಯ ಪ್ರದರ್ಶನವಿಲ್ಲ. ಹೀಗಾಗಿ ಮೇಲ್ನೋಟಕ್ಕೆ ಇವು ಕೇವಲ ಮಾಹಿತಿ ಬರಹಗಳೆನ್ನಿಸುವುದೂ ಸಾಧ್ಯ. ಆದರೆ ತಮ್ಮ ಅಧ್ಯಯನ ಕ್ಷೇತ್ರದ ಪರಿಚಯ ಚೆನ್ನಾಗಿಲ್ಲದೆ ಇರುವವರು, ತೌಲನಿಕ ಜ್ಞಾನ ಇಲ್ಲದೆ ಇರುವವರು ಹೇಳಲು ಸಾಧ್ಯವಿಲ್ಲದಂತಹ ಮಾತುಗಳನ್ನು ಭಟ್ಟರು ನಿರಾಡಂಬರ ಶೈಲಿಯಲ್ಲಿ ಆಡುತ್ತಾರೆ. ಉದಾಹರಣೆ ನೋಡಿ-

"ಯಕ್ಷಗಾನದಲ್ಲಿ ಅನೇಕ ಸುಶಿಕ್ಷಿತ ಹರಿದಾಸರು ಪ್ರವೇಶಿಸಿದ್ದರಿಂದ ಮಾತುಗಾರಿಕೆ ಸುಧಾರಿಸಿದೆ. ಆದರೆ ತೆಂಕುತಿಟ್ಟಿನ ಅತಿ ಮಾತುಗಾರಿಕೆಯಿಂದ ಪ್ರೇಕ್ಷಕ ಸಹಜವಾಗಿಯೇ ತನ್ನ ಸಹನೆ ಕಳೆದುಕೊಳ್ಳುತ್ತಿದ್ದಾನೆ... ವೇಷಭೂಷಣಗಳಲ್ಲಿ ವಿಶೇಷತಃ ತೆಂಕುತಿಟ್ಟು ತನ್ನ ಸಂಪ್ರದಾಯ ತ್ಯಜಿಸಿ ಕಥಕ್ಕಳಿಯನ್ನು ಅತಿಯಾಗಿ ಅನುಸರಿಸಿದೆ.. (ಪು. 54)

ಈ ಸಂಕಲನದಲ್ಲಿ ಲೇಖನಗಳಲ್ಲಿನ ಒಂದೇ ದೋಷವೆಂದರೆ ಪುನರಾವೃತ್ತಿಯಾಗುವ ಹೇಳಿಕೆಗಳು ಅನೇಕ ಲೇಖನಗಳಲ್ಲಿರುವುದು. ವಿವಿಧ ಸೆಮಿನಾರುಗಳಿಗಾಗಿ ಪ್ರಬಂಧ ಬರೆಯುವಾಗ ಹಿಂದೆ ಬೇರೊಂದು ಕಡೆ ಹೇಳಿದ್ದ

ಯಾವುದೋ ವಿಷಯವನ್ನೆ ಮತ್ತೆ ಹೇಳಬೇಕಾದ ಪ್ರಸಂಗವಿದ್ದೀತು. ಆದರೆ-ಎಲ್ಲವೂ ಒಟ್ಟಿಗೆ ಪುಸ್ತಕ ರೂಪದಲ್ಲಿ ಬರುವಾಗ ಒಂದೇ ಬಗೆಯ ವಾಕ್ಯಗಳು ಪುನರಾವೃತ್ತಿಯಾಗದಂತೆ ಕತ್ತರಿಸುವುದು ಅಗತ್ಯವಿತ್ತು.

4. ಯಕ್ಷಗಾನ ಹಸ್ತಾಭಿನಯ ದರ್ಪಣ: ಡಾ. ಜಿ.ಎಸ್. ಹೆಗಡೆ

ಇದೊಂದು ಪುಟ್ಟ, ವಿಶಿಷ್ಟ ಪುಸ್ತಿಕೆ. ಕೇವಲ ಅರವತ್ತು ಪುಟಗಳ ಈ ಪುಸ್ತಿಕೆಯ ರಚನೆಯ ಹಿಂದೆ ದೀರ್ಘ ಪರಿಶ್ರಮವಿದೆ. ಇದು ಯಕ್ಷಗಾನದಲ್ಲಿ ಹಸ್ತಗಳ ಮೂಲಕ ನಡೆಯುವ ಅಭಿನಯವನ್ನು ಚಿತ್ರ ಸಹಿತವಾಗಿ ವಿವರಿಸುವ ಲಕ್ಷಣ ಗ್ರಂಥ. ಈ ಪುಸ್ತಕದಲ್ಲಿ ಹಸ್ತ ಹಾಗೂ ಬೆರಳುಗಳ ಚಲನೆಯ ಮೂಲಕ ವಿವಿಧ ಚಿಹ್ನೆಗಳನ್ನು ಹೇಗೆ ರೂಪಿಸುವುದು, ಮತ್ತು ಅದರ ಅರ್ಥವೇನು ಎಂಬುದನ್ನು ವಿವರಿಸುವ ಕೆಲಸ ಮಾಡಲಾಗಿದೆ.

ಯಕ್ಷಗಾನದಲ್ಲಿ ಹಸ್ತಾಭಿನಯ ಹೇಗಿರಬೇಕು ಎಂಬುದಕ್ಕೆ ಪೂರ್ವದ ಯಾವ ಶಾಸ್ತ್ರೀಯ ಗ್ರಂಥವೂ ಲಭ್ಯವಿಲ್ಲ. ಅದೇನಿದ್ದರೂ ಪರಂಪರೆಯಿಂದ ವಿಕಾಸಗೊಂಡು ಚಾಲನೆಯಲ್ಲಿ ಬಂದು ಈಗ ಪುನಃ ನಿಷ್ಠೆಯಿಂದ ರೂಢಿಸಿಕೊಳ್ಳುವವರಿಲ್ಲದೆ ಶಿಥಿಲಗೊಳ್ಳುತ್ತಿರುವ ಒಂದು ಅಭಿನಯ ಪದ್ಧತಿ. ಹಿಂದೆ ರೂಢಿಸಿಕೊಂಡ ಪದ್ಧತಿ ಹೇಗಿತ್ತು ಸರಿಯಾದ ಹಸ್ತಾಭಿನಯ ಎಂದರೆ ಏನು-ಎಂಬುದನ್ನು ತಿಳಿಯಬೇಕಾದರೆ ನುರಿತ ಯಕ್ಷಗಾನ ಕಲಾವಿದರನ್ನೇ ಕೇಳಿ, ಅವರಿಂದ ಪ್ರಾತ್ಯಕ್ಷಿಕೆ (ಡೆಮಾನ್‌ಸ್ಟ್ರೇಷನ್) ಪಡೆದು ಟಿಪ್ಪಣಿ ಮಾಡಿಕೊಳ್ಳಬೇಕು. ಡಾ. ಜಿ.ಎಸ್. ಹೆಗಡೆಯವರು ನಿಷ್ಠೆಯಿಂದ ಈ ಕೆಲಸ ಮಾಡಿದ್ದಾರೆ. ತೆಂಕುತಿಟ್ಟು, ಬಡಗುತಿಟ್ಟಿನ ಅನೇಕ ಕಲಾವಿದರುಗಳನ್ನು ಸಂದರ್ಶಿಸಿ ವಿವಿಧ ಕರಮುದ್ರೆಗಳ ಬಗ್ಗೆ ವಿವರವಾಗಿ ಪ್ರಶ್ನಿಸಿದ್ದಾರೆ. ಅವುಗಳನ್ನೂ ಹೇಗೆ ಕಲಿಸಲಾಗುತ್ತಿತ್ತು ಎಂಬುದನ್ನು ದಾಖಲಿಸಿಕೊಂಡಿದ್ದಾರೆ. ಯಕ್ಷಗಾನದ ಭಿನ್ನ ಪದ್ಧತಿಗಳ ನಡುವೆ ಒಂದೊಂದು ನಿರ್ದಿಷ್ಟ ಹಸ್ತ ಚಿಹ್ನೆ ಬಳಕೆಯಾಗುವುದರಲ್ಲಿನ ಭಿನ್ನತೆಗಳನ್ನು ಸಹ ಅಲ್ಲಲ್ಲಿ ಗುರ್ತಿಸಿದ್ದಾರೆ. ಫೋಟೋ ತೆಗೆದಿದ್ದಾರೆ, ರೇಖಾಚಿತ್ರ ಬರೆಸಿದ್ದಾರೆ. ಹೀಗೆಲ್ಲಾ ಮಾಡುವ ಮೂಲಕ ಈ ವಿಷಯ ಕುರಿತಂತೆ ಸಾಕಷ್ಟು ಮಾಹಿತಿಗಳು ಒಂದೆಡೆ ಸಿಗುವಂತೆ ಶ್ರಮಿಸಿದ್ದಾರೆ.

ಈ ಪುಸ್ತಕದಲ್ಲಿ ನಾಲ್ಕು ಭಾಗಗಳಿವೆ. ಗಾತ್ರದ ದೃಷ್ಟಿಯಿಂದ ನಾಲ್ಕೂ ಸಹ ಸಣ್ಣ ಭಾಗಗಳೇ. ಪೀಠಿಕೆ- ಮೊದಲ ಭಾಗ. ಕೇವಲ ಐದೂವರೆ ಪುಟಗಳದ್ದು. ಆದರೆ ಇಲ್ಲಿಯೇ-ಹಸ್ತಾಭಿನಯವು ಯಕ್ಷಗಾನ ಪರಂಪರೆಯಲ್ಲಿ ಎಷ್ಟು ಹಳೆಯದು, ಇದಕ್ಕೆ ಆಕರ, ಗ್ರಂಥವಿದೆಯೆ ಎಂಬುದು, ತೆಂಕು ಬಡಗು ತಿಟ್ಟುಗಳಲ್ಲಿ ಹಸ್ತಾಭಿನಯದಲ್ಲಿನ ವ್ಯತ್ಯಾಸ, ಇದನ್ನು ಕಲಿಸುತ್ತಿದ್ದ ರೀತಿ ಇವನ್ನೆಲ್ಲ ತಿಳಿಸಿದ್ದಾರೆ.

ಎರಡನೇ ಭಾಗವೇ ಮುಖ್ಯ ಹೂರಣವಾದ 'ಹಸ್ತಾಭಿನಯ ದರ್ಪಣ' ಎಂಬ ಹದಿನೈದು ಪುಟಗಳ ಅಧ್ಯಾಯ: ಕೈಯಿಂದ ಮಾಡಿ ತೋರಿಸುವ ಮುಖ್ಯ ಭಂಗಿಗಳನ್ನು (ಪತಾಕ, ಅರ್ಧ ಪತಾಕ, ಶಿಖರ, ಮುಷ್ಟಿಸೂಚಿ, ಮೃಗಶೀರ್ಷ, ಸರ್ಪಶೀರ್ಷ,

ಸಿಂಹಮುಖ, ಅಲಪದ್ಮ-ಇತ್ಯಾದಿ) ಉಪಯೋಗಿಸಿ ಯಾವ ಯಾವ ವಸ್ತುಗಳನ್ನು, ಅಭಿನಯವನ್ನು ಸೂಚಿಸಲಾಗುತ್ತದೆ ಎಂಬುದನ್ನು ಪ್ರತಿಯೊಂದು ವಿವರಣೆಗೂ ಉದಾರಹಣೆಯಾಗಿ ಯಾವುದಾದರೊಂದು ಯಕ್ಷಗಾನ ಪ್ರಸಂಗದಲ್ಲಿ ಬರುವ ಆ ವಸ್ತುವಿನ ಪ್ರಸ್ತಾಪವಿರುವ ಹಾಡಿನ ಸಾಲನ್ನು ಉದಾಹರಿಸಿದ್ದಾರೆ. ಈ ರೀತಿಯಾಗಿ ಸಮುದ್ರ, ಕನ್ನಡಿ, ಕುದುರೆ, ಸೈನಿಕರು, ಸೂರ್ಯ ಚಂದ್ರ-ಇತ್ಯಾದಿಗಳನ್ನೆಲ್ಲ ಹಸ್ತಾಭಿನಯದ ಮೂಲಕ ಹೇಗೆ ತೋರಿಸಬೇಕೆಂಬುದನ್ನು ಸರಳವಾಗಿ ವಿವರಿಸಿದ್ದಾರೆ.

ಗ್ರಂಥದ ಮುಂದಿನ ಭಾಗವನ್ನು ಲೇಖಕರು 'ಪರಿಶಿಷ್ಟ' ಎಂದು ಕರೆದಿದ್ದಾರೆ. ಹೀಗೆ ಕರೆಯುವ ಅಗತ್ಯವೇನಿರಲಿಲ್ಲ. ವಾಸ್ತವವಾಗಿ ಅದೂ ಕೂಡಾ ಗ್ರಂಥದ ಅಗತ್ಯ ಭಾಗವೇ ಆಗಿದೆ. ಈ ಭಾಗದಲ್ಲಿ ಹಸ್ತಾಭಿನಯವನ್ನು ಕುರಿತು ಪಾಶ್ಚಾತ್ಯ, ಔತ್ತರೇಯ, ದಾಕ್ಷಿಣಾತ್ಯ ವಿಮರ್ಶಕರ, ಕಲಾವಿದರ ಅಭಿಪ್ರಾಯಗಳನ್ನು ಉಲ್ಲೇಖಿಸಿದ್ದಾರೆ. ಬರಿ ಉಲ್ಲೇಖಿಸಿರುವುದಷ್ಟೇ ಅಲ್ಲ, ಆ ಅಭಿಪ್ರಾಯಗಳಿಗೆ ಪೂರಕ ಅಂಶಗಳನ್ನು ಅಥವಾ ಅದು ಸರಿಯಿಲ್ಲವೆಂದು ಹೇಳಬೇಕಾದಲ್ಲಿ ಸಕಾರಣವನ್ನು ಕೊಟ್ಟು ಸ್ಪಷ್ಟವಾಗಿ ಹಾಗೆ ಹೇಳುವ ಕೆಲಸವನ್ನು ಲೇಖಕರು ಮಾಡುತ್ತಾರೆ. ಇದು ಲೇಖಕರ ಖಚಿತ ಜ್ಞಾನವನ್ನೂ ಅನುಭವವನ್ನೂ ಹೇಳುತ್ತದೆ. ಕಪಿಲಾ ವಾತ್ಸಾಯನ್, ಮಾರ್ಥಾ ಆಸ್ಟಿನ್, ಜಿ.ಆರ್. ಪಾಂಡೇಶ್ವರ, ಡಾ. ಎನ್.ಆರ್. ನಾಯಕ, ಡಾ.ವಿ. ರಾಘವನ್; ಕೆರೆಮನೆ ಶಿವರಾಮ ಹೆಗಡೆ, ಗಣಪತಿ ಪರಮಯ್ಯ ಹಾಸ್ಯಗಾರ-ಇಂಥ ಹಲವರ ಅಭಿಪ್ರಾಯಗಳ ಬಗ್ಗೆ ಇಲ್ಲಿ ಚರ್ಚೆ ಇದ್ದು ಈ ಭಾಗವೂ ಕೂಡಾ ಹಸ್ತಾಭಿನಯವನ್ನು ಕುರಿತ ನಮ್ಮ ತಿಳಿವಳಿಕೆಯನ್ನು ಪರಿಷ್ಕರಿಸುವ ಕೆಲಸ ಮಾಡುತ್ತದೆ.

ಪುಸ್ತಕದ ನಾಲ್ಕನೆಯ ಭಾಗವು ಉಪಯುಕ್ತ ಚಿತ್ರಗಳ ಸಮೂಹವಾಗಿದೆ. ಇಲ್ಲಿ 48 ಛಾಯಾಚಿತ್ರಗಳೂ ಸುಮಾರು 35 ರೇಖಾಚಿತ್ರಗಳೂ ಇವೆ. ಈ ಚಿತ್ರಗಳಿಗೆಲ್ಲ ಸಂಖ್ಯೆ ಕೊಡಲಾಗಿದ್ದು ಎರಡನೇ ಅಧ್ಯಾಯದ ವಿವರಣೆಯ ಸಂದರ್ಭದಲ್ಲಿ ಸಂಬಂಧ ಪಟ್ಟ ಚಿತ್ರದ ಸಂಖ್ಯೆಯನ್ನು ಸೂಚಿಸಲಾಗಿದೆ. ಇದರಿಂದ ವಿವರಣೆ ಸಚಿತ್ರವಾದಂತಾಗಿದೆ.

ಈ ಉಪಯುಕ್ತವಾದ, ಶ್ರಮಪೂರ್ಣ ರಚನೆಯ ಗ್ರಂಥದ ವಿಷಯದಲ್ಲಿ ಅತೃಪ್ತಿಯ ಅಂಶವೆಂದರೆ-ಇದರ ಮುದ್ರಣ, ಇಂಥ ಪುಸ್ತಕ ಡಿ.ಟಿ.ಪಿ.ಯಲ್ಲಿ, ಚಿತ್ರಗಳು ಆಫ್‌ಸೆಟ್‌ನಲ್ಲಿ ಮುದ್ರಿತವಾಗಬೇಕಿತ್ತು. ಆದರೆ, ಅಕಾಡೆಮಿಯೇ ಇದನ್ನು ಮುದ್ರಿಸಿದ್ದರೂ ಸಾಧಾರಣ ರೀತಿಯಲ್ಲಿ ಮುದ್ರಿತವಾಗಿದೆ. ಅನೇಕ ಅಚ್ಚಿನ ತಪ್ಪುಗಳು ಸುಲಭವಾಗಿ ಪತ್ತೆಯಾಗುವಂತಿವೆ ಎಂಬುದೇ ಸಮಾಧಾನದ ವಿಷಯ.

5. ಜಾನಪದ-1992: ಡಾ. ವೀರಣ್ಣ ದಂಡೆ

ಇದು ಜಾನಪದ ಅಕಾಡೆಮಿಗಾಗಿ ವೀರಣ್ಣ ದಂಡೆಯವರು ಸಂಪಾದಿಸಿ ಕೊಟ್ಟಿರುವ, ಲೇಖನಗಳ ಸಂಗ್ರಹ. ಇದರಲ್ಲಿ 1992ರಲ್ಲಿ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ಜಾನಪದ ಸಂಬಂಧಿ ಲೇಖನಗಳಲ್ಲಿ ಉತ್ತಮವಾದ ಮೂವತ್ತನ್ನು

ಆಯ್ದು ಸಂಕಲಿಸಲಾಗಿದೆ. ಇದೊಂದು ಒಳ್ಳೆಯ ಕೆಲಸ. ಎಲ್ಲೆಲ್ಲೋ ಹರಡಿ ಹಂಚಿ ಹೋಗುತ್ತಿದ್ದ ಪ್ರಬುದ್ಧ ಲೇಖನಗಳನ್ನು ಇಲ್ಲಿ ಒಂದೆಡೆ ತಂದು, ಒಂದು ಪರಾಮರ್ಶನ ಗ್ರಂಥವು ಅಧ್ಯಯನಕಾರರಿಗೆ ಲಭ್ಯವಾಗುವಂತೆ ಮಾಡಲಾಗಿದೆ.

ಲೇಖನಗಳನ್ನು ಇಂಥ ಸಂಕಲನಕ್ಕಾಗಿ ಆಯುವುದು ಒಂದು ಬಗೆಯಲ್ಲಿ ಕಷ್ಟದ ಕೆಲಸ. ಸಂಪಾದಕ ಎಲ್ಲಿಯೋ ಇರುತ್ತಾನೆ. ಅಲ್ಲಿ ಎಲ್ಲ ಪತ್ರಿಕೆಗಳೂ ಲಭ್ಯವಿರುವುದಿಲ್ಲ. ಹೀಗಾಗಿ ಒಂದು ವರ್ಷದಲ್ಲಿ ಪ್ರಕಟವಾದ ಎಲ್ಲ ಜಾನಪದ ಲೇಖನಗಳನ್ನೂ ಗಮನಿಸಿ ಆಯ್ಕೆ ಮಾಡುವುದು ಸಾಧ್ಯವಾಗುವುದಿಲ್ಲ. ಎಷ್ಟೊ ವೇಳೆ ಒಳ್ಳೆಯ ಲೇಖನಗಳೇ ತಮ್ಮ ಕೈತಪ್ಪಿ ಹೋಗುವ ಸಾಧ್ಯತೆ ಸಹಜ. ಇದರಿಂದಾಗಿ ಸಂಪಾದಕ ದೂಷಣೆಗೂ ಒಳಗಾಗಬೇಕಾಗುತ್ತದೆ. ಇದೆಲ್ಲ ಇದ್ದರೂ ಇಂಥ ಕೆಲಸ ನಡೆಯಲೇಬೇಕು. ಇದನ್ನು ಯಾರಾದರೂ ಮಾಡಲೇಬೇಕಾಗುತ್ತದೆ.

ಈ ಮುಖ್ಯ ಅಡಚಣೆಯ ನಡುವೆಯೂ ಡಾ. ದಂಡೆ ಅವರು ಸಾಕಷ್ಟು ಜಾಲಾಡಿ ಒಳ್ಳೆಯ ಲೇಖನಗಳನ್ನು ಆಯ್ದಿದ್ದಾರೆ. ತಾವು ಆಯ್ದಿರುವ ಲೇಖನಗಳನ್ನು ಎಂಟು ಭಾಗಗಳಲ್ಲಿ ಜೋಡಿಸಿದ್ದಾರೆ. ಜಾನಪದ ವಿಜ್ಞಾನ-ಇತಿಹಾಸ, ಜನಪದ ಸಾಹಿತ್ಯ, ಹೆಣ್ಣು ಮತ್ತು ಜಾನಪದ, ಆರಾಧನೆ, ಕಾಡ್ಯಾನಾಟ, ಹಬ್ಬ-ಪೂಜೆ-ಉತ್ಸವ, ಕಲೆಗಳು, ಸಂಸ್ಕೃತಿ-ಸಂಕೀರ್ಣ-ಎಂದು ಈ ವಿಭಾಗಗಳಿಗೆ ಅವರು ಹೆಸರಿಸಿದ್ದಾರೆ. ಹಾಗೆ ನೋಡಿದರೆ ಇಷ್ಟು ವಿಭಾಗಗಳ ಅಗತ್ಯವೇನಿರಲಿಲ್ಲ. ಹಬ್ಬ ಪೂಜೆ ಆರಾಧನೆ, ಕಾಡ್ಯಾನಾಟ-ಇವನ್ನೆಲ್ಲ ಒಂದೇ ವಿಭಾಗದಡಿ ಇಟ್ಟಿದ್ದರೂ ನಡೆಯುತ್ತಿತ್ತು.

ಜಾನಪದ ಕ್ಷೇತ್ರದಲ್ಲಿ ಗಂಭೀರವಾಗಿ ಕೆಲಸ ಮಾಡುತ್ತ ಹೆಸರಾಗಿರುವ ಹಲವರ ಲೇಖನಗಳು ಇಲ್ಲಿರುವಂತೆ ಈಚೆಗೆ ಕ್ಷೇತ್ರಕ್ಕೆ ಕಾಲಿಟ್ಟಿರುವವರ ಲೇಖನಗಳೂ ಇವೆ. ಅಂಬಳಿಕೆ ಹಿರಿಯಣ್ಣ, ತೀ.ನಂ. ಶಂಕರನಾರಾಯಣ, ಕೃಷ್ಣಮೂರ್ತಿ ಹನೂರು, ಕೆ.ಆರ್. ಸಂಧ್ಯಾರೆಡ್ಡಿ, ಬಿ.ವಿ. ಶಿರೂರ, ಎಸ್.ಪಿ. ಪದ್ಮಪ್ರಸಾದ್, ಅರವಿಂದ ಮಾಲಗತ್ತಿ, ವೀರಣ್ಣ ದಂಡೆ, ಟಿ. ಗೋವಿಂದರಾಜು, ಎಚ್.ಕೆ. ರಂಗನಾಥ ಮೊದಲಾದವರ ಲೇಖನಗಳಲ್ಲಿವೆ.

ಇಲ್ಲಿನ ಲೇಖನಗಳಲ್ಲಿ ಕೆಲವು ಗಂಭೀರ ಅಧ್ಯಯನದ ಲೇಖನಗಳು. ಉದಾಹರಣೆಗೆ ಭೂತರಾಧನೆಯನ್ನು ಕುರಿತ ಮಾಲಗತ್ತಿ ಹಾಗೂ ಚಿನ್ನಪ್ಪಗೌಡರ ಎರಡು ಲೇಖನಗಳು, ಕರಾವಳಿಯ ಕಾಳಿಂಗರಾಧನೆಯನ್ನು ಕುರಿತ ನಾವಡ ದಂಪತಿಗಳ ಲೇಖನ, ಬಿಜಾಪುರ ಜಿಲ್ಲೆಯಲ್ಲಿ ಗೌರಿಪೂಜೆಯನ್ನು ಕುರಿತ ಪದ್ಮಪ್ರಸಾದ್ ಅವರ ಲೇಖನ. ದೀಪ ಸಂಸ್ಕೃತಿ ಕುರಿತ ಕಂಬಳಿ ಆದವಾನಿಯಿಂದ ಲೇಖನ - ಇತ್ಯಾದಿ. ಕೆಲವು ಪರಿಚಯಾತ್ಮಕ ಲೇಖನಗಳು. ಉದಾ : ಮೈಲಹಳ್ಳಿ ರೇವಣ್ಣನವರ - ಮಂಡ್ಯಜಿಲ್ಲೆಯ ಜಾನಪದ ವಿದ್ವಾಂಸರು, ಗಾಯಿತ್ರಿ ನಾವಡ ಅವರ - ವಯೋವೃದ್ಧ ಕಲಾವಿದೆ ಸಂತೋಷ್ ಬಾ - ಇತ್ಯಾದಿ. ಪ್ರತಿಯೊಂದು ಲೇಖನವೂ ಅನೇಕ ಹೊಸ ವಿಚಾರಗಳನ್ನು, ಮಾಹಿತಿಗಳನ್ನು ತಿಳಿಸಿಕೊಡುತ್ತದೆ.

ಸಂಪಾದನೆಯ ಕಾರ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ - ಪ್ರತಿ ಲೇಖನದ ಕೊನೆಯಲ್ಲಿ ಅದು ಪ್ರಕಟವಾದ ಪತ್ರಿಕೆ ಹಾಗೂ ತೇದಿಯನ್ನೂ, ಪುಸ್ತಕದ ಕೊನೆಯಲ್ಲಿ ಆ ವರ್ಷದಲ್ಲಿ (1992) ಪ್ರಕಟವಾದ (ಸಂಪಾದಕರ ಕಣ್ಣಿಗೆ ಬಿದ್ದ) ಎಲ್ಲ ಜಾನಪದ ಲೇಖನಗಳ ಒಂದು ಪಟ್ಟಿಯನ್ನೂ ಕೊಡುವುದು ಅವಶ್ಯವಿತ್ತು.

6. ಬಂಟರ ಮೂಲ (ಅಧ್ಯಯನ): ಶಿರೂರು ಶಿವರಾಮಶೆಟ್ಟಿ

ಮೂಲತಃ ದಕ್ಷಿಣ ಹಾಗೂ ಉತ್ತರ ಕನ್ನಡ ಜಿಲ್ಲೆಗೆ ಸೇರಿದ ಈ ಜನಾಂಗದವರನ್ನು ನಾಡವರೆಂದೂ ಕರೆಯುತ್ತಾರೆ. ಇವರಲ್ಲಿ ಕೆಲವು ಪ್ರಭೇದಗಳೂ ಇದ್ದು ಅವರಲ್ಲಿ ಆಚಾರಕ್ಕೆ ಸಂಬಂಧಿಸಿದ ಕೆಲವು ವ್ಯತ್ಯಾಸಗಳಿವೆ. ಈ ಪ್ರತಿಯೊಂದು ಪ್ರಭೇದದ ಉಗಮವನ್ನು ಕುರಿತೂ ಪ್ರತ್ಯೇಕ ಐತಿಹ್ಯಗಳಿವೆ. ಒಂದು ಸಾಹಸೀ ಸಮುದಾಯವಾದ ಈ ಜನಾಂಗದವರು ಈಚೀನ ವರ್ಷಗಳಲ್ಲಿ ಕೊಲ್ಲಿ ರಾಷ್ಟ್ರಗಳಿಗೂ ಹೋಗಿ ಹಣ ಸಂಪಾದನೆ ಮಾಡುತ್ತಲೇ ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಂಡೂ ಬಾಳುತ್ತಿದ್ದಾರೆ.

ಈ ಸಮುದಾಯದಲ್ಲಿ ದಕ್ಷಿಣ ಕನ್ನಡದ ಬಂಟರನ್ನೂ ವಿಶೇಷವಾಗಿ ಲಕ್ಷ್ಯದಲ್ಲಿಟ್ಟುಕೊಂಡು ಶಿರೂರು ಶಿವರಾಮ ಶೆಟ್ಟರು ಈ ಗ್ರಂಥದಲ್ಲಿ ವಿಸ್ತೃತ ಅಧ್ಯಯನ ನಡೆಸಿದ್ದಾರೆ. ಬಂಟರ ಮೂಲವನ್ನು ಕುರಿತಂತೆ ನಾಲ್ಕು ಸಿದ್ಧಾಂತಗಳಿವೆ. ಅವನ್ನಿಲ್ಲಿ ಲೇಖಕರು ವಿಶದವಾಗಿ ಚರ್ಚಿಸಿದ್ದಾರೆ. ಈ ಜನಾಂಗಕ್ಕೆ ಸಂಬಂಧಿಸಿದ ಜನಪದ ಗೀತೆಗಳು ಹಾಗೂ ಸಂಗೀತದ ವಿವೇಚನೆಯೂ ಇಲ್ಲಿದೆ. ಬಂಟರನ್ನು ಕುರಿತ ಐತಿಹ್ಯಗಳಲ್ಲಿ ಪ್ರಮುಖವಾದುದು - ಇವರು ಭೂತಾಳ ಪಾಂಡ್ಯನ ವಂಶಜರೇ ಎಂಬುದು. ಅದೇ ರೀತಿ ಮಯೂರವರ್ಮ ಹಾಗೂ ಬಂಟರು, ಜೈನರೇ. ಕೆಲವರು ಭಿನ್ನಮಾರ್ಗ ಹಿಡಿದು ಬಂಟರಾದರು ಎಂಬೆಲ್ಲ ಕಥೆಗಳೂ ಪ್ರಚಾರದಲ್ಲಿವೆ. ಈ ಎಲ್ಲವೂ ಇಲ್ಲಿ ಚರ್ಚೆಗೊಳಪಟ್ಟಿವೆ.

ಯಾವುದೇ ಪೂರ್ವಾಗ್ರಹವಿಲ್ಲದೆ ಎಳೆಎಳೆಗಳನ್ನು ಬಿಡಿಸಿ ನೋಡುತ್ತಾ ಸಾಧ್ಯವಾದಷ್ಟು ಮುಂದೆ ಹೋಗುವ ಮನಸ್ಸೊಂದು ಈ ಅಧ್ಯಯನದ ಹಿಂದೆ ಕೆಲಸ ಮಾಡಿರುವುದು ಕಂಡುಬರುತ್ತದೆ. ಇದು ಸಂಶೋಧಕನು ಹೊಂದಿರಬೇಕಾದ ಮೂಲ ಲಕ್ಷಣ. ಶಿವರಾಮ ಶೆಟ್ಟಿಯವರು ರಚಿಸಿರುವ ಈ ಕೃತಿ ಒಂದು ಜನಾಂಗದ ಬಗ್ಗೆ, ಅದರ ಮೂಲದ ಬಗ್ಗೆ ಬಂದಿರುವ ಒಂದು ಬೆಲೆಯುಳ್ಳ ಪರಾಮರ್ಶನ ಗ್ರಂಥವಾಗಿದೆ.

7. ಕಾಡು ಕಾಂಕ್ರೀಟ್ ಮತ್ತು ಜಾನಪದ : ಹಿ.ಚಿ. ಬೋರಲಿಂಗಯ್ಯ

ಇದು ಶ್ರೀ ಬೋರಲಿಂಗಯ್ಯನವರ ಹನ್ನೊಂದು ಜಾನಪದ ಸಂಬಂಧಿ ಲೇಖನಗಳ ಸಂಕಲನ. ಔದ್ಯೋಗೀಕರಣದಿಂದ ಬದಲಾಗುತ್ತಿರುವ ನಮ್ಮ ಪರಿಸರ ಹಾಗೂ ಜೀವನಶೈಲಿಗಳಿಂದಾಗಿ ನಮ್ಮ ಪಾರಂಪರಿಕ ಜಾನಪದ ಹೇಗೆ ನಶಿಸುತ್ತಿದೆ ಹಾಗೂ ಪರಿವರ್ತನೆಗೊಳ್ಳುತ್ತಿದೆ ಎಂಬುದನ್ನು ಕುರಿತೇ ಇಲ್ಲಿನ ಹೆಚ್ಚಿನ ಲೇಖನಗಳು ಚಿಂತನೆ

ನಡೆಸಿವೆ. ಇಲ್ಲಿನ ಲೇಖನಗಳು ಹೀಗಿವೆ: - ಕಾಡಿನ ಸಂಸ್ಕೃತಿಯೂ ಕಾಂಕ್ರೀಟ್ ಸಂಸ್ಕೃತಿಯೂ, ಬೆಂಕಿ ಮತ್ತು ವಿದ್ಯುತ್ ಯುಗಗಳ ನಡುವೆ, ಅರಣ್ಯದೊಳಗಿನ ಬುಡಕಟ್ಟುಗಳು - ಒಂದು ವಿವೇಚನೆ, ಮಲೆ ಮಹದೇಶ್ವರನ ಕಾವ್ಯದ ಸಂಕಮ್ಮನ ಸಾಲು, ನಗೆನೋವಿನ ಹಿಂದಿನ ಸತ್ಯ, - ಇತ್ಯಾದಿ.

ಈ ಶೀರ್ಷಿಕೆಗಳೇ ಈ ಲೇಖನಗಳನ್ನು ಲೇಖಕರು ಆಗಾಗ ಬಿಡಿಬಿಡಿಯಾಗಿ ಪತ್ರಿಕೆ ಅಥವಾ ವಿಚಾರಸಂಕಿರಣಗಳಿಗಾಗಿ ಬರೆದಿರಬಹುದೆಂಬುದನ್ನು ಸೂಚಿಸುತ್ತದೆ. ಕೆಲವು ಲೇಖನಗಳಲ್ಲಿ ಕಾಣಸಿಗುವ ವಿವೇಚನೆ ತುಂಬ ಆಳವೂ ಮೌಲಿಕವೂ ಆಗಿದೆ. ಮಲೆ ಮಹದೇಶ್ವರ ಕಾವ್ಯಕ್ಕೆ ಸಂಬಂಧಿಸಿದ ಎರಡು ಲೇಖನಗಳು ಇದಕ್ಕೆ ಸಾಕ್ಷಿ. ಎಲ್ಲರೂ ಹೋದ ದಾರಿಯಲ್ಲೇ ಹೋಗಿ, ನೋಡಿದ್ದನ್ನೇ ನೋಡಿ ಹೇಳಿದ್ದನ್ನೆ ಹೇಳುವುದಕ್ಕಿಂತ ಭಿನ್ನವಾದ ಒಂದು ಅವಲೋಕನ ಇಲ್ಲಿ ಕಾಣುತ್ತದೆ.

ಜಾನಪದ ಚಟುವಟಿಕೆಗಳಲ್ಲಿ ತಮ್ಮನ್ನು ನಿಕಟವಾಗಿ ಬಹುಕಾಲ ತೊಡಗಿಸಿಕೊಂಡಿದ್ದ ಹಿ.ಚಿ. ಬೋರಲಿಂಗಯ್ಯನವರ ಈ ಪ್ರಬಂಧ ಸಂಕಲನ ಹಲವು ಹೊಸ ಮೌಲಿಕ ವಿವೇಚನೆಗಳನ್ನು ಪ್ರಸ್ತುತಪಡಿಸುವ ಕೃತಿ.

8. **ಕೋಟದವರು : ಡಾ.ಪಾ.ನ.ಮಯ್ಯ**

ದಕ್ಷಿಣ ಕನ್ನಡ ಜಿಲ್ಲೆಯ ಹೊರಗಿನ ಎಲ್ಲ ಕನ್ನಡಿಗರಿಗೆ ಕೋಟ ಎಂಬುದು ಶಿವರಾಮ ಕಾರಂತರ ಹೆಸರಿನೊಂದಿಗೆ ಸೇರಿಕೊಂಡಿರುವುದರಿಂದ (ವಾಸ್ತವವಾಗಿ ಅದು ಎಲ್ಲಿದೆ ಎಂಬುದೇ ತಿಳಿಯದಿದ್ದರೂ) ಆ ಶಬ್ದವಂತೂ ಸುಪರಿಚಿತವಾಗಿಬಿಟ್ಟಿದೆ. ಕುಂದಾಪುರ ತಾಲೂಕಿನ ಒಂದು ಒಳನಾಡು ಕೋಟ. ಈ ಊರನ್ನು ಒಳಗೊಂಡಂತೆ ಇದರ ಆಸುಪಾಸಿನ ಗ್ರಾಮಗಳಲ್ಲಿ ಬ್ರಾಹ್ಮಣರು ಅಧಿಕ ಸಂಖ್ಯಾತರಾಗಿದ್ದು 'ಕೋಟ ಬ್ರಾಹ್ಮಣರು' ಎಂದೇ ಖ್ಯಾತರಾಗಿದ್ದಾರೆ. ಇವರಲ್ಲದೆ ಈ ಪ್ರದೇಶದಲ್ಲಿ ಅಲ್ಪಸಂಖ್ಯಾತರಾಗಿರುವ-ಮೊಗವೀರ, ಬಿಲ್ಲವ, ನಾಯಿರಿ, ಕೊಸಾಳು ಮೊದಲಾದ ಶ್ರಮಿಕ ಜನಾಂಗಗಳೂ ಇವೆ. ಇಲ್ಲಿನ ಬ್ರಾಹ್ಮಣರ ಸಂಪ್ರದಾಯಗಳು ಉಳಿದೆಡೆಯವರಿಗಿಂತ ಭಿನ್ನವಾದ ಕೆಲವು ಲಕ್ಷಣಗಳನ್ನು ಹೊಂದಿವೆ.

ಕೋಟದ ಸುತ್ತಮುತ್ತಲ ಹದಿನಾಲ್ಕು ಗ್ರಾಮಗಳ ಸಮಸ್ತರನ್ನೂ ಸಮಸ್ತವನ್ನೂ ವಿಶ್ಲೇಷಿಸುವ ಗುರಿಯನ್ನಿಟ್ಟುಕೊಂಡು ನಡೆಸಿರುವ ಪ್ರಾದೇಶಿಕ ಅಧ್ಯಯನವೇ ಈ 'ಕೋಟದವರು' ಎಂಬ ಪಿ.ಎಚ್.ಡಿ. ನಿಬಂಧ. ಇದೊಂದು ಒಳ್ಳೆಯ, ಪರಿಶ್ರಮ ಪೂರ್ವಕವಾದ ಅಧ್ಯಯನ, ಇಡೀ ಕೋಟ ಪ್ರದೇಶವನ್ನು ಒಂದು ಇಡಿಯಾದ ಸಾಂಸ್ಕೃತಿಕ ಘಟಕ ಎಂದು ಪರಿಭಾವಿಸಿ, ಹಲವು ನೆಲೆಗಳಿಂದ ಅಲ್ಲಿಯ ಬದುಕನ್ನು ಶಾಸ್ತ್ರೀಯ ರೀತಿಯಲ್ಲಿ ದಾಖಲಿಸಿ ವಿಶ್ಲೇಷಿಸುವ ಕೆಲಸವನ್ನು ಡಾ. ಮಯ್ಯ ಅವರು ಇಲ್ಲಿ ಮಾಡಿದ್ದಾರೆ. ಇಲ್ಲಿನ ವಿವಿಧ ಅಧ್ಯಾಯಗಳಲ್ಲಿ ಕೋಟದ ಭೌಗೋಳಿಕ-ಐತಿಹಾಸಿಕ ಪರಿಚಯ, ಇಲ್ಲಿನ ಆರ್ಥಿಕ ಪರಿಸ್ಥಿತಿ, ಜಾನಪದ ಧಾರ್ಮಿಕ ಆಚರಣೆಗಳು, ಆರಾಧನೆಯ

ಸಂಪ್ರದಾಯಗಳು, ಸಾಂಸ್ಕೃತಿಕ ಸಂಬಂಧಗಳ ಬಗ್ಗೆ ವಿಪುಲ ಅಂಶಗಳನ್ನು ಲೇಖಕರು ನಮ್ಮೆದುರು ತೆರೆದಿಡುತ್ತಾರೆ. ಇಲ್ಲಿನ ವಿವಿಧ ಜಾತಿಗಳವರ ನಡುವಿನ ಸಂಬಂಧದ ಸ್ವರೂಪದ ಬಗ್ಗೆಯೂ ಅವರು ಚರ್ಚಿಸುತ್ತಾರೆ. ತೌಲನಿಕ ವಿಶ್ಲೇಷಣೆ ಇಲ್ಲಿ ಅಷ್ಟಾಗಿ ಕಾಣುವುದಿಲ್ಲ ನಿಜ. ಆದರೂ ಇದೊಂದು ಒಳ್ಳೆಯ ಪ್ರಾದೇಶಿಕ ಅಧ್ಯಯನ.

9. ಬಂಡಾಯ ಜಾನಪದ : ರಂಗಾರೆಡ್ಡಿ ಕೋಡಿರಾಂಪುರ

ರಂಗಾರೆಡ್ಡಿ ಅವರ ಈ ಕೃತಿ ಜಾನಪದಕ್ಕೆ ಸಂಬಂಧಿಸಿದ ಹದಿಮೂರು ವಿಶ್ಲೇಷಣಾತ್ಮಕ ಲೇಖನಗಳ ಸಂಗ್ರಹ. ಇಲ್ಲಿನ ಬರಹಗಳಲ್ಲಿ ತರ್ಕಬದ್ಧವಾದ ಒಂದು ಭಿನ್ನ ದೃಷ್ಟಿ; ಒಂದು ಸ್ವೋಪಜ್ಞತೆ, ಕೆಲಸ ಮಾಡಿರುವುದು ಕಾಣುತ್ತದೆ. ಆರಂಭದ ಪ್ರಸ್ತಾವನಾತ್ಮಕವಾದ 'ಬಂಡಾಯ ಜಾನಪದ' ಎಂಬ ಲೇಖನವೊಂದರಲ್ಲಿ ಲೇಖಕರು ಜಾನಪದದಲ್ಲಿನ ಬಂಡಾಯ ಅಂಶಗಳು, ಹಾಗೂ ಬಂಡಾಯವನ್ನೇ ವಸ್ತುವಾಗಿ ಉಳ್ಳ ಜಾನಪದ ಕೃತಿಗಳು, ಜಾನಪದ ಅಧ್ಯಯನದಲ್ಲಿ ಕಣ್ತೆರೆಯಬೇಕಾದ ಹೊಸ ದೃಷ್ಟಿ ಇವೆಲ್ಲವುಗಳ ಬಗ್ಗೆ ಚರ್ಚಿಸುತ್ತಾ ತಾವು ಯಾವುದನ್ನು 'ಬಂಡಾಯ ಜಾನಪದ' ಎಂದು ಕರೆಯುತ್ತೇವೆಂಬುದನ್ನು ಸ್ಪಷ್ಟಪಡಿಸಿದ್ದಾರೆ. 'ಖಚಿತ ತಾತ್ವಿಕ ತಳಹದಿಯ ಮೇಲೆ ಅಥವಾ ನಿಶ್ಚಿತ ಉದ್ದೇಶಕ್ಕೇ ರಚಿತವಾಗಿರುವಂತಹ ಜನಸಾಮಾನ್ಯರ ಬಂಡಾಯದ ಹಿನ್ನೆಲೆಯಲ್ಲಿರುವ ಜಾನಪದ ಸಾಹಿತ್ಯವನ್ನು, 'ಊರಿಗಾಗಿ ಬಲಿಯಾದವರು, ಜನಾಂಗದ ಹಿತಕ್ಕೆ ದುಡಿದವರು, ಬಂಡವಾಳಿಗರ ವಿರುದ್ಧ ತಿರುಗಿ ಬಿದ್ದವರು, ಅಧಿಕಾರಿಗಳ ದೌರ್ಜನ್ಯಕ್ಕೆ ತುತ್ತಾದವರ ಬಗ್ಗೆ ಪ್ರೀತಿ ಗೌರವಗಳಿಂದ ಜಾನಪದದಲ್ಲಿ ನಿರ್ಮಿಸಿರುವ ಸ್ಮಾರಕವನ್ನೇ, ಅಂಥ ಆಶಯದ ಜಾನಪದವನ್ನೇ 'ಬಂಡಾಯದ ಜಾನಪದ' ಎಂದು ಕರೆಯಬೇಕಾಗುತ್ತದೆ- ಎಂದು ಸ್ಪಷ್ಟಪಡಿಸಿ, ಆ ವಿಚಾರವನ್ನು ಚರ್ಚೆಗೆ ಬಿಟ್ಟಿದ್ದಾರೆ. ಇದು ಒಪ್ಪಬೇಕಾದ ವ್ಯಾಖ್ಯೆಯೇ ಆಗಿದೆ.

ಜಾನಪದದ ಮೇಲೆ ಆಧುನಿಕತೆಯ ಪ್ರಭಾವ, ಜನಪದ ಸಾಹಿತ್ಯದಲ್ಲಿ ಬಂಡಾಯದ ಧೋರಣೆ, ಜನಪದ ಕಲೆಗಳು ಮತ್ತು ಬಂಡಾಯದ ಸಾಧ್ಯತೆ, ಜನಪದ ಕಲೆಗಳು ಮತ್ತು ಧರ್ಮ, ಜನಪದ ಮತ್ತು ಜನಪರ ಸಂಸ್ಕೃತಿ, ಜನಪದ ಸಾಹಿತ್ಯ, ಪ್ರಧಾನ ಸಂಸ್ಕೃತಿ ಮತ್ತು ಪ್ರತಿ ಸಂಸ್ಕೃತಿಯ ನೆಲೆಗಳು, ಜನಪದ ಸಾಹಿತ್ಯದಲ್ಲಿ ಅಸ್ಪೃಶ್ಯತೆ ಮತ್ತು ಸಮಾಜ, ಮಧ್ಯಕಾಲೀನ ಸಾಹಿತ್ಯದಲ್ಲಿ ಜಾನಪದೀಯ ಲಯ - ಆಶಯ, ಮೂಡಲಪಾಯ ಯಕ್ಷಗಾನ ಮತ್ತು ಪ್ರೇಕ್ಷಕ ವರ್ಗ, ಬುರ್ರಕಥಾ, ನಟುವರು, ಜನಪದ ಕರಕುಶಲ ಕಲೆಗಳು ಹಳ್ಳಿಯ ಮನೆಗಳ ನಿರ್ಮಾಣ- ಇವು ಇಲ್ಲಿಯ ಪ್ರಬಂಧಗಳು.

ಈ ಪ್ರಬಂಧಗಳಲ್ಲಿ ಮುಖ್ಯವಾಗಿ ರಂಗಾರೆಡ್ಡಿಯವರು ಜಾನಪದವೆನ್ನುವುದು ನಾಶವಾಗುವಂಥದೇನಲ್ಲ ಎನ್ನುತ್ತಾ ಅದು ಕೇವಲ ಗ್ರಾಮೀಣವಾಗಿಯೂ ಇರಬೇಕಾಗಿಲ್ಲ ಎಂದೂ ಪ್ರತಿಪಾದಿಸುತ್ತಾರೆ. ಆಧುನಿಕತೆಯಿಂದ ಜನಪದವೇನೂ ನಾಶವಾಗಬೇಕಿಲ್ಲ

ಎಂಬುದಕ್ಕೆ ಉದಾಹರಣೆಯಾಗಿ ನಮ್ಮ ಕೆಲವು ಜನಪದ ಕಲೆಗಳನ್ನು ವಿದೇಶಗಳವರು ಪ್ರದರ್ಶನಕ್ಕಾಗಿ ಆಹ್ವಾನಿಸಿದ್ದನ್ನು ಉದಾಹರಿಸುತ್ತಾರೆ. ವರ್ಣವ್ಯವಸ್ಥೆ ಶೂದ್ರರನ್ನು ತುಳಿಯುತ್ತಾ ಅವಮಾನಿಸಿರುವುದು ನಮ್ಮಲ್ಲಿ ಉಳಿದಿರುವ ಆಚರಣೆಗಳಲ್ಲಿಯೂ ಹೇಗೆ ಪ್ರತಿಬಿಂಬಿತವಾಗಿದೆ ಎಂಬುದನ್ನು ವಿಶ್ಲೇಷಿಸುತ್ತಾರೆ. ಈ ಕಾರಣದಿಂದಾಗಿಯೇ ಜನಪದ ಸಾಹಿತ್ಯದಲ್ಲಿ ಕೂಡಾ ಹೇಗೆ ಬಂಡಾಯ ಆಗಾಗ ಕಾಣಿಸಿಕೊಂಡಿದೆ ಎಂಬುದನ್ನು ಸೋದಾಹರಣವಾಗಿ ವಿವರಿಸಿದ್ದಾರೆ. ಜನಪದ ಪ್ರದರ್ಶಕ ಕಲೆಗಳ ಮೂಲಕ ಬಂಡಾಯದ ಆಶಯವನ್ನು ಹೇಗೆ ಬಿತ್ತಬಹುದೆಂಬುದಕ್ಕೆ ಕೆಲವು ಸೂಚನೆಗಳನ್ನು ಕೊಡುತ್ತಾರೆ. ಪ್ರಧಾನ ಮತ್ತು ಅಧೀನ ಸಂಸ್ಕೃತಿಗಳ ಸಂಘರ್ಷ ನಮ್ಮ ಜಾನಪದ ಸಾಹಿತ್ಯದಲ್ಲಿ ದಾಖಲಾಗಿರುವ ಬಗೆಯನ್ನು ತೆರೆದು ತೋರುತ್ತಾರೆ.

ಹೀಗಾಗಿ ಇಲ್ಲಿನ ಲೇಖನಗಳು ಗಂಭೀರ ಓದಿಗೆ ತಕ್ಕುದಾಗಿದ್ದು ಅನೇಕ ಹೊಸ ವಿಚಾರಗಳನ್ನು ತಿಳಿಸಿಕೊಡುತ್ತವೆ. ಹೀಗೆಂದ ಮಾತ್ರಕ್ಕೆ ರೆಡ್ಡಿ ಅವರ ಎಲ್ಲ ಆಲೋಚನೆಗಳೂ ತರ್ಕಬದ್ಧವೇ ಆಗಿವೆ ಎಂದರ್ಥವಲ್ಲ. ಕೆಲವು ಕಡೆ ಅವರೂ ತರ್ಕತಪ್ಪುತ್ತಾರೆ. ಕೆಲವು ಕಡೆ ಅವಸರ ಮಾಡುತ್ತಾರೆ. ಉದಾಹರಣೆಗೆ- ಮಧ್ಯಕಾಲೀನ ಸಾಹಿತ್ಯದಲ್ಲಿ ಜಾನಪದ ಆಶಯಗಳನ್ನು ಗುರುತಿಸುವಾಗ ಅಲ್ಲಿ ಜಾನಪದ ಲಕ್ಷಣಗಳಿರುವುದರಿಂದ ಅವೆಲ್ಲ ನೇರವಾಗಿ ಜಾನಪದದಿಂದ ಎತ್ತಿಕೊಳ್ಳಲ್ಪಟ್ಟವೆಂಬ ರೀತಿಯಲ್ಲಿ ಹೇಳುತ್ತಾರೆ. ಆದರೆ ಆ ಕಾವ್ಯಗಳಿಗೆ ಆಕರಗಳು (ಉದಾ- ಲಕ್ಷ್ಮೀಶ, ರತ್ನಾಕರ ವರ್ಣಿ, ಇತ್ಯಾದಿ) ಅನ್ಯ ಮಾರ್ಗೀಯ ಕಾವ್ಯಗಳು ಎಂಬುದನ್ನೂ, ಅದಕ್ಕೊಂದು ಪರಂಪರೆ ಇದೆ ಎಂಬುದನ್ನೂ ಇಲ್ಲಿ ಕಾಣುವ ಅನೇಕ ಜಾನಪದ ಅಂಶಗಳು ಮೂಲತಃ ಆ ಪರಂಪರೆಯೊಳಗೆ ಪ್ರವೇಶ ಪಡೆದು ಸಾಗಿ ಬಂದಿವೆ ಎಂಬುದನ್ನೂ ಅವರು ನೆನಪಿಗೆ ಸಂದುಕೊಳ್ಳುವುದಿಲ್ಲ. ಆದರೆ ಇಂಥ ತಪ್ಪುಗಳು ಕ್ಷಮ್ಯವಾದವು. ಒಟ್ಟಾರೆ ಸಂಗ್ರಹ ತಮ್ಮ ತಿಳಿವಳಿಕೆಗೆ ಕೊಡುವ ಕಾಣಿಕೆ ಬೆಲೆಯುಳ್ಳದ್ದು.

10. ಬಯಲಾಟ ಪದಗಳಲ್ಲಿ ಸಂಸ್ಕೃತಿ : ಡಾ. ಕೆ.ಆರ್. ದುರ್ಗಾದಾಸ್

ಇದು- ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ಪ್ರಚಾರೋಪನ್ಯಾಸ ಗ್ರಂಥ ಮಾಲೆಯಲ್ಲಿ ಪ್ರಕಟವಾಗಿರುವ, ಉಪನ್ಯಾಸವೊಂದರ ಪುಸ್ತಕ ರೂಪ. ಉಪನ್ಯಾಸ ಬಹುಶಃ ಕಿರಿದಾಗಿದ್ದದ್ದು, ಪುಸ್ತಕ ರೂಪಕ್ಕೆ ಬರುವಾಗ ಸ್ವಲ್ಪ ವಿಸ್ತಾರವನ್ನು ಪಡೆದುಕೊಂಡಿದೆ. ಆರಂಭದಲ್ಲಿ 'ಬಯಲಾಟ' ಶಬ್ದದ ನಿಷ್ಪತ್ತಿ ಹಾಗೂ ಅರ್ಥವನ್ನು ಕುರಿತ ವಿವೇಚನೆ ಇದೆ. ಅನಂತರದಲ್ಲಿ ಬಯಲಾಟದ ಬಂಧ- ವಿನ್ಯಾಸಗಳನ್ನು ಕುರಿತ ವಿವರಣೆ ಇದೆ. ಈ ರಂಗ ಪ್ರಕಾರವು ಮುಖ್ಯವಾಗಿ ಹಾಡುಗಳ ಮೇಲೆ ಅವಲಂಬಿತವಾಗಿದ್ದು ಸಂಭಾಷಣೆಗಳು ಅನಂತರದಲ್ಲಿ ಸನ್ನಿವೇಶಕ್ಕನುಗುಣವಾಗಿ ಹಾಡುಗಳ ಮೇಲೆ ಅವಲಂಬಿಸಿ ಆಯಾ ಪಾತ್ರಧಾರಿಗಳು ಅಶುಭಾಷಣವಾಗಿ ಬೆಳೆಸಿಕೊಳ್ಳುವಂಥದೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಹಾಡುಗಳ ಶೈಲಿ, ರಾಗ, ತಾಳಗಳ ಬಗ್ಗೆಯೂ ಕೆಲ ಮಾತುಗಳನ್ನಿಲ್ಲಿ ಹೇಳಿದ್ದಾರೆ. ಬಯಲಾಟದ ಕತೆಗಳಲ್ಲಿ ಕಂಡುಬರುವ

ಸಂಸ್ಕೃತಿಯ ಉದಾತ್ತೀಕರಣ, ಭಕ್ತಿ ಪ್ರಚೋದನೆಗಳ ಬಗ್ಗೆ ಕೆಲವು ವಿಶ್ಲೇಷಣಾತ್ಮಕ ಮಾತುಗಳನ್ನು ಹೇಳುತ್ತಾರೆ. ಅನಂತರ ಬಯಲಾಟದ ಹಾಡುಗಳಲ್ಲಿ ಕಂಡುಬರುವ ಸಂಪ್ರದಾಯ, ಆಚರಣೆಗಳು ಸ್ತುತಿ, ಕೌಟುಂಬಿಕತೆ, ಬಂಧುತ್ವ ಗಂಡುಹೆಣ್ಣಿನ ಸಂಬಂಧ, ಸವತಿಮತ್ಸರ ಶೌರಿನ ಹಂಬಲ, ಅತ್ತೆ- ಸೊಸೆ, ಇತ್ಯಾದಿ ಹಲವು ವಿಷಯಗಳನ್ನು ಸೋದಾಹರಣವಾಗಿ ವಿವರಿಸಿದ್ದಾರೆ.

ಪುಟ್ಟ ಪುಸ್ತಿಕೆಯಾದರೂ ಚೆನ್ನಾಗಿ ಓದಿಸಿಕೊಂಡು ಹೋಗುವ, ಬಯಲಾಟ ಪದಗಳ ಸಾಂಸ್ಕೃತಿಕ ಮಹತ್ವದ ಮೇಲೆ ಬೆಳಕು ಬೀರುವ ಈ ಹೊತ್ತಿಗೆ ಜಾನಪದಾಸಕ್ತರು ಸಂತೋಷದಿಂದ ಓದಬಹುದಾದ ಕೃತಿಯಾಗಿದೆ.

11. ಯಕ್ಷವಿಂಶತಿ: ಸಂ. ಡಾ.ಸಿ.ಪಿ. ಅತಿಕಾರಿ, ಎಚ್.ವಿ. ನರಸಿಂಹಮೂರ್ತಿ

ಇದೊಂದು ವಿಶಿಷ್ಟ ಸಂಸ್ಮರಣ ಗ್ರಂಥ. ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ 1976ರಿಂದ ಆರಂಭವಾಗಿ ಇಲ್ಲಿನವರೆಗೆ ಪ್ರತಿ ವರ್ಷ ರಾಜ್ಯೋತ್ಸವದ ದಿನದಂದು ಅತ್ಯಂತ ಶ್ರೇಷ್ಠಮಟ್ಟದ ಯಕ್ಷಗಾನ ತಾಳಮದ್ದಳೆ ಕೂಟ ನಡೆಯುತ್ತದೆ. ಇಡೀರಾತ್ರಿ ನಡೆಯುವ ಈ ಕಾರ್ಯಕ್ರಮದಲ್ಲಿ ಯಕ್ಷಗಾನ ರಂಗದ ಪ್ರತಿಭಾವಂತರನ್ನು ಒಂದೆಡೆ ಸೇರಿಸುವ ಪ್ರಯತ್ನವಿರುತ್ತದೆ. ಆ ಪರಿಸರದ ಜನರು, ಈಚೀಚೆಗೆ ಹೊರಗಿನವರೂ ಸಹ ಇದರ ಕೀರ್ತಿ ಕೇಳಿ ಪ್ರತಿವರ್ಷ ನವೆಂಬರ್ ಒಂದನೇ ತಾರೀಖಿಗೆ ಚಾತಕ ಪಕ್ಷಿಗಳಂತೆ ಕಾಯುತ್ತಾರೆ. ಇಡೀರಾತ್ರಿ ಕಾರ್ಯಕ್ರಮ ನೋಡಿ, ಮರುಬೆಳಿಗ್ಗೆ ಸಂತೋಷದಿಂದ ಚರ್ಚಿಸುತ್ತಾ ಹೋಗುತ್ತಾರೆ. ಇಡೀ ರಾಜ್ಯದಲ್ಲಿ ಇಷ್ಟೊಂದು ಶಿಸ್ತುಬದ್ಧವಾಗಿ ನಡೆಯುವ ತಾಳಮದ್ದಳೆ ಕಾರ್ಯಕ್ರಮ ಇದೊಂದೇ ಎಡೆಯಲ್ಲಿ ಎಂದು ಹೆಸರಾಗಿದೆ.

ಇಂಥ ಕಾರ್ಯಕ್ರಮಕ್ಕೆ ಇಪ್ಪತ್ತು ವರ್ಷ ತುಂಬಿದ್ದರ ಸವಿನೆನಪಿಗಾಗಿ ಪ್ರಕಟವಾಗಿರುವ ಸಂಸ್ಮರಣ ಗ್ರಂಥವೇ 'ಯಕ್ಷವಿಂಶತಿ' ತುಂಬ ಉಚಿತವಾದ ಭಿನ್ನರೀತಿಯಲ್ಲಿ ಈ ಸ್ಮರಣ ಗ್ರಂಥ ಯೋಚಿಸಲ್ಪಟ್ಟಿದೆ. ಯಕ್ಷಗಾನಕ್ಕೆ ಸಂಬಂಧಪಟ್ಟಂತೆ ಅಧ್ಯಯನ ಮಾಡುವವರು ಸಂಗ್ರಹಿಸಿಟ್ಟುಕೊಳ್ಳಬೇಕಾದಂಥ ರೀತಿಯಲ್ಲಿ ಈ ಗ್ರಂಥ ಸಂಪಾದಿಸಿ ಮುದ್ರಿಸಲ್ಪಟ್ಟಿದೆ.

ಸುಮಾರು 200 ಪುಟಗಳ ಈ ಗ್ರಂಥದಲ್ಲಿ ಎರಡು ಭಾಗಗಳಿವೆ. ಕೇವಲ 26 ಪುಟಗಳ ವ್ಯಾಪ್ತಿಯ ಮೊದಲ ಭಾಗದಲ್ಲಿ ನಾಲ್ಕು ಲೇಖನಗಳಿದ್ದು, ಇವು ಈ ತಾಳಮದ್ದಳೆ ಕಾರ್ಯಕ್ರಮವನ್ನು ಆರಂಭಿಸಿದ ಡಾ. ಶಾಂತಾರಾಮ್ ಅವರ ವ್ಯಕ್ತಿತ್ವವನ್ನು, ಅದು ಬೆಳೆದುಬಂದ ಬಗೆ, ಪಡೆದುಕೊಂಡ ಜನಪ್ರಿಯತೆ, ಜನರ ಪ್ರತಿಕ್ರಿಯೆ, ಇತ್ಯಾದಿ ವಿಚಾರಗಳನ್ನು ಒಳಗೊಂಡಿದೆ. ಹಿಂದೆ ಈ ಕಾರ್ಯಕ್ರಮದಲ್ಲಿ ಸನ್ಮಾನಿತರಾದ ಕೆಲವರ ಪರಿಚಯವೂ ಇಲ್ಲಿದೆ. ತಾಳಮದ್ದಳೆಯಲ್ಲಿ ಎತ್ತಿದ ಕೈ ಎನಿಸಿದ್ದ ಕಲಾವಿದರ್‍ಯಾರ್‍ಯಾರು ಎಂಬುದು ಈ ಪರಿಚಯ ಭಾಗದಿಂದ ತಿಳಿಯುತ್ತದೆ.

ಈ ಗ್ರಂಥದ ಎರಡನೆ ಭಾಗವೇ ತುಂಬ ಉಪಯುಕ್ತವಾದ, ಪರಾಮರ್ಶನ ಮೌಲ್ಯವುಳ್ಳ ಭಾಗ. ಇಲ್ಲಿ ಇಪ್ಪತ್ತೈದು ಲೇಖನಗಳಿವೆ. ಎಲ್ಲವೂ ಯಕ್ಷಗಾನಕ್ಕೆ ಸಂಬಂಧಿಸಿದವು. ಈ ಪೈಕಿ ತಾಳಮದ್ದಳೆಗೆ ಸಂಬಂಧಿಸಿದವೇ ಹತ್ತು ಲೇಖನಗಳಿವೆ. ಕುಂದಾಪುರ ಪರಿಸರದಲ್ಲಿನ ಯಕ್ಷಗಾನದ ಪರಿಸ್ಥಿತಿ, ಯಕ್ಷಗಾನದ ಕಲಾವಿದರು, ಲಕ್ಷಣಗಳು, ಕುಂ, ಸುತ್ತಮುತ್ತಲಿನ ಹಿಮ್ಮೇಳ ಕಲಾವಿದರ ಸಾಧನೆ, ಕುಂ. ಪರಿಸರದ ಯಕ್ಷಗಾನ ಕವಿಗಳು, - ಇಂಥ ಕೆಲವು ಲೇಖನಗಳು ಸಂಶೋಧನ ಲೇಖನಗಳಲ್ಲ, ಸಮೀಕ್ಷಾ ಲೇಖನಗಳೆಂದು ವಾದಿಸಬಹುದು. ಆದರೆ ಇಂಥ ಸಮೀಕ್ಷೆ ಕೂಡಾ ಕ್ಷೇತ್ರಕಾರ್ಯವನ್ನು ತಕ್ಕಮಟ್ಟಿನ ಅಧ್ಯಯನವನ್ನೂ ಬೇಡುತ್ತದೆ. ಇದಕ್ಕೆ ಅನುಭವವೂ ಅಗತ್ಯ. ಇದೂ ಕೂಡಾ ಆಗಬೇಕಾದ ಬುನಾದಿ ಕಾರ್ಯವೇ. ಹೆಚ್ಚಿನ ಸಂಶೋಧನೆಗೆ ಬೇಕಾದ ಮೂಲಭೂತ ಮಾಹಿತಿಗಳನ್ನು ಇವು ಕೊಡಬಲ್ಲವು.

ಇಲ್ಲಿನ ಲೇಖನಗಳಲ್ಲಿ 'ದೇಸಿ ಛಂದೋಬಂಧಗಳ ಪುದವಟ್ಟು : ಯಕ್ಷಗಾನ ಸಾಹಿತ್ಯ, (ಎಸ್. ನಾರಾಯಣ ಶೆಟ್ಟಿ), 'ಯಕ್ಷಗಾನ ರೂಪ ಹಬ್ಬುಗೆಯ ದಾರಿ' (ಕೆ.ಎಂ. ರಾಘವ ನಂಬಿಯಾರ್) ಎಂಬುವು ತುಂಬ ಕುತೂಹಲ ಕೆರಳಿಸುವಂಥವು. ಯಕ್ಷಗಾನ ಘಟ್ಟದ ಮೇಲಿನಿಂದ ಇಳಿದು ಕರಾವಳಿ ಕಡೆಗೆ ಹೋಗಿರಬೇಕೆಂಬ, ಹಾಗೂ ಯಕ್ಷಗಾನದಲ್ಲಿ ಅನೇಕ ಪ್ರಾಚೀನ, ದೇಸೀ ಅಪ್ರಚಲಿತ ಛಂದೋರೂಪಗಳು ಇವೆ ಎಂಬ ಸಾಧಾರಪೂರ್ವಕ ವಾದಗಳು ಇಲ್ಲಿವೆ. ಇವು ಖಚಿತವಾಗಿ ಅಭ್ಯಾಸಿಗಳು ಗಮನಿಸಬೇಕಾದ, ಚರ್ಚಿಸಬೇಕಾದ ಸಂಗತಿಗಳಾಗಿವೆ. ಇಂಥ ಅನೇಕ ಅಭ್ಯಾಸಪೂರ್ಣ ಲೇಖನಗಳು ಇಲ್ಲಿವೆ.

ಭಂಡಾರ್‌ಕಾರ್ಸ್ ಕಾಲೇಜು ಇಂಥದೊಂದು ಒಳ್ಳೆಯ ಪುಸ್ತಕವನ್ನು ಪ್ರಕಟಿಸಿ ತನ್ನ ತಾಳಮದ್ದಲೆ ಕೂಟದ ವಿಂಶತಿ ಉತ್ಸವವನ್ನು ತುಂಬ ಉಚಿತ ರೀತಿಯಲ್ಲಿ ಶಾಶ್ವತೀಕರಿಸಿದೆ. ಸಂಪಾದಕರೂ, ಅವರಿಗೆ ಬೆಂಬಲವಿತ್ತವರೂ ಅಭಿನಂದನಾರ್ಹರು.

12. ಸಿರಿ : ಸಂ: ಬಿಳಿಮಲೆ, ಎ.ವಿ. ನಾವಡ, ರಾಮಚಂದ್ರ ಉಚ್ಚಿಲ

ಇದು ತುಳುನಾಡಿನ ಖ್ಯಾತ ವಿದ್ವಾಂಸರಲ್ಲೊಬ್ಬರಾದ ಅಮೃತ ಸೋಮೇಶ್ವರ ಅವರ ಅಭಿನಂದನಾ ಗ್ರಂಥ. ಡಾ. ಪುರುಷೋತ್ತಮ ಬಿಳಿಮಲೆ, ಶ್ರೀ ಎ.ವಿ. ನಾವಡ, ಹಾಗೂ ಶ್ರೀ ರಾಮಚಂದ್ರ ಉಚ್ಚಿಲ ಅವರು ಸಂಪಾದಕರಾಗಿ ಈ ಬೃಹತ್ ಸಂಪುಟವನ್ನು ತುಂಬ ಸುಂದರವಾದ ರೀತಿಯಲ್ಲಿ ಮುದ್ರಿಸಿ 'ಕಲಾಗಂಗೋತ್ರಿ' ಸಂಸ್ಥೆಯ ಮೂಲಕ ಹೊರತಂದಿದ್ದಾರೆ. ಈ ಗ್ರಂಥದ ಆರು ಭಾಗಗಳ ಪೈಕಿ ನಾಲ್ಕನೇ ಭಾಗದ ಎರಡು ಲೇಖನಗಳು (ಅಮೃತರ ಜಾನಪದ ಅಧ್ಯಯನ ಹಾಗೂ - ಅಮೃತರ ಯಕ್ಷಗಾನ ಸಾಹಿತ್ಯ) ಮತ್ತು ಐದನೇ ಭಾಗದ ಮೂವತ್ತೈದು ಲೇಖನಗಳ ಪೈಕಿ ಒಂದೆರಡನ್ನು ಬಿಟ್ಟು ಉಳಿದೆಲ್ಲವೂ ಜಾನಪದ ಮತ್ತು ಯಕ್ಷಗಾನಕ್ಕೆ ಸಂಬಂಧಿಸಿದವು. ನಮಗೆ ಪ್ರಸ್ತುತವಾದ ಭಾಗದ ವಿಸ್ತಾರವೇ ರಾಯಲ್ ಸೈಜಿನಲ್ಲಿ ಮುನ್ನೂರು ಪುಟಗಳಷ್ಟು

ಆಗುತ್ತದೆ. ಜಾನಪದ ಮತ್ತು ಸಂಬಂಧಿಸಿದಂತೆ 1995ರ ಅತ್ಯಂತ ದೊಡ್ಡ ಗ್ರಂಥ 'ಸಿರಿ'ಯೇ.

ಇಲ್ಲಿನ ಲೇಖನಗಳಲ್ಲಿ ಇನ್ನೊಂದು ವೈಶಿಷ್ಟ್ಯವೂ ಇದೆ. ಅದೆಂದರೆ-ಇವೆಲ್ಲ ತುಳುನಾಡಿಗೆ, ತುಳು ಸಂಸ್ಕೃತಿಗೆ ಸಂಬಂಧಿಸಿದ ಲೇಖನಗಳು. ತುಳುನಾಡಿನ ಜನಪದ ಸಂಸ್ಕೃತಿಯ ಎಳೆಗಳನ್ನು ಬಿಡಿಸಿ ನೋಡುವ ಬಾಹ್ಯವ್ಯಾಪ್ತಿಗಿಂತ ಹೆಚ್ಚಾಗಿ ಆಳಕ್ಕೆ ಇಳಿಯುವ ಗಂಭೀರ ಪ್ರಯತ್ನ ಇಲ್ಲಿನ ಬಹುಪಾಲು ಲೇಖನಗಳಲ್ಲಿ ಕಾಣುತ್ತದೆ. ಐದನೇ ಭಾಗದಲ್ಲಿನ ಲೇಖನಗಳ ಪೈಕಿ ಮೂರು ಮಾತ್ರ ತುಳುನಾಡಿಗೇ ಪರಿಮಿತವಾದದ್ದಲ್ಲ ('ಪ್ರಾಣಿ ಜಾನಪದ', 'ಸಸ್ಯ ಜಾನಪದ', ಹಾಗೂ ಹತಾಶೆಯ ಭಾಷೆ'...) ಉಳಿದೆಲ್ಲವೂ ಈ ಪ್ರಾದೇಶಿಕ ಮಿತಿಯನ್ನು ಹೊಂದಿವೆ. ಆಳ ಅಧ್ಯಯನ ಸಾಧ್ಯವಾಗಲೆಂದೇ, ತಮಗೆ ಚೆನ್ನಾಗಿ ಗೊತ್ತಿರುವ ಕ್ಷೇತ್ರಕ್ಕೆ ಮಾತ್ರ ಸಂಬಂಧಿಸಿದಂತೆ ಇಲ್ಲಿ ಲೇಖನಗಳನ್ನು ಬರೆಸಿ ಕಲೆ ಹಾಕಿರುವಂತೆ ಕಾಣುತ್ತದೆ. ಇದರಿಂದ ತುಳು ನಾಡವರಿಗೂ, ಅಲ್ಲಿನ ಜಾನಪದವನ್ನು ಕುರಿತು ಅಭ್ಯಸಿಸ ಬಯಸುವ ಹೊರಗಿನವರಿಗೂ ಕೂಡಿಯೇ ಉಪಕಾರವಾದಂತಾಗಿದೆ. ಒಂದು ಪ್ರದೇಶವನ್ನು ವ್ಯಾಪಕವಾಗಿ ಪರಿಶೀಲನೆಗೆ ಒಳಪಡಿಸಿದಂತಾಗಿದೆ.

ಇಲ್ಲಿನ ಲೇಖನಗಳ ಪೈಕಿ ನಾಲ್ಕು-ತುಳು ಪಾಡ್ದನಗಳ ಬಗೆಗೆ, ನಾಲ್ಕು-ಯಕ್ಷಗಾನಗಳ ಬಗೆಗೆ, ಜನಾಂಗಗಳ ಬಗೆಗೆ ನಾಲ್ಕು ಇದ್ದು ಉಳಿದವು ವಿವಿಧ ಜಾನಪದ ವಿಷಯಕವಾಗಿವೆ. ಪ್ರತಿಯೊಂದು ಲೇಖನವೂ ಸಂಪ್ರಂಬಂಧದಂತಿದ್ದು ಶಿಸ್ತುಬದ್ಧ ಬರವಣಿಗೆಯಾಗಿದೆ.

ಡಾ. ವಿವೇಕ ರೈ ಅವರು-'ಪ್ರಾದೇಶಿಕ ಸಂಸ್ಕೃತಿಯ ಪರಿಕಲ್ಪನೆಯಲ್ಲಿ ತುಳು ನಾಡು ಎಂಬ ನಾಲ್ಕು ಪುಟಗಳ ಲೇಖನದಲ್ಲಿ ತುಳುನಾಡನ್ನು, ಅಲ್ಲಿನ ಸಂಸ್ಕೃತಿಯನ್ನು ಖಚಿತವಾದ ಪ್ರಾದೇಶಿಕ ಅಧ್ಯಯನ ದೃಷ್ಟಿಯನ್ನಿಟ್ಟುಕೊಂಡು ಹೇಗೆ ಇನ್ನೂ ವಿವರವಾಗಿ ಹೊಸದೃಷ್ಟಿಯಿಂದ ಅಧ್ಯಯನ ಮಾಡಬೇಕಾದ ಅಗತ್ಯವಿದೆ ಎಂಬುದನ್ನು ವಿವರಿಸುತ್ತಾರೆ. ಇಲ್ಲಿ ಅವರು ಅಧ್ಯಯನ ಶಿಸ್ತಿಗೆ ಸಂಬಂಧಿಸಿದಂತೆ ಕೆಲವು ಶಾಸ್ತ್ರೀಯ ವಿಚಾರಗಳನ್ನು ಮುಂದಿಟ್ಟಿದ್ದಾರೆ.

'ತುಳು ಪಾಡ್ದನಗಳು-ಮಹಾಕಾವ್ಯವಾಗಿ, ಎಂಬ ಲೇಖನದಲ್ಲಿ ಡಾ. ಬಿ. ದಾಮೋದರರಾವ್ ಅವರು ಕೆಲವು ಪಾಡ್ದಾನಗಳ ಬಗೆಗೆ ನಾಲ್ಕಾರು ಹೊಸ ಮಾಲಿಕ ಒಳನೋಟಗಳನ್ನು ಕೊಟ್ಟಿದ್ದಾರಾದರೂ ಈ ಲೇಖನಕ್ಕೆ ಈ ಶೀರ್ಷಿಕೆ ಅಗತ್ಯವೇನಿರಲಿಲ್ಲ ಎನಿಸುತ್ತದೆ. ಮಹಾಕಾವ್ಯದಲ್ಲಿರುವ ವಿಸ್ತರಣಾ ತಂತ್ರಗಳು, ವರ್ಣನೆಯ ಅಂಶಗಳು ಪಾಡ್ದನಗಳಲ್ಲೂ ಇವೆ ಎಂಬ ಮಾತ್ರಕ್ಕೆ ಹೆಚ್ಚಿನದೇನನ್ನೂ ಹೇಳಿದಂತಾಗುವುದಿಲ್ಲ. ಪಾಡ್ದನಗಳಲ್ಲಿ ಕೆಡುಕಿಗೆ ಭಾರತೀಯ ಮೆಟಾಫಿಸಿಕ್ಸ್‌ನಲ್ಲಿ ಇರುವುದಕ್ಕಿಂತ ಹೆಚ್ಚಿನ ಪ್ರಾಮುಖ್ಯತೆ ಮತ್ತು ಗಹನತೆ ದೊರೆತಿದೆ-ಎಂಬ ಮಾತೂ ಕೂಡ ಒಂದು ಸರಳ ಹೇಳಿಕೆಯಷ್ಟೆ.

ಶ್ರೀ ಎ.ವಿ. ನಾವಡರು' 'ಪಾಡ್ದನಗಳ ಪ್ರದರ್ಶನ ಸಂದರ್ಭ ಹಾಗೂ ವರ್ಗೀಕರಣ' ಕುರಿತು ಏಳು ಪುಟಗಳ ಲೇಖನವೊಂದನ್ನು ಬರೆದು ತುಂಬ ಕ್ರಮಬದ್ಧವಾಗಿ ವಿಷಯ ಮಂಡನೆ ಮಾಡಿದ್ದಾರೆ. ಇತರರು ಮಾಡಿರುವ ವರ್ಗೀಕರಣ ಮಾದರಿಯನ್ನೇ ಇವರು ಅನುಸರಿಸಿದ್ದಾರೆ. ಆದರೆ ಪಾಡ್ದನಗಳ ಪ್ರದರ್ಶನ ಸಂಪ್ರದಾಯದ ದೃಷ್ಟಿಯಿಂದ ಇವರು ನೀಡಿರುವ ಅನೇಕ ಹೊಸ ಮಾಹಿತಿಗಳು ಅಭ್ಯಾಸಿಗಳಿಗೆ ಉಪಯುಕ್ತವಾಗಿವೆ.

ಡಾ. ವಾಮನ ನಂದಾವರ ಅವರ-'ಅವಳಿ ಆರಾಧನೆ, ಅವಳಿತನ, -ಪುರ್‍ಮಾ ಮತ್ತು ವಾಸ್ತವತೆ' ಒಂದು ದೀರ್ಘ ಲೇಖನ. ಕನ್ನಡ ಜಾನಪದ ಅಧ್ಯಯನದಲ್ಲಿ ಅವಳಿ ಸೋದರರು/ಸೋದರಿಯರ ಪಾತ್ರ ಚಿತ್ರಣ ಹೇಗೆ ಬಂದಿದೆ ಎಂಬುದರ ವಿಶ್ಲೇಷಣೆ ಇದೇ ಮೊದಲ ಬಾರಿಗೆ ಇಲ್ಲಿ ಆಗಿದೆ. ಹದಿನೇಳು ಪುಟಗಳ ಈ ಸಂಪ್ರಂಬಂಧ ಈ ಗ್ರಂಥದ ಒಳ್ಳೆಯ ಲೇಖನಗಳಲ್ಲಿ ಒಂದು. ಇದೇ ಮಟ್ಟದ ಇನ್ನೊಂದು ಪ್ರಬುದ್ಧ ಲೇಖನ- 'ಒಳ ಸಂಬಂಧಗಳಿರುವ ಮೌಖಿಕ ಪರಂಪರೆಯಲ್ಲಿ ಕನ್ನೆಲಾಯ ಪಾಡ್ದನಾದ ಸ್ಥಾನ.' ಹೈಡ್ರೂನ್ ಬ್ರೂಕ್ನರ್ ಅವರ ಇಂಗ್ಲಿಷ್ ಲೇಖನದ ಅನುವಾದವಿದು. ಕನ್ನೆಲಾಯೆ ಎಂಬ ಭೂತದ ಆರಾಧನೆಗೆ ಸಂಬಂಧಿಸಿದ ಪಾಡ್ದನದ ಕತೆಯನ್ನು, ಕೋಲದ ಆಚರಣೆಯನ್ನು, ಇತರ ಪಾಡ್ದನಗಳಲ್ಲಿ ಕಂಡುಬರುವ ಸಮಾಂತರ ಅಂಶಗಳನ್ನು ತುಂಬ ವೈಜ್ಞಾನಿಕವಾಗಿ ಇಲ್ಲಿ ವಿಶ್ಲೇಷಿಸಲಾಗಿದೆ.

'ಸಿರಿ ಪಾಡ್ದಾನವು.' ತುಳುನಾಡಿನ ಪ್ರಸಿದ್ಧ ಹಾಗೂ ಸುದೀರ್ಘ ಪಾಡ್ದನಗಳಲ್ಲಿ ಒಂದು. ಸಿರಿ ಎಂಬುವಳು ಇಲ್ಲಿಯ ಕಥಾನಾಯಕಿ. ಈ ಪಾಡ್ದನವನ್ನು' 'ತುಳು ಜನಪದ ಕಾವ್ಯ,' ಎಂದೇ ಕರೆದು ಗಾಯಿತ್ರಿ ನಾವಡರು ಇಲ್ಲಿ ಹೆಣ್ಣಿನ ಅನನ್ಯತೆಯ ಹುಡುಕಾಟ ನಡೆದಿರುವ ಬಗೆಯನ್ನು ವಿಶ್ಲೇಷಿಸಿರುವ ಕ್ರಮ ಸರಿಯಾಗಿದೆ.

ಹೀಗೆಯೇ ಈ ಗ್ರಂಥದಲ್ಲಿ ಅನೇಕ ಉಪಯುಕ್ತ ಲೇಖನಗಳಿವೆ. ಮುಗೇರರ ಆರಾಧನೆ, ಬೆರ್ಮೆರು-ಒಂದು ಟಿಪ್ಪಣಿ, ತುಳುನಾಡಿನ ಇತಿಹಾಸ ರಚನೆಯಲ್ಲಿ ಐತಿಹ್ಯ ಪುರಾಣಗಳ ಪಾತ್ರ, ತುಳುನಾಡಿನ ಜನಪದ ವಾಸ್ತುಶಿಲ್ಪ-ಇತ್ಯಾದಿ. ಲೇಖನಗಳಲ್ಲಿ ಪುನರುಕ್ತವಾಗಿರುವ ಪ್ರಸಂಗಗಳೂ ಇವೆಯಾದರೂ ಇಂಥ ಸಂಕಲನ ಗ್ರಂಥಗಳಲ್ಲಿ ಅದು ಅನಿವಾರ್ಯ.

ಕೆಲವು ಲೇಖನಗಳಲ್ಲಿನ ವಿಶ್ಲೇಷಣೆ ಭಿನ್ನಾಭಿಪ್ರಾಯಕ್ಕೆ ಆಸ್ಪದ ಕೊಡುವಂತಿವೆ. ಅದೆಲ್ಲ ಏನಿದ್ದರೂ ಬೇರೆ ಮಾತು. ಅನೇಕ ವಿಚಾರಗಳ ಬಗ್ಗೆ ಮೌಲಿಕ ಲೇಖನಗಳನ್ನು ಬರೆಸಿ, ಚೆನ್ನಾಗಿ ಮುದ್ರಿಸಿ, ಕನ್ನಡ ಜಾನಪದ ಅಧ್ಯಯನಕ್ಕೆ ಒಂದು ಒಳ್ಳೆಯ ಕೊಡುಗೆಯನ್ನು ಕೊಟ್ಟ ಸಂಪಾದಕ/ಪ್ರಕಾಶಕರ ಶ್ರಮವನ್ನು ಮೆಚ್ಚಬೇಕು.

13. **ಯಡಕುಂಟೆ ಗೆಣೆಸಾಲು: ಎಸ್.ಜಿ. ಸಿದ್ಧರಾಮಯ್ಯ**

ಕವಿ, ಜಾನಪದ ಅಧ್ಯಯನಕಾರರೆಂದು, ಹಾಗೂ ವಿಮರ್ಶಕರೆಂದು ಹೆಸರಾಗಿರುವ ಎಸ್.ಜಿ. ಸಿದ್ಧರಾಮಯ್ಯನವರ ಈ ಕೃತಿ ಒಂಭತ್ತು ಜಾನಪದ ಲೇಖನಗಳ ಸಂಗ್ರಹವಾಗಿದೆ.

ಇಲ್ಲಿನ ಕೆಲವು ಲೇಖನಗಳು ಗಂಭೀರ ವಿಮರ್ಶಾತ್ಮಕ ಲೇಖನಗಳಾಗಿದ್ದರೆ ಇನ್ನು ಕೆಲವು ಕ್ಷೇತ್ರ ಕಾರ್ಯ ಆಧಾರಿತ, ಮಾಹಿತಿ ಸಂಗ್ರಾಹಕ ಬರಹಗಳಾಗಿವೆ.

ಇಲ್ಲಿನ ಲೇಖನಗಳ ಒಂದು ಗಮನಾರ್ಹ ಅಂಶವೆಂದರೆ-ವಿಶ್ಲೇಷಣೆಯಲ್ಲಿ ಕಾಣುವ ಸ್ವಂತಿಕೆ. ಮಾಹಿತಿ ನೀಡುವ ಪರಿಚಯಾತ್ಮಕ ಲೇಖನಗಳಲ್ಲೂ ಈ ವಿಮರ್ಶೆಯ, ವಿಚಿಕಿತ್ಸಕ ದೃಷ್ಟಿಯ ಹೊಳಹುಗಳು ಅಲ್ಲಲ್ಲಿ ಮಿಂಚುತ್ತದೆ. ದಲಿತ ಪರ ಧೋರಣೆಯ ವಿಚಾರವಾದಿಯಾದರೂ ಸಹ ಸಿದ್ಧರಾಮಯ್ಯನವರು ಪರಂಪರೆಯನ್ನು ಅನಗತ್ಯವಾಗಿ ಬಯ್ಯಲು ಹೋಗುವುದಿಲ್ಲ. ಅದೇರೀತಿ ಖಂಡಿಸುವಾಗಲೂ ಸಹ ಕಟುಶಬ್ದಗಳನ್ನು ಬಳಸುವುದಿಲ್ಲ. ಒಂದು ಸಮಚಿತ್ತದ ವಸ್ತುನಿಷ್ಠ ಸ್ವಂತಿಕೆ ಇವರ ಬರಹಗಳಲ್ಲಿ ಉದ್ದಕ್ಕೂ ಅಂತರ್ವಾಹಿನಿಯಾಗಿ ಹರಿಯುವುದನ್ನು ಕಾಣುತ್ತೇವೆ.

'ಕೆರೆಗೆ ಹಾರವನ್ನು ಕುರಿತು'-ಈ ಸಂಗ್ರಹದ ಮೊದಲ ಲೇಖನ. ಆ ಪ್ರಸಿದ್ಧ ಗೀತೆಯನ್ನು ಭಿನ್ನವಾದೊಂದು ದೃಷ್ಟಿಯಿಂದ ನೋಡಿ ವಿಶ್ಲೇಷಿಸಲು ಇಲ್ಲಿ ಪ್ರಯತ್ನಿಸಿದ್ದಾರೆ. 'ಭಾಗೀರತಿ ತಾನು ಹಾರವಾಗುವುದನ್ನು ತಪ್ಪಿಸಿಕೊಳ್ಳಲೆತ್ನಿಸಿದರೂ ಅದು ಸಾಧ್ಯವಾಗುವಂತಿರಲಿಲ್ಲವಾದ್ದರಿಂದ ಸಮಷ್ಟಿಯ ತೀರ್ಮಾನವನ್ನು ತಾನೂ ವಿಧಿಯಿಲ್ಲದೆ ಒಪ್ಪಿಕೊಂಡಳು. ಅವಳ ತಂದೆತಾಯಿಗಳಿಗೂ ಈ ಸುದ್ದಿ ತಿಳಿದಿತ್ತು'-ಎಂಬುದು ಇಲ್ಲಿನ ಸಾರಾಂಶ. (ಹಾಗೆ ನೋಡಿದರೆ ಇದು ಪೂರ್ಣ ಹೊಸವಾದ ಏನಲ್ಲ. 1982ರಷ್ಟು ಹಿಂದೆಯೇ ಎಸ್.ಪಿ. ಪದ್ಮಪ್ರಸಾದ್ ಇದೇ ದೃಷ್ಟಿಯನ್ನು ಪ್ರತಿಪಾದಿಸುವ ನಾಟಕವೊಂದನ್ನು ಪ್ರಕಟಿಸಿದ್ದರು. ನಂತರ 1983ರಲ್ಲಿ ತನ್ನ ಅಭಿಪ್ರಾಯವನ್ನು ನೇರವಾಗಿ ಸ್ಪಷ್ಟಪಡಿಸಿ 'ಕೆರೆಗೆ ಹಾರ-ಒಂದು ಭಿನ್ನ ದೃಷ್ಟಿ' ಎಂಬ ಲೇಖನವನ್ನು 'ಜಾನಪದ ಜಗತ್ತು' ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ತಮ್ಮ ಈ ವಾದಕ್ಕೆ ಅವರು ಗೀತೆಯ ಎಳೆಎಳೆಗಳನ್ನು ಬಿಡಿಸಿ ಸಮರ್ಥನೆಯನ್ನು ಒದಗಿಸುತ್ತಾರೆ. ಆದರೆ ಕೆಲವೆಡೆಗಳಲ್ಲಿ ಅವರು ಅರ್ಥವನ್ನು ತುಂಬ ದೂರಕ್ಕೆ ಹಿಂಜುತ್ತಾರೆ ಎನಿಸುತ್ತದೆ. ಉದಾಹರಣೆಗೆ ಈ ಗೀತೆಯಲ್ಲಿ ಬರುವ -'ಎಂದಿಲ್ಲದ ಭಾಗೀರ್ತಿ ಇಂದ್ಯಾಕ ಬಂದ್ಯವ್ವ?' ಎಂಬಲ್ಲಿ- 'ಇಂದ್ಯಾಕ' ಎಂಬ ಶಬ್ದವು ಅವಳ ತವರಿನವರಿಗೆ ಇವಳು ಕೆರೆಗೆ ಹಾರವಾಗುವ ಸಂಗತಿ ತಿಳಿದಿತ್ತು ಎಂಬುದನ್ನು ಸೂಚಿಸುತ್ತದೆ'-ಎನ್ನುತ್ತಾರೆ. ಅದು ಹಾಗೇ ಇರಬೇಕೇನೂ ಇಲ್ಲ. ಈ ಶಬ್ದ ಮಾಮೂಲಿನ ರೀತಿಯಲ್ಲೇ ಪ್ರಯೋಗವಾಗಿದೆ ಎಂದು ಭಾವಿಸುವುದೇ ಸಾಧು. ಇಲ್ಲಿಂದ ಮುಂದೆ ಬರುವ 'ಇಟ್ಟರೆ ಇಡಲೇಳು ಹೊಲಮನೆ ಕೊಡತೀನಿ' ಎಂಬತ್ಯಾದಿ ಸಾಲುಗಳು ಅವರಿಗೆ ಈ ಸಂಗತಿ ಗೊತ್ತಿರಲಿಲ್ಲ ಎಂಬುದಕ್ಕೆ ಪುಷ್ಟಿ ಕೊಡುತ್ತವೆ. ಇಂಥ ಒಂದೆರಡು ಅಭಿಪ್ರಾಯಗಳನ್ನು ಬಿಟ್ಟರೆ ಇಡೀ ಲೇಖನದಲ್ಲಿ ಇವರು ಗೀತೆಯನ್ನು ವಿಶ್ಲೇಷಿಸುವ ರೀತಿ ಅನೇಕ ಹೊಸ ಒಳನೋಟಗಳನ್ನು ಓದುಗರಿಗೆ ಒದಗಿಸುತ್ತದೆ.

'ಆಧುನಿಕ ಸಂದರ್ಭದಲ್ಲಿ ಜಾತ್ರೆಗಳು'-ಇಲ್ಲಿನ ಎರಡನೇ ಲೇಖನ. ಜಾತ್ರೆಯು ಸ್ವರೂಪದ ಮೂಲಕ ಆಶಯ ಹಾಗೂ ಅವು ವೈಭವೀಕೃತಗೊಳ್ಳುತ್ತಾ ಬಂದ ಪರಿಯನ್ನು ವಿಶ್ಲೇಷಿಸುವುದು ಇಲ್ಲಿನ ಗುರಿ. ಲೇಖನ ಅದೇ ಮಾರ್ಗದಲ್ಲೇ ಸರಿಯಾಗಿಯೇ

ಸಾಗಿದೆ. 'ಕರ್ಮಸಿದ್ಧಾಂತ ಮತ್ತು ಚಾತುರ್ವರ್ಣ' ನೀತಿಗಳು ಎಂದು ಪುರಾಣಗಳ ಮುಖೇನ ನಮ್ಮ ಜನಪದ ಬದುಕಿನ ಮೇಲೆ ಆಕ್ರಮಣ ಮಾಡಿದುವೋ ಅಂದಿನಿಂದಲೇ ನಮ್ಮ ಜಾನಪದದ ಕ್ರಿಯಾಶೀಲತೆ ಉಡುಗುತ್ತಾ ಬಂದಿತು'-ಎನ್ನುವ ನಿಲುವಿನಿಂದಲೇ ಇಲ್ಲಿನ ವಿಶ್ಲೇಷಣೆ ಹೊರಟಿದೆ. ಇದಕ್ಕೆ ಸಮರ್ಥನೆ ಕೊಡುವಂಥ ಅನೇಕ ಸಾಕ್ಷ್ಯಗಳು ನಮ್ಮ ಜಾನಪದದಲ್ಲಿವೆ ನಿಜ. ಆದರೆ ಈ ಪರಿಕಲ್ಪನೆಗಳನ್ನಿಟ್ಟುಕೊಂಡೂ ನಮ್ಮ ಜಾನಪದರು ಸೃಜನಶೀಲ ಕಾರ್ಯಗಳನ್ನು ಮಾಡಿರುವುದಕ್ಕೂ ಸಾಕಷ್ಟು ಸಾಕ್ಷಗಳಿವೆ- ಪೂಜಾ ಸಮಯದ ರಂಗೋಲಿಗಳು, ಬಯಲಾಟದ ಮುಖವರ್ಣಿಕೆಗಳು, ಇತ್ಯಾದಿ. ಆದರೆ ಈ ಲೇಖನದಲ್ಲಿ- ಜಾತ್ರೆಗಳಲ್ಲಿ ಪುರಾಣದ್ರವ್ಯ ವ್ಯಕ್ತವಾಗುವ ಬಗೆ, ಆಧುನಿಕತೆ ಹೆಚ್ಚಿದಂತೆ ಜಾತ್ರೆಗಳಲ್ಲಿ ವಾಣಿಜ್ಯ, ಮನರಂಜನಾ ದೃಷ್ಟಿಗಳೆಲ್ಲ ಸೇರಿ ಪ್ರತ್ಯೇಕ ಕೇವಲ ಪ್ರೇಕ್ಷಕವರ್ಗ ನಿರ್ಮಾಣವಾದದ್ದು, ಆಚರಣೆಗಳು ಸಾಂಕೇತಿಕ ಮಟ್ಟಕ್ಕಿಳಿಯುತ್ತಿರುವುದು, ಜಾತ್ರೆಯಲ್ಲಿ ಜಾತೀಯ ವ್ಯವಸ್ಥೆ ಕೆಲಸ ಮಾಡುವ ರೀತಿ- ಇಂಥ ಅನೇಕ ಮಹತ್ವದ ಅಂಶಗಳನ್ನು ಲೇಖಕರು ಗುರುತಿಸಿದ್ದಾರೆ.

ಮೂರನೆಯ ಲೇಖನವಾದ 'ಕರ್ನಾಟಕ ಜನಪದ ಸಂಸ್ಕೃತಿ.' ಒಂದು ಪರಿಚಯಾತ್ಮಕ ಲೇಖನವೆಂದು ಲೇಖಕರೇ ಕರೆದುಕೊಂಡಿದ್ದಾರೆ. ಆದರೆ ಸುಮಾರು 50 ಪುಟಗಳ ಈ ದೀರ್ಘ ಲೇಖನ (ಪುಸ್ತಕದ ಕಾಲುಭಾಗದಷ್ಟು) ಸಾಕಷ್ಟು ವ್ಯಾಪಕವಾದ ಪರಿಚಯವನ್ನೇ ನೀಡುತ್ತದೆ. ಒಬ್ಬ ಮೊದಲ ಓದುಗನಿಗೆ ಸಾಕಷ್ಟು ಮಾಹಿತಿಗಳು ಹಾಗೂ ಸಮಗ್ರ ಚಿತ್ರ ಇಲ್ಲಿ ಸಿಗುತ್ತದೆ. ಜನಪದ ಸಾಹಿತ್ಯದ ವಿವಿಧ ಪ್ರಕಾರಗಳು, ಒಗಟು, ಕೋಲಾಟಗಳು, ಜನಪದ ಕಲೆಗಳು, ಸೋಮನ ಕುಣಿತ, ರಂಗನ ಕುಣಿತ, ಪುರವಂತಿಕೆ, ಜನಪದ ಕ್ರೀಡೆಗಳು, ಸಿದ್ಧಿ, ಲಂಬಾಣಿ ಮೊದಲಾದ ಕೆಲವು ಪರಿಶಿಷ್ಟ ಜನಾಂಗಗಳು,-ಹೀಗೆ ಒಂದು ಲೇಖನದ ಮಿತಿಯಲ್ಲಿ ಪ್ರಮುಖ ವಿಷಯಗಳನ್ನೆಲ್ಲಾ ಒಳಗೊಳ್ಳಲು ಸಾಕಷ್ಟು ಶ್ರಮಿಸಿದ್ದಾರೆ. ಈ ಲೇಖನದಲ್ಲಿ ಲೇಖಕರು ಸ್ವಲ್ಪ ಪ್ರಶಂಸಾಪರರಾಗಿದ್ದಾರೆ. ನಮ್ಮ ಜನಪದರಲ್ಲಿನ ನೋವು ನಿರಾಶೆ ಅಳಲು ಅಥವಾ ಕಪ್ಪು ಕಲೆಗಳನ್ನು ಇವರು ಇಲ್ಲಿ ಎಲ್ಲಿಯೂ ಪ್ರಸ್ತಾಪಿಸುವುದಿಲ್ಲ. ಇದು ಬಹುಶಃ ಮೂಲತಃ ಈ ಲೇಖನವನ್ನು ಯಾವುದಕ್ಕಾಗಿ ಬರೆದರೋ ಆ ಪತ್ರಿಕೆ/ಗ್ರಂಥದ ಆಶಯದ ದೃಷ್ಟಿಯಿಂದ ಇರಬೇಕು.

ನಾಲ್ಕನೆಯ ಲೇಖನ-'ಜನಪದ ಕವಿ ಕಂಡ ರೇವಣಸಿದ್ಧ' ಕುರುಬ ಜನಾಂಗದ ಗುರುವೆಂದೂ ಮಹಿಮಾಪುರುಷನೆಂದೂ ಭಾವಿಸಲ್ಪಟ್ಟಿರುವ ರೇವಣ್ಣ ಅಥವಾ ರೇವಣ್ಣಸಿದ್ಧೇಶ್ವರನನ್ನು ಕುರಿತ ಜಾನಪದ ಗೀತೆಯೊಂದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಕುರುಬರಲ್ಲಿ ಪುರೋಹಿತ ವರ್ಗವಾದ ಒಡೆಯರು ಯಾಕೆ ಒಂದು ದ್ವೀಪವಾಗಿದ್ದಾರೆ? ರೇವಣ್ಣ ಕಲ್ಯಾಣಕ್ಕೆ ಹೋಗಿದ್ದ ಸಂದರ್ಭದಲ್ಲಿ ಕುರುಬರೆಂದು ಇವರಿಗೆ ಅವಮಾನ ಮಾಡಲಾಯಿತೆ, ಹಾಗಿದ್ದರೆ ನಿಜವಾಗಿಯೂ ಅಲ್ಲಿ ಸಮಾನತೆ ಇರಲಿಲ್ಲವೆ? ಕುರುಬರಲ್ಲಿನ ಈ ಪುರೋಹಿತ ವರ್ಗ ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಳ್ಳಲು ಯಾವ ಬಗೆಯ

ರಾಜಿಗೆ ಒಳಗಾಗಿರಬಹುದು-ಎಂಬಂಥ ಸೂಕ್ಷ್ಮ ಪ್ರಶ್ನೆಗಳನ್ನೆತ್ತಿಕೊಂಡು ಗೀತೆಯ ಒಳಗಿರುವ ವಿವರಗಳ ಅಧಾರದಿಂದ ಉತ್ತರ ಕಂಡುಕೊಳ್ಳಲು ಲೇಖಕರು ಪ್ರಯತ್ನಿಸಿದ್ದಾರೆ. ಇಲ್ಲೆಲ್ಲ ಲೇಖಕರ ವಸ್ತುನಿಷ್ಠ ದೃಷ್ಟಿ, ವಿಶ್ಲೇಷಣೆಯ ಸೂಕ್ಷ್ಮತೆ, ಅಧ್ಯಯನ ಹಾಗೂ ವಿವಿಧ ಜನಾಂಗಗಳಲ್ಲಿ ಗ್ರಾಮಮಟ್ಟದಲ್ಲಿ ಇರುವ ಬದುಕಿನ ಸೂಕ್ಷ್ಮಾಂಶಗಳ ತಿಳಿವಳಿಕೆ-ಇವೆಲ್ಲ ವ್ಯಕ್ತವಾಗುತ್ತವೆ. ಕ್ಷೇತ್ರಮಾಹಿತಿ ಸಾಕಷ್ಟು ಇದ್ದಾಗ ಒಂದು ವಿಮರ್ಶೆ ಹೇಗೆ ಉತ್ತಮವಾಗಬಲ್ಲದು ಎಂಬುದಕ್ಕೆ ಈ ಲೇಖನ ಒಂದು ಒಳ್ಳೆ. ಉದಾಹರಣೆಯಾಗಿದೆ.

'ಮಡಿಕೇರಿಯ ಬನಾಶಂಕರಿ ಪೆಟ್ಟಿಗೆ-ಒಂದು ಮಾಹಿತಿ-ಇಲ್ಲಿನ ಐದನೆಯ ಲೇಖನ. ಮಡಿಕೇರಿಯಲ್ಲಿರುವ ಚೌಡೇಶ್ವರಿ ಗುಡಿಯ ಎದುರಿನ ಮನೆಯಲ್ಲಿರುವ 'ಬನಾಶಂಕರಿ ಪೆಟ್ಟಿಗೆ' ಎನಿಸಿಕೊಳ್ಳುವ ಒಂದು ಪೆಟ್ಟಿಗೆಯಲ್ಲಿರುವ ಮೂರ್ತಿಗಳು ಅದು ಅಲ್ಲಿಗೆ ಬಂದ ಬಗೆ, ಅದಕ್ಕೆ ನಡೆಯುವ ಜಾತ್ರೆಯ ವಿಧಿವಿಧಾನಗಳು-ಇವೆಲ್ಲದರ ಬಗೆಗೆ ಕುತೂಹಲಕಾರಿಯಾದ ದೀರ್ಘ ವಿವರಗಳಿವೆ. ಇದೊಂದು ಕ್ಷೇತ್ರಕಾರ್ಯಾಧರಿತ ಲೇಖನ. ಇಲ್ಲಿ ಯಥಾವತ್ ವಿವರಗಳಿವೆ. ಅವುಗಳ ವಿಶ್ಲೇಷಣತೆ ಇಲ್ಲ. ಲೇಖಕರ ಉದ್ದೇಶವೂ ಮಾಹಿತಿ ನೀಡುವುದಷ್ಟೇ ಆಗಿದೆ ಎಂಬುದನ್ನು ಶೀರ್ಷಿಕೆಯೇ ಸೂಚಿಸುತ್ತದೆ. ಹೀಗಿರುವಂತೆ -ಲೇಖನವೇ ಹನ್ನೆರಡು ಪುಟಗಳಷ್ಟಿದೆ. ವಿಶ್ಲೇಷಣೆಗೆ ತೊಡಗಿದರೆ ಗಾತ್ರ ಮತ್ತಿಷ್ಟೇ ಮಟ್ಟಕ್ಕೆ ಬೆಳೆದೀತು. ಅಲ್ಲದೆ ಇದರ ವಿಶ್ಲೇಷಣೆ ಮಾಡುವಾಗ ತೌಲನಿಕವಾಗಿ ನೋಡಬೇಕಾದ ಎಷ್ಟೋ ಸಂಗತಿಗಳಿವೆ. ಆ ಕೆಲಸಕ್ಕೆ ತೊಡಗುವವರಿಗೆ ಬೇಕಾದ ಮೂಲ ಮಾಹಿತಿಗಳನ್ನು ಇಲ್ಲಿ ಲೇಖಕರು ಸಂಗ್ರಹಿಸಿ ನೀಡಿದ್ದಾರೆ. ಇಂಥ ಮಾಹಿತಿಗಳೇ ಮುಖ್ಯ ಆಧಾರವಾಗುವುದರಿಂದ, ಇವುಗಳ ಲಭ್ಯತೆಯೂ ಸುಲಭವಲ್ಲವಾದ್ದರಿಂದ ಈ ಲೇಖನದಿಂದಾಗುವ ಸಹಾಯವೂ ಗಣನೀಯ. ವಿಶ್ಲೇಷಕರಿಗೆ ಇಲ್ಲಿ ಹಲವಾರು ಪ್ರಶ್ನೆಗಳು ಕಾದಿವೆ. 'ಬನಶಂಕರಿ' ಎಂದಿರಬೇಕಾದುದು ಏಕೆ ಒಂದು ದೀರ್ಘವನ್ನು ಪಡೆದು 'ಬನಾಶಂಕರಿ' ಆಗಿದೆ? ವಿಶ್ವಕರ್ಮರ ಆರಾಧ್ಯದೇವತೆಯಾದ ಚೌಡೇಶ್ವರಿ ದೇವಾಂಗದವರ ದೇವತೆಯಾದದ್ದು ಹೇಗೆ? ಇತ್ಯಾದಿ.

ಇದರ ಮುಂದಿನ ಲೇಖನ-'ಹತ್ತಿಕಂಕಣದ ಕುರುಬರಲ್ಲಿ ಮದುವೆಯ ಆಚರಣೆ' ಮೂವತ್ಮೂರು ಪುಟಗಳಷ್ಟು ದೀರ್ಘವಾದುದು. ಅಲ್ಲಿನ ಮದುವೆ ಪದ್ಧತಿಯು ಬಹುಮಟ್ಟಿಗೆ ಎಲ್ಲ ವಿವರಗಳನ್ನೂ ಲೇಖಕರು ಇಲ್ಲಿ ಸಂಗ್ರಹಿಸಿದ್ದಾರೆ. ಈ ವಿವರಗಳನ್ನು ಸಂಗ್ರಹಿಸಲು ಎಷ್ಟು ಪ್ರಯಾಸ ಪಟ್ಟಿರಬೇಕು ಎಂಬುದು ಊಹೆಗೆ ಬಿಟ್ಟಿದ್ದು. ಇಲ್ಲಿ ವಿಶ್ಲೇಷಣೆ ಏನೂ ಇಲ್ಲ. ಆದರೆ ಅದಕ್ಕೆ ಅಗತ್ಯವಾದ ಮುಖ್ಯ? ಸಾಮಗ್ರಿ ಇದೆ. ವಿವಿಧ ಜನಾಂಗಗಳಲ್ಲಿನ ಹೀಗೆ ಮದುವೆಯ ಆಚರಣೆಗೆ ಸಂಬಂಧಿಸಿದ ಲೇಖನಗಳನ್ನು ಒಂದೆಡೆಗೆ ಸೇರಿಸಿ ಒಂದು ಗ್ರಂಥವನ್ನು ಯಾವುದಾದರೂ ಸಂಸ್ಥೆ ಹೊರತಂದರೆ ಅಧ್ಯಯನಕಾರರಿಗೆ ತುಂಬ ಉಪಯುಕ್ತವಾಗುತ್ತದೆ.

ಮುಂದಿನ-'ಜಾನಪದ-ಕೆಲವು ಟಿಪ್ಪಣಿಗಳು,' ಲೇಖನದಲ್ಲಿ ಜಾನಪದವನ್ನು ಕುರಿತ ತಮ್ಮ ಕೆಲವು ವಿಚಾರಗಳನ್ನು ಲೇಖಕರು ಟಿಪ್ಪಣಿಸಿದ್ದಾರೆ. ಇದೊಂದು ಐದು

ಪುಟಗಳ ಪುಟ್ಟ ಲೇಖನ. ಬಹುಶಃ ಬಹಳ ಹಿಂದೆ ಬರೆದಿದ್ದಿರಬೇಕು. ಇಲ್ಲಿ ಇವರು ಪ್ರಶ್ನೆಯ ರೂಪದಲ್ಲಿ ಎತ್ತಿಕೊಂಡು 'ಹೀಗಾಗಬಾರದೇಕೆ?' ಎಂದಿರುವ ಅಂಶಗಳು ಈಗಾಗಲೇ ಜಾನಪದಾಸಕ್ತರಿಂದ ಒಪ್ಪಿಗೆ ಪಡೆದು ಬಿಟ್ಟಿವೆ. ಉದಾಹರಣೆಗೆ-'ಹಳ್ಳಿಯದು ಮಾತ್ರವೇ ಜಾನಪದವೇ? ನಗರ ಜೀವನದ ಕೆಲವು ಅಂಶಗಳು ಜಾನಪದಕ್ಕೆ ಬರುವುದಿಲ್ಲವೇ?' ಎಂಬಂಥ ಪ್ರಶ್ನೆ. (ಪು. 180) ಹಾಗೆ ಮಾಡಲು ಬರುತ್ತದೆ ಎಂಬುದನ್ನು ಒಪ್ಪಿಕೊಂಡಿರುವ, ಆ ನಿಟ್ಟಿನಲ್ಲಿ ಕೆಲಸ ಮಾಡಿರುವ ಲೇಖಕರು ಈಗಾಗಲೇ ನಮ್ಮಲ್ಲಿದ್ದಾರೆ. ಅದೇ ರೀತಿ ವೈದಿಕರಲ್ಲಿ ಜಾನಪದವಿದೆ ಎಂದು ಪುಟ್ಟ ಟಿಪ್ಪಣಿಯೊಂದರಲ್ಲಿ ಹೇಳಿದ್ದಾರೆ. ವೈದಿಕರಲ್ಲಿನ ಸಂಪ್ರದಾಯದ ಹಾಡುಗಳ ಸಂಕಲನಗಳೇ ಹೊರಬಂದಿವೆ ಈಗ. ಅಷ್ಟೇಕೆ-ಸಂಕೇತಿ ಬ್ರಾಹ್ಮಣರ ಬದುಕಿನ ಬಗ್ಗೆ ನಿಬಂಧವೇ ತಯಾರಾಗಿದೆ. ಅವರಲ್ಲಿನ ಜಾನಪದ ಕಥೆಗಳ ಸಂಗ್ರಹವೂ ಹೊರಬಂದಿದೆ. ಜೈನ ಜಾನಪದ ಸಾಹಿತ್ಯವನ್ನು ಕುರಿತ ಡಾ. ಎಸ್.ಪಿ. ಪದ್ಮಪ್ರಸಾದ್‌ರ ನಿಬಂಧ ಪ್ರಕಟವಾಗಿ (1987) ಹತ್ತು ವರ್ಷಗಳೇ ಆಗುತ್ತಾ ಬಂತು. ಈ ಟಿಪ್ಪಣಿಗಳಲ್ಲಿ ಸಿದ್ಧರಾಮಯ್ಯನವರು ಹೇಳು ಸತ್ಯವೇನೋ ಸರಿ. ಆದರೆ ಈ ಸತ್ಯವೆಲ್ಲ ಬಯಲಾಗಿ ಈಗ ಹಳೇ ಮಾತಾಗಿರುವುದರಿಂದ ಈಗ ಆಕರ್ಷಣೆ ಕಳೆದುಕೊಂಡು ಬಿಟ್ಟಿವೆ. ಅದೇರೀತಿ 'ಜಾನಪದದ ಪ್ರಭೇಧವನ್ನು ಅಭ್ಯಸಿಸುವಾಗ ಅದರ ಸಂದರ್ಭ ಹಾಗೂ ಅಗ ಜೀವ ಪಡೆದ ತೊಂಡೀತನದ ಮಹತ್ವವನ್ನು ಒಟ್ಟೊಟ್ಟಿಗೇ ಗಮನಿಸುವುದು ಅಗತ್ಯ.' (ಪು. 183) ಎಂಬಂಥ ಮಾತುಗಳಲ್ಲೂ ಹೊಸ ಸಲಹೆ ಏನೂ ಇಲ್ಲ.

ಇದರ ಮುಂದಿನ ಲೇಖನ- ಕ.ರಾ.ಕೃ. ಸಂಗ್ರಹಿಸಿದ "ಪಾಳೆಗಾರರ ಪದಗಳು" ಇದು ಆ ಪುಸ್ತಕದ ವಿಶೇಷವಾಗಿ ಅದರಲ್ಲಿನ ಒಂದು ಕಥನಗೀತೆಯ ವಿಮರ್ಶೆಯಾಗಿದೆ. ಇದೇ ಸಂದರ್ಭದಲ್ಲಿಯೇ ಲೇಖಕರು ಕ.ರಾ.ಕೃ. ಅವರಂಥ ಜನಪದ ಸಾಹಿತ್ಯ ಸಂಗ್ರಾಹಕರ ಕೆಲಸ ಎಷ್ಟು ಅವೈಜ್ಞಾನಿಕ ಎಂಬ ತಮ್ಮ ನಿಲುವನ್ನೂ (ಕ.ರಾ.ಕೃ. ಅವರ ದುಡಿಮೆಯ ಬಗ್ಗೆ ಮೆಚ್ಚುತ್ತಲೇ) ದಾಖಲಿಸುತ್ತಾರೆ. ಅವರ ಕೆಲವು ಮಾತುಗಳನ್ನಿಲ್ಲಿ ಉಲ್ಲೇಖಿಸಬಹುದು.

"......ಅವರ ಈ ಜನಪದ ಸಾಹಿತ್ಯ ಸಂಗ್ರಹಣಾ ವಿಧಾನ ಇದುವರೆಗಿನ ಬಹುಪಾಲು ಕನ್ನಡ ಜನಪದ ಸಾಹಿತ್ಯ ಸಂಗ್ರಹಣಾ ರೀತಿಯ ಆವೇಶಪೂರಿತ ಅವೈಜ್ಞಾನಿಕ ವಿಧಿಗೆ ಉತ್ತಮ ನಿದರ್ಶನ" (ಪು. 185)

"ಜಾನಪದ ಸಂಗ್ರಹಕಾರ ಏಕಕಾಲದಲ್ಲಿ ಅಧ್ಯಯನಕಾರನೂ ಆಗಿರಬೇಕು. ಬರೀ ಸಾಹಿತ್ಯ ಸಂಗ್ರಹಣೆ ಅವನ ಗುರಿಯಾಗಬಾರದು. ಆ ಸಾಹಿತ್ಯ ಒಳಗೊಳ್ಳುವ ಆಚರಣಾ ವಿಧಿಯ ಎಲ್ಲ ಅಂಶವನ್ನೂ ಅವನು ತನ್ನ ಅಧ್ಯಯನವ್ಯಾಪ್ತಿಗೆ ದಕ್ಕಿಸಿಕೊಳ್ಳಬೇಕು." (ಪು. 185)

''ಸಂಗ್ರಹಣೆ ಮೊದಲು, ಅಧ್ಯಯನ ಅನಂತರ-ಎಂಬ ಆದೇಶದ ಕರ್ಮಗಳೆಲ್ಲ ಅವೈಜ್ಞಾನಿಕವಾದಷ್ಟೇ ಅಲ್ಲ, ನಿರರ್ಥಕವೂ ಕೂಡ. ಈ ದೃಷ್ಟಿಯಿಂದ ನಮ್ಮ ಕನ್ನಡದ ಬಹುಪಾಲು ಜನಪದ ಸಾಹಿತ್ಯ ಅರ್ಥಹೀನವಾದ ನಿರುಪಯುಕ್ತ ಸತ್ತೆಯೇ ಆಗಿದೆ.'' (ಪು. 186)

ಜಾನಪದ ಅಧ್ಯಯನದ ಶಾಸ್ತ್ರೀಯತೆಯ ತಿಳಿವಳಿಕೆ ಇರುವವರೆಲ್ಲ ಹಿಂದಿನ ಸಂಗ್ರಾಹಕರ ಬಗ್ಗೆ ಇವೇ ಮಾತುಗಳನ್ನು ಹೇಳುತ್ತಾರೆ. ಆದರೆ ಇವರುಗಳೆಲ್ಲ ಕೆಲವು ಅಂಶಗಳನ್ನು ಸಲೀಸಾಗಿ ಮರೆತುಬಿಡುತ್ತಾರೆ. ಅದೆಂದರೆ-

1) ಬೇರೆ ದೇಶಗಳಲ್ಲೂ ಕೂಡಾ ಜನಪದ ಸಾಹಿತ್ಯದ ಸಂಗ್ರಹಣೆ ಆರಂಭವಾದ ಕಾಲಕ್ಕೆ ವ್ಯಕ್ತಿವಿವರ, ಆಚರಣೆ ವಿವರ ಇತ್ಯಾದಿಗಳನ್ನು ಸಂಗ್ರಹಿಸದೆ ಸಾಹಿತ್ಯವನ್ನಷ್ಟೆ ಸಂಗ್ರಹಿಸಿ ಪ್ರಕಟಿಸಲಾಯಿತು ಎನ್ನುವುದು.

2) ಕನ್ನಡದಲ್ಲಿ ಈ ಹಿರಿಯರು-(ಕ.ರಾ.ಕೃ, ಕರೀಂಖಾನ್, ಮತಿಘಟ್ಟ ಕೃಷ್ಣಮೂರ್ತಿ ಕಾಪಸೆ ರೇವಪ್ಪ ಇತ್ಯಾದಿ) ಸಂಗ್ರಹಕಾರ್ಯ ಆರಂಭಿಸಿದ ದಿನಗಳಲ್ಲಿ ಶಾಸ್ತ್ರೀಯ ಅಧ್ಯಯನದ ಈ ಪರಿಕಲ್ಪನೆಗಳು ನಮ್ಮ ಪ್ರೊಫೆಸರುಗಳಿಗೂ ಗೊತ್ತಿರಲಿಲ್ಲ, ಪುಸ್ತಕಗಳೂ ಲಭ್ಯವಿರಲಿಲ್ಲ ಎನ್ನುವುದು.

3) ಈ ಸಂಗ್ರಹಕಾರರು ಜನಪದ ಸಾಹಿತ್ಯದಲ್ಲಿನ ಅಭಿವ್ಯಕ್ತಿಯ ಸೊಗಸು, ಭಾವ ಶ್ರೀಮಂತಿಕೆಗೆ ಮಾರು ಹೋಗಿ ಅದನ್ನು ಸೆರೆಹಿಡಿದಿರುವ ದೃಷ್ಟಿಯಿಂದ ಅದನ್ನು ಸಂಗ್ರಹಿಸಿಟ್ಟರು ಹಾಗೂ ವ್ಯಕ್ತಿವಿವರ, ಸಾಂದರ್ಭಿಕ ಮಾಹಿತಿಗಳ ಹೊರತಾಗಿಯೂ ಅವರು ಸಂಗ್ರಹಿಸಿರುವ ಸಾಹಿತ್ಯರಾಶಿ ನಮಗೆ ಬಹಳಷ್ಟನ್ನು ಇನ್ನೂ ಹೇಳಬಲ್ಲುದು ಎಂಬುದು, ಹಾಗೂ

4) ಈ ಸಂಗ್ರಹಕಾರರಿಗೆ ತಾವು ಸಂಗ್ರಹಿಸಿದ ಜನಪದ ಗೀತೆಗಳ ಹಿಂದಿನ ಸಂದರ್ಭ, ಸಂಪ್ರದಾಯಗಳ ಅರಿವಿತ್ತು, ಅದನ್ನು ಅವರಿಂದ ಬರೆಸಿ ಪ್ರಕಟಿಸಲು (ಜಾನಪದ ಅಧ್ಯಯನದ ಶಾಸ್ತ್ರೀಯ ಪರಿಕಲ್ಪನೆಗಳು ಕರ್ನಾಟಕದಲ್ಲಿ ಬೆಳಕಿಗೆ ಬಂದಮೇಲೂ) ಯಾವ ಸಂಸ್ಥೆ ಆಸಕ್ತಿ ತೋರಿದ್ದರಿಂದ ಹಾಗೇ ಮಾಯವಾಯಿತು, ಇದು ನಮ್ಮದೇ ಸ್ವಯಂಕೃತಾಪರಾಧ ಎನ್ನುವುದು.

ಈ ಸಂಗ್ರಹಕಾರರು ಹಾಡುಗಾರರಿಂದ ಸಂಗ್ರಹಿಸಿದ ಹಾಡುಗಳಲ್ಲಿ ಹೆಚ್ಚಿನವು ಅನಂತರದ ದಿನಗಳಲ್ಲಿ ಬಳಕೆಯಿಂದ ಹಿಂದೆ ಸರಿದು ಹಾಡುಗಾರರಿಗೇ ಮರವೆಯಾಗಿ ಹೋದವು. 'ಜಾನಪದ ಅವಿನಾಶಿ' ಎನ್ನುವುದು ಒಟ್ಟು ರಾಶಿಯ ದೃಷ್ಟಿಯಿಂದಷ್ಟೇ ನಿಜ. ಜಾನಪದ ಪ್ರತ್ಯೇಕ ನಿರ್ದಿಷ್ಟ ಭಾಗಗಳು ಕಳಚಿಹೋಗುವುದು, ಅವುಗಳ ಜಾಗವನ್ನು ಹೊಸ ಅಂಶಗಳು ತುಂಬುವುದು-ನಡೆದೇಇರುತ್ತದೆ. ಹೀಗೆ ಮರೆಯಾದ

ಭಾಗಗಳು ಈ ಹಿರಿಯರ ಸಂಗ್ರಹದಲ್ಲಷ್ಟೇ ಉಳಿದಿವೆ. ಅದು ಎಷ್ಟೇ ಕಚ್ಚಾ ಕೆಲಸವಾಗಿರಲಿ, ಅಧ್ಯಯನಕಾರರಿಗೆ ಇಂದೂ ಉಪಯುಕ್ತವಾಗಿದೆ. ನಮ್ಮ ಪಂಡಿತ ವಿಮರ್ಶಕರು ಇದನ್ನು ನೆನಪಿಡುವುದು ಮೇಲು.

ಇನ್ನು, ಈ ಸಂಗ್ರಹದಲ್ಲಿನ ತರೀಕೆರೆ ರಂಗಪ್ಪನಾಯಕನ ಕುರಿತ ಕಥನಗೀತೆಯನ್ನು ವಿಶ್ಲೇಷಿಸಿರುವ ರೀತಿ ಸರಿಯಾಗಿದೆ. ಅದರಲ್ಲೇನೂ ದೋಷವಿಲ್ಲ.

'ಜನಪದ ಕಲೆಗಳು ಮತ್ತು ಭಾವೈಕ್ಯತೆ' ಎಂಬ ಕೊನೆಯ ಲೇಖನ ಆರು ಪುಟಗಳಷ್ಟು ಆದರೆ ಭಿನ್ನ ನಿಲುವೊಂದನ್ನು ಸಮರ್ಥವಾಗಿ ಮಂಡಿಸುವ ಗಟ್ಟಿ ಲೇಖನ. ಸಾಮಾನ್ಯ ಜನಪ್ರಿಯ ಹೇಳಿಕೆಗಳಿಗೆ ವಿರುದ್ಧವಾದ ವಸ್ತುಸತ್ಯವೊಂದನ್ನಿಲ್ಲಿ ಲೇಖಕರು ಪ್ರತಿಪಾದಿಸುತ್ತಾರೆ. 'ಜನಪದ ಕಲೆಗಳು ಭಾವೈಕ್ಯತೆಯ ಸಾಧನಗಳು', 'ಜಾತ್ರೆಗಳು ಭಾವೈಕ್ಯತೆಯ ಉತ್ಸವಗಳು' ಎಂಬಂತಹ ಪರಿಚಿತ ಮಾತುಗಳನ್ನಿಲ್ಲಿ ಅವರು ಆಧಾರಪೂರ್ವಕವಾಗಿ ನಿರಾಕರಿಸುತ್ತಾರೆ. ಯಾವುದೇ ಜನಪದ ಕಲೆ ತನ್ನ ಪ್ರಾದೇಶಿಕತೆ ಹಾಗೂ ಜಾತಿಯ ಕಟ್ಟಿನಲ್ಲಿರುವಂಥಾದ್ದು. ಜಾತಿಪದ್ಧತಿ ಹಾಗೂ ಶೋಷಣೆ ಜಾರಿಯಲ್ಲಿರುವವರೆಗೆ ಕಲೆಗಳಿಗೆ ಮುಕ್ತಿ ಇಲ್ಲ. ಆದ್ದರಿಂದ ಇವು ಭಾವೈಕ್ಯತೆಯನ್ನೇನೂ ಪೋಷಿಸುವುದಿಲ್ಲ-ಎಂಬುದು ಲೇಖಕರ ವಾದದ ಸಾರಾಂಶ. ವಿಶ್ಲೇಷಣೆಯೇನೋ ಸರಿಯೇ. ಆದರೆ ನಾವು ಸಾಮಾನ್ಯವಾಗಿ 'ಜನಪದ ಕಲೆಗಳು ಮತ್ತು ಭಾವೈಕ್ಯತೆ.' ಎಂದು ಯೋಚಿಸುವಾಗ, ಚಿಂತಿಸುವುದು-'ಇವನ್ನು ಭಾವೈಕ್ಯ ವೃದ್ಧಿಗೆ ಹೇಗೆ ಬಳಸಿಕೊಳ್ಳಬಹುದು?, ಎಂಬ ನಿಟ್ಟಿನಿಂದಲೇ ಹೊರತು ಇವು ಹೇಗೆ ಜನ್ಮ ತಾಳಿದವು? ಎಂಬ ದೃಷ್ಟಿಯಿಂದ ಅಲ್ಲ. ತಮ್ಮ ಪರಿಸರದಲ್ಲಿ ಅವು ವರ್ಣವ್ಯವಸ್ಥೆಯನ್ನು ಎತ್ತಿ ಹಿಡಿಯುವ ಕೆಲಸವನ್ನೆ ಮಾಡಬಹುದು. ಪುರಾಣ ದ್ರವ್ಯವನ್ನು ವೈಭವೀಕರಿಸಬಹುದು. ನಮಗೆ ಬೇಕಾಗಿರುವುದು ಅದಲ್ಲ. ಅದಕ್ಕಿಂತ ಭಿನ್ನ ಪರಿಣಾಮಗಳನ್ನು, ಅಪೇಕ್ಷಣೀಯ ಫಲಿತಾಂಶವನ್ನು ಪಡೆಯಲು ನಾವು ಇವನ್ನು ಎಲ್ಲಿ ಮತ್ತು ಹೇಗೆ ಬಳಸಿಕೊಳ್ಳಬಹುದು ಎಂಬುದು ಭಾವೈಕ್ಯತೆಯ ವೃದ್ಧಿಗಾಗಿ ಜನಪದ ಕಲೆಗಳನ್ನು ಬಳಸಿಕೊಳ್ಳಬಯಸುವವರ ಪ್ರಶ್ನೆ. ಒಂದು ರಾಜ್ಯದವರ ಬಗ್ಗೆ ಮತ್ತೊಂದು ಕಡೆಯವರಿಗೆ 'ಅವರಿಗೇನು ಗೊತ್ತಿದೆ?' ಎಂಬ ತಾತ್ಸಾರ ಭಾವನೆ ಇರುತ್ತದೆ. ಅವರೆದುರು ವಿವಿಧ ರಾಜ್ಯಗಳ ಜನಪದ ಕಲೆಗಳನ್ನು ಪ್ರದರ್ಶಿಸಿದಾಗ-''ಬೇರೆಯವರೂ ಹಲವು ಬಗೆಯಲ್ಲಿ ನಿಷ್ಣಾತರಿದ್ದಾರೆ''. ಎಂಬ ಭಾವ ತಾಳುತ್ತಾರೆ. ಅಲ್ಲಿಗೆ ಸ್ವಲ್ಪ ಮಟ್ಟಿಗೆ ಭಾವೈಕ್ಯತೆಯ ಸಾಧನೆ ಆಗುತ್ತದೆ. 'ಜನಪದ ಕಲೆಗಳು ಮತ್ತು ಭಾವೈಕ್ಯತೆ' ಎಂಬ ಮಾತನ್ನು ನೋಡಬೇಕಾದ್ದು ಈ ದೃಷ್ಟಿಯಿಂದ.

ಒಟ್ಟಿನಲ್ಲಿ ಶ್ರೀ ಎಸ್.ಜಿ. ಸಿದ್ದರಾಮಯ್ಯನವರ ಈ ಕೃತಿ ಜಾನಪದವನ್ನು ಕುರಿತ ಹಲವಾರು ಅಂಶಗಳ ಬಗೆಗೆ ಸ್ವೋಪಜ್ಞ ದೃಷ್ಟಿಕೋನವನ್ನು ಮುಂದಿಡುವ ಕೃತಿ.

14. ಸೀಮೆ: ಸಂ. ಎಸ್.ಆರ್. ಅರುಣಕುಮಾರ್

ಇದು ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿಯ ವಿಜಯ ಕಾಲೇಜಿನ ಒಂಭತ್ತು ಮಂದಿ ವಿದ್ಯಾರ್ಥಿಗಳು ತಮಗೆ ಆಸಕ್ತಿ ಹುಟ್ಟಿಸಿದ ಜಾನಪದ ವಿಷಯವೊಂದರ ಬಗ್ಗೆ ಕ್ಷೇತ್ರಕಾರ್ಯ ಮಾಡಿ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಿ ಬರೆದಿರುವ ಲೇಖನಗಳ ಸಂಗ್ರಹ. ಇಬ್ಬರು ವಿದ್ಯಾರ್ಥಿಗಳು ಎರಡೆರಡು ವಿಷಯಗಳ ಬಗ್ಗೆಯೂ ಉಳಿದವರು ಒಂದೊಂದು ವಿಷಯದ ಬಗ್ಗೆಯೂ ಬರೆದ ಲೇಖನಗಳಲ್ಲಿದ್ದೂ ಒಟ್ಟು ಹನ್ನೊಂದು ಲೇಖನಗಳ ಸಂಗ್ರಹ ಇದಾಗಿದೆ. ಇದರ ಹಿಂದೆ ಗ್ರಂಥದ ಸಂಪಾದಕರಾದ ಅವರ ಅಧ್ಯಾಪಕರ ಮಾರ್ಗದರ್ಶನವಿದೆ ಎಂಬುದು ಸ್ವಯಂವೇದ್ಯ. ಅಂತೂ ಇದೊಂದು ಹೊಸ ಬಗೆಯ ಪ್ರಯೋಗ. ಎಳೆಯರಲ್ಲಿ ಗಂಭೀರ ಜಾನಪದಾಧ್ಯಯಶೀಲತೆಯನ್ನು ಪ್ರಚೋದಿಸುವ ಪ್ರಯತ್ನ.

'ಬಲ್ಲವರಲ್ಲಿ ಅಷ್ಟಮಿ'-ಇಲ್ಲಿನ ಮೊದಲ ಲೇಖನ. ಬಿಲ್ಲವರಲ್ಲಿ ಕೃಷ್ಣಜನ್ಮಾಷ್ಟಮಿ ಹೇಗೆ ಆಚರಿಸಲ್ಪಡುವುದೆಂಬುದರ ವಿವರವಿಲ್ಲಿದೆ. ವಿಶ್ಲೇಷಣೆ ಏನೂ ಇಲ್ಲ. ಪದವಿ ತರಗತಿಗಳ ವಿದಾರ್ಥಿಗಳಿಂದ ಅದನ್ನು ನಿರೀಕ್ಷಿಸುವುದೂ ಬೇಡ. ಆದರೆ ಒಂದೆರಡು ಗಂಭೀರ ತಪ್ಪುಗಳಿರುವುದನ್ನು ಸಂಪಾದಕರು ಗಮನಿಸಬೇಕಿತ್ತು. ಆರಂಭದಲ್ಲೇ-'ಅಷ್ಟಮಿ ಎಂದರೆ ಶ್ರೀ ಕೃಷ್ಣನ ಜನ್ಮದಿನವನ್ನು ಆಚರಿಸುವ ಒಂದು ಹಬ್ಬ. ಶ್ರೀ ಕೃಷ್ಣ ದೇವಕಿಯ ಎಂಟನೆಯ ಮಗನಾದುದರಿಂದ ಅಷ್ಟಮಿ ಎಂಬ ಹೆಸರು ಅಂಟಿಕೊಂಡಿರಬಹುದು.'-ಎಂದು ಈ ಪ್ರಬಂಧ ಬರೆದಿರುವ ವಿದ್ಯಾರ್ಥಿನಿ ಚಿತ್ರಾಕ್ಷಿ ಅಭಿಪ್ರಾಯಪಡುತ್ತಾರೆ. ಆದರೆ ಅಷ್ಟಮಿ ಎಂದರೆ ಪಕ್ಷದ ಎಂಟನೆಯ ದಿನವೆಂಬುದು ಪ್ರಸಿದ್ಧ ಸಂಗತಿ. ಕೃಷ್ಣ ಅಷ್ಟಮಿಯ ದಿನದಂದು ಹುಟ್ಟಿದ. ಅದು 'ಶ್ರೀಕಷ್ಣ ಜನ್ಮಾಷ್ಟಮಿ' ಅಥವಾ 'ಗೋಕುಲಾಷ್ಟಮಿ' ಎಂದು ಪ್ರಸಿದ್ಧವಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಬಿಲ್ಲವರಲ್ಲಿ ಈ ಉದ್ದ ಹೆಸರು ಮೊಟಕುಗೊಂಡು 'ಅಷ್ಟಮಿ ಹಬ್ಬ.' ಎಂದಷ್ಟೇ ಆಗಿ ಉಳಿದಿರಬಹುದು. ಸಂಪಾದಕರು ಇದನ್ನಷ್ಟು ಗಮನಿಸಬೇಕಿತ್ತು.

ಅದೇರೀತಿ ನಮ್ಮನ್ನು ವಿಚಲಿತರನ್ನಾಗಿ ಮಾಡುವ ಇನ್ನೊಂದು ಹೇಳಿಕೆ ಎಂದರೆ- 'ಅಷ್ಟಮಿಯ ಮರುದಿವಸದ ಆಚರಣೆಗೆ ದ್ವಾದಶಿ ಎನ್ನುತ್ತಾರೆ, ಎಂಬ ಮಾತು. (ಪುಟ.3) ಅಷ್ಟಮಿಯ ಮರುದಿನ ನವಮಿ. ಅದು ದ್ವಾದಶಿ ಎನಿಸಿಕೊಳ್ಳುವದು ಹೇಗೆ ಸಾಧ್ಯ? ಕ್ಷೇತ್ರ ಕಾರ್ಯದ ವೇಳೆ ಮಾಹಿತಿ ಸಂಗ್ರಹಿಸುವಲ್ಲಿ 'ಏನೋ ಲೋಪವಾಗಿರಬೇಕು.

'ಕದಿರು ಹಬ್ಬ'-ಎರಡನೆಯ ಲೇಖನ. ಗಣೇಶ ಕೊಲೆರಾಡಿ ಅವರದ್ದು ಹೊಸ ಬೆಳೆಯನ್ನು ಶುಭಮುಹೂರ್ತವೊಂದರಲ್ಲಿ ಮನೆಗೆ ತರುವ ಹಬ್ಬವೇ ಕದಿರು ಹಬ್ಬ. ಲೇಖಕರು ಮುಲ್ಕಿ ಸೀಮೆಯ ವಿವಿಧ ಜಾತಿಯವರಲ್ಲಿ ಈ ಕುರಿತ ನಂಬಿಕೆಗಳು, ಆಚರಣೆಯ ವೈಶಿಷ್ಟ್ಯಗಳು, ಗಾದೆಗಳು, ಹಾಡುಗಳು ಇರುವುದನ್ನೆಲ್ಲ ಸಂಗ್ರಹಿಸಿ

ಇಲ್ಲಿ ಕ್ರಮಬದ್ಧವಾಗಿ ಅದನ್ನು ಮಂಡಿಸಿದ್ದಾರೆ. ವಿಶ್ಲೇಷಣೆಯ ಪ್ರಯತ್ನವನ್ನೂ ಮಾಡಿದ್ದಾರೆ. ವಿಶ್ಲೇಷಣೆಯಲ್ಲಿ ಅಲ್ಲಲ್ಲಿ ತರ್ಕಹೀನತೆ ಕಂಡರೂ ಈ ವಯಸ್ಸಿಗೆ ಅದು ಸಹಜ.

ಕುಮಾರಿ ಮನಿಷಾ ಪರಪಾಡಿ ಅವರ 'ಆಟಿ ತಿಂಗಳು' ಇಲ್ಲಿನ ಮೂರನೆಯ ಲೇಖನ. 'ಬಂಟರ ಕುಲನಾಮಗಳು-ಒಂದು ಜಿಜ್ಞಾಸೆ'-ಎಂಬ ಒಂಭತ್ತನೆಯ ಲೇಖನವೂ ಇವರದ್ದೇ. ಆಷಾಢ ಮಾಸದಲ್ಲಿನ ಸಂಪ್ರದಾಯಗಳ ವಿವರಗಳು ಮೊದಲ ಲೇಖನದಲ್ಲಿವೆ. ತಾವು ಸಂಗ್ರಹಿಸಿದ ಮಾಹಿತಿಗಳನ್ನು ಕ್ರಮಬದ್ಧವಾಗಿ ವರ್ಗೀಕರಿಸಿಕೊಂಡು ಪ್ರಸ್ತುತಪಡಿಸಿದ್ದಾರೆ.ಇಲ್ಲಿ ಹೀಗೆ ಪ್ರಸ್ತುತಪಡಿಸುವಾಗಲೇ ಅಲ್ಲಲ್ಲಿ ಅದನ್ನು ವಿಶ್ಲೇಷಿಸಿದ್ದಾರೆ. ಆದರೆ ಒಟ್ಟಾರೆ ಲೇಖನದಲ್ಲಿ ವಿಶ್ಲೇಷಣೆ ಕಡಿಮೆ, ಮಾಹಿತಿ ಸಂಗ್ರಹವೇ ಹೆಚ್ಚು. ಹೀಗೆ ಸಂಗ್ರಹಿತವಾಗಿರುವ ಮಾಹಿತಿಯಾದರೂ ವರ್ಗೀಕೃತಗೊಂಡು ನಿರೂಪಿತವಾಗಿ ಉಪಯುಕ್ತವಾಗಿದೆ. ಬರವಣಿಗೆಯಲ್ಲಿ ಒಂದು ಶಿಸ್ತು, ತೂಕ ಇದೆ.

ಮುಂದಿನ ಲೇಖನ ವಿಠಲ ಹೆಜಮಾಡಿ ಅವರ 'ಆಶ್ಲೇಷ ಬಲಿ' ಎಂಬುದು. ಇದು ನಾಗನಿಗೆ ಪೂಜೆ ಮಾಡಿ (ಹಿಟ್ಟಿನ) ಬಲಿ ನೀಡುವ ಸಂಪ್ರದಾಯದ ಬಗೆಗಿನ ಲೇಖನ. ನಾಗಪೂಜೆಯು ಪ್ರಾರಂಭವಾದ ಬಗೆ, ಇತ್ಯಾದಿಗಳನ್ನು ಕುರಿತು ಹೇಳುವ ನಾಲ್ಕೆಂಟು ವಿಶ್ಲೇಷಣಾತ್ಮಕ ಮಾತುಗಳು ಇಲ್ಲಿವೆ.

ದ.ಕ. ಜಿಲ್ಲೆಯ ಪ್ರಸಿದ್ಧ 'ಕಂಬಳ'ವನ್ನು ಕುರಿತು ಇಲ್ಲಿ ವರಲಕ್ಷ್ಮಿ ಅವರ ಲೇಖನವಿದೆ. ಕಂಬಳದ ಹಿಂದಿನ ದಿನ, ಕಂಬಳದ ದಿನ, ಹಾಗೂ ಅದರ ಮರುದಿನ ಸಾಂಪ್ರದಾಯಿಕವಾಗಿ ಏನೇನು ನಡೆಯುತ್ತದೆ ಎಂಬುದರ ವಿವರವಿದೆ. ಜೊತೆಗೆ, ಈಗ ಈ ಯಾವ ಸಾಂಪ್ರದಾಯಿಕತೆಯೂ ಇಲ್ಲದಿರುವುದನ್ನು ದಾಖಲಿಸಲಾಗಿದೆ.

ಈ ಪುಸ್ತಕದಲ್ಲಿರುವ ಇತರ ಲೇಖನಗಳೆಂದರೆ-'ಕೊರಗ ಜನಾಂಗದ ಜೀವನ ಸಂಬಂಧೀ ಸಂಸ್ಕಾರಗಳು' (ಸುಷಮಾ, ಎರ್ಮಾಳು), 'ಮುಸ್ಲಿಂ ಜನಾಂಗದ ಜೀವನ ಸಂಬಂಧೀ ಸಂಸ್ಕಾರಗಳು (ಆಶ್ರಾ, ಎರ್ಮಾಳು),' 'ಮುಸ್ಲಿಂ ಹಬ್ಬಗಳು (ಆಶ್ರಾ),' 'ಬಂಟರ ಕುಲನಾಮಗಳು-ಒಂದು ಜಿಜ್ಞಾಸೆ' (ಮನಿಷಾ), 'ಸಂಪ್ರದಾಯ ಗೀತೆಗಳು' (ನಟರಾಜ, ಅಂಕಿನಕಟ್ಟೆ), 'ಜನಪದ ಔಷಧೀಯ ಸಸ್ಯಗಳು, (ದೀಪಿಕಾ). ಇದುವರೆಗೆ ಕೆಲವು ಲೇಖನಗಳ ಬಗೆಗೆ ಹೇಳಿರುವ ಮಾತುಗಳನ್ನೇ ಈ ಲೇಖನಗಳ ಬಗ್ಗೂ ಹೇಳಬಹುದು. ಎಲ್ಲವೂ ಮುಖ್ಯವಾಗಿ ಮಾಹಿತಿ ನೀಡುವ ಲೇಖನಗಳು. ಆದರೆ ಪ್ರಬಂಧವನ್ನು ಒಪ್ಪವಾಗಿ ಬರೆಯಲಾಗಿದೆ.

ಕಾಲೇಜು ವಿದ್ಯಾರ್ಥಿಗಳಿಗೆ ಇಂಥ ಕೆಲಸ ಮಾಡಲು ಹಚ್ಚಿ, ಅದನ್ನು ಬೆಳಕಿಗೆ ತಂದ ಅಧ್ಯಾಪಕರು ಅಭಿನಂದನಾರ್ಹರು. ಇಂಥ ಕೆಲಸದಿಂದ ಹುಡುಗರಲ್ಲಿ ಒಂದು ಅಂತರ್ದೃಷ್ಟಿ ಬೆಳೆಯುವುದಲ್ಲದೆ, ಸಂಶೋಧಕರಿಗೆ ಬೇಕಾದ ಮಾಹಿತಿಯೂ ಒಂದೆಡೆ ಸಂಗ್ರಹವಾಗುತ್ತದೆ.

15. ಜಾತ್ರೆಗಳು ಒಂದು ಜಾನಪದೀಯ ಅಧ್ಯಯನ: ಡಾ. ಚಂದ್ರಶೇಖರ ದಾಮ್ಲೆ

ಇದೊಂದು ವಿಶಿಷ್ಟ ಬಗೆಯ ಕೃತಿ. ಜಾತ್ರೆಗಳ ಆಚರಣೆ, ಪೂಜೆ, ಸಂಪ್ರದಾಯಗಳನ್ನು ಅಧ್ಯಯನ ಮಾಡುವುದರ ಬದಲು ಜಾತ್ರೆಗಳು ಆಚರಿಸಲ್ಪಡುವ ರೀತಿಯಲ್ಲಿ ಹಾಗೂ ಸಂಬಂಧಿತ ಸಾಮಾಜಿಕ ಸಂಗತಿಗಳಲ್ಲಿ ಕಾಲಕಾಲಕ್ಕೆ ಆಗಿರುವ ಬದಲಾವಣೆಯನ್ನು ಅಧ್ಯಯನಿಸುವುದು ಇಲ್ಲಿನ ಗುರಿ. ಆರಂಭದ ಪೀಠಿಕಾಧ್ಯಾಯದಲ್ಲಿಯೇ ಲೇಖಕರು ಹೇಳುವ ಮಾತುಗಳು ಅವರು ಸರಿಯಾದ ದೃಷ್ಟಿಯನ್ನಿಟ್ಟುಕೊಂಡು ಹೊರಟಿದ್ದಾರೆನ್ನುವುದನ್ನು ಸೂಚಿಸುತ್ತದೆ.

''ಜಾತ್ರೆಗಳು....ಜನರ ಸಾಮಾಜಿಕ ಸಂಬಂಧಗಳಿಗೆ ಹಾಗೂ ಶ್ರೇಣೀಕೃತ ಜಾತಿ ವ್ಯವಸ್ಥೆಗೆ ಒಂದು ನಿರಂತರತೆಯನ್ನು ಕೊಡುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಜಾತ್ರೆಯ ಕುರಿತಾದ ಅಧ್ಯಯನವು ಜಾನಪದ ಜವನದಲ್ಲಿದ್ದ ಅನೇಕ ಹೊಂದಿಕೆ-ಹೊಂದಾಣಿಕೆಗಳ, ಹಕ್ಕು-ಬಾಧ್ಯತೆಗಳ ಹಾಗೂ ಕರ್ತವ್ಯ ಜವಾಬ್ದಾರಿಗಳ ಕಾರ್ಯಾತ್ಮಕತೆಯ ವಿವರಣೆಗಳನ್ನು ನೀಡುತ್ತದೆ''. (ಪು. 3)

ಈ ಅಧ್ಯಯನದ ವ್ಯಾಪ್ತಿ ದ.ಕ. ಜಿಲ್ಲೆಯ ಸುಳ್ಯ ಸೀಮೆಯ ಪರಿಸರದ ಏಳು ಜಾತ್ರೆಗಳಿಗೆ ಮುಖ್ಯವಾಗಿ ಸಂಬಂಧಿಸಿದೆ. ಆದ್ದರಿಂದ ಪೀಠಿಕೆಯ ನಂತರ ಈ ಏಳೂ ಜಾತ್ರೆಗಳ ಬಗ್ಗೆ ಪ್ರತ್ಯೇಕ ಲೇಖನಗಳಿದ್ದು ಕೊನೆಯಲ್ಲಿ 'ಜಾತ್ರೆಗಳ ಸೈದ್ಧಾಂತಿಕ' ವಿಶ್ಲೇಷಣೆ ಮಾಡಲಾಗಿದೆ.

ಡಾ. ದಾಮ್ಲೆಯವರು ನಿಯತ್ತಿನಿಂದ ಕ್ಷೇತ್ರಕಾರ್ಯ ಮಾಡಿ ಆಯಾ ಜಾತ್ರೆಯ ಎಲ್ಲ ವಿವರಗಳನ್ನೂ ಸಂಗ್ರಹಿಸಲು ಪ್ರಯತ್ನಿಸಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ವಿಶ್ಲೇಷಣೆಯಲ್ಲಿ ಸಮಾಜಶಾಸ್ತ್ರಜ್ಞನ ಒಳನೋಟ ಚೆನ್ನಾಗಿಯೇ ಕೆಲಸ ಮಾಡಿ ಸರಿಯಾದ ಅಂಶಗಳನ್ನೇ ಗುರುತಿಸುವಲ್ಲಿ ಅನೇಕ ವೇಳೆ ಯಶಸ್ವಿಯಾಗಿದೆ. ಇದು-ಅನ್ಯ ವಿದ್ವಾಂಸರು ಈ ವಿಚಾರಗಳಲ್ಲಿ ಕಂಡುಕೊಂಡ ಅಂಶಗಳಿಗೆ ಹೊಸ ಉದಾಹರಣೆಗಳೊಂದಿಗೆ ತಾಳೆಯಾಗುತ್ತದೆ. ಉದಾಹರಣೆಗೆ ಅವರ ಈ ಮಾತುಗಳನ್ನು ನೋಡಬಹುದು.

''ಇನ್ನು ಗಮನಿಸಬೇಕಾದ ಒಂದು ಅಂಶವೆಂದರೆ ಗೌಡ ಜನಾಂಗದ ಮುಕ್ತೇಸರಿಕೆ ಹಾಗೂ ಬಂಟ ಜನಾಂಗದವರು ಮುಖ್ಯ ಪೂಜಾರಿಯಾಗಿರುವ ಕುಕ್ಕನ್ನೂರು ಉಳ್ಳಾಕುಲು ದೈವ, ಮಿತ್ತೂರು ನಾಯರ್ ದೈವ, ಹಾಗೂ ಬಜಪ್ಪಿಲದ ಇಳ್ಳಾಕುಲು ದೈವದ ಭಂಡಾರಿಗಳು ದೇವಸ್ಥಾನದಿಂದಲೇ ಸ್ವಾಗತಿಸಲ್ಪಟ್ಟು ದೇವಸ್ಥಾನದ ಒಳಗೆ ಕೂಡ ಒಂದು ಮರ್ಯಾದೆ ಪಡೆಯುತ್ತವೆ. ಆದರೆ ಅಚಿಲರು ವೇಷ ಕಟ್ಟುವ ಕಲ್ಕುಟಿ ದೈವದ ಭಂಡಾರಿಗಳು ತಮ್ಮಷ್ಟಕ್ಕೇ ಬಂದು ದೇವಸ್ಥಾನದ ಹೊರಾಂಗಣದ ಹೊರಗಿರುವ ಕಟ್ಟೆಯ ಬಳಿ ಸ್ಥಾಪನೆಯಾಗುತ್ತವೆ. ಅಲ್ಲೇ ವೇಷ ಹಾಕಿ ಕುಣಿದು ದೇವರು ಹೊರಗೆ ಬಂದಾಗ ಇದಿರ್ಗೊಂಡು ತಮ್ಮ ಸೇವೆ ಸಲ್ಲಿಸಿ ಹಿಂತೆರಳುತ್ತವೆ. ಅದಕ್ಕಾಗಿ ಅವರಿಗೆ ಸಿಗುವ ಸಂಭಾವನೆಯೂ ಅತ್ಯಲ್ಪವೇ. ಈ ವ್ಯತ್ಯಾಸವು ಮೇಲ್ಜಾತಿಯವರು, ಮಧ್ಯಮ

ಜಾತಿಯವರು ಹಾಗೂ ಅಸ್ಪೃಶ್ಯರು ಹೇಗೆ ಅಸಮಾನವಾಗಿ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆಂಬುದನ್ನು ಸೂಚಿಸುತ್ತದೆ. ಅಲ್ಲದೆ ಜಾತ್ರೆಯ ಆಚರಣೆಯ ಜಾತಿಭೇದದ ಸ್ಥಿರೀಕರಣಕ್ಕೆ ಹೇಗೆ ಸಹಾಯಕವಾಗಿತ್ತೆಂಬುದೂ ತಿಳಿಯುತ್ತದೆ. ದೇವಸ್ಥಾನ ಹಾಗೂ ದೇವಸ್ಥಾನದ ಮುಕ್ತೇಸರರ ಮಡುವೆ ವೈಮನಸ್ಸು ಉಂಟಾದಾಗ ಭಂಡಾ ತಾರದಿರುವ ಧೈರ್ಯವನ್ನು ಮಧ್ಯಮ ಜಾತಿಗಳವರು ತೋರಿದ್ದಾರೆ. ಆದರೆ ಕಾನತ್ತಿಲ ರುದ್ರಾಂಡಿ ಹಾಗೂ ನಾವೂರಿನ ಕಲ್ಕುಡ ದೈವಗಳ ನಿರ್ವಾಹಕರಾದ ಪರವರು ಮತ್ತು ಅಚಿಲರು ಇಂಥ ಧೈರ್ಯ ತೋರಿದ್ದಿಲ್ಲ. ಇದರಿಂದ ಜಾತ್ರೆಯ ಕ್ರಿಯಾತ್ಮಕತೆಯ ಜಾತಿ, ವರ್ಗಗಳ ನಡುವಿನ ಸಂಬಂಧಗಳ ಪ್ರತಿಫಲನವಾಗಿರುತ್ತದೆಂಬುದು ಸ್ಪಷ್ಟವಾಗಿ ತೋರಿಬರುತ್ತದೆ.'' (ಪು. 23, 24)

ಹೀಗೆ ಮುಖ್ಯಾಂಶಗಳನ್ನು ಸರಿಯಾಗಿ ಗ್ರಹಿಸುತ್ತಾ ಸಾಗುವ ದಾಮ್ಲೆಯವರ ಅಧ್ಯಯನವು ಜಾತ್ರೆಯಲ್ಲಿ ಜನಾಕರ್ಷಣೆಯ ದೃಷ್ಟಿಯಿಂದಲೇ ಹೊಸ ಅಂಶಗಳು ಸೇರಿದ್ದನ್ನೂ ಗುರುತಿಸುತ್ತದೆ. ಕಾಯರ್ತೋಡಿ ಜಾತ್ರೆ ಬಗ್ಗೆ ಹೇಳುತ್ತಾ-'ಆರಂಭದ ವರ್ಷಗಳಲ್ಲಿ ಎರಡೇ ದಿನ ಇದ್ದ ಜಾತ್ರೆಯು ಈಗ ಮೂರು ದಿನ ಜರುಗುತ್ತದೆ. ಅಲ್ಲದೆ ಇತ್ತೀಚೆಗೆ ಜನಾಕರ್ಷಣೆಯನ್ನು ಗಮನದಲ್ಲಿರಿಸಿಕೊಂಡು ನೃತ್ಯಬಲಿಯನ್ನೂ ಜಾತ್ರೆಯ ಎರಡನೇ ದಿನ ರಾತ್ರಿ ಏರ್ಪಡಿಸಲಾಗುತ್ತದೆ. ಈಚೆಗೆ ಕೆಲವು ವರ್ಷಗಳಿಂದ ಸಮೀಪದ ಮುಖ್ಯ ರಸ್ತೆಯಲ್ಲಿರುವ ವಿಷ್ಣು ಸರ್ಕಲ್ಲಿನ ಕಟ್ಟೆಯವರೆಗೆ ಪಟ್ಟಣ ಸವಾರಿ ಪ್ರಾರಂಭವಾಗಿದ್ದು ಇದು ಜನರನ್ನು ಸೆಳೆಯಲು ಸಹಕಾರಿಯಾಗಿದೆ.'' ಎಂಬಂಥ ಅಂಶಗಳನ್ನೂ, ಅದರ ಹಿಂದಿನ ಉದ್ದೇಶಗಳನ್ನೂ ಗುರುತಿಸುವುದು ಮಹತ್ವಪೂರ್ಣವಾಗಿದೆ. ಪುಸ್ತಕದ ತುಂಬಾ ಇಂತಹ ಅನೇಕ ಒಳನೋಟಗಳನ್ನು ಕಾಣಬಹುದು.

ಕೆಲವಡೆ ಸ್ವಾರಸ್ಯಕರ ವಿಶ್ಲೇಷಣೆಗಳು ಲೇಖಕರ ಚಿಂತನೆಯಿಂದ ತಪ್ಪಿಸಿಕೊಂಡಿರುವುದೂ ಉಂಟು. ಉದಾ.ಗೆ. ಪು. 30ರಲ್ಲಿ ಒಂದು ಭೂತದ ಬಗೆಗಿನ ಐತಿಹ್ಯವನ್ನು ಹೇಳುತ್ತಾರೆ.-'ಲಿಂಗವಂತ ವ್ಯಾಪಾರಿಯೊಬ್ಬ ನಡೆಯುತ್ತಾ ಬಂದು ವಿಶ್ರಾಂತಿಗಾಗಿ, ಭೂತಗಳ ತಾಣವೊಂದರಲ್ಲಿ ಮಲಗಿದನಂತೆ. ಆತ ಎದ್ದಾಗ ಅಲ್ಲಿನ ಭೂತಗಳು ಅವನಿಂದ ಸುಂಕ ಕೇಳುತ್ತವೆ. ಅದನ್ನು ಕೊಡಲಾಗದಿದ್ದರೆ ಅವನು ಕಟ್ಟಿಕೊಂಡಿರುವ ಲಿಂಗವನ್ನು ಕೊಡುವಂತೆ ಕೇಳುತ್ತವೆ. ಅವನು ಒಪ್ಪದಿದ್ದಾಗ ಅವು ಅವನ ಲಿಂಗವನ್ನೆಳೆದು ಅವನನ್ನು ಮಾಯ ಮಾಡಿದವು (ಕೊಂದು ಹಾಕಿದವೆಂದರ್ಥ) ಆತನ ಪ್ರೇತಾತ್ಮವೇ ಒಂದು ಭೂತವಾಯಿತು.'-ಎಂಬುದೇ ಆ ಕತೆ. ಇದನ್ನು ಹೇಳುವ ದಾಮ್ಲೆಯವರು ಇದು ಒಂದು ಜಾತೀಯ ಸಂಘರ್ಷದ ಕತೆಯಾಗಿರಬಹುದೆಂಬುದರತ್ತ ಗಮನ ಹಾಯಿಸುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದುರ್ಬಲವಾಗಿರುವ ಲಿಂಗವಂತ ಜನಾಂಗವನ್ನು ಹಾಸ್ಯಮಾಡಲು ಅಲ್ಲಿಯೇ ಇರುವವರಿಗೆ ಮಾತ್ರ ಸಾಧ್ಯ. ಹೊರಗಡೆ ಹಾಗೆ ಮಾಡಿ ಜಯಿಸಿಕೊಳ್ಳಲಾಗದು. ಇದು-ಮನಸ್ಸು ತನ್ನನ್ನು ತಾನೇ ತೃಪ್ತಿಪಡಿಸಿಕೊಳ್ಳುವ ಒಂದು ವಿಧಾನವೂ ಹೌದು. ಅಥವಾ ಯಾವುದೋ ಜಗಳದಲ್ಲಿ ಹೊರಗಿನಿಂದ ಬಂದ ವಿಜಾತೀಯನೊಬ್ಬನನ್ನು ಸ್ಥಳೀಯರು ಕೊಂದ ಕತೆಯೂ ಇದು ಆಗಿರಬಹುದು.

ಅಪರೂಪಕ್ಕೆ ಒಂದೊಂದೆಡೆ ವಿರೋಧಾಭಾಸದ ಮಾತುಗಳು ಒಟ್ಟಿಗೇ ಕಂಡುಬರುತ್ತವೆ. ಉದಾಹರಣೆಗೆ, ತೋಡಿಕಾನ ಜಾತ್ರೆಯ ಬಗ್ಗೆ ವಿಶ್ಲೇಷಣೆ ಮಾಡುವಾಗ ಅಲ್ಲಿ "ಭೂತಗಳ ನುಡಿಕಟ್ಟಿನಲ್ಲಿ ಇಂತಿಷ್ಟು ಒಕ್ಲು ಎಂಬ ಉಲ್ಲೇಖ ಬರುವುದಿಲ್ಲ. ಆದರೆ ಬೇರೆ ಕಡೆ ಅಂತಹ ಉಲ್ಲೇಖ ಬರುತ್ತದೆ" ಎನ್ನುತ್ತಾರೆ. ಇದಕ್ಕೆ ಕಾರಣ ಹುಡುಕುತ್ತಾ-ಇದು ಸೀಮೆ ದೇವಸ್ಥಾನವಾಗಿದ್ದು ಹಲವು ಬಲ್ಲಾಳರಿಗೆ ಸಂಬಂಧಿಸಿದ್ದರಿಂದ ಪ್ರತ್ಯೇಕವಾಗಿ ಒಕ್ಲುಗಳ ಉಲ್ಲೇಖವು ಭೂತಗಳ ನುಡಿಕಟ್ಟಿನಲ್ಲಿ ಬಾರದಿರುವ ಸಾಧ್ಯತೆ ಇದೆ ಎನ್ನುತ್ತಾರೆ. (ಪು. 102) ಎರಡೇ ವಾಕ್ಯಗಳ ನಂತರ- "ಇಲ್ಲಿ ಬಲ್ಲಾಳರ ಪ್ರತಿನಿಧಿಯಾಗಿ ಅಂದಿನಿಂದಲೂ ಸ್ಥಳೀಯ ಗೌಡ ಜಾತಿಯ ಗಣ್ಯ ಮನೆತನವಾದ ಉಳುವಾಡಿನವರು ದೇವಸ್ಥಾನದ ಆಡಳಿತ ನಿರ್ವಹಣೆ ಮಾಡುತ್ತಿದ್ದರು. ಬಲ್ಲಾಳದ ವಂಶ ನಿಸ್ಸಂತತಿಯಾಗಿ ಅಳಿದ ಬಳಿಕ ಉಳುವಾಡಿನವರೇ ಮುಕ್ತೇಸರರಾದರು" ಎನ್ನುತ್ತಾರೆ. (ಪು. 103) ಹಲವು ಬಲ್ಲಾಳರ ಆಳ್ವಿಕೆಗೆ ಒಳಪಟ್ಟಿತ್ತು ಎಂದಮೇಲೆ ಅವರೆಲ್ಲಾ ಒಟ್ಟಿಗೇ ನಿಸ್ಸಂತತಿಯಾದರೆ? ಬಲ್ಲಾಳರು ನಿಸ್ಸಂತತಿಯಾದ್ದರಿಂದ ಆಡಳಿತ ಇನ್ನೊಬ್ಬರ ಕೈಗೋ ಹೋಯಿತೆಂಬುದು ಸಮರ್ಪಕ ಊಹೆ ಆಗಿರುವುದಾದರೆ, ಹಲವು ಬಲ್ಲಾಳರು ಒಡೆಯರಾಗಿರುವುದು ಸಾಧ್ಯವಿಲ್ಲ ಅಲ್ಲವೆ? ಅಥವಾ ಹಲವು ಬಲ್ಲಾಳರ ಒಡೆತನದಲ್ಲಿ ಈ ದೇವಸ್ಥಾನವಿದ್ದು ಅನಂತರ ಉಳುವಾರಿನವರೇ ಮುಕ್ತೇಸರರಾದರೆಂದರೆ ಅದಕ್ಕೆ ಬೇರೇನೋ ಕಾರಣವಿರಬೇಕು, ಬಲ್ಲಾಳರ ನಿಸ್ಸಂತಾನತೆ ಆಗಿರಲಿಕ್ಕಿಲ್ಲ. ಇಲ್ಲಿ ಸ್ಪಷ್ಟೀಕರಣದ ಒಂದೆರಡು ವಾಕ್ಯಗಳು ಅಗತ್ಯವಿದ್ದವು.

ಆದರೆ ಈ ತೆರನ ದೋಷಗಳ ಸಂಖ್ಯೆ ಈ ಬರಹದಲ್ಲಿ ಕಡಮೆ. ಕೊನೆಯ ಅಧ್ಯಾಯವಾದ-'ಜಾತ್ರೆ-ಒಂದು ಸೈದ್ಧಾಂತಿಕ ವಿಶ್ಲೇಷಣೆ, ತುಂಬ ಮುಖ್ಯವಾದ ಅಧ್ಯಾಯ. ಅದುವರೆಗೆ ನಿರೂಪಿಸಿದ, ಚರ್ಚಿಸಿದ ವಿವರಗಳ ಆಧಾರದ ಮೇಲೆ ಜಾತ್ರೆಯ ಪ್ರಕ್ರಿಯೆಯಲ್ಲಿ ಆಗಿರುವ ಬದಲಾವಣೆಗಳಿಗೆ ಸಾಮಾಜಿಕ ಕಾರಣಗಳನ್ನು ಹುಡುಕುತ್ತಾ ಜಾತ್ರೆಯ ಸ್ವರೂಪವನ್ನು ವಿಶ್ಲೇಷಿಸುತ್ತಾರೆ. ಲೇಖಕರು. ಜಾತ್ರೆಯ ಸಿದ್ಧತೆಯಲ್ಲಿ ಸಾಮುದಾಯಿಕತೆ ಮರೆಯಾಗಿ ಕೂಲಿ ಕೊಟ್ಟು ಕೆಲಸ ಮಾಡಿಸಿಕೊಳ್ಳುವ ಪದ್ಧತಿ ಬಂದದ್ದನ್ನು ಸರಿಯಾಗಿಯೇ ಕಂಡುಹಿಡಿದಿದ್ದಾರೆ. (ಪು. 137) ಅದೇರೀತಿ ಜಾತೀಯ ಕಟ್ಟುಪಾಡುಗಳು ಸಡಿಲಗೊಂಡು ಸಮಾನತೆಗೆ ಅವಕಾಶ ಮಾಡಿಕೊಟ್ಟಿರುವ ದೇವಸ್ಥಾನಗಳಲ್ಲಿ ಅಭಿವೃದ್ಧಿಕಾರ್ಯ ಶೀಘ್ರವಾಗಿ ಆಗಿರುವುದನ್ನು ಗುರುತಿಸಿದ್ದಾರೆ (ಪು. 143).

ಒಟ್ಟಿನಲ್ಲಿ ಇದೊಂದು ತೆರೆದ ಮನಸ್ಸಿನ ನಿಷ್ಠ ಅಧ್ಯಯನ. ಸರಿಯಾದ ದಾರಿಯಲ್ಲಿ ಸಾಗಿದಂಥ, ಸಾಕಷ್ಟು ಪೂರ್ವಸಿದ್ಧತೆಯೊಂದಿಗೆ ನಡೆದಂಥ ಒಂದು ಸಂಶೋಧನೆ. ಅಲ್ಲಲ್ಲಿ, ತೀರಾ ಕಡಮೆ ಸಂಖ್ಯೆಯಲ್ಲಿ ಕೆಲವು ತಪ್ಪು ವ್ಯಾಖ್ಯಾನಗಳು ಕಂಡುಬರುತ್ತವೆ. ಗಮನಿಸಬಹುದಾದ ಕೆಲವು ಸಂಗತಿಗಳು ಕಣ್ತಪ್ಪಿಸಿಕೊಂಡಿವೆ. ಆದರೆ ಯಾವನೇ ಲೇಖಕ ಬರೆದರೂ ಅಂಥ ಕೊರೆಗಳು ಉಳಿಯುವಂಥವೇ. ಒಂದಲ್ಲದಿದ್ದರೆ ಮತ್ತೊಂದು ಬಗೆಯ ತಪ್ಪು ಇಂಥ ಗಂಭೀರ, ತೂಕದ ಬರವಣಿಗೆಯಲ್ಲಿ ಉಳಿಯುತ್ತದೆ. ಇದಕ್ಕೆ

ಕಾರಣ ಲೇಖಕರ ಅಜ್ಞಾನವಲ್ಲ, ಬದಲಾಗಿ ದೃಷ್ಟಿಕೋನದ ಭಿನ್ನತೆ ಇರಬಹುದು, ಅಥವಾ ಮಾಹಿತಿ ಪೂರೈಕೆಯ ಕೊರತೆ ಇರಬಹುದು. ಹಾಗೆ ಸರ್ವ ಸಂಪೂರ್ಣ ಸಮಗ್ರ ಬರವಣಿಗೆ ಕೊಡುವುದು ಒಬ್ಬ ಲೇಖಕನಿಗೇ ಸಾಧ್ಯ ಎನ್ನುವಂತಿದ್ದರೆ ಪ್ರಪಂಚದಲ್ಲಿ ಇಷ್ಟೊಂದು ಮಂದಿ ಲೇಖಕ ಸಂಶೋಧಕರ ಅಗತ್ಯವೇ ಇರುತ್ತಿರಲಿಲ್ಲ.

ಒಂದು ಪ್ರಾಮಾಣಿಕ, ಗಂಭೀರ ಅಧ್ಯಯನವನ್ನು ಕೈಗೊಂಡು ಆ ವಿಷಯ ಸಂಬಂಧವಾದ ತಿಳಿವಳಿಕೆಗೆ ಬೆಲೆಯುಳ್ಳ ಮೂಲಾಂಶಗಳನ್ನು ಸೇರಿಸಿದ್ದಕ್ಕಾಗಿ ಲೇಖಕರೂ, ಇದಕ್ಕೆ ಇಂಬುಕೊಟ್ಟು ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದವರೂ ಅಭಿನಂದನಾರ್ಹರಾಗುತ್ತಾರೆ.

16. ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜನಪದ: ಡಾ. ಎಂ.ಜಿ. ಈಶ್ವರಪ್ಪ

ಈ ಉಪಯುಕ್ತ ಗ್ರಂಥವು ಡಾ. ಎಂ.ಜಿ. ಈಶ್ವರಪ್ಪನವರ ಅದೇ ಹೆಸರಿನ ಪಿ.ಎಚ್.ಡಿ. ನಿಬಂಧವಾಗಿದೆ. ಕನ್ನಡದಲ್ಲಿ ಬಹುಶಃ ಮೊದಲಬಾರಿಗೆ ವ್ಯವಸಾಯ ಜಾನಪದವನ್ನು ಕುರಿತ ಅತಿ ವಿವರವಾದ ಗಂಭೀರ ಅಧ್ಯಯನ ಇಲ್ಲಿ ನಡೆದಿದೆ. ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ಈ ಅಧ್ಯಯನವಿದ್ದರೂ ಕೂಡ ಕನಿಷ್ಠ ಇದರ ಅರ್ಧಭಾಗ ಇಡೀ ಕರ್ನಾಟಕಕ್ಕೆ, ಅದರಲ್ಲೂ ಬಯಲುಸೀಮೆಯ ಭಾಗಕ್ಕೆ ಅನ್ವಯವಾಗುವಂತೆ ಮೊದಲಿನೆರಡು ಅಧ್ಯಾಯಗಳಾದ 'ವ್ಯವಸಾಯದ ಉಗಮ ಮತ್ತು ಬೆಳವಣಿಗೆ' ಹಾಗೂ 'ಕರ್ನಾಟಕದಲ್ಲಿ ವ್ಯವಸಾಯ ಸಂಬಂಧಿ ಉಲ್ಲೇಖಗಳು ಮತ್ತು ಗ್ರಂಥಗಳು'-ಒಂದು ಜಿಲ್ಲೆಗೆ ಸೀಮಿತವಾದದ್ದಾಗಿಲ್ಲ. (ಅಷ್ಟೇಕೆ ಮುಂದೆ ಯಾರಾದರೂ ಬೇರೆ ಜಿಲ್ಲೆಗೆ ಸಂಬಂಧಿಸಿದಂತೆ ವ್ಯವಸಾಯ ಜಾನಪದದಲ್ಲಿ ಪಿ.ಎಚ್.ಡಿ. ಮಾಡುವವರು ಈ ಎರಡು ಅಧ್ಯಾಯಗಳ ವಿಷಯ ಕುರಿತಂತೆ ಮೂಲವನ್ನು ನೋಡುವ ಗೋಜಿಗೇ ಹೋಗದೇ ನೇರವಾಗಿ ಇಲ್ಲಿಂದಲೇ ವಿಷಯವನ್ನು ಎತ್ತಿ ಔಚಿತ್ಯಪೂರ್ಣವಾಗಿ ವಿಷಯ ಸಂಗ್ರಹ ಮತ್ತು ಮಂಡನೆ ಮಾಡಿ ಉಪಕರಿಸಿದ್ದಾರೆ ಲೇಖಕರು.)

ಒಟ್ಟು ಒಂಭತ್ತು ಅಧ್ಯಾಯಗಳಿರುವ ಈ ನಿಬಂಧದ ಮೊದಲ ಮತ್ತು ಕೊನೆಯ ಅಧ್ಯಾಯಗಳು ಯಥಾವಿಧಿಯಂತೆ ಪೀಠಿಕೆ ಮತ್ತು ಉಪಸಂಹಾರಗಳಾಗಿವೆ. ಎರಡನೆಯ ಅಧ್ಯಾಯದಲ್ಲಿ ಈ ಭೂಮಿಯಲ್ಲಿ ವ್ಯವಸಾಯದ ಉಗಮ ಮತ್ತು ಬೆಳವಣಿಗೆ ಎಂದಿನಿಂದ ಮತ್ತು ಹೇಗೆ ಆಯಿತು ಎಂಬ ಬಗ್ಗೆ ದೀರ್ಘ ಚರ್ಚೆ ನಡೆಸಿದ್ದಾರೆ. ಮಾನವಶಾಸ್ತ್ರ, ಪ್ರಾಕ್ತನಶಾಸ್ತ್ರ, ವೇದಾದಿ ಪ್ರಾಚೀನ ಗ್ರಂಥಗಳನ್ನು ಈ ದೃಷ್ಟಿಯಿಂದ ವಿವೇಚಿಸಿರುವ ವಿದ್ವಾಂಸರ ಹೆಗಲೇರಿ ನಿಂತು ನೋಡಿ, ಈ ವಿಷಯಕ್ಕೆ ಸಂಬಂಧಿಸಿದಂತೆ ಅವರು ನೀಡಿರುವ ಆಧಾರಗಳನ್ನು, ತಲುಪಿರುವ ತೀರ್ಮಾನಗಳನ್ನೂ ಸಂಗ್ರಹಿಸಿ, ತೂಗಿ ನೋಡಿದ್ದಾರೆ. ಈ ಅಧ್ಯಾಯ ಹಾಗೂ ಮುಂದಿನ ಅಧ್ಯಾಯದಲ್ಲಿ ಇವರು ಮಾಡಿರುವ ಕೆಲಸ ಒಬ್ಬ ಸಂಗ್ರಾಹಕ ಹಾಗೂ ಸಂಶ್ಲೇಷಕನದ್ದೇ ಆದರೂ (ಬೇರೆ ಯಾರೇ ಆದರೂ ಕೂಡಾ ಅದಕ್ಕಿಂತ ಭಿನ್ನವಾದ ಕೆಲಸ ಮಾಡುವುದು ಕಷ್ಟ)

ಅದು ನಿಬಂಧದ ದೃಷ್ಟಿಯಿಂದ ಸಾಕಷ್ಟು ಎಚ್ಚರದಿಂದ ಮಾಡಿರುವ ಉದ್ದಿಶ್ಯಪೂರ್ವಕವಾದ ತಳಪಾಯ ನಿರ್ಮಾಣಕಾರ್ಯವಾಗಿದೆ.

ಇದರ ನಂತರದ ಅಧ್ಯಾಯದಲ್ಲಿ 'ಕರ್ನಾಟಕದಲ್ಲಿ ವ್ಯವಸಾಯ ಸಂಬಂಧಿ ಉಲ್ಲೇಖಗಳು ಹಾಗೂ ಗ್ರಂಥಗಳ'ನ್ನು ಕುರಿತು ಐವತ್ತು ಪುಟಗಳಿಗೂ ಮೀರಿದ ದೀರ್ಘವಾದ ವಿವೇಚನೆ ಇದೆ. ಕನ್ನಡ ಶಾಸನಗಳಲ್ಲಿ, ಸಾಹಿತ್ಯದಲ್ಲಿ ವ್ಯವಸಾಯ, ಪಶುಪಾಲನೆ ಸಂಬಂಧಿಯಾದ ಏನೆಲ್ಲ ಉಲ್ಲೇಖಗಳು ಸಿಗುತ್ತವೆ ಎಂಬುದನ್ನು ಸಂಗ್ರಹಿಸಿದ್ದಾರೆ. ಹೀಗೆ ಸಂಗ್ರಹಿಸಿ ಮಂಡಿಸುವಾಗಲೇ ಅಗತ್ಯವಾದಲ್ಲೆಲ್ಲ ತಮ್ಮ ಸ್ವಂತ ವಿವೇಚನೆಯನ್ನು ಮುಂದಿಡುತ್ತಾರೆ. ಕಾಡಕ್ಕಿ ಎಂದರೆ ಬಿದಿರಕ್ಕಿಯೇ ಎಂದು ನಿರ್ಣಯಿಸುವಾಗ (ಪು. 55) 'ಕುಮ್ಮರಿ' ಶಬ್ದದ ಅರ್ಥವನ್ನು ನಿರ್ಣಯಿಸುವಾಗ (ಪು. 57), 'ಗಿಡು' ಎಂದರೆ 'ಕಾಡು' ಎಂದೂ ಅರ್ಥ ಎನ್ನುವಾಗ (ಪು. 75) ಇಂಥ ಹಲವು ಸಂದರ್ಭಗಳಲ್ಲಿ ಲೇಖಕರ ಸಂಶೋಧನಾ ದೃಷ್ಟಿ ಚೆನ್ನಾಗಿ ಕೆಲಸ ಮಾಡಿದೆ. ಸಹಜವಾಗಿಯೇ ಕೆಲವೆಡೆ ಇಂಥ ವಿಶ್ಲೇಷಣೆ ತಪ್ಪು ನಿರ್ಣಯಗಳಿಗೂ ಲೇಖಕರನ್ನು ಕೊಂಡೊಯ್ದಿದೆ. ಉದಾ.ಗೆ. ಪು. 77ರಲ್ಲಿ ಜನ್ನ ಪ್ರಯೋಗಿಸಿದ 'ಚರು' ಶಬ್ದದ ಅರ್ಥ ಹೇಳುವಾಗ ನಿಘಂಟಿನ ಅರ್ಥ ಅವಲಂಬಿಸಿ 'ದೇವತೆಗಳಿಗೆ ಅರ್ಪಿಸುವ ಅನ್ನದ ಹವಿಸ್ಸು' ಎಂದು ನಿಘಂಟುಗಳು ಅರ್ಥ ಹೇಳುತ್ತವೆ. ಬಹುಶಃ ಚರುಗ ಎಂಬುದು ಇದರಿಂದಲೇ ಬಂದಿರಬಹುದು ಎನ್ನುತ್ತಾರೆ. ಚರು-ಚರುಗ ಆಗಿರಬಹುದೇನೋ ಸರಿ. ಆದರೆ ಜೈನರಲ್ಲಿ ಚರು ಎಂದರೆ ದೇವರಿಗೆ ಅರ್ಪಿಸುವ ನೈವೇದ್ಯವಸ್ತು ಎಂದರ್ಥ. ಅದು ಸಿಹಿವಸ್ತು, ಪಾಯಸ, ಪಂಚಕಜ್ಜಾಯ-ಯಾವದೂ ಆಗಿರಬಹುದು. ಜೈನ ವಿಧಿಗಳ ಪರಿಚಯವಿಲ್ಲದ್ದರಿಂದ ಲೇಖಕರು ಇಂಥ ನೇರ ಸಿಕ್ಕುವ ಅರ್ಥವನ್ನಷ್ಟೆ ಹಿಡಿದಿರುವುದು ಸಹಜ. ಅದೇರೀತಿ ಪುಟ 94-95ರಲ್ಲಿ ನವಧಾನ್ಯಗಳು ಎಂದು ಗ್ರಾಮೀಣರು ಮತ್ತು ನಗರದವರು ಯಾವುಯಾವುದನ್ನು ಹೆಸರಿಸುತ್ತಾರೆ ಎಂದು ಪಟ್ಟಿಕೊಟ್ಟು, ಅದರ ಆಧಾರದ ಮೇಲೆ 'ಗ್ರಾಮೀಣರಲ್ಲಿ ರಾಗಿಗೆ ಮೊದಲ ಸ್ಥಾನ ಸಿಕ್ಕರೆ, ನಗರದಲ್ಲಿ ಅದಕ್ಕೆ ಸ್ಥಾನವೇ ಇಲ್ಲವಾಗಿದೆ' ಎನ್ನುತ್ತಾರೆ. ಆದರೆ ಈ ಪಟ್ಟಿಗೆ ಆಧಾರ ಏನು? ಯಾರೋ ಒಬ್ಬಿಬ್ಬರು ವಕ್ತೃಗಳು ಹೇಳಿದ್ದು ಮಾತ್ರವೆ? (ಆ ಸೂಚನೆಯೂ ಇಲ್ಲಿಲ್ಲ.) ಎಷ್ಟೋ ಜನ ನಗರದವರು ನವಧಾನ್ಯಗಳ ಹೆಸರು ಹೇಳುವಾಗ ಅಕ್ಕಿಯ ಹೆಸರನ್ನೇ ಮೊದಲು ಹೇಳುತ್ತಾರಲ್ಲ! ಒಂದು ಉದ್ಗ್ರಂಥದ ರಚನೆಯಲ್ಲಿ ಇಂಥ ಕೆಲವು 'ಸಮೀಪ ದೃಷ್ಟಿ'ಗಳು ಕ್ಷಮಾರ್ಹವೆನಿಸುತ್ತವೆ.

ನಾಲ್ಕನೆಯ ಅಧ್ಯಾಯದಲ್ಲಿ ತುಂಬ ವಿವರವಾಗಿ ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಸ್ಥಿತಿಯನ್ನೂ ಬದಲಾವಣೆಗಳನ್ನೂ ನಿರೂಪಿಸಲಾಗಿದೆ. ಇದಕ್ಕಾಗಿ ಕ್ಷೇತ್ರಕಾರ್ಯ ಒಂದೇ ಅಲ್ಲದೆ ಸರ್ಕಾರಿ ದಾಖಲೆಗಳು, ಹಿಂದೆ ಪ್ರಕಟವಾಗಿರುವ ಬುಕಾನಿನ, ಸ್ಟ್ಯಾಂಕಿಯವರ ವರದಿಗಳು, ಮಳೆ ಅಂಕಿಅಂಶಗಳು ಇವನ್ನೆಲ್ಲ ಬಳಸಿಕೊಂಡಿದ್ದಾರೆ. ಜಿಲ್ಲೆಯ ವಿವಿಧ ಬಗೆಯ ಮಣ್ಣಿನ, ಬೆಳೆಗಳ ವಿವರ ನೀಡಿದ್ದಾರೆ. ಬೆಳೆ ಬೆಳೆಯುವ, ಕಳೆ ತೆಗೆಯುವ,

ರೋಗಗಳಿಂದ ರಕ್ಷಿಸಿಕೊಳ್ಳುವ, ಇಂಥ ಹಲವಾರು ಕಾರ್ಯಗಳ ಸಲುವಾಗಿ ಜಿಲ್ಲೆಯ ವಿವಿಧೆಡೆಯ ಜನ ಅನುಸರಿಸುವ ಕ್ರಮಗಳೂ ಇಲ್ಲಿ ನಿರೂಪಿತವಾಗಿವೆ. ಇವೆಲ್ಲ ವ್ಯಾಪಕ ಕ್ಷೇತ್ರಕಾರ್ಯದ ಫಲವಾಗಿವೆ.

ಐದನೆಯ ಅಧ್ಯಾಯದಲ್ಲಿ ಜಿಲ್ಲೆಯ ಮಳೆ ಜಾನಪದವನ್ನು ಕುರಿತ ದೀರ್ಘವಿವರಣೆ ಇದೆ. ಮಳೆಯ ನಕ್ಷತ್ರಗಳು, ವ್ಯವಸಾಯೋಪಯೋಗಿ ಮಳೆಗಳ ಕುರಿತು ಇರುವ ನಂಬಿಕೆಗಳು, ಮಳೆ ಸಂಬಂಧಿ ಆಚರಣೆಗಳು ಅವುಗಳ ವಿಶ್ಲೇಷಣೆ, ಜೋಕುಮಾರ, ಕುರ್ಚಿ ಇತ್ಯಾದಿ ಪ್ರಮುಖ ಆಚರಣೆಗಳ ದೀರ್ಘ ವಿವರಗಳು, ಮಳೆಗಾಗಿ ಪೂಜಿಸಲ್ಪಡುವ ಕಾರಣಿಕ ಪುರುಷರು-ಇತ್ಯಾದಿ ಅನೇಕ ಸಂಗತಿಗಳನ್ನು ಮೂಲಚೂಲ ಸಹಿತವಾಗಿ ಸಂಗ್ರಹಿಸಿ ವಿಶ್ಲೇಷಿಸಲು ಇಲ್ಲಿ ಸಂಶೋಧಕರು ಪ್ರಯತ್ನಿಸಿದ್ದಾರೆ.

ಮುಂದಿನ ಎರಡು ಅಧ್ಯಾಯಗಳಲ್ಲಿ (ಆರು ಮತ್ತು ಏಳು) ಕ್ರಮವಾಗಿ ಚಿತ್ರದುರ್ಗ ಜಿಲ್ಲೆಯ ಖುಷ್ಕಿ ಹಾಗೂ ತರಿ, ಬಾಗಾಯ್ತು ಬೆಳೆಗಳನ್ನು ಪರಿಚಯಿಸಿದ್ದಾರೆ. ಪ್ರತಿಯೊಂದು ಬೆಳೆಯನ್ನು ಬೆಳೆಯುವ ಕ್ರಮ, ಅದನ್ನು ರಕ್ಷಿಸಿಕೊಳ್ಳಲು ಅನುಸರಿಸುವ ವಿಧಾನಗಳು, ಅವನ್ನು ಕುರಿತ ನಂಬಿಕೆಗಳು ಇತ್ಯಾದಿ ಅಗತ್ಯ ವಿಷಯಗಳನ್ನೆಲ್ಲಾ ಈ ಅಧ್ಯಾಯಗಳಲ್ಲಿ ನಿರೂಪಿಸಿದ್ದಾರೆ.

ಎಂಟನೆಯ ಅಧ್ಯಾಯವನ್ನು 'ವ್ಯವಸಾಯದ ಸಾಮಾನ್ಯ ವಿಷಯಗಳು' ಎಂದು ಹೆಸರಿಸಿ ಜಿಲ್ಲೆಯ ವ್ಯವಸಾಯಗಾರರಲ್ಲಿ ಇರುವ ಸಾಮಾನ್ಯ ನಂಬಿಕೆಗಳು, ಬಳಸುವ ಉಪಕರಣಗಳು, ಅವುಗಳ ವೈವಿಧ್ಯಗಳು, ಉಪಯೋಗಗಳು, ದಾನ್ಯ ದಾಸ್ತಾನು ಮಾಡುವ, ಹುಳಹುಪ್ಪಡಿಗಳಿಂದ ರಕ್ಷಿಸಿಕೊಳ್ಳುವ ಕ್ರಮ, ಪಶುಗಳಿಗೆ ಬರುವ ಕೆಲವು ರೋಗಗಳು, ಅವುಗಳಿಗೆ ಮಾಡುವ ಚಿಕಿತ್ಸೆ-ಇಂತಹ ಎಲ್ಲ ವಿವರಗಳನ್ನೂ ನೀಡಿದ್ದಾರೆ. ಬೇಕಾದಷ್ಟು ರೇಖಾಚಿತ್ರಗಳನ್ನು ನೀಡಿ ವಿಷಯವನ್ನು ಸ್ಪಷ್ಟಗೊಳಿಸಿದ್ದಾರೆ.

ನಿಜವಾದ ಅಧ್ಯಯನ ಶೋಧನಗಳು ಶೋಧಕನನ್ನೂ ಎತ್ತರಕ್ಕೆ ಬೆಳಸುತ್ತವೆ. ಈಶ್ವರಪ್ಪನವರ ವಿಷಯದಲ್ಲಿ ಆಗಿರುವುದೂ ಇದೇ ಎಂದು ಕಾಣುತ್ತದೆ. ಇಷ್ಟೆಲ್ಲಾ ಕ್ಷೇತ್ರಕಾರ್ಯ, ಚರ್ಚೆ, ಸಂಬಂಧಿತ ಸಾಹಿತ್ಯ ಸಾಮಗ್ರಿಯ ಅವಲೋಕನ, ಆಗಿರುವ ಬದಲಾವಣೆಗಳ ಅಧ್ಯಯನ-ಇವೆಲ್ಲದರ ಫಲವಾಗಿ ನಮ್ಮ ಜೀವನ ಹಾಗೂ ಕಾಯಕದ ಕ್ರಮದಲ್ಲಿ ನಾವು ಎಲ್ಲೆಲ್ಲಿ ತಪ್ಪಿಬಿಟ್ಟಿದ್ದೇವೆ ಎಂಬುದರ ಸ್ಪಷ್ಟ ಅರಿವನ್ನೂ ಪಡೆದುಕೊಂಡ ಲೇಖಕರು ಕೊನೆಯ ಅಧ್ಯಾಯದಲ್ಲಿ ನಮಗೆ ಕಾಣಸಿಗುತ್ತಾರೆ. ಇದರ ಫಲವಾಗಿ ''ಉಪಸಂಹಾರವು ಮಾಮೂಲಿನಂತೆ ಇಲ್ಲಿಯವರೆಗೆ ಮಂಡಿಸಿದ ವಿಚಾರಗಳ ಸಂಗ್ರಹ, ಮುಂದಿನ ಸಂಶೋಧಕರಿಗೆ ಸೂಚನೆಗಳಾಗುವುದಿಲ್ಲ. ಬದಲಾಗಿ-ಇಷ್ಟೆಲ್ಲವನ್ನು ಮನದಲ್ಲಿಟ್ಟುಕೊಂಡು ಒಬ್ಬಾತ ಪರಿಸರವಾದಿಯಾಗಿ ಮಾರ್ಪಟ್ಟಿರುವುದಕ್ಕೆ ಸಾಕ್ಷಿಯಾಗಿದೆ. ನಮ್ಮ ಸಾಂಪ್ರದಾಯಿಕ, ಅನುಭವ ಆಧಾರಿತ ಬೇಸಾಯ ಪದ್ಧತಿ, ಜೀವನಕ್ರಮಗಳು ಹೇಗೆ ಪ್ರಕೃತಿಯೊಂದಿಗೆ ಹೊಂದಿಕೊಂಡಿದ್ದವು, ಅದನ್ನು ಅನಾಮತ್ತಾಗಿ ಬದಲಿಸಿ

ನಾವು ಪಾಶ್ಚಾತ್ಯ ವಿಧಾನಗಳನ್ನೂ ಜೀವನ ಮೋಹಕತೆಯನ್ನೂ ಅನುಸರಿಸಿದ್ದರಿಂದ ಉಂಟಾಗಿರುವ ಶೂನ್ಯತೆ-ಇವನ್ನೆಲ್ಲ ಕುರಿತು ಸಂಗ್ರಹವಾಗಿ ತಮ್ಮ ವಿಚಾರಗಳನ್ನು ನಿರೂಪಿಸುತ್ತ ಮುಕ್ತಾಯಗೊಳಿಸುತ್ತಾರೆ. ನಿಬಂಧವನ್ನು ಓದಿದ ಎಲ್ಲರೂ ಕೊನೆಯಲ್ಲಿ ಲೇಖಕರಂತೆಯೇ ನಿಡುಸುಯ್ಯುತ್ತಾರೆ.

ಒಟ್ಟಿನಲ್ಲಿ ಹೇಳಬಹುದಾದದ್ದಿಷ್ಟು-'ವ್ಯವಸಾಯ ಜಾನಪದ'ದ ವಿಸ್ತೃತ ಗಂಭೀರ ಅಧ್ಯಯನ ಉದ್ಘಾಟಕರು ಎಂ.ಜಿ. ಈಶ್ವರಪ್ಪನವರಾದರೂ ಈ ಕ್ಷೇತ್ರದಲ್ಲಿ ಮುಂದಿನ ಕೆಲಸಗಾರರಿಗೆ ಅವರು ಉಳಿಸಿರುವುದು ಕಡಮೆಯೇ. ಮಲೆನಾಡಿನ ಕೃಷಿಗೆ ಸಂಬಂಧಿಸಿದಂತೆ ಇಂತಹ ಇನ್ನೊಂದು ವಿಸ್ತೃತ ಅಧ್ಯಯನಕ್ಕೆ ಅವಕಾಶವಿದೆ. ಬಯಲುಸೀಮೆಯ ಪ್ರದೇಶಕ್ಕೆ ಸಂಬಂಧಿಸಿದಂತೆ ಅಧ್ಯಯನ ಮಾಡುವವರು ಇಲ್ಲಿನ ಸಂಗತಿಗಳನ್ನು ಉಲ್ಲೇಖಿಸಿ, ವ್ಯತ್ಯಾಸಗಳನ್ನೂ, ವಿಶಿಷ್ಟತೆಗಳನ್ನೂ ವಿಶ್ಲೇಷಿಸುತ್ತಾ ಕೇಂದ್ರೀಕೃತ ಅಧ್ಯಯನ ನಡೆಸುತ್ತಾ ಮುಂದೆ ಸಾಗಿದರೆ ಸಾಕು. ಈ ಕ್ಷೇತ್ರದಲ್ಲಿ ರಾಜಮಾರ್ಗ ನಿರ್ಮಿಸಿದಂತಹ ಒಂದು ಆಚಾರ್ಯ ಕೃತಿಯನ್ನು ಡಾ. ಎಂ.ಜಿ. ಈಶ್ವರಪ್ಪನವರು ದೀರ್ಘ ಪರಿಶ್ರಮದಿಂದ ರಚಿಸಿಕೊಟ್ಟಿದ್ದಾರೆ. ಸಾಹಿತ್ಯಾನಂದಿಯಾದ ಕನ್ನಡ ಮಾಸ್ತರನೊಬ್ಬ ಈ ವಸ್ತುವಿನಂಥ ಹೆಚ್ಚು ತಾಂತ್ರಿಕವಾದ ವಿಷಯದ ಅಧ್ಯಯನದಲ್ಲಿ ದೀರ್ಘಕಾಲ ಆಸಕ್ತಿ ಉಳಿಸಿಕೊಳ್ಳುವುದು ಕಷ್ಟ. ಆದರೆ ಈಶ್ವರಪ್ಪನವರು ಈ ಆಸಕ್ತಿಯನ್ನು ಉಳಿಸಿಕೊಂಡು ಸಾಧ್ಯವಾದಲ್ಲೆಲ್ಲ ಸಾಹಿತ್ಯಿಕ ಆಕರಗಳನ್ನೂ ಬಳಸಿಕೊಂಡು ಕೃತಿ ನಿರ್ಮಾಣ ಮಾಡಿದ್ದಾರೆ. ಬಹುಬೇಗ ಥೀಸಿಸ್ ಬರೆದು ಮುಗಿಸಿ ಡಾಕ್ಟರಾಗಬೇಕೆನ್ನುವ ಮನೋರೋಗ ಹಚ್ಚಿಕೊಂಡಿರುವ, ಪ್ರಮೋಷನ್ನಿಗಾಗಿ ಥೀಸಿಸ್ ಬರೆಯುವ 'ಸಂಶೋಧಕರ' ಕೃತಿಗಳ ನಡುವೆ ಇಂಥ ಕೃತಿಗಳು ಭಿನ್ನವಾಗಿ ತುಂಗಸದೃಶವಾಗಿ ಎದ್ದು ನಿಲ್ಲುತ್ತವೆ. ಡಾ. ಎಂ.ಜಿ. ಈಶ್ವರಪ್ಪನವರಿಗೆ ಎಲ್ಲ ಜಾನಪದಾಸಕ್ತರ ಪರವಾಗಿ ಅಭಿನಂದನೊಳು ಸಲ್ಲುತ್ತವೆ. ಈ ಕೃತಿಯನ್ನು ಎಲ್ಲ ಚಿತ್ರಗಳೊಂದಿಗೆ ಪ್ರಕಟಿಸಿದ ಕನ್ನಡ ಸಾಹಿತ್ಯ ಪರಿಷತ್ತು ಸಹ ಅಭಿನದನೆಗೆ ಪಾತ್ರವಾಗಿದೆ.

17. ಮ್ಯಾಸ ನಾಯಕರು-ಒಂದು ಜನಾಂಗಿಕ ಅಧ್ಯಯನ-ಡಾ. ಕರಿಶೆಟ್ಟಿ ರುದ್ರಪ್ಪ

ಕೇವಲ ಮಾಹಿತಿ ಸಂಗ್ರಹ ಮಾಡಿ ಅದನ್ನು ಹಲವು ಅಧ್ಯಾಯಗಳಾಗಿ ವಿಂಗಡಿಸಿ ಬರೆದು ಬಿಟ್ಟರೆ ನಿಬಂಧವಾಗುತ್ತದೆ-ಎಂಬ ತಿಳಿವಳಿಕೆಯಲ್ಲಿ ನಮ್ಮ ಅನೇಕ ಸಂಶೋಧಕರು ಇನ್ನು ಇದ್ದಾರೆ. ಪ್ರಸ್ತುತ ನಿಬಂಧವೂ ಇಂಥದೇ ಗ್ರಹಿಕೆಯಿಂದ ರಚಿತವಾಗಿರುವಂತೆ ಕಾಣುತ್ತದೆ. 5-6 ವರ್ಷಗಳ ಕಾಲ ಅಧ್ಯಯನ ನಡೆಸಿದ್ದೇನೆ ಎಂದು ಲೇಖಕರೂ- ''ವ್ಯಾಪಕವಾದ ಸಾಂಸ್ಕೃತಿಕ ಅಧ್ಯಯನ ಮಾಡಿ ಅತ್ಯಂತ ಪರಿಶ್ರಮದಿಂದ ಆಕರಗಳನ್ನೂ ಸಂಗ್ರಹಿಸಿ ಸಂಯೋಜಿಸಿ ''ರಚಿತವಾಗಿರುವ ಕೃತಿ ಇದೆಂದೂ'' ಕನ್ನಡ ಸಂಶೋಧನ ಕ್ಷೇತ್ರಕ್ಕೆ ''ಇದೊಂದು ಮೌಲಿಕ ಕೊಡುಗೆ'' ಎಂದೂ ಕ.ಸಾ.ಪ.ದ ತತ್ಕಾಲೀನ ಅಧ್ಯಕ್ಷ ಗೊ.ರು. ಚೆನ್ನಬಸಪ್ಪನವರೂ ('ಅಧ್ಯಕ್ಷರ ನುಡಿ'ಯಲ್ಲಿ) ಹೇಳಿದ್ದಾರೆ.

ಪುಸ್ತಕದ ಹೆಸರು, ಅಚ್ಚುಕಟ್ಟಾದ ಮುದ್ರಣ, ಸರಳ ಸುಂದರ ರಕ್ಷಾಪುಟ ವಿನ್ಯಾಸ ಇವೆಲ್ಲ ಅಂಥದೇ ನಿರೀಕ್ಷೆಯನ್ನು ನಮ್ಮಲ್ಲಿ ಹುಟ್ಟಿಸುತ್ತದೆ. ಆದರೆ 'ಓದುತ್ತಾ ಹೋದಂತೆ ನಮಗೆ ಕೇವಲ ಮಾಹಿತಿಗಳನ್ನು ಬಿಟ್ಟು, 180 ಪುಟಗಳ ಈ ಪುಸ್ತಕದಲ್ಲಿ ಇನ್ನೇನೂ ಸಿಗುವುದಿಲ್ಲ. ಸೀಮಿತ ಪ್ರದೇಶಗಳಲ್ಲಿ ವಾಸಿಸುವ ಮ್ಯಾಸನಾಯಕ ಪಂಗಡಗಳನ್ನು ಸಂದರ್ಶಿಸಿ ಇಷ್ಟು ಮಾಹಿತಿ ಸಂಗ್ರಹಿಸಲು ಹೆಚ್ಚೆಂದರೆ ಒಂದು ವರ್ಷ ಸಾಕು. ಅನಂತರ ಬರವಣಿಗೆಗೆ ಒಂದು ವರ್ಷ ಎಂದುಕೊಂಡರೂ, ಐದಾರು ವರ್ಷಗಳ ಪರಿಶ್ರಮದ ಫಲ ಇದಾಗಿರುವಂತೆ ಕಾಣುವುದಿಲ್ಲ.

ಮಾಹಿತಿ ಸಂಗ್ರಹಿಸುವಲ್ಲಿ ಲೇಖಕರು ಸೋಮಾರಿತನ ತೋರಿಲ್ಲ. ಈ ಜನಾಂಗಕ್ಕೆ ಸಂಬಂಧಿಸಿದಂತೆ ಬಹುಮಟ್ಟಿಗೆ ಎಲ್ಲ ಮಾಹಿತಿಗಳನ್ನೂ ವ್ಯಕ್ತಿಗಳಿಂದ ಸಂಗ್ರಹಿಸಿದ್ದಾರೆ. ಒಟ್ಟು ಎಂಟು ಅಧ್ಯಾಯಗಳಿರುವ ಈ ನಿಬಂಧದಲ್ಲಿ ಬೇಡ ಜನಾಂಗದ ವಿಭಾಗಗಳು, ಮ್ಯಾಸನಾಯಕರ ಕೌಟುಂಬಿಕ ಮತ್ತು ಸಾಮಾಜಿಕ ಜೀವನ,-ಅವರ ವಸತಿ, ಆಹಾರ, ವೃತ್ತಿ, ಹಬ್ಬಗಳು, ಸಂಸ್ಕಾರಗಳು, ಶವಸಂಸ್ಕಾರ, ಮದುವೆ ಇತ್ಯಾದಿಗಳು, ನ್ಯಾಯಪದ್ಧತಿ ಇತ್ಯಾದಿಗಳು, ಧಾರ್ಮಿಕ ಜೀವನ ಮತ್ತು ಆಚರಣೆಗಳು, ಪುರಾಣಪುರುಷರು, ಜಾತ್ರೆಗಳು, ಈ ಜನಾಂಗದ ಪಾಳೆಯಗಾರರು, ಇವರ ಜನಪದ ಸಾಹಿತ್ಯ, ಕ್ರೀಡೆ ಮತ್ತು ವಾದ್ಯಗಳು-ಹೀಗೆ ಹಲವಾರು ವಿಷಯಗಳನ್ನು ಸಂಗ್ರಹಿಸಿ ಕ್ರಮಬದ್ಧವಾಗಿ ನಿರೂಪಿಸಿದ್ದಾರೆ.

ಆದರೆ ಈ 'ಅಧ್ಯಯನ'ದ ಗುಣಾತ್ಮಕ ಅಂಶ ಇದೊಂದೇ ಆಗಿರುವುದೇ ಇಲ್ಲಿನ ದೊಡ್ಡ ಕೊರತೆ. ಕೇವಲ ಮಾಹಿತಿ ಬೇಕೆನ್ನುವವರಿಗೆ ಈ ಪುಸ್ತಕದಿಂದ ಸಾಕಷ್ಟು ಪ್ರಯೋಜನವಾಗುತ್ತದೆ, ಇಲ್ಲವೆಂದಲ್ಲ. ಆದರೆ ಮಾಹಿತಿ ಸಂಗ್ರಹ ಕೇವಲ ಮೊದಲ ಹಂತವಷ್ಟೆ. ಮಾಹಿತಿಗಳನ್ನು ಸಂಗ್ರಹಿಸುವುದು ವಿಶ್ಲೇಷಿಸಿ ಆ ವಸ್ತುವಿನ ಬಗ್ಗೆ ಒಳನೋಟ ಬೀರುವುದಕ್ಕಾಗಿ, ಆ ಮಾಹಿತಿಗಳ ಮೂಲಕ ಆ ಸಮುದಾಯದ, ಕ್ರಿಯೆಯ ಹಿನ್ನೆಲೆ, ವಿಕಾಸಕ್ರಮ, ಇತ್ಯಾದಿಗಳನ್ನು ಅಧ್ಯಯನಕಾರ ತಿಳಿಯಬೇಕಾಗುತ್ತದೆ. ಒಂದು ಜನಾಂಗದ ಅಧ್ಯಯನದಲ್ಲಿ-ಆ ಜನಾಂಗ ಹಾಗೆ ನಿರ್ದಿಷ್ಟವಾಗಿ ನಡೆದುಕೊಳ್ಳುವುದೇಕೆ ಎಂದು ತಿಳಿಯಲು ಪ್ರಯತ್ನಿಸಬೇಕಾಗುತ್ತದೆ. ಅದೇ ತರನ ನಡವಳಿಕೆಗಳು ಅನ್ಯ ಸಮುದಾಯಗಳಲ್ಲೆಲ್ಲಿಯಾದರೂ ಇದೆಯೇ ಎಂದು ನೋಟ ಹರಿಸಬೇಕಾಗುತ್ತದೆ. ಆ ಜನಾಂಗದ ಮೇಲೆ ಅದೇ ನಾಡಿನ ಅನ್ಯ ಸಂಸ್ಕೃತಿ ಮಾಡಿರುವ ಪ್ರಭಾವವನ್ನು ಗುರುತಿಸಬೇಕಾಗುತ್ತದೆ.

ಪ್ರಸ್ತುತ ಕೃತಿಯಲ್ಲಿ ಇಂಥ ಯಾವ ಕೆಲಸವೂ ಆಗಿಲ್ಲ; ಸಂಗ್ರಹಿಸಿರುವ ಮಾಹಿತಿಗಳನ್ನು ಅರ್ಥೈಸುವ ಪ್ರಯತ್ನವಿರಲಿಲ್ಲ. ಅಂಥ ಅನೇಕ ಅವಕಾಶಗಳು ಇಲ್ಲಿದ್ದವು. ಉದಾ.ಗೆ ಪುಟ. 52ರಲ್ಲಿ-ಹೆಣ್ಣನ್ನು ನಿಶ್ಚಿತಾರ್ಥ ಮಾಡಿಕೊಳ್ಳುವಾಗ ಕರಿಯ ಕಂಬಳಿ ಮೇಲೆ ಕೂರಿಸಿ ಉಡಿ ತುಂಬುತ್ತಾರೆ ಎಂದು ಹೇಳುತ್ತಾರೆ. ಕರಿ ಕಂಬಳಿಯೇ ಏಕೆ? ಕಪ್ಪು ಮೋಡದ ಪ್ರತೀಕವೆ? ಅಥವಾ ಬೇರೆ ಯಾವುದಾದರೂ ಹಿನ್ನೆಲೆಯಿಂದ ಅದು ಶ್ರೇಷ್ಠ ಎಂಬ ಭಾವನೆ ಇದೆಯೆ? ಎಂಬ ಬಗ್ಗೆ ಒಳನೋಟ ಹರಿಸಬಹುದಿತ್ತು. ಪು. 52ರಲ್ಲಿ

ಮ್ಯಾಸ ನಾಯಕರು ಮದುವೆಯ ಸಂದರ್ಭದಲ್ಲಿ ಹಿರೇರ ಹಬ್ಬ ಆಚರಿಸುತ್ತಾರೆ ಎನ್ನುತ್ತಾರೆ. ಅನ್ಯರಲ್ಲೂ, ಮುಂದುವರೆದ ಜನಾಂಗಗಳಲ್ಲೂ ಈ ಪದ್ಧತಿ ಇದೆ. ಅದು ಲೇಖಕರ ಗಮನಕ್ಕೆ ಬಂದಿಲ್ಲ. ಅದೇ ರೀತಿ-ಪುಟ 54ರಲ್ಲಿ ಈ ಜನಾಂಗದ ಒಂದು ಒಳಪಂಗಡದಲ್ಲಿ ವರನು ಮದುವೆಗೆ ಹೋಗದೆ ತನ್ನ ಬಾಕುವನ್ನು ತನ್ನ ಪ್ರತಿನಿಧಿಯಾಗಿ ಕಳಿಸುತ್ತಿದ್ದ ಅಂಶದ ಉಲ್ಲೇಖವಿದೆ. ಇಂಥದೆ ಸಂಪ್ರದಾಯ ರಜಪೂತರಲ್ಲಿತ್ತು. ಇಂಥ ಅಂಶಗಳು ಲೇಖಕರಿಗೆ ನೆನಪಾಗುವುದಿಲ್ಲ.

ಯಾವುದೇ ಜನಾಂಗವೂ ಒಂದು ದ್ವೀಪವಲ್ಲ. ಯಾವುದೇ ಆಚರಣೆ, ಸಂಪ್ರದಾಯ ಶೂನ್ಯದಿಂದುದಿಸುವುದಿಲ್ಲ. ಆದ್ದರಿಂದಲೇ ಜನಾಂಗಿಕ ಅಧ್ಯಯನಕ್ಕೆ ವ್ಯಾಪಕ ಓದು, ಚಿಂತನೆ, ತುಲನೆಗಳು ಬೇಕಾಗುತ್ತವೆ. ''ಮ್ಯಾಸನಾಯಕರ ಸಾಮಾಜಿಕ, ಸಾಂಸ್ಕೃತಿಕ ಬದುಕನ್ನು ವಿವರವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ'' ಎಂದು ಲೇಖಕರು ಹೇಳಿಕೊಂಡಿದ್ದರೂ (ಪು. 1) ಇಲ್ಲಿ ವಿವರವೇ ಅಧ್ಯಯನವೆನ್ನಿಸಿಕೊಂಡುಬಿಟ್ಟಿದೆ.

ಪುಟ 70ರಲ್ಲಿ 'ವಾಲ್ಮೀಕಿಯನ್ನು ಕುರಿತು ತೆಲುಗುಭಾಷೆಯಲ್ಲಿ ಮ್ಯಾಸನಾಯಕರ ಪುರಾಣದಂತಿರುವ ಹಸ್ತಪ್ರತಿಯೊಂದರಲ್ಲಿ ದೊರೆಯುವ ಉಲ್ಲೇಖ ಈ ತೆರನಾಗಿದೆ' ಎನ್ನುತ್ತಾ ಆ ಕತೆ ಹೇಳುತ್ತಾರೆ. ಆದರೆ ಆ ಹಸ್ತಪ್ರತಿ ಯಾವ ಕಾಲದ್ದಿರಬಹುದು ಎಂಬುದರತ್ತ ಇವರ ಆಲೋಚನೆ ಹರಿಯುವುದೇ ಇಲ್ಲ. ಕೇವಲ ಕಣ್ಣಿಗೆ ಕಂಡದ್ದು, ಕಿವಿಗೆ ಕೇಳಿದ್ದು-ಇವನ್ನು ಹೇಳಿಬಿಡುವುದು ಸಂಶೋಧನೆ ಅಲ್ಲ. ಇವುಗಳ ಆಚೆಗೆ ಇರುವ, ಪರೋಕ್ಷವಾಗಿ ಇಣುಕುವ ಸತ್ಯವನ್ನು ಕೈಗೆಟುಕಿಸಿಕೊಳ್ಳಲು ಯತ್ನಿಸುವುದು ನಿಜವಾದ ಸಂಶೋಧನೆ. ಅಂತಹ ಪ್ರಯತ್ನ ಇಲ್ಲಿ ಎಲ್ಲಿಯೂ ಇಲ್ಲ.

ಇದೇ ಪುಟ 70ರ ಅಡಿಟಿಪ್ಪಣಿಯಲ್ಲಿ-''ಹಸ್ತಪ್ರತಿಯನ್ನು ಅನುಬಂಧದಲ್ಲಿ ಯಥಾರೀತಿ ಮಾದರಿಗಾಗಿ ಒಂದು ಪುಟವನ್ನು ಲಗತ್ತಿಸಲಾಗಿದೆ'' ಎಂದಿದೆ. (ವಾಕ್ಯರಚನೆಯನ್ನು ಇದ್ದಂತೆ ಉಲ್ಲೇಖಿಸಿದೆ). ಆದರೆ ಆ ಅನುಬಂಧವೇ ಇಲ್ಲ.

ಜಾತ್ರೆಗಳ ವಿವರ ತುಂಬ ಕಡಿಮೆ. (ಪು. 84-88). ಈ ಕುರಿತು ನಡೆದಿರುವ ಅಧ್ಯಯನಗಳನ್ನು ಲೇಖಕರು ಗಮನಿಸಿಯೇ ಇಲ್ಲ.

ಅನೇಕ ಕಡೆ ನಿರ್ದಿಷ್ಟವಲ್ಲದ ತುಂಬ ಸಾಮಾನ್ಯ ಹೇಳಿಕೆಗಳಿವೆ. ಉದಾ.ಗೆ. 'ಆಚರಣೆಗಳು' ವಿಭಾಗದಲ್ಲಿ ಮೂರು ಆಚರಣೆಗಳನ್ನು ವಿವರಿಸಿ (ಸುಮಾರು ಮೂರು ಪುಟ) ಕೊನೆಯಲ್ಲಿ-''ಇವುಗಳೊಡನೆ ಇನ್ನೂ ಕೆಲವು ಸಾಮಾನ್ಯಆಚರಣೆಗಳನ್ನು ಆಚರಿಸುತ್ತಾರೆ'' ಎಂದು ಬಿಡುತ್ತಾರೆ. ಸಂಶೋಧನಾ ನಿಬಂಧದಲ್ಲಿ ಇಂಥ ನಿರ್ದಿಷ್ಟತೆ ಇಲ್ಲದ ವಾಕ್ಯಗಳಿಗೆ ಬೆಲೆ ಇಲ್ಲ. ಇಂಥ ಅನೇಕ ವಾಕ್ಯಗಳನ್ನು ಉದಾಹರಿಸಬಹುದು.

ಕೊನೆಯಲ್ಲಿ ಕೆಲವು ಹಾಡುಗಳನ್ನು ಕೊಟ್ಟಿದ್ದಾರೆ. ಆದರೆ ಯಾವ ಹಾಡನ್ನು ಯಾರು ಹಾಡಿದರು, ಅವರ ಹಳ್ಳಿ, ವಯಸ್ಸು ಏನು, ಸಂಗ್ರಹಿಸಿದ್ದು ಎಂದು, ಅವರು

ಅದನ್ನು ಕಲಿತಿದ್ದು ಯಾರಿಂದ, ಯಾವಾಗ-ಮುಂತಾದ ವ್ಯಕ್ತಿವಿವರಗಳೇ ಇಲ್ಲ. ಕೊನೆಯಲ್ಲಿ ಆರೆಂಟು ಚಿತ್ರಗಳಿವೆ. ಎರಡು ಚಿತ್ರಗಳ ಕೆಳಗೆ 'ಮ್ಯಾಸ' ಎಂದು ಅಚ್ಚು ಮಾಡಲಾಗಿದೆ. ಒಂದು ಚಿತ್ರದಲ್ಲಿ ಒಬ್ಬ ಮೊಣಕಾಲೂರಿ ಕುಳಿತು ಕೈಗಳಿಂದ ನೆಲವನ್ನು ಸ್ಪರ್ಶಿಸಿ ನಮಸ್ಕರಿಸುತ್ತಿರುವಂತಿದೆ. ಇನ್ನೊಂದರಲ್ಲಿ ಒಂದು ಗಂಡು ಹಾಗೂ ಹೆಣ್ಣಿಗೆ ಹಲವರು ಚೊಂಬಿನಿಂದ ನೀರು ಸುರಿದು ಸ್ನಾನ ಮಾಡಿಸುತ್ತಿದ್ದಾರೆ. ಈ ಎರಡೂ ಭಿನ್ನ ಚಿತ್ರಗಳಿಗೆ ಒಂದೇ ಶೀರ್ಷಿಕೆ ಎಂದರೆ ಹೇಗೆ? ಯಾವ ಚಿತ್ರ ಏನನ್ನು ತೋರಿಸುತ್ತದೆ ಎಂಬ ಸರಿಯಾದ ಉಲ್ಲೇಖ ಬೇಡವೆ?

ಲೇಖಕರು ಶ್ರಮವಹಿಸಿ ತಿರುಗಾಡಿ ಮಾಹಿತಿ ಸಂಗ್ರಹಿಸಿದ್ದಾರೆ ನಿಜ. ಅದೇ ರೀತಿ ಈ ಪುಸ್ತಕ ಅಚ್ಚು ಹಾಕಿಸಲು ಕನಿಷ್ಠ ಇಪ್ಪತ್ತು ಸಾವಿರ ರೂಪಾಯಿ ಖರ್ಚಾಗಿರಬೇಕು. ಇಷ್ಟೊಂದು ಕಾಲ, ಹಣವನ್ನು ವ್ಯಯಿಸಿ ನಾವು ಮಾಡುವ ಕೆಲಸ ನಿಜವಾಗಿಯೂ ಕ್ರಮಬದ್ಧವೂ, ಹೊಸದನ್ನು ಕಾಣಿಸುವಂಥದೂ, ವಿಶ್ಲೇಷಣಾತ್ಮಕವೂ ಆಗಿರಬೇಕಲ್ಲವೆ? ಹಾಗಿಲ್ಲದೆ ಅದು 'ಮೌಲಿಕ ಕೊಡುಗೆ' ಆಗುವುದೆಂತು?

ಪ್ರಸ್ತುತ ಸ್ವರೂಪದಲ್ಲಿ ಈ ಕೃತಿ ಕೇವಲ ಒಂದು ಮಾಹಿತಿ ಕೋಶವಾಗಿದೆ. ಇದನ್ನು ಮಾನವರ ಆಚರಣೆಗಳನ್ನು ವಿಶ್ಲೇಷಿಸಿ ಈಗಾಗಲೇ ಪ್ರಕಟವಾಗಿರುವ ಗಂಭೀರ ಕೃತಿಗಳನ್ನೂ ಅವಲೋಕಿಸಿ ಮ್ಯಾಸನಾಯಕರ ಕುರಿತ ಅಧ್ಯಯನವನ್ನು ಯಾರಾದರೂ ಮಾಡಬೇಕಾಗಿದೆ.

ಕರ್ನಾಟಕದ ಹೆಳವರು-ಒಂದು ಜಾನಪದೀಯ ಅಧ್ಯಯನ: ಡಾ. ಹರಿಲಾಲ್ ಕೆ. ಪವಾರ್

ಇದು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪಡೆದ ನಿಬಂಧ. ಅರೆಅಲೆಮಾರಿ ಜನಾಂಗವಾಗಿದ್ದು ಕೆಲವರು ನಿರ್ದಿಷ್ಟ ಮನೆತನಗಳ ದಾಖಲೆಗಳನ್ನು ಬರೆದಿಟ್ಟುಕೊಂಡು ಅವರ ಮನೆಗಳಿಗೆ ವರ್ಷಕ್ಕೊಮ್ಮೆ ಹೋಗಿ, ವಂಶಾವಳಿಯನ್ನು ಹಾಡಿ, ಕಾಣಿಕೆ ಪಡೆದು ಜೀವನ ಸಾಗಿಸುವುದು ಇದರ ಮುಖ್ಯ ಕಸುಬು. ಈ ವಂಶಾವಳಿಗಳ ಜೊತೆಗೆ ಇತರ ಕೆಲವು ಕಾವ್ಯಗಳನ್ನು ಇವರು ಹಾಡುವುದುಂಟು. ನಿರ್ಲಕ್ಷಿತ ಇತಿಹಾಸದ ಕೆಲವು ಪುಟಗಳು ಇವರಿಂದಾಗಿ ರಕ್ಷಿಸಲ್ಪಟ್ಟಿವೆ. ಈಚೆಗೆ ಈ ವೃತ್ತಿಯನ್ನು ಬಿಟ್ಟು ಅಥವಾ ಇದರ ಜೊತೆಗೆ ಇತರ ಕೆಲವು ವೃತ್ತಿಗಳನ್ನೂ ಅವಲಂಬಿಸಿಕೊಂಡು ಬದುಕುತ್ತಿರುವ ಈ ಸಮುದಾಯ ಶೀಘ್ರವಾಗಿ ತನ್ನ ಈ ಮೂಲ ವೃತ್ತಿಯಾದ 'ಇತಿಹಾಸ ನಿರೂಪಣೆ'ಯನ್ನೂ ಬಿಟ್ಟುಕೊಡುವ ಹಾದಿಯಲ್ಲಿದೆ.

ಇಂಥ ಜನಾಂಗವೊಂದರ ಬಗ್ಗೆ ಕರ್ನಾಟಕಾದ್ಯಂತ ಸಂಚರಿಸಿ, ಅವರ ತಾಣಗಳಲ್ಲಿಯೇ ಅವರನ್ನು, ಭೇಟಿಯಾಗಿ ಅವರ ಪೂರ್ವೇತಿಹಾಸ, ಐತಿಹ್ಯಗಳು, ಅವರ ಸಂಪ್ರದಾಯಗಳು, ಕಡತಗಳು, ಭಾಷೆ, ಪಂಗಡಗಳು-ಇತ್ಯಾದಿಗಳೆಲ್ಲದರ ಬಗೆಗೆ ಮಾಹಿತಿ ಸಂಗ್ರಹಿಸಿ ಅದನ್ನು ಕ್ರಮಬದ್ಧವಾಗಿ ವಿಂಗಡಿಸಿ ಆರು ಅಧ್ಯಾಯಗಳಲ್ಲಿ ಹರಡಿ ಇಲ್ಲಿ ನೀಡಿದ್ದಾರೆ ಲೇಖಕರು. ಹೆಳವರನ್ನು ಕುರಿತಂತೆ ಬಹುಮಟ್ಟಿಗೆ ಎಲ್ಲ

ಮಾಹಿತಿಗಳೂ ಇಲ್ಲಿ ಸಿಗುತ್ತವೆ. ಅಷ್ಟೇ ಅಲ್ಲ-ಈ ಮಾಹಿತಿಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನೂ ಅಲ್ಲಲ್ಲಿ ಇವರು ನಡೆಸಿ ತಮ್ಮ ಅಭಿಪ್ರಾಯಗಳನ್ನೂ ಮಂಡಿಸಿದ್ದಾರೆ. ಹಿಂದಿನ ಲೇಖಕರ ಅಭಿಪ್ರಾಯಗಳನ್ನು ಕೆಲವೆಡೆ ಒಪ್ಪಿಕೊಂಡರೆ ಇನ್ನು ಕೆಲವೆಡೆ ಸಾಧಾರಣವಾಗಿ ತಿರಸ್ಕರಿಸಿದ್ದಾರೆ. ಪು. 20ರಲ್ಲಿ-''ಮೈಸೂರು ಅರಮನೆಯಲ್ಲಿರುವ ತೈಲಚಿತ್ರಗಳಲ್ಲಿ ಒಂದರಲ್ಲಿ ಎತ್ತಿನ ಮೇಲೆ ಕುಳಿತ ಹೆಳವನನ್ನು ಚಿತ್ರಿಸಲಾಗಿದೆ'' ಎಂಬ ಇನ್ನೊಬ್ಬ ಲೇಖಕರ ಅಭಿಪ್ರಾಯ ಹೇಗೆ ತಪ್ಪು ಎಂದು ತೋರಿಸಿರುವುದು, ಹಾಗೂ 21ನೇ ಪುಟದಲ್ಲಿ ಲಕ್ಷ್ಮೇಶ್ವರ ಶಾಸನಗಳಲ್ಲಿ ಹೆಳವ ಶಬ್ದವಿದೆ ಎಂದು ಲೇಖಕರೊಬ್ಬರು ಹೇಳಿರುವುದನ್ನು ನಿರಾಕರಿಸಿರುವುದನ್ನು ಇದಕ್ಕೆ ಉದಾಹರಣೆಯಾಗಿ ಹೇಳಬಹುದು. ಮಾಹಿತಿಗಳನ್ನು ನೀಡುವಾಗಲೂ ಕೆಲವೆಡೆ ಅನ್ಯ ಜನಾಂಗಗಳಲ್ಲಿನ ರೂಢಿಯ ಜೊತೆಗೆ ಹೋಲಿಸಿರುತ್ತಾರೆ.

ಆದರೆ ಈ ಅಧ್ಯಯನವೂ ಕೂಡಾ ಹೆಳವ ಜನಾಂಗವೊಂದನ್ನು ದ್ವೀಪವೆಂಬಂತೆ ಅಭ್ಯಾಸಮಾಡಿರುವ ದೃಷ್ಟಿಯೇ ಎದ್ದು ಕಾಣುತ್ತದೆ. ಅಂದರೆ-ಇವರ ರೂಢಿ, ನಂಬಿಕೆ, ಸಂಸ್ಕಾರ ಆಚರಣೆ ಇತ್ಯಾದಿಗಳ ಬಗ್ಗೆ ಹೇಳುವಾಗ ಎಷ್ಟರಮಟ್ಟಿಗೆ ಅನ್ಯರದರೊಡನೆ ಹೋಲಿಸಿ ಪ್ರಭಾವ, ಕೊಡು-ಕೊಳೆಗಳನ್ನು ಹೇಳಬಹುದಾಗಿತ್ತೋ ಅದರ ನಾಲ್ಕನೇ ಒಂದು ಭಾಗದಷ್ಟನ್ನೂ ಹೇಳಿಲ್ಲ. ಉದಾ.ಗೆ.-ಹೆಳವರ ಮದುವೆ ಪದ್ಧತಿ ಕುರಿತ ನಿರೂಪಣೆಯನ್ನು ನೋಡಬಹುದು. ಆಶ್ಚರ್ಯವೆನ್ನುವಂತೆ ಅಲ್ಲಿ ಉನ್ನತ ಕುಲದವರ ಮದುವೆ ಸಂಪ್ರದಾಯಗಳ ಹೋಲಿಕೆ ಕಂಡುಬರುತ್ತದೆ.-ಹಂದರ ಹಾಕುವುದು, ಹಾಲುಗಂಬ, ಇತ್ಯಾದಿ. ಈ ಹೋಲಿಕೆಯ ಕಡೆ ಬೆಟ್ಟು ಮಾಡಿ ಚರ್ಚಿಸಲು ಸಾಧ್ಯವಿತ್ತು. ಅದೇರೀತಿ-ಶವ ಸಂಸ್ಕಾರಪದ್ಧತಿಯ ಬಗ್ಗೆ ಕೂಡಾ. ಆದರೆ ವಿಶ್ಲೇಷಣೆ ನಡೆಸುವ ಆಸಕ್ತಿಯ ಎಳೆಯೊಂದು ಪವಾರರಲ್ಲಿ ಇರುವುದು ಈ ನಿಬಂಧದಲ್ಲಿ ಶ್ರುತಪಡುತ್ತದೆ. ಇದನ್ನೇ ಬೆಳೆಸಿಕೊಂಡು ಇವರು ಬೆಳೆಯಬೇಕಾಗಿದೆ.

ಈ ನಿಬಂಧದ ಇನ್ನೊಂದು ದೋಷವೆಂದರೆ-ಕೆಲವು ಅಂಶಗಳ ಅನಗತ್ಯ ಪುನರಾವರ್ತನೆ. ಪ್ರಕಟಿತ ಕೃತಿಯಲ್ಲಿ ಬೇಕಿಲ್ಲದಿರುವ ಒಂದೆರಡು ಭಾಗಗಳೂ ಕೂಡಾ ಹಾಗೇ ಉಳಿದುಕೊಂಡು ಬಿಟ್ಟಿವೆ. ಉದಾಹರಣೆಗೆ-'ಹೆಳವರಲ್ಲಿ ಹಲವು ಪಂಗಡಗಳಿವೆ-ಎತ್ತಿನ ಹೆಳವರು, ಗಂಟೆ ಹೆಳವರು, ಚಾಪೆ ಹೆಳವರು, ಇತ್ಯಾದಿ'-ಎಂಬ ಮಾತು ನಾಲ್ಕೈದು ಕಡೆಯಾದರೂ ಬರುತ್ತದೆ. ಹಾಗೆಯೇ-'ಹೆಳವನೊಬ್ಬ ಈ ಸಮುದಾಯದ ಮೂಲಪುರುಷನಾಗಿದ್ದ' ಎಂಬ ಮಾತು ಹತ್ತು ಕಡೆಯಾದರೂ ಬಂದಿದೆ. 'ಕ್ಷೇತ್ರಕಾರ್ಯದ ಫಲಶ್ರುತಿ' ಎಂಬ 3೫ರಿಂದ 44ನೇ ಪುಟದವರೆಗಿನ ಮಾಹಿತಿಯನ್ನು ಒಂದೂವರೆ ಪುಟಕ್ಕೆ ಇಳಿಸಬಹುದಿತ್ತು. 317 ಪುಟಗಳ ಹರಹನ್ನು 212 ಪುಟಗಳಿಗೆ ಇಳಿಸುವ ಸಾಹಸ ನನ್ನದಾಯಿತು ಎಂದು ಲೇಖಕರು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಇದನ್ನು ಇನ್ನೂ ಇಪ್ಪತ್ತು ಪುಟಗಳಷ್ಟಾದರೂ ಇಳಿಸಬಹುದಿತ್ತು.

ಅಪರೂಪವಾಗಿ ಕೆಲವು ವಿರೋಧಾಭಾಸದ ಹೇಳಿಕೆಗಳೂ ಇಲ್ಲಿ ಕಾಣಸಿಗುತ್ತವೆ. ಉದಾ.ಗೆ. ಪು. 119ರಲ್ಲಿ ವಿವಾಹ ವಿಚ್ಛೇದನೆಯ ಬಗ್ಗೆ ಹೇಳುತ್ತಾ-''ಹಿಂದೂಗಳಲ್ಲಿ ವಿವಾಹ ಒಂದು ಧಾರ್ಮಿಕ ವಿಧಿ ಎಂದು ಪರಿಗಣಿಸಲ್ಪಡುವುದರಿಂದ ಅಲ್ಲಿ ವಿವಾಹ ವಿಚ್ಛೇದನಕ್ಕೆ ವಿಶೇಷ ಅವಕಾಶವಿಲ್ಲ. ಹೆಳವರಲ್ಲಿ ವಿವಾಹ ಕೇವಲ ನಾಗರಿಕ ಒಪ್ಪಂದವಾಗಿರುವುದರಿಂದ ವೈವಾಹಿಕ ಬಂಧನವನ್ನು ಬಹಳ ಸುಲಭವಾಗಿ ಅವರು ಬಿಡುಗಡೆ ಮಾಡಿಕೊಳ್ಳುತ್ತಾರೆ'' ಎನ್ನುತ್ತಾರೆ. ಮುಂದೆ 122ನೇ ಪುಟದಲ್ಲಿ ''ಹೆಳವರು ಮದುವೆಯನ್ನು ಕೇವಲ ಲೈಂಗಿಕ ಸಂಬಂಧವೆಂದು ತಿಳಿಯದೆ ಇದೊಂದು ಪವಿತ್ರವಾದ ಧಾರ್ಮಿಕ ಬಂಧನವೆಂದು ನಂಬಿಕೊಂಡಿದ್ದಾರೆ.'' ಎನ್ನುತ್ತಾರೆ. ಅವೆರಡರಲ್ಲಿ ಯಾವುದು ಸರಿ? ಇಂಥ ಆತುರದ ಬರವಣಿಗೆ ಸಲ್ಲದು.

ಕೆಲವು ದೋಷಗಳಿದ್ದರೂ, ವಿಶ್ಲೇಷಣೆಯಲ್ಲಿ, ತುಲನೆಯಲ್ಲಿ ಕೆಲವು ಕೊರತೆಗಳು ಇದ್ದರೂ, ಯಾವುದೇ ಮೋಹವಾಗಲೀ ವೈಭವೀಕರಣವಾಗಲೀ ಇಲ್ಲದಂತೆ ವ್ಯಾಪಕವಾದ ಕ್ಷೇತ್ರಕಾರ್ಯದ ಆಧಾರದಲ್ಲಿ ರಚಿತವಾದ ಈ ಕೃತಿ ಹೆಳವರ ಬಗ್ಗೆ ಒಂದು ಒಳ್ಳೆಯ ಆಕರ ಗ್ರಂಥವಾಗಿದೆ.

ಜಾನಪದ ಕಥಾ ಸಂಗ್ರಹಗಳು

ಡಾ. ಜಿ.ಎಂ. ಹೆಗಡೆ

ಭಾರತೀಯ ಜಾನಪದ ಪ್ರಪಂಚಕ್ಕೆ ಕನ್ನಡ ಜಾನಪದ ಕೊಡುಗೆ ಅಗಾಧವಾದದ್ದು. ಜನಪದ ಸಾಹಿತ್ಯ, ಕಲೆಗಳ ದೊಡ್ಡ ಭಂಡಾರ ಕನ್ನಡದಲ್ಲಿ ಬೆಳೆದು ಬಂದದ್ದನ್ನು ನಾವು ಕಾಣುತ್ತೇವೆ. ಕನ್ನಡ ಸಂಸ್ಕೃತಿಯ ಸಂರಚನೆಯಲ್ಲಿ ಜಾನಪದ ಸಮೃದ್ಧವಾದ ನೆಲೆ ಪಡೆದುಕೊಂಡಿದೆ. ಜನಪದ ಸಾಹಿತ್ಯದಲ್ಲಿ ಕಥೆಗಳಿಗೆ ವಿಶಿಷ್ಟವಾದ ಸ್ಥಾನ, ಕಂಠಸ್ಥ ಸಂಪ್ರದಾಯದಲ್ಲಿ ಹರಿದುಬಂದ ಕಥನಸಾಹಿತ್ಯವನ್ನು ಸಂಗ್ರಹಿಸುವ ಅಪೂರ್ವ ಕಾರ್ಯ ನಿರಂತರವಾಗಿ ಮುಂದುವರಿದಿದೆ. ಜನಪದ ಕಥೆಗಳ ಸಂಗ್ರಹ, ಸಂಪಾದನೆ ಮತ್ತು ಅಧ್ಯಯನ ತುಂಬ ಶ್ರಮದಾಯಕವಾದ ಕಾರ್ಯ. ಜನಪದ ಕಥೆಗಳ ವೈಜ್ಞಾನಿಕ ಅಧ್ಯಯನವೂ ಈಗ ನಡೆಯುತ್ತಲಿದೆ. ಗದ್ಯ ಸಾಹಿತ್ಯದಲ್ಲಿ ವಿಶಿಷ್ಟವಾದ ಜನಪದ ಕಥೆಗಳನ್ನು ಜಾನಪದ ವಿದ್ವಾಂಸರು ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸುವ ಪರಂಪರೆ 1995ನೆಯ ವರ್ಷದಲ್ಲೂ ಮುಂದುವರೆದಿದೆ. ಈ ವರ್ಷ ಪ್ರಕಟವಾದ ಜನಪದ ಕಥಾ ಸಂಚಯದ ಎರಡು ಗ್ರಂಥಗಳ ಸಮೀಕ್ಷೆ ಈ ಲೇಖನದ ಉದ್ದೇಶವಾಗಿದೆ.

ಈ ಎರಡು ಸಂಕಲನಗಳೆಂದರೆ-'ಜಾನಪದ ಕಥಾವಳಿ' ಮತ್ತು 'ಸಂಕಥಾ'

ಕನ್ನಡ ಜಾನಪದಕ್ಕಾಗಿ ತಮ್ಮ ಪ್ರತಿಭೆ ಪಾಂಡಿತ್ಯವನ್ನು ಕ್ರಿಯಾಶೀಲವಾಗಿಸಿದ ಡಾ. ಎಚ್.ಜಿ. ಲಕ್ಕಪ್ಪಗೌಡರ 'ಜಾನಪದ ಕಥಾವಳಿ' ಒಂದು ಅಪೂರ್ವ ಕಥಾಸಂಗ್ರಹವಾಗಿದೆ. ಕಾಲು ಶತಮಾನದ ಹಿಂದೆ ತುಂಬ ಉತ್ಸಾಹ, ಶ್ರದ್ಧೆಯಿಂದ ಡಾ. ಲಕ್ಕಪ್ಪಗೌಡರು ದಕ್ಷಿಣ ಕರ್ನಾಟಕದ ಗ್ರಾಮಗಳಲ್ಲಿ ತಿರುಗಾಡಿ ಜನಪದ ಕಥೆಗಳನ್ನು ಸಂಗ್ರಹಿಸಿದರು. ಅವುಗಳಲ್ಲಿ 25 ಕಥೆಗಳನ್ನು 'ಜಾನಪದ ಕಥಾವಳಿ' ಶೀರ್ಷಿಕೆಯಲ್ಲಿ ಪ್ರಕಟಿಸಿದ್ದು ಇವು ಕನ್ನಡ ಜನಪದ ಕಥಾ ಸಂಚಯಗಳಲ್ಲೇ ಮಹತ್ವ ಪೂರ್ಣವಾಗಿವೆ. ಡಾ. ಲಕ್ಕಪ್ಪ ಗೌಡರು ವ್ಯಾಪಕಕ್ಷೇತ್ರಕಾರ್ಯ ಮಾಡಿ ಸಂಪಾದಿಸಿದ ಜನಪದ ಕಥೆಗಳು ತುಂಬ ಕುತೂಹಲಕಾರಿಯಾಗಿವೆ. ಕಥನತಂತ್ರ, ಘಟನಾವಳಿ,

ಪಾತ್ರ ಪ್ರಪಂಚ ಮತ್ತು ರೋಮಾಂಚಕಾರಿ ಸನ್ನಿವೇಶಗಳಿಂದ ಕೂಡಿದ 'ಜಾನಪದ ಕಥಾವಳಿ.' ತನ್ನ ನಿರೂಪಣಾ ಶೈಲಿಯಿಂದಲೂ ಗಮನಾರ್ಹವಾಗುತ್ತದೆ. ಜಾನಪದ ಸಂಪಾದಕನಿಗಿರಬೇಕಾದ ವೈಜ್ಞಾನಿಕ ಮನೋಧರ್ಮವೂ ಈ ಸಂಕಲನದ ವಿಶೇಷತೆಯಾಗಿದೆ.

ಮೈಸೂರು, ಹಾಸನ ಜಿಲ್ಲೆಗಳ ಜನಪದ ಕಥನ ವಕ್ತೃಗಳನ್ನು ಡಾ. ಲಕ್ಕಪ್ಪಗೌಡರು ಪರಿಚಯಿಸಿರುವರಲ್ಲದೆ ಅವರು ಹೇಳಿದ ಕಥೆಗಳ ವರ್ಗೀಕರಣವನ್ನು ವಸ್ತು ಮತ್ತು ಆಶಯಗಳ ನೆಲೆಯಲ್ಲಿ ಮಾಡಿರುವುದು ವೈಶಿಷ್ಟ್ಯಪೂರ್ಣವಾಗಿದೆ. 'ಜನಪದ ಕಥಾ ಮರಗುದುರೆ, ನಳ್ಳಿಗೊಮಾರ, ಬುದ್ಧಿಯ ಬಲ, ಚಿಕ್ಕ ಹೊನ್ನಿ ದೊಡ್ಡ ಹೊನ್ನಿ, ಪದ್ಮಾವತಿ, ಮಾಡಿದ್ದುಣ್ಣೋ ಮಹರಾಯ ಈ ಎಂಟು ಕಥೆಗಳು ಜನಪದ ಕಿನ್ನರ ಕಥೆಗಳಾಗಿವೆ. ಬ್ರಹ್ಮಗಂಟು, ಹಣೆಬರಹ, ಯಾರು ಹೆಚ್ಚು?, ಚೆಂದುಳ್ಳಿ ಹೆಣ್ಣು, ಅಣ್ಣ ತಂಗಿ ಈ ಐದು ಕಥೆಗಳು ಜನಪದ ನೀತಿಕಥೆಗಳಾಗಿವೆ. ಗೌಡನ ಮಗ, ದೆವ್ವದ ದಯೆ, ಕಿಲಾಡಿ ಚಿಕ್ಕ, ಚೆನ್ನ ಹಿಂದೆ ಬಂದ ಭಾಗ್ಯ, ಗುರುಶಿಷ್ಯ, ಟೋಪಿ ಕೋಲು ಉಂಗುರ, ಹಾವು ಬೆಕ್ಕು ಮರ್ಕಟ, ಗುಲಗುಂಜಿ ಮಾದೇವಿ ಈ ಎಂಟು ಕಥೆಗಳು ಅತಿ ಮಾನುಷ ಜನಪದ ಕಥೆಗಳಾಗಿವೆ. ಪೆದ್ದ ಪಾಪಣ್ಣ, ಚೆದುರ ಚೆನ್ನಯ್ಯ, ಘಾಟಿ ಸೊಸೆ, ಗುರುವ ಗುರುಪಾದ ಈ ನಾಲ್ಕು ಕಥೆಗಳು ವಿನೋದ ಕಥೆಗಳಾಗಿವೆ. ಈ ರೀತಿ ಸಂಪಾದಕರು ಕಥೆಗಳ ವರ್ಗೀಕರಣ ಮಾಡಿ ಪ್ರಕಟಿಸಿರುವುದು ಅವರ ವೈಜ್ಞಾನಿಕ ಮನೋಧರ್ಮವನ್ನು ಸೂಚಿಸುವುದಲ್ಲದೆ ಜನಪದ ಕಥೆಗಳ ಅಧ್ಯಯನ ಮಾಡುವವರಿಗೂ ಉಪಯುಕ್ತವಾಗುತ್ತದೆ. ಡಾ. ಲಕ್ಕಪ್ಪ ಗೌಡರಿಗೆ ಕಥನ ಸಾಹಿತ್ಯದಲ್ಲಿ ಆಳವಾದ ಆಸಕ್ತಿ ಇರುವುದರಿಂದ ಕಥೆಗಳನ್ನು ನಿರೂಪಕರಿಂದ ಓದುಗರ ಆಸಕ್ತಿ ಕೆರಳಿಸುವ ಹಾಗೆ ಕಥೆಯನ್ನು ನಿರೂಪಣಾತ್ಮಕ ಶೈಲಿಗೆ 'ಒಳಪಡಿಸಿ ಸಂಪಾದಿಸಿಕೊಟ್ಟಿರುವುದು' ಜಾನಪದ ಕಥಾವಳಿಯ ವಿಶೇಷತೆಯಾಗಿದೆ. ಈ ಕಥೆಗಳ ಬಗೆಗೆ ಬರೆದ ಪ್ರಸ್ತಾವನೆಯನ್ನು ವಿಸ್ತಾರ ಭಯದಿಂದ ಸಂಪಾದಕರು ಬಿಟ್ಟಿರುವುದಾಗಿ ಹೇಳಿದ್ದಾರೆ. ಅವೂ ಇದರಲ್ಲಿ ಸೇರಿದ್ದರೆ 'ಜಾನಪದ ಕಥಾವಳಿ'ಯ ಸಂಪಾದನೆಯಲ್ಲಿ, ಕಥೆಗಳ ವಿಮರ್ಶೆ, ವಿಶ್ಲೇಷಣೆ, ಆಶಯಗ್ರಹಿಕೆಯಲ್ಲಿ ಸಂಪಾದಕರು ಪಟ್ಟ ಶ್ರಮ, ತೋರಿದ ವಿದ್ವತ್ತು ಪರಿಚಿತವಾಗುತ್ತಿತ್ತು. ಹೇಗಿದ್ದರೂ, ಕೊನೆಯಲ್ಲಿ ಕೊಟ್ಟ-ಕಥೆಗಳನ್ನು ಹೇಳಿದವರ ಬಗೆಗಿನ ವಿವರ, ಅರ್ಥಕೋಶ ಜನಪದರ ಭಾಷೆಯ ಗ್ರಹಿಕೆಗೂ ನೆರವು ನೀಡುತ್ತದೆ. ಪರಂಪರಾಗತವಾಗಿ ಹರಿದು ಬಂದ ಜನಪದ ಕಥಾವಾಹಿನಿಯನ್ನು ಕನ್ನಡದ ಜನ ಹೇಗೆ ಹೇಳುತ್ತ ಜನರಿಗೆ ಮನೋಲ್ಲಾಸ ಮೂಡಿಸುತ್ತಿದ್ದರೆಂಬುದು ತಿಳಿಯುತ್ತದೆ.

ಡಾ. ಲಕ್ಕಪ್ಪಗೌಡರು ಸಂಪಾದಿಸಿದ 'ಜಾನಪದ ಕಥಾವಳಿ' ಕನ್ನಡ ಜನಪದ ಕಥೆಗಳ ಆಶಯ ಮತ್ತು ವರ್ಗದ ದೃಷ್ಟಿಯಿಂದ ಮಹತ್ವಪೂರ್ಣವಾದದ್ದು. ದಕ್ಷಿಣ ಕರ್ನಾಟಕದ ಒಂದು ಜನಪದ ಕಥೆ ತಲೆಮಾರಿನಿಂದ ತಲೆಮಾರಿಗೆ ಹರಿದು ಬರುವದಲ್ಲದೆ ಅದು ಪ್ರಾದೇಶಿಕ ವ್ಯಾಪ್ತಿಯನ್ನು ಮೀರಿ ಹೇಗೆ ಬೆಳೆಯುತ್ತದೆ, ಪ್ರಸಾರ ಹೊಂದುತ್ತದೆ

ಎಂಬುದರ ಪರಿಶೀಲನೆಯನ್ನು ಮಾಡಲೂ ಸಾಧ್ಯವಾಗುತ್ತದೆ. ಹೀಗೆ ಅನೇಕ ದೃಷ್ಟಿಯಿಂದ 'ಜಾನಪದ ಕಥಾವಳಿ' ಸಂಪಾದಕರ ಪ್ರತಿಭೆ ಪಾಂಡಿತ್ಯದ ಫಲವಾಗಿ ಉತ್ಕೃಷ್ಟ ಜನಪದ ಕಥಾಸಂಚಯವಾಗಿ ಜನಪದ ಕಥಾಪ್ರೇಮಿಗಳ ಆದರಕ್ಕೆ ಪಾತ್ರವಾಗುತ್ತದೆ. 250 ಪುಟಗಳ 'ಜಾನಪದ ಕಥಾವಳಿ'ಯಲ್ಲಿ ಕಥನ ಶಿಲ್ಪದ ದೃಷ್ಟಿಯಿಂದಲೂ ವಿಭಿನ್ನ ಕಥೆಗಳಿವೆ. ದಕ್ಷಿಣ ಕರ್ನಾಟಕದ ಕಥೆಗಳ ಕಣಜ ಎಂಬುದನ್ನು ಸಾಬೀತು ಪಡಿಸುವ ರೀತಿಯಲ್ಲಿ ಈ ಕಥಾಸಂಕಲನ ಮಹತ್ವಪೂರ್ಣ ಆಶಯ ಪ್ರಕಟಿಸಿದೆ.

ಈ ವರ್ಷ ಪ್ರಕಟವಾದ 'ಸಂಕಥಾ' ಇನ್ನೊಂದು ಗಮನಾರ್ಹ ಜನಪದ ಕಥಾ ಸಂಚಯವಾಗಿದೆ. ಮೈಸೂರಿನ ಸಮುದಾಯ ಅಧ್ಯಯನ ಕೇಂದ್ರ ಪ್ರಕಟಿಸಿದ 'ಸಂಕಥಾ'ದ ಸಂಪಾದಕರು ಡಾ. ಪ್ರಣತಾರ್ತಿಹರನ್. 'ಸಂಕಥಾ' ಹೆಸರೇ ಸೂಚಿಸುವಂತೆ ಸಂಕೇತಿಗಳ ಸಾಂಪ್ರದಾಯಿಕ ಕಥೆಗಳ ಸಂಗ್ರಹವಾಗಿದೆ. 'ಸಂಕೇತಿಗಳು-ಒಂದು ಅಧ್ಯಯನ' ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾಲಯದ ಪಿಎಚ್.ಡಿ ಪದವಿಗಾಗಿ ಡಾ. ಪ್ರಣೂರ್ತಿಹರನ್ ಸಿದ್ಧಪಡಿಸುವಾಗ ಸಂಕೇತಿ ಜನಸಮುದಾಯ ಇರುವ ಪ್ರದೇಶದಲ್ಲಿ ವ್ಯಾಪಕ ಕ್ಷೇತ್ರಕಾರ್ಯ ಮಾಡಿದರು. ಆ ಕಾಲಕ್ಕೆ ಅವರು ಸಂಗ್ರಹಿಸಿದ ಸಂಕೇತಿ ಜನಸಮುದಾಯದ ಕಥೆಗಳು ಇದೀಗ ಪುಸ್ತಕ ರೂಪದಲ್ಲಿ ಹೊರ ಬಂದಿದೆ.

ಕರ್ನಾಟಕದ ಜನಸಮುದಾಯಗಳಲ್ಲಿ ಸಂಕೇತಿ ಜನಾಂಗವೂ ಒಂದಾಗಿದೆ. ಶಿವಮೊಗ್ಗಾ, ಮೈಸೂರು, ಚಿಕ್ಕಮಗಳೂರು, ಹಾಸನ, ಜಿಲ್ಲೆಗಳಲ್ಲಿ ಹರಡಿ ನಿಂತ ಸಂಕೇತಿಗಳಲ್ಲಿ ಬೆಟ್ಟದಪುರ ಸಂಕೇತಿಗಳು, ಕೌಳಿಕ ಸಂಕೇತಿಗಳು, ದಕ್ಷಿಣದ ಸಂಕೇತಿಗಳು ಎಂಬ ಬೇರೆಬೇರೆ ಉಪಜಾತಿಗಳಿವೆ ಇದು ಸ್ಥಳಾಧಾರಿತವಾದದ್ದು ಎಂಬುದು ಗಮನಾರ್ಹ. ಈ ಸಂಕೇತಿ ಜನಾಂಗದಲ್ಲಿ ಜಾನಪದ ಸಮೃದ್ಧವಾಗಿದೆ. ಸಂಕೇತಿಗಳು ಸಾಮಾಜಿಕ ಜೀವನ, ಧಾರ್ಮಿಕ ಜೀವನ, ಜಾನಪದ ಜೀವನದ ಬಗೆಗೆ ಅಧ್ಯಯನ ನಡೆಯುತ್ತಿರುವ ಸಂದರ್ಭದಲ್ಲಿ ಡಾ. ಪ್ರಣೂರ್ತಿಹರನ್ ಈ ಕಥಾ ಸಂಕಲನದ ವಿವಿಧ ಸಂಪುಟಗಳನ್ನು ಪ್ರಕಟಿಸುವ ಯೋಜನೆ ಹೊಂದಿದ್ದಾರೆ. ಪ್ರಸ್ತುತ ಸಂಪುಟದಲ್ಲಿ ಹಾಸನ ಜಿಲ್ಲೆಯ ಹೊಳೆನರಸೀಪುರ, ಅಂಕಲಗೂಡು ತಾಲೂಕುಗಳಿಗೆ ಸೇರಿದ ಆರು ಸಂಕೇತಿ ವಕ್ತೃಗಳ ಐವತ್ತೆರಡು ಕಥೆಗಳನ್ನು ಸಂಪಾದಕರು ಸಂಪಾದಿಸಿದ್ದಾರೆ. ಸಂಕೇತಿಗಳ ಭಾಷಿಕ ಸ್ವರೂಪವೂ ಅಧ್ಯಯನೀಯ ಅಂಶ. ಅವರ ಆಡುಮಾತಿನಲ್ಲಿಯೇ ಈ ಕಥಾ ಸಂಪುಟ ಹೊರ ಬಂದಿದೆ. ಇದರಿಂದ ಸಹಜವಾಗಿಯೇ ಸಂಕೇತಿಗಳ ಭಾಷೆಯ ಪರಿಚಯ ಇರದವರಿಗೆ ಕಥೆಯ ಅರ್ಥ ಗ್ರಹಣಕ್ಕೆ ಶ್ರಮ ಅನಿವಾರ್ಯವಾಗುತ್ತದೆ. ಕಥಾ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು ಅವರ ಬಗೆಗೆ ಪೂರ್ಣ ವಿವರಗಳನ್ನು ಸಾಮಾಜಿಕ ಸ್ಥಾನಮಾನಗಳನ್ನೂ ನೀಡಿ ಕಥೆಗಳನ್ನು ಹೇಳಿದ ಹಾಗೆ ಬರೆದುಕೊಂಡು ಲಿಖಿತರೂಪದಲ್ಲಿ ಪ್ರಸ್ತುತಪಡಿಸಿರುವುದು ಈ ಸಂಕಲನದ ವೈಶಿಷ್ಟ್ಯವಾಗಿದೆ. 'ಸಂಕಥಾ'ದ ಐವತ್ತೆರಡು ಕಥೆಗಳು ಮುಖ್ಯವಾಗಿ ಕೌಶಿಕ ಸಂಕೇತಿ ಬ್ರಾಹ್ಮಣರು ಹೇಳಿದ ಕಥೆಗಳಾಗಿವೆ. ಬ್ರಾಹ್ಮಣ ಸಂಪ್ರದಾಯ, ಆಚರಣೆ, ನಂಬಿಕೆಗಳು ಕಥೆಗಳಲ್ಲಿ ಅನಾವರಣ ಪಡೆಯುತ್ತವೆ. ಘಟನಾ

ಪ್ರಧಾನ ಕಥೆಗಳೂ, ಪಾತ್ರ ಪ್ರಧಾನ ಕಥೆಗಳೂ ಇಲ್ಲಿವೆ. 'ಸಂಕಥಾ' ಸಂಪಾದಕರಾದ ಡಾ. ಪ್ರಣೂರ್ತಿಹರನ್ ಕಷ್ಟಪಟ್ಟು ಕಥೆಗಳನ್ನು ವ್ಯಕ್ತಿಗಳು ಹೇಳಿದ ಹಾಗೆ ಪ್ರಸ್ತುತ ಪಡಿಸಿದ್ದಾರೆ. ಇಲ್ಲಿಯ ಕಥೆಗಳನ್ನು ವೈಜ್ಞಾನಿಕವಾಗಿ ವಿಭಜಿಸಿ ಅಧ್ಯಯನಕ್ಕೆ ಗುರಿಪಡಿಸುವ ಅಗತ್ಯವಿದೆ. ಸಂಪಾದಕರು ಆರಂಭದಲ್ಲಿ ಸಂಕೇತಿ ಜನಸಮುದಾಯದ ಬಗೆಗೆ ಹಿನ್ನೆಲೆಯ ವಿವರಣೆ ನೀಡಿದ್ದಾರೆ. ಸಂಕಥಾದ ವಿಶಿಷ್ಟತೆಯೆಂದರೆ ಅದು ಪ್ರಸ್ತುತಪಡಿಸುವ ಭಾಷಾ ನಿರೂಪಣೆ. 200 ಪುಟಗಳ ಮೊದಲ ಸಂಪುಟ ಮೊದಲ ಬಾರಿಗೆ ಸಂಕೇತಿ ಜನಪದ ಕಥೆಗಳನ್ನು ಸಂಕಥಾಕನ್ನಡ ಲೋಕಕ್ಕೆ ನೀಡುವಲ್ಲಿ ಯಶಸ್ವಿಯಾಗಿದೆ. ಅತಿ ಮಾನುಷ ಕಥೆಗಳು, ನೀತಿ ಕಥೆಗಳು, ವಿನೋದ ಕಥೆಗಳು ಹೀಗೆ ಕಥೆಗಳ ವಸ್ತು ಮತ್ತು ಆಶಯದ ನೆಲೆಯಲ್ಲಿ ವಿಭಜಿಸಿ ವಿಶ್ಲೇಷಿಸಲು ಪ್ರಸ್ತುತ ಸಂಪುಟ ಸಾಧ್ಯತೆಗಳನ್ನು ಮಂಡಿಸುತ್ತದೆ. ಒಟ್ಟಿನಲ್ಲಿ 'ಜಾನಪದ ಕಥಾವಳಿ' ಹಾಗೂ 'ಸಂಕಥಾ' ಜನಪದ ಕಥಾಸಂಕಲನಗಳು ಜಾನಪದ ವಿದ್ವಾಂಸರಿಂದ ಸಂಪಾದಿತವಾದ ಸಂಪುಟಗಳಾಗಿದ್ದು ಇದಕ್ಕೆ ಜನಪದ ಕಥನ ಪರಂಪರೆಯಲ್ಲಿ ವಿಶಿಷ್ಟ ಸ್ಥಾನವಿದೆ.

ಜೀವನ ಚರಿತ್ರೆಗಳು ಮತ್ತು ಸಂಸ್ಮರಣ ಗ್ರಂಥಗಳು

ಡಾ. ಟಿ. ಗೋವಿಂದರಾಜು

1995ರ ಸಾಲಿನಲ್ಲಿ ನಾಲ್ವರು ಜಾನಪದ ವಿದ್ವಾಂಸರನ್ನು ಕುರಿತ ನಾಲ್ಕು ಕೃತಿಗಳನ್ನು ಸಂಪಾದಕರು ನನ್ನೆಡೆಗೆ ವಿಮರ್ಶೆಗಾಗಿ ಕಳುಹಿಸಿದ್ದಾರೆ. (ಈ ನಾಲ್ಕನ್ನು ಕಳುಹಿಸಿದ ಬಳಿಕ ದೊರೆತ ಕೆರೆಮನೆ ಶಿವರಾಮ ಹೆಗಡೆ ಅವರ ಆತ್ಮಕಥೆ 'ನೆನಪಿನ ರಂಗಸ್ಥಳ'ದ ಬಗ್ಗೆ ಸಂಪಾದಕರ ಟಿಪ್ಪಣಿ ಲೇಖನದ ಕಡೆಯಲ್ಲಿದೆ. ಈ ನಾಲ್ವರೂ ಜಾನಪದ ಕ್ಷೇತ್ರದಲ್ಲಿ ಬೇರೆ ಬೇರೆ ಘಟ್ಟದಲ್ಲಿ ಬೇರೆ ಬೇರೆ ನೆಲೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ದುಡಿದ ಮಹನೀಯರು. ಜಾನಪದ ಅಧ್ಯಯನದ ಇತಿಹಾಸದ ದೃಷ್ಟಿಯಿಂದ ಈ ರೀತಿಯ ಸಾಧಕರ ಜೀವನ ಚರಿತ್ರೆಗಳು, ಅವರ ಕಾರ್ಯಸ್ವರೂಪದ ಪರಿಚಯಗಳು, ಹೊಸಬರಿಗೆ ಮಾರ್ಗದರ್ಶಕವಾಗುವಂತೆ ಅದರ ಮೌಲ್ಯಮಾಪನಗಳು ನಮಗೆ ಅಗತ್ಯವಾಗಿ ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಜಾನಪದ ಅಕಾಡೆಮಿ ಈ ಕೃತಿಗಳನ್ನು ಪ್ರಕಟಿಸಿರುವುದು ಸ್ವಾಗತಾರ್ಹ. ಈ ಮೆಚ್ಚಿಕೆಯೊಂದಿಗೇ ಪ್ರಸ್ತುತದ ಕೃತಿಗಳ ವಿಮರ್ಶಾತ್ಮಕ ಸಮೀಕ್ಷೆ ನಡೆಸಿದೆ.

1. ಶ್ರೀಕಂಠೇಶಗೌಡರ ಜಾನಪದ ಕೊಡುಗೆ

ಹೊಸಗನ್ನಡ ಸಾಹಿತ್ಯದ ಇತಿಹಾಸ ರಚನೆಯ ಸಂದರ್ಭದಲ್ಲಿ ದೊರೆಯಬೇಕಾಗುವಷ್ಟು ಪ್ರಚಾರ, ಆದ್ಯತೆ ಬೇರೆ ಬೇರೆ ಕಾರಣಕ್ಕೆ ಲಭ್ಯವಾಗದೇ ಹೋದ ಒಬ್ಬ ಅಪರೂಪದ ಅರ್ಹ ಸಾಹಿತಿ ಎಂ. ಎಲ್. ಶ್ರೀಕಂಠೇಶಗೌಡರು. ಆಂಗ್ಲರ ಆಧಿಪತ್ಯದಲ್ಲಿ ಕನ್ನಡದ ಅಭಿಮಾನಿಯಾಗಿದ್ದವರು. ವೃತ್ತಿಯಲ್ಲಿ ವಕೀಲ ನ್ಯಾಯಾಧೀಶರಾಗಿದ್ದರೂ ಸಾಹಿತ್ಯ ನಾಟಕಗಳ ಬಗೆಗೆ ಅಪಾರ ಆಸಕ್ತಿ. ಅಂತೆಯೇ ಇಂದಿಗೆ ಸರಿಯಾಗಿ ನೂರು ವರ್ಷಗಳ ಹಿಂದೆಯೇ ಷೇಕ್ಸ್‌ಪಿಯರ್‌ನ ನಾಟಕಗಳನ್ನು ಕನ್ನಡಕ್ಕೆ ತಂದರು. ತಮ್ಮ ಸುತ್ತಣ ಜನಪದ ಜೀವನದಲ್ಲಿ ಕಂಡುಂಡ ಜಾನಪದದ 'ಸಮಸ್ತ' ಪ್ರಕಾರಗಳನ್ನೂ ತಮ್ಮ ಕಾದಂಬರಿಗಳಲ್ಲಿ ಸೃಜನಾತ್ಮಕವಾಗಿ ಹಿಡಿದಿಟ್ಟರು.

ಇವೆಲ್ಲಾ ಈಗ ಚಾರಿತ್ರಿಕ ಮಹತ್ವದ ಕೊಡುಗೆಗಳಾಗಿವೆ. ಈ ಮಹತ್ವವನ್ನು ಅರಿತು ಜಾನಪದ ಅಕಾಡೆಮಿ ಅವರನ್ನು ಕುರಿತು 1993ರಲ್ಲಿ ಅವರ ಊರಾದ ದೇಶಹಳ್ಳಿಯಲ್ಲಿ ಒಂದು ವಿಚಾರಸಂಕಿರಣ ಏರ್ಪಡಿಸಿದ್ದಲ್ಲದೆ, ಆ ಸಂದರ್ಭದ ಲೇಖನಗಳನ್ನೆಲ್ಲಾ ಗ್ರಂಥ ರೂಪದಲ್ಲಿ ಪ್ರಕಟಿಸಿ ಒಳ್ಳೆಯ ಕೆಲಸ ಮಾಡಿದೆ.

ಆದರೆ, ಈ ಹೊತ್ತಿನ ಕೆಲ ವಿಚಾರ ಸಂಕಿರಣಗಳೂ, ವಿದ್ವಾಂಸರೂ ಹೇಗೆ ನಡೆಯುತ್ತವೆ/ತ್ತಾರೆ ಎಂಬುದಕ್ಕೆ ಈ ಗ್ರಂಥದ ಸಂಪಾದಕರಲ್ಲೊಬ್ಬರು ''ಸಂಪಾದಕರ ಮಾತು'' ಹೀಗೆ ಕನ್ನಡಿ ಹಿಡಿದಿದೆ: ''....ಎರಡು ಗೋಷ್ಠಿಗಳು ನಡೆದವು ನಾಲ್ವರು ಪ್ರಬಂಧಕಾರರು ಬರಲೊಪ್ಪಿದರೂ ಒಬ್ಬರೂ ಬರಲಿಲ್ಲ. ಪ್ರಬಂಧ ಕಳುಹಿಸುತ್ತೇವೆಂದವರೂ ಹಾಗೆ ಮಾಡಲಿಲ್ಲ. ಮತ್ತೊಬ್ಬರು ಮಾತನಾಡಿದರಾದರೂ ಬರೆದು ಕೊಡಲಿಲ್ಲ. ಹೀಗಾಗಿ ಗೋಷ್ಠಿಯಲ್ಲಿ ಓದಿದ ಆರು ಪ್ರಬಂಧಗಳು (ಕಾರ್ಯಕ್ರಮದ ಆಹ್ವಾನ ಪತ್ರಿಕೆಯಲ್ಲಿ ಎಂದು ಜನರ ಹೆಸರು ಇವೆ) ಎರಡು ಭಾಷಣಗಳು ಮಾತ್ರ ನನ್ನ ಕೈಸೇರಿದವು''(xiv).

ಈ ಆರೇಳು ಲೇಖನಗಳ ಸಂಗ್ರಹ 'ಸಾಕಷ್ಟು ಮೈತುಂಬಿಕೊಂಡು' ಬರಲೆಂದು ಉದ್ದೇಶದಿಂದ, 1993ರ ಈ ಲೇಖನಗಳ ಜತೆಗೆ 1974ರಲ್ಲಿ ನಡೆದ 'ಶ್ರೀಕಂಠೇಶಗೌಡರ ಕೃತಿಗಳು' ಬಿಡುಗಡೆ ಕಾರ್ಯಕ್ರಮದಲ್ಲಿ ಹಲವು ಹಿರಿಯರು ಮಾಡಿದ ಭಾಷಣಗಳು, ಬರೆದು ಕಳುಹಿಸಿದ ನೆನಪುಗಳು... ಇವನ್ನು ಸೇರಿಸಿ ಈ ಗ್ರಂಥ ಮಾಡಲಾಗಿದೆ. ಹೀಗಾಗಿ, ಈ ಕೃತಿಗೆ ಇಬ್ಬರನ್ನು ಸಂಪಾದಕರನ್ನಾಗಿ ಮಾಡಬೇಕಾಗಿ ಬಂದರೂ, ಪುಸ್ತಕ ''....ಮತ್ತಷ್ಟು ಮೌಲ್ಯಯುತವಾಗಿ ಬರಲು ಸಾಧ್ಯವಾಗಿದೆ''(xiv)

'ಶ್ರೀಕಂಠೇಶಗೌಡರ ಕೃತಿಗಳು' (1974) ಗ್ರಂಥದಲ್ಲಿ ಲಭ್ಯವಾಗದ ಎಷ್ಟೋ ಸಂಗತಿಗಳು ಇಷ್ಟು ತಡವಾಗಿಯಾದರೂ, ಈ ಮೂಲಕವಾದರೂ ಒಂದೆಡೆ ಓದುಗರಿಗೆ ದೊರೆಯುವಂತೆ ಆದುದು ಸ್ವಾಗತಾರ್ಹ. ಆದ್ದರಿಂದ ಇದೂ ಒಂದು ಆಕರ ಗ್ರಂಥವೇ ಆಗಿದೆ. ವಿಶೇಷವಾಗಿ ಶ್ರೀಕಂಠೇಶಗೌಡರ ವ್ಯಕ್ತಿ ವಿಚಾರ, ಬರಹಕ್ಕೆ ಸಂಬಂಧಿಸಿದ ಹಲವು ಹಿರಿಯರ ಅಪೂರ್ವ ನೆನಪುಗಳು ಇತರೆಡೆ ಅಲಭ್ಯವಾಗಿದ್ದು ಆ ದೃಷ್ಟಿಯಿಂದ ಈ ಸಂಕಲನದ ಮೌಲ್ಯ ಹೆಚ್ಚಿದೆ.

ಆದರೆ, ಇದೇ ಮಾತನ್ನು 'ವಿಚಾರಸಂಕಿರಣ'ದಲ್ಲಿ ಮಂಡಿತವಾದ ಎಲ್ಲ ಲೇಖನಗಳ ಬಗೆಗೆ ಹೇಳಲಾಗದುದು ವಿಷಾದನೀಯ. ಒಂದೇ ಕೃತಿಯನ್ನು ಬೇರೆ ಬೇರೆ ಅಧ್ಯಯನಕಾರರು ಭಿನ್ನ ಭಿನ್ನ ನೆಲೆಗಳಿಂದ ವಿಶ್ಲೇಷಿಸಿ ಮೌಲ್ಯಮಾಪನ ಮಾಡುವುದು ಅಭ್ಯಾಸದ ದೃಷ್ಟಿಯಿಂದ ಅಪೇಕ್ಷಣೀಯವಾದುದೇ. ಆದರೆ, ಅದು ಯಶಸ್ವಿಯಾಗಬೇಕಾದರೆ ವ್ಯವಸ್ಥಾಪಕರು ಲೇಖಕರಿಗೆ ವಿಷಯ ಹಂಚುವಾಗ ಅಗತ್ಯ ಪೂರ್ವಯೋಜನೆ ಮಾಡಿಕೊಂಡಿರಬೇಕು. ವಿಷಯದ ಹಂಚಿಕೆಯಲ್ಲಿ ಒಂದು ತಾತ್ವಿಕ ನಿಲುವು, ವ್ಯವಸ್ಥೆ ಇಲ್ಲದಿದ್ದರೆ ತಮ್ಮ ವಿಷಯದ ಚೌಕಟ್ಟಿನ ಅರಿವಿಲ್ಲದೇ ಬೇರೆ

ಬೇರೆ ಲೇಖಕರು ಒಂದೇ ಸಂಗತಿಯನ್ನೇ ಮತ್ತೆ ಮತ್ತೆ ಹೇಳುವಂತಾಗುತ್ತದೆ. ಕಪಿಷ್ಠ ಲೇಖನಗಳನ್ನು ಪುಸ್ತಕ ರೂಪದಲ್ಲಿ ಮುದ್ರಿಸುವಾಗಲಾದರೂ ಸಂಪಾದಕರು ಇಂತಹ ಅನವಶ್ಯಕ ಪುನರಾವರ್ತನೆಗಳನ್ನು ಕತ್ತರಿಸಿ ತೆಗೆಯುವುದು ಅಗತ್ಯವಾಗುತ್ತದೆ. ಇದರಿಂದ ಪುಸ್ತಕದಲ್ಲಿ ಒಟ್ಟು ನಾಲ್ಕು ಪುಟ ಕಡಿಮೆಯಾದರೆ ಅನವಶ್ಯಕ ವೆಚ್ಚದ ದೃಷ್ಟಿಯಿಂದಲೂ ಓದುಗನ ಸಹನೆಯ ದೃಷ್ಟಿಯಿಂದಲೂ ಕ್ಷಮ್ಯವಾಗುತ್ತದೆ. ಆದರೆ, ಪ್ರಸ್ತುತ ಸಂಕಲನದಲ್ಲಿ ಹಲವೆಡೆ ಪುನರಾವರ್ತನೆಗಳಿದ್ದರೆ, ಕೆಲವೆಡೆ ಸಂಗತಿಗಳನ್ನು ಪಟ್ಟಿಮಾಡಿಕೊಡುವುದಷ್ಟಕ್ಕೆ ಇಲ್ಲವೇ ಬಾಲಿಶ ವಿಶ್ಲೇಷಣೆಯನ್ನೊಳಗೊಂಡಿದ್ದು ಓದುಗನಿಗೆ ಹೆಚ್ಚಿನ ಒಳನೋಟ ಕೊಡುವಲ್ಲಿ ಸೋಲುತ್ತದೆ. ಈ ಕೆಲ ನಿದರ್ಶನಗಳನ್ನು ನೋಡಬಹುದು.

ಮೊದಲ ಬರಹ ಶ್ರೀಕಂಠೇಶಗೌಡರನ್ನು ಕುರಿತು ಹ.ಕ. ರಾಜೇಗೌಡರು ಬರೆದ ''ಜೀವನಚಿತ್ರ. 22 ಪುಟಗಳಲ್ಲಿ ಸಾಕಷ್ಟು ವಿವರವಾದ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ ಆದರೆ, ಪ್ರಶ್ನೆ ಇರುವುದು ಈ ಇಡೀ ಬರಹ 1977ರಲ್ಲಿ ಐಬಿಎಚ್ ಸಂಸ್ಥೆ ಮಕ್ಕಳಿಗಾಗಿ ಪ್ರಕಟಿಸಿದ ಕಿರು ಪುಸ್ತಿಕೆಯ ಯಥಾ ಪ್ರತಿ ಆಗಿರುವುದರಲ್ಲಿ.'' ಶ್ರೀಕಂಠೇಶಗೌಡರು ಓದಿನಲ್ಲಿ ತುಂಬ ಚುರುಕಾಗಿದ್ದರು. ಉಪಾಧ್ಯಾಯರು ಹೇಳಿದ್ದನ್ನೆಲ್ಲಾ ಚೆನ್ನಾಗಿ ಗ್ರಹಿಸುವುದು. ಬಾಲಕನಿಗೆ ಕನ್ನಡದ ಬಗ್ಗೆ ವಿಶೇಷ ಅಭಿಮಾನ. (2)-ಈ ರೀತಿ ಎಳೆಯರಿಗೆ ಸ್ಫೂರ್ತಿದಾಯಕವಾಗಬಹುದಾದ ನಿರೂಪಣೆ; ಈಗ ವಿದ್ವಾಂಸರ ಆಕರ ಗ್ರಂಥದಲ್ಲಿಯೂ ಯಾವ ಪರಿಷ್ಕಾರವೂ ಇಲ್ಲದೇ ಸೇರುವುದು ಎಷ್ಟು ಉಚಿತ? ಅಲ್ಲದೆ, 'ಮೂಲ'ದಲ್ಲಿನ ಕೆಲ ವಾಕ್ಯರಚನೆಯ 'ದೋಷ'ಗಳೊಂದಿಗೆ, ಅಲ್ಲಿರದ ಮುದ್ರಣ ದೋಷಗಳು ಇಲ್ಲಿ ರಾರಾಜಿಸಿರುವುದು (ಪು. 14, 16) ಇನ್ನೊಂದು ವಿಶೇಷ.

ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರರ ''ಎಂ. ಎಲ್. ಶ್ರೀಕಂಠೇಶಗೌಡರ ಜಾನಪದ ಪ್ರಜ್ಞೆ'' ಕುರಿತ 24 ಪುಟಗಳ ಸುದೀರ್ಘ ಲೇಖನ ಹಿರಿಯ ಸಹೃದಯ ಮನಸ್ಸೊಂದು ಗೌಡರ ಸಾಹಿತ್ಯ ಕೃತಿಗಳನ್ನು ಪರಿಭಾವಿಸಿ, ಅಷ್ಟೇ ಮಮಕಾರದಿಂದ ಇತರರಿಗೆ ಪರಿಚಯಿಸುವ ಕಾರ್ಯ ಮಾಡುತ್ತದೆ. ಈ ಸೋದಾಹರಣ 'ರಸವಿಮರ್ಶೆ'ಯ ಒಂದೊಂದು ಅಂಶದ ವಿಸ್ತರಣೆಯಾಗಿ ಮುಂದಿನ ಬಹಳಷ್ಟು ಲೇಖನಗಳು ಕಂಡು ಬಂದರೆ ಸೋಜಿಗವಲ್ಲ.

ಡಾ. ಅರ್ಜುನಪುರಿ ಅಪ್ಪಾಜಿಗೌಡರ ''....ಗೌಡರ ಕಾಲದ ಜಾನಪದ ಪರಿಸರ'' ಲೇಖನ, ಅವರೇ ಹೇಳುವಂತೆ ಕೃತಿ ವಿಮರ್ಶೆ ಮಾಡುವ ಬದಲು ''ದೇಶಹಳ್ಳಿಯ ವಯೋವೃದ್ಧರನ್ನು ಕೇಳಿ ನೂರಾರು ವರ್ಷಗಳ ಹಿಂದೆ ಅಲ್ಲಿನ ಜನಜೀವನ ಹೇಗಿರಬಹುದೆಂಬುದನ್ನು ಹಿಡಿದಿರಿಸುವ ಪ್ರಯತ್ನ''ವಾಗಿದೆ: (60). ಆದರೆ, ಅದರಲ್ಲಿನ ''ಜನ ನೆಮ್ಮದಿಯಾಗಿದ್ದರು. ಆರೋಗ್ಯದಿಂದದೃಢಕಾಯರಾಗಿದ್ದರೂ (?), ಬಡತನ ಕಾಡುತ್ತಿದ್ದರೂ ಸುಖಕ್ಕೆ ಕೊರತೆ ಇರಲಿಲ್ಲ'' (63).... ಇಂತಹ ಹಲವು ಸಾರಾಸಗಟು ಅಭಿಪ್ರಾಯಗಳು, (ದೋಷಗಳು), ಉದ್ದವಾದ ಮಾಹಿತಿ ಪಟ್ಟಿಗಳೇ ಲೇಖನದ

ಉದ್ದಕ್ಕೂ ಇದ್ದು ಒಟ್ಟಾರೆ ಬರಹ ಓದುಗನಿಗೆ ನಿರಾಸೆ ಉಂಟುಮಾಡುತ್ತದೆ.

ಶ್ರೀ ಎಂ.ಎಸ್. ರಾಮಯ್ಯ ಹಾಗೂ ಜಿ.ವಿ.ಡಿ. ಇವರಿಬ್ಬರ ಲೇಖನಗಳಲ್ಲೂ ಮಾಹಿತಿಗಳ ಪುನರಾವರ್ತನೆ ಇದೆ. ವಿಶ್ಲೇಷಣೆಯಲ್ಲೂ ವಿಶೇಷತೆ ಏನಿಲ್ಲ. ರಾಮಯ್ಯ ಅವರ ಬರಹದಲ್ಲಿ "... ಯಥಾಪಿಥಾ ತಥಾ ಪುತ್ರ: '(303)' ಈ ಗಾದೆಯು ತಾಯಿಯಂತೆ ಮಗಳು ನೂಲಿನಂತೆ ಸೀರೆ ಎಂಬ ಗಾದೆಯನ್ನು ನೆನಪಿಗೆ ತರುತ್ತದೆ. "ತಂದೆತಾಯಿಗಳು ಇದ್ದಂತೆ ಮಕ್ಕಳು ಇರುತ್ತವೆ" (73) ಎಂಬಂತಹ ಬಾಲಿಶ ವಿವರಣೆಗಳು ಪದೇಪದೇ ಕಾಣಿಸಿಕೊಳ್ಳುತ್ತವೆ. ಜಿ.ವಿ.ಡಿ. ಇದೇ ಗಾದೆಯನ್ನು ಹೇಗೆ ಉಲ್ಲೇಖಿಸಿ, ವ್ಯಾಖ್ಯಾನಿಸುತ್ತಾರೆಂಬುದನ್ನು ಹೋಲಿಸಿ ನೋಡಬಹುದು. (ಪು. 94), ಆದರೂ ಜಿ.ವಿ.ಡಿ. ಕೆಲವೊಮ್ಮೆ ಭಿನ್ನವಾಗಿ ನೋಡಬಲ್ಲರು ಎಂಬುದಕ್ಕೆ ಈ ನಿದರ್ಶನ ಸಾಕಾದೀತು: ಶ್ರೀ ರಾಮಯ್ಯ ಅವರ ಬರಹ:

"....ಸುಟ್ಟ ಕೈ ನೆಟ್ಟಗಾಗುವುದಕ್ಕೆ ಬಹು ಕಷ್ಟಪಡಬೇಕು" (317) ಒಮ್ಮೆ ಊನವಾದ ಅಂಗಾಂಗಗಳನ್ನು ಎಂದೆಂದಿಗೂ ಸಹಜ ರೂಪಕ್ಕೆ ತರಲು ಸಾಧ್ಯವೇ ಇಲ್ಲ. ನಾಯಿ ಬಲ ನೆಟ್ಟಗಾದೀತೆ, ಹೀನ ಸುಳಿ ಬೋಳಿಸಿದರೆ ಹೋದೀತೆ ಎಂದಂತೆ ಈ ಗಾದೆ "ಕೃಷ್ಣನ ಸ್ವಭಾವ ತಿಳಿಸುತ್ತದೆ." (75). ಶ್ರೀ ಜಿ.ವಿ.ಡಿ.: "ಸುಟ್ಟ ಕೈ ನೆಟ್ಟಗಾಗುವುದಕ್ಕೆ ಬಹಳ ಕಷ್ಟಪಡಬೇಕು' (ಪು. 417) ಹೆಸರು ಗಳಿಸುವುದು ಕಷ್ಟ, ಕಳೆದುಕೊಳ್ಳುವುದು ಸುಲಭ. ಕಳೆದುಹೋದ ಹೆಸರನ್ನು ಮತ್ತೇ ಗಳಿಸಬೇಕಾದರೆ ಬಹಳ ಕಷ್ಟ-ಸ್ಯಾನೆ ರಾಗಿ ಬೀಸಬೇಕು, 'ಕೃಷ್ಣನು ತನ್ನ ಕೆಟ್ಟ ಹೆಸರಿನಿಂದ ತಾನು ಪಡುತ್ತಿರುವ ಕಷ್ಟವನ್ನು ಒಳ್ಳೆ ಹೆಸರಿರುವ ರಾಮನಿಗಿರುವ ಉತ್ಕೃಷ್ಟತೆನ್ನು ನೆನಪಿಸಿಕೊಂಡು ಪೇಚಾಡುತ್ತಿದ್ದನು'-ಇಂಥ ಸಂದರ್ಭದಲ್ಲಿ ಕೃಷ್ಣನ ಧರ್ಮಕ್ಕೆ ಹಿಡಿದ ಕನ್ನಡಿಯಾಗಿದೆ ಮೇಲಿನ ಗಾದೆ." (96)

"...ಗೌಡರ ಕೃತಿಗಳಲ್ಲಿ ಜಾನಪದ ಭಾಷೆ" ಲೇಖನ ಬರೆದ ಡಾ. ಸೋಮಶೇಖರ ಗೌಡ ಅವರು"... ಭಾಷೆಯ ದೃಷ್ಟಿಯಿಂದ ಗೌಡರ ಸಾಹಿತ್ಯ ಅತ್ಯಂತ ಅಮೂಲ್ಯವಾದುದಾಗಿದೆ" (110) ಎಂದು ಅಭಿಪ್ರಾಯಪಟ್ಟು, ಭಾಷಾ ವಿಜ್ಞಾನದ ದೃಷ್ಟಿಯಿಂದ ಗಮನಿಸಬಹುದಾದ ಹಲವು ಮಾಹಿತಿಗಳನ್ನು ಪಟ್ಟಿ ಮಾಡುತ್ತಾರಾದರೂ ಅವನ್ನು ವೈಜ್ಞಾನಿಕವಾಗಿ ವಿವರಿಸುವ ಮನಸ್ಸು ಮಾಡುವುದಿಲ್ಲ.

ಇವುಗಳಿಗೆ ಹೋಲಿಸಿದರೆ ಶ್ರೀ ಎ.ವಿ. ನಾವಡ ಅವರ "ಗೌಡರ ಕಾದಂಬರಿಗಳಲ್ಲಿ ಜನಪದ ಅಂಶಗಳು" ಲೇಖನ ಚಿಕ್ಕದಾದರೂ ಹೆಚ್ಚು ವಿಚಾರವಂತಿಕೆಯಿಂದ ಕೂಡಿ ಓದುಗನಿಗೆ ಗೌಡರ ಕೃತಿಗಳನ್ನು ಈ ದೃಷ್ಟಿಯಿಂದ ಅರ್ಥಮಾಡಿಕೊಳ್ಳಲು ಬೇಕಾದ ಕೆಲ ಸೂಚನೆಗಳನ್ನು ನೀಡುತ್ತದೆ (ಉದಾ.ಗೆ. ನೋಡಿ ಪು. 85ರ ಮೊದಲ ಪ್ಯಾರಾ).

ಶ್ರೀ ನಿಂಗಣ್ಣ ಸಣ್ಣಕ್ಕಿ ಅವರು "...ಗೌಡರ ಭವಾನಿ ಬಾಳು ಕಾದಂಬರಿಯಲ್ಲಿ "ಜಾನಪದ ಪ್ರಜ್ಞೆ" ಲೇಖನದಲ್ಲಿ ಗೊಂದಲಿಗರ ಹಾಡಿನ ಧಾಟಿ, ಶೈಲಿ, ವಸ್ತುವಿಗೂ

ಗೌಡರ ರಚನೆಗೂ ಇರುವ ಸಾಮ್ಯ ಗುರುತಿಸುವ ಮೂಲಕ ಗೌಡರಿಗೆ ಇದ್ದ ಗೊಂದಲಿಗರ ಜೀವನ ದರ್ಶನ, ಪ್ರಜ್ಞೆಯ ವಿವೇಚನೆ ಮಾಡುತ್ತಾರೆ. ಹಾಗೆಯೇ, ಈ ಕಾದಂಬರಿಯಲ್ಲಿ ಬಳಕೆಯಾಗಿರುವ ಲಾವಣಿಗಳ ರಚನೆಯನ್ನೂ ಕುರುಬರ ಹಾಡುಗಳ ಮೇಲೆ ಆಗಿರುವ ಡೊಳ್ಳಿನ ಹಾಡಿನ ಪ್ರಭಾವವನ್ನೂ ಹೋಲಿಸಿ ನೋಡಿರುವುದು ಗಮನಿಸುವಂತಿದೆ.

ಡಾ॥ ಡಿ.ಕೆ. ರಾಜೇಂದ್ರ (''...ಗೌಡರ ಜಾನಪದ ಕೊಡುಗೆ'') ಅವರು ಗೌಡರ ಕೃತಿಗಳಲ್ಲಿ ಉಲ್ಲೇಖವಾಗಿರುವ ವಿವಿಧ ಪ್ರಕಾರಗಳು, ಕಲೆ-ಕಲಾವಿದರ ಪಟ್ಟಿ ಮಾಡಿ (ಅದೂ ಅಪೂರ್ಣ) ...ಹೀಗೆ ಜಾನಪದ ಸಂಬಂಧವಾದ ಎಲ್ಲ ಮಗ್ಗಲುಗಳನ್ನು (''ಮುಗ್ಗಲು'' ಎಂದು ಮಾಡಿದ್ದಾನೆ ಮುದ್ರಾರಾಕ್ಷಸ'') ಅವರು ಮುಟ್ಟಿದ್ದಾರೆ-ತಟ್ಟಿ ತಡವಿದ್ದಾರೆ. ... ಆ ಕ್ಷೇತ್ರವನ್ನು ಸಂಪೂರ್ಣ ಸೂರೆಗೊಂಡವರು ಶ್ರೀಕಂಠೇಶಗೌಡರೊಬ್ಬರೇ'' (130) ಎಂದಿದ್ದಾರೆ, ಮುಂದುವರೆದು ''ಈ ವೃತ್ತಿ ಗಾಯಕರ ಬಗೆಗಿನ ವಿವರವಾದ ಅಧ್ಯಯನ ವ್ಯಾಪಕವಾದ ರೀತಿಯಲ್ಲಿ ಡಾ. ಜೀಶಂಪ ಅವರಿಂದ ನಡೆದಿದೆಯಾದರೂ ಅವರನ್ನು ಮೊದಲು ಹೆಸರಿಸಿ ಕೀರ್ತಿ ಶ್ರೀಕಂಠೇಶಗೌಡರದ್ದು''. (134) ಎನ್ನುವ ಮೂಲಕ ಕರ್ನಾಟಕ ಜಾನಪದ ಅಧ್ಯಯನದ ಇತಿಹಾಸದಲ್ಲಿ ಶ್ರೀಗೌಡರಿಗೆ ಸಲ್ಲಬೇಕಾದ ಅಧ್ಯಸ್ಥಾನದ ಅರ್ಹತೆಯ ಬಗೆಗೆ ಅಧ್ಯಯನಕಾರರು ಗಮನ ಸೆಳೆಯುತ್ತಾರೆ.

ಮುಂದಿನ ಪು. 60 ಪುಟಗಳಲ್ಲಿ, ಈ ಮೊದಲೇ ಹೇಳಿದಂತೆ 'ಶ್ರೀಕಂಠೇಶಗೊಡರ ಕೃತಿಗಳು' ಗ್ರಂಥದ ಬಿಡುಗಡೆ ಸಂದರ್ಭದಲ್ಲಿ ಹಿರಿಯರಾದ ಶ್ರೀ ಪಿ.ಎನ್. ಜವರಪ್ಪ ಗೌಡ, ಡಾ. ಹಾ.ಮಾ.ನಾ., ಡಾ. ಮಾಸ್ತಿ, ಶ್ರೀ ಎಚ್.ಕೆ. ವೀರಣ್ಣಗೌಡ, ಡಾ. ಡಿ.ವಿ.ಜಿ. ಮೊದಲಾದವರು ಶ್ರೀಕಂಠೇಶಗೌಡರ ವ್ಯಕ್ತಿತ್ವ, ಕೃತಿಗಳು ಇತ್ಯಾದಿ ಕುರಿತು ಹೇಳಿದ ಹಲವು ಅಪರೂಪದ ನೆನಪುಗಳು, ಪತ್ರಗಳು ಮೊದಲಾದುವು ದಾಖಿಲುಗೊಂಡಿದ್ದು ಅಭ್ಯಾಸನೀಯವಾಗಿವೆ.

2. ಜೀಶಂಪ ಸಂಸ್ಮರಣೆ

ಕರ್ನಾಟಕ ಜಾನಪದ ಅಧ್ಯಯನ ಚರಿತ್ರೆಯಲ್ಲಿ ಮಹತ್ವದ ಸ್ಥಾನ ಪಡೆದವರಲ್ಲಿ ಡಾ. ಜೀಶಂಪ ಸಹ ಒಬ್ಬರು. ಮೈಸೂರು ವಿ.ವಿ.ಯಲ್ಲಿ ಜಾನಪದ ಪ್ರಾಧ್ಯಾಪಕರಾಗಿದ್ದ ಇವರು ವಿ.ವಿ. ಮಟ್ಟದಲ್ಲೂ ಇತರ ಸಂಘಸಂಸ್ಥೆಗಳ ಮೂಲಕವೂ ಜಾನಪದ ವಾತಾವರಣವೊಂದು ಕೆಲಕಾಲ ಜೀವಂತವಾಗಿರಲು ಕಾರಣರಾದರು. ಜಾನಪದ ಅಕಾಡೆಮಿಯ ಸ್ಥಾಪಕ ಸದಸ್ಯರಾಗಿಯೂ ಕೊನೆಯಲ್ಲಿ ಅಧ್ಯಕ್ಷರಾಗಿಯೂ ಇದ್ದ ಇವರು ಅವಧಿ ಮುಗಿವ ಮುನ್ನವೇ ಮೃತರಾದರು. ಈ ಹಿನ್ನೆಲೆಯಲ್ಲಿ ಅಕಾಡೆಮಿ ಈ ಸಂಸ್ಮರಣ ಗ್ರಂಥ ಪ್ರಕಟಿಸಿ ತನ್ನ ಗೌರವ ಸಲ್ಲಿಸಿದೆ.

ನಾಲ್ಕು ಭಾಗಗಳಲ್ಲಿನ ಈ ಕೃತಿಯ 23 ಬರಹಗಳನ್ನು 22 ಜನ ಹಿರಿಯರೂ ಅವರ ಆಪ್ತ ಮಿತ್ರರೂ, ಶಿಷ್ಯರೂ ಬರೆದಿದ್ದು ಅವು ಮುಖ್ಯವಾಗಿ ಡಾ. ಜೀಶಂಪ

ಅವರ ವಿದ್ವತ್ತು, ಉದಾರಗುಣ, ಕಲಾಪ್ರೇಮ, ಜಾನಪದ ಕ್ಷೇತ್ರಕ್ಕೆ ಅವರ ಮೌಲಿಕ ಕೊಡುಗೆಗಳು, ಅವರ ಸಣ್ಣ ಕತೆಗಳ ಮಹತ್ವ... ಈ ಎಲ್ಲವನ್ನು ಸವಿವರವಾಗಿ ಆತ್ಮೀಯವಾಗಿ ವರ್ಣಿಸುತ್ತವೆ. ಜೀಶಂಪ ಬಾಳು-ಬದುಕಿನ ಬಗೆಗೆ ಗೊತ್ತಿರದ ಎಷ್ಟೋ ಸಂಗತಿಗಳು ಇಲ್ಲಿ ಹಲವರ ನೆನಪುಗಳ ಮೂಲಕ ಪ್ರಸ್ತಾಪಿತಗೊಂಡಿರುವುದರಿಂದ, ಜೀಶಂಪ ಬಗೆಗೆ ಒಳ್ಳೆಯ ಆಕರ ಗ್ರಂಥವೂ ಆಗಿರುವುದು ಈ ಕೃತಿಯ ಉಪಯುಕ್ತತೆಯನ್ನು ಹೆಚ್ಚಿಸಿದೆ. ಆದರೆ, ಇದೊಂದು 'ಸಂಸ್ಮರಣ' ಗ್ರಂಥವಾದುದರಿಂದಲೋ ಅಥವಾ ಹೆಚ್ಚಿನ ಲೇಖಕರು ಡಾ. ಜೀಶಂಪ ಅವರ ಆತ್ಮೀಯವಲಯಕ್ಕೆ ಸೇರಿ ಅವರ ಏಳುಬೀಳಿನಲ್ಲಿ ಸಹಭಾಗಿಯಾಗಿದ್ದುದರಿಂದಲೋ ಆ ಗೌರವ, ಕೃತಜ್ಞತೆಯ ಪರಿಧಿಯಲ್ಲೇ ಅವರ ಬರಹಗಳು ಸುತ್ತು ಹೊಡೆದು ವಿಶ್ರಮಿಸುತ್ತವೆ. ಅಡಿಗಡಿಗೆ ಬರುವ ಸ್ತುತಿಪರವಾದ ಪ್ರಶಂಸಾ ನುಡಿಗಳು ಓದುಗನಿಗೆ ಅನವಶ್ಯಕ ಪುನರಾವರ್ತನೆ ಎನಿಸುವುದಲ್ಲದೆ, ಅದರಿಂದ ಮುಂದಕ್ಕೆ ಕೊಂಡೊಯ್ಯದೆ, ಜೀಶಂಪ ಚಿತ್ರ ಕಟ್ಟಿಕೊಡದಿರುವುದು ದೊಡ್ಡ ಕೊರತೆ ಎನಿಸುತ್ತದೆ. ಸಂಸ್ಮರಣ ಗ್ರಂಥಗಳೆಂದರೆ ವಸ್ತುನಿಷ್ಠತೆಗಿಂತ ವ್ಯಕ್ತಿನಿಷ್ಠವಾಗಿಯೋ ಇರಬೇಕೇ? ಇದಕ್ಕೆ ಅಪವಾದವೆಂಬಂತೆ ಡಾ. ದೇಜಗೌ, ಶ್ರೀ ಎಚ್.ಎಲ್. ನಾಗೇಗೌಡರಂತಹ ಹಿರಿಯ ವಿದ್ವಾಂಸರು, ಡಾ. ಜೀಶಂಪ ಅವರ ಬಗೆಗೆ ಪ್ರೀತಿ, ಗೌರವ ಇಟ್ಟುಕೊಂಡು ವಸ್ತುನಿಷ್ಠವಾಗಿ, ಅವರ ವ್ಯಕ್ತಿತ್ವದ ಭಿನ್ನ ಮುಖಗಳನ್ನು ಎಳೆಎಳೆಯಾಗಿ ಬಿಡಿಸಿ ಇಡುವುದರಲ್ಲಿ ಜೀ. ಶಂ. ಪರಮಶಿವಯ್ಯ ಅವರನ್ನು ರಕ್ತಮಾಂಸಗಳ ನಿಜ ಮಾನವನನ್ನಾಗಿ ನೋಡಿದ ಸಹಜತೆ ಇದೆ. ನಿದರ್ಶನಕ್ಕೆ ಶ್ರೀ ನಾಗೇಗೌಡ ಈ ಮಾತು: "ಅವರ ಅಕಾಲಿಕ ಮರಣ ಜಾನಪದಕ್ಕೆ ದೊಡ್ಡ ನಷ್ಟ. ದುರಂತ ಎಂದರೂ ತಪ್ಪಲ್ಲ, ಮೊದಮೊದಲು ಅವರು ಕೈಗೊಂಡ ಜಾನಪದದ ಗೌರೀಶಂಕರದ ತುದಿಮುಟ್ಟುವ ಕೆಲಸ ಇನ್ನೇನು ಆಯಿತು ಅನ್ನುವಷ್ಟರಲ್ಲಿ ಅವರು ಜಾರಿಬಿಟ್ಟರು. ಅಲ್ಲಿಂದ ಜಾರುತ್ತಲೇ ಕೆಳಕ್ಕೆ ಬಂದರು. ಇದೇ ನಮ್ಮೆಲ್ಲರನ್ನೂ ಕೊರೆಯುವ ವಿಷಯ" (ಪು. 20).

ಮೂರೇ ಮಾತಿನಲ್ಲಿ ಜೀಶಂಪ ಅವರ ಏಳುಬೀಳನ್ನು ಹಿಡಿದಿಡುವ ಈ ನುಡಿಚಿತ್ರದಲ್ಲಿ ಆ ಮಹತ್ವಾಕಾಂಕ್ಷಿ ಸಾಹಸೀ ವ್ಯಕ್ತಿತ್ವದ ಬಗೆಗೆ ಅಪಾರ ಗೌರವ, ನಿರೀಕ್ಷೆ, ಕೊನೆಗೆ ವಿಷಾದವಿದೆ. ಈ ಕೊರಗು ಕೇವಲ ಲೇಖಕರದಷ್ಟೇ ಆಗಿ ಉಳಿಯದೆ ಅದು ಅಲ್ಲಿಂದ ಓದುಗನದೂ ಆಗಿ ಪಲ್ಲಟಗೊಂಡು ಓದುಗ ಹಾಗೂ ಕೃತಿಯೊಡನೆಯ ತಾದಾತ್ಮ್ಯ ಹೆಚ್ಚಿಸುತ್ತದೆಯಲ್ಲವೆ?

ಆದರೆ, ವ್ಯಕ್ತಿನಿಷ್ಠ ಪ್ರಶಂಸಾನುಡಿಗಟ್ಟುಗಳು ಹೇಗೆ ಓದುಗನಲ್ಲಿ ಅನುಮಾನ ಉಂಟು ಮಾಡಿ, ದೂರವಿಸಬಹುದು ಎಂಬುದಕ್ಕೆ ಗ್ರಂಥದ ಉದ್ದಕ್ಕೂ ಬೇಕಾದಷ್ಟು ನಿದರ್ಶನಗಳಿದ್ದರೂ ಸ್ಥಳಾಭಾವದಿಂದ ಮಾದರಿಗಾಗಿ ಒಂದೆರಡು ನುಡಿಗಳನ್ನು ಮಾತ್ರ ಅನಿವಾರ್ಯವಾಗಿ ಇಲ್ಲಿ ಉಲ್ಲೇಖಿಸಿದೆ.

ಗ್ರಂಥದ ಸಂಪಾದಕರ 'ಮುನ್ನುಡಿ' "ನೆನೆನೆನೆದು ಕೈಯ ಮುಗಿದೇವು" ಪ್ರಾರಂಭದ ಇಡೀ ಪುಟ ಇರುವುದು ಈ ಶೈಲಿಯಲ್ಲಿ.

'ಜೀಶಂಪ ಎಂಬ ಮೂರು ಅಕ್ಷರಗಳನ್ನು ಕೇಳುತ್ತಲೇ ಜಾನಪದ ಬಗ್ಗೆ ಅಲ್ಪ-ಸ್ವಲ್ಪ ಅಭಿರುಚಿ ಮತ್ತು ಆಸಕ್ತಿ ಇರುವವರೆಲ್ಲರ ಮನಸ್ಸಿನಲ್ಲೂ ಸಹ ಅಖಂಡ ಕರ್ನಾಟಕದ ಸಂಪತ್ ಸಮೃದ್ಧ ವೈವಿಧ್ಯಮಯ ಜಾನಪದ ಗಣಿ ಜೀವ ತಳೆದು ಎದ್ದು ನಿಲ್ಲುತ್ತದೆ.... ದೇಶವಿದೇಶಗಳ ಜಾನಪದ ವಿದ್ವಾಂಸರು ಕರ್ನಾಟಕ ಜಾನಪದದ ಬಗೆಗಿನ ಅದ್ಭುತ ರಮ್ಯ ಜೀವ ಕಥನವನ್ನು ಕೇಳಲು ಕುತೂಹಲದ ದೀಪಗಳನ್ನು ಕಣ್ಣುಗಳಲ್ಲಿ ಬೆಳಗಿಸುತ್ತಾ ನಿರೀಕ್ಷಿಸುತ್ತಾರೆ. ಜಾನಪದ ಲೋಕದ ಮೇಲೆ ಇಷ್ಟೆಲ್ಲಾ ರೀತಿಯ ಮೋಹನ ಮುರಲಿಯ ಮೋಹಕ ಜಾಲವನ್ನು ಬೀಸುವ ಮರೆಯಲಾರದ ಮಹಾವಿದ್ವಾಂಸ ಡಾ. ಜೀರಹಳ್ಳಿ ಶಂಕರೇಗೌಡ ಪರಮಶಿವಯ್ಯ ದೈಹಿಕವಾಗಿ ನಮ್ಮೆದುರು ಇಲ್ಲ. ಅವರು ಈಗಾಗಲೇ ಆ ಲೋಕದಲ್ಲಿ ಜಾನಪದ ಪರಿಚಯ ಮತ್ತು ಸಂಶೋಧನಾ ಕಾಯಕದಲ್ಲಿ ತನ್ಮಯರಾಗಿ ತಮ್ಮ ಸುತ್ತ ಜಾನಪದ ಬೆಳಕನ್ನು ಸೃಷ್ಟಿಸಿಕೊಂಡು ಸಂತೋಷಿಸುತ್ತಿರಬಹುದು,.... (v-vi)

ಲೇಖಕಿಯೊಬ್ಬರ ಮಾತುಗಳಿವು. "...ಜೀಶಂಪ... ಅವರೇ ಒಂದು ವಿಶ್ವಕೋಶ, ಡೈರೆಕ್ಟರಿಯಾಗಿದ್ದರು.... ಜೀಶಂಪ ಅವರ ಮುಗ್ಧ ಮನಸ್ಸಿಗೆ ಕಷ್ಟ ಕಂಡದ್ದೇ ಇಲ್ಲ. ಎಲ್ಲವೂ ಬಿಳುಪೇ, ಹಾಲು ಬಿಳುಪು..." (58). ಉಳಿದಂತೆ, ಇಲ್ಲಿ ಕೆಲ ಶೀರ್ಷಿಕೆಗಳೇ ಲೇಖಕರ 'ಸ್ಮರಣೆ'ಯ ಪ್ರತಿಬಿಂಬಗಳಾಗುತ್ತವೆ. ನೋಡಿ: "ಜಾನಪದ ಭೀಷ್ಮ" "ಜಾನಪದ ಧೀಕ್ಷಾಗುರು" "..ಜಾನಪದ ಮಹಾಮತ್ಸ್ಯ", "ಜಾನಪದ ಜೀವನಾಡಿ", "ಜಾನಪದ ದೈತ್ಯಶಕ್ತಿ ಸ್ವರೂಪಿಣ್ಯೆ ಶರಣು"...

ಓದುಗರಲ್ಲಿ ಉಂಟಾಗಬಹುದಾದ ತಪ್ಪು ಕಲ್ಪನೆ ಅಥವಾ ಗೊಂದಲವನ್ನು ನಿವಾರಿಸುವ ದೃಷ್ಟಿಯಿಂದ ಒಂದು ಸಂಗತಿಯನ್ನು ಇಲ್ಲಿ ಉಲ್ಲೇಖಿಸುವುದು ಅನಿವಾರ್ಯವಾಗಿದೆ.

ಕೆಲವರು ಡಾ. ಜೀಶಂಪ ಅವರ ಗುಣಗಳನ್ನು ಪ್ರಶಂಸಿಸುತ್ತಾ ಅವರಿಗೆ 'ಕೃತಘ್ನ'ರಾದ ಶಿಷ್ಯರು, ಸ್ನೇಹಿತರು ಬಗೆಗೆ ಆಕ್ಷೇಪಿಸಿ ಬರೆದಿದ್ದಾರೆ. ಕಾಕತಾಳೀಯವಾಗಿ, ಇದಕ್ಕೆ ಉತ್ತರವೇನೋ ಎಂಬಂತೆ ಇತರರ ಕೆಲಮಾತುಗಳೂ ಇಲ್ಲಿ ದಾಖಲಾಗಿವೆ. ಉದಾ.ಗೆ.-ಶ್ರೀಮತಿ ಜೀಶಂಪ ಅವರು ಹೃದ್ಯವಾಗಿ ತಮ್ಮ ಪತಿಯನ್ನು ಚಿತ್ರಿಸುತ್ತಾ (ಅವರು ಇನ್ನಷ್ಟು ಬರೆದಿದ್ದರೆ ಚೆನ್ನಾಗಿತ್ತು) ಜೀಶಂಪ "ಸ್ವಪ್ರಯತ್ನದಿಂದ ಮೇಲೆ ಬಂದಿದ್ದರು" ಎಂದು ಹೇಳಿ ಮುಂದುವರೆದು "ನನ್ನವರು ಶಿಷ್ಯರ, ಸ್ನೇಹಿತರ ಏಳಿಗೆಗಾಗಿ ಪಟ್ಟಿರುವ ಶ್ರಮ, ವ್ಯಯ ಮಾಡಿರುವ ಸಮಯ... ಆಸಕ್ತಿಯನ್ನು ನಾನು... ಬಲ್ಲೆ. ಅವರಲ್ಲಿ ಅನೇಕರು ಕೊನೆಯತನಕ ಅದೇ ಪ್ರೀತಿವಿಶ್ವಾಸ ತೋರಿದವರಾದರೆ, ಬೆನ್ನು ತಿರುಗಿಸಿದವರು ಹಲವರಿದ್ದಾರೆ..." (5) ಎಂದು ನೊಂದು ಬರೆದಿದ್ದಾರೆ. ಆದರೆ, ಜೀಶಂಪ ಏಳಿಗೆಯಲ್ಲಿ ಬಹು ಮುಖ್ಯಪಾತ್ರ ವಹಿಸಿದ ಡಾ. ದೇಜಗೌ ಅದನ್ನು ನೆನಪಿಸಿಕೊಳ್ಳುವುದು ಹೀಗೆ: "ಕೊನೆಗೆ ನನ್ನ ಮಾರ್ಗದರ್ಶನದಿಂದಾಗಿ ಅವರು (ಜೀಶಂಪ) ಇಂಟರ್ ಮೀಡಿಯಟ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು.

''ಅವರು ಎಂ.ಎ.ಯಲ್ಲಿ ಪಾಸಾದ ನಂತರ ನನ್ನ ಪಾಲಿಗೆ ಕಣ್ಮರೆಯಾದರು.. ನಾನು ಕನ್ನಡ ಇಲಾಖೆಯ ಮುಖ್ಯಸ್ಥನಾಗುವ ಸೂಚನೆ ತಲೆದೋರಿದಾಗ ಅವರು ನನ್ನ ಬಳಿ ಬಂದರು''.. 'ನನ್ನನ್ನು ವಿಶ್ವವಿದ್ಯಾನಿಲಯಕ್ಕೆ ತೆಗೆದುಕೊಳ್ಳಿ' ಎಂದು ವಿನಮ್ರರಾಗಿ ಅಂಗಲಾಚಿದರು.

''ನಾನು ಸೇವೆಯಿಂದ ನಿವೃತ್ತನಾದ ನಂತರ ಅವರಿಗೂ ನನಗೂ ಇದ್ದ ಸಂಬಂಧ ಸಂಪೂರ್ಣವಾಗಿ ಕಡಿದೇ ಹೋಯಿತು. ಒಮ್ಮೆ ಮಾತ್ರ ಮನೆಗೆ ಬಂದು, ಯಾವುದೋ ವಿಶ್ವವಿದ್ಯಾನಿಲಯದ ಕುಲಪತಿಯ ಹುದ್ದೆಗೆ ಶಿಫಾರಸ್ಸು ಮಾಡುವಂತೆ ನನ್ನನ್ನು ಕೇಳಿಕೊಂಡರು...'' (7-9) ಶ್ರೀ.ಹ.ಕ. ರಾಜೇಗೌಡರ ಆಕ್ಷೇಪ ಇದು. ''ಜೀಶಂಪ ನಮ್ಮ ಜಾನಪದ ಕ್ಷೇತ್ರಕ್ಕೆ ಹೆಬ್ಬಾಗಿಲು ತೆರೆದು ಎಲ್ಲ ರೀತಿಯ ಜನರಿಗೂ ಅಲ್ಲಿ ಪ್ರವೇಶ ಕೊಟ್ಟರು. ಅವರಿಂದ ಜಾನಪದಕ್ಷೇತ್ರಕ್ಕೆ ಪ್ರವೇಶ ಪಡೆದವರೇ ಅನೇಕರು ಅವರಿಗೆ ತಿರುಗಿ ಬಿದ್ದರು. ತಾವೇ ಮೊಟ್ಟಮೊದಲಿಗೆ ಜಾನಪದ ಕ್ಷೇತ್ರವನ್ನು ಕಂಡುಹಿಡಿದಂತೆ, ಅದರ ಹಕ್ಕುದಾರರಂತೆ ಮೆರೆದರು. ಜೀಶಂಪ ಏನೇನೂ ಅಲ್ಲ, ಇದೇ ಮೊದಲ ಮೈಲಿ ಫರ್ಲಾಂಗು ಮುಂತಾದ ದಾಖಲೆಯ ಕಲ್ಲು ಎಂದು ಬೊಬ್ಬಿರಿದರು''. (34-35)

ಡಾ.ಡಿ.ಕೆ. ರಾಜೇಂದ್ರ ಅವರು 'ಶ್ರೀಕಂಠೇಶಗೌಡರ ಜಾನಪದ ಕೊಡುಗೆ' ಕೃತಿಯಲ್ಲಿ ಹೀಗೆ ಪ್ರತಿಕ್ರಿಯಿಸಿದ್ದಾರೆ. ''ಇತ್ತೀಚಿನ ಸಂಗ್ರಹಕಾರರನ್ನು ಕುರಿತು ಕೆಲ ವಿಮರ್ಶಕರು- ''ಹೊಸ ಮೈಲಿಗಲ್ಲನ್ನು ನೆಟ್ಟಕೀರ್ತಿ ಇವರದ್ದು ಎಂದು ಬರೆಯುವುದುಂಟು. ಆದರೆ ಶ್ರೀ ಕಂಠೇಶಗೌಡರು ಹತ್ತೊಂಭತ್ತನೆಯ ಶತಮಾನದ ಅಂತ್ಯ ಭಾಗದಲ್ಲಿಯೇ ಅಂತಹ ಎಲ್ಲ ಕಲ್ಲುಗಳನ್ನು ನೆಟ್ಟುಬಿಟ್ಟಿದ್ದಾರೆ.'' (130).

ಇನ್ನೊಬ್ಬರಂತೂ ''...ಎಂಟಿತ್ತು ವರ್ಷಗಳಿಂದ ಕಾಡಿಬೇಡುತ್ತಿದ್ದ ಜಾನಪದ ಅಕಾಡೆಮಿಯ ಸ್ಥಾಪನೆಗೆ ಡಾ. ಜೀಶಂಪ ಅವರ ವಿರೋಧವಿತ್ತೆಂದರೆ ಹಲವರಿಗೆ ಆಶ್ಚರ್ಯವಾಗಬಹುದು.'' (142) ಆದರೆ ನಿಜ. ಅವರು ಅದಕ್ಕಿಂತ ಉನ್ನತವಾದ ಜಾನಪದ ನಿರ್ದೇಶನಾಲಯ', 'ಜಾನಪದ ವಿಶ್ವವಿದ್ಯಾನಿಲಯ' ಕನಸು ಕಾಣುತ್ತಿದ್ದರು.'' (143) ಎಂದು ಹೇಳಿ, ಮುಂದಿನ ಪ್ಯಾರಾದಲ್ಲಿಯೇ (ಮೊದಲ ಅವಧಿಯ ಅಧ್ಯಕ್ಷತೆ ಬೇರೆಯವರ ಪಾಲಾದ್ದರಿಂದ) ''ಅಕಾಡೆಮಿಯ ಎರಡನೆಯ ಅವಧಿಗೆ ಅಧ್ಯಕ್ಷರಾಗಿ ತಮ್ಮ ನೇಮಕವಾದೀತೆಂಬ ನಿರೀಕ್ಷೆ ಇಟ್ಟುಕೊಂಡಿದ್ದ ಜೀಶಂಪ'' (143) ಅದೂ ತಪ್ಪಿದಾಗ, ''ಮೂರನೆಯ ಅವಧಿಗೆ ತಾವೇ ಅಧ್ಯಕ್ಷರಾಗುವುದಾಗಿ ಜೀಶಂಪ' ನಂಬಿದ್ದರು''-(144) ಎನ್ನುತ್ತಾರೆ. (ಆದರೆ ಅವಕಾಶವೂ ತಪ್ಪಿತು). 'ಅಕಾಡೆಮಿಯೇ ಬೇಡ' ಎಂದಿದ್ದ ಜೀಶಂಪ ಅದರ ಸದಸ್ಯತ್ವವನ್ನು ಹೇಗೆ ಒಪ್ಪಿಕೊಂಡರು? ಅಲ್ಲದೇ, ಅಧ್ಯಕ್ಷತೆಗಾಗಿ ಬಾರಿಬಾರಿ ಕಾಯ್ದು ಕೂತರು ಎಂಬುದು ಜೀಶಂಪ ಕುರಿತ ಪ್ರಶಂಸೆಯೋ ದ್ವಂದ್ವ-ವ್ಯಂಗ್ಯವೋ?

ಗ್ರಂಥದ ಉಳಿದ ಭಾಗಗಳಲ್ಲಿ ಜೀಶಂಪ ಅವರ ಸಾಹಿತ್ಯಿಕ ಬರವಣಿಗೆಗಳು, ಜಾನಪದ ಗ್ರಂಥಗಳ ಸಮೀಕ್ಷೆ, ವಿಮರ್ಶೆಗಳೂ, ಒಂದು ಸಂದರ್ಶನ ಬರಹವೂ ಅಲ್ಲದೆ, ಡಾ. ಜೀಶಂಪ ಬದುಕಿನ ಪ್ರಮುಖ ಘಟನೆಗಳು ಹಾಗೂ ಕೃತಿಗಳ ಪಟ್ಟಿಯೂ ಇದ್ದು (ಆಯಾ ಗ್ರಂಥದ ಹೆಸರಿನ ಮುಂದೆ ಅವುಗಳ ಪ್ರಕಟಣೆ ವರ್ಷ ನಮೂದಾಗಿದ್ದರೆ ಹೆಚ್ಚು ಉಪಯೋಗವಾಗುತ್ತಿತ್ತು) ಅಭ್ಯಾಸಿಗಳಿಗೆ ಪ್ರಯೋಜನಕಾರಿಯಾಗಿವೆ.

3. ಡಾ. ಎಂಎಸ್. ಸುಂಕಾಪುರ

ದಿ.ಡಾ.ಎಂ.ಎಸ್ ಸುಂಕಾಪುರ ಕರ್ನಾಟಕದ ಗೌರವಾನ್ವಿತ ವಿದ್ವಾಂಸರಲ್ಲಿ ಒಬ್ಬರು. ಹಾಸ್ಯ ಸಾಹಿತ್ಯ, ಶರಣಸಾಹಿತ್ಯ ಹಾಗೂ ಜಾನಪದಕ್ಕೆ ಸಂಬಂಧಿಸಿ ಅವರು ಹಲವಾರು ಸ್ವತಂತ್ರ ಹಾಗೂ ಸಂಪಾದಿತ ಕೃತಿಗಳನ್ನು ಪ್ರಕಟಿಸಿದ್ದಾರೆ. ಕರ್ನಾಟಕದ ಹಾಗೂ ಗುಲ್ಬರ್ಗಾ ವಿ.ವಿ.ಗಳ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದಾಗ ಅವರು ಜಾನಪದಕ್ಕೆ ಸಂಬಂಧಿಸಿ ಮಾಡಿದ ಕಾರ್ಯಗಳು ನೆನಪಿನಲ್ಲಿ ಉಳಿಯುವಂತಹವು. ಅವರ ಈ ಕೊಡುಗೆಯನ್ನು ಸ್ಮರಿಸುವ ದೃಷ್ಟಿಯಿಂದ ಜಾನಪದ ಅಕಾಡೆಮಿ ಡಾ. ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ ಅವರಿಂದ ಈ ಕಿರು ಪರಿಚಯ ಪುಸ್ತಿಕೆ ಬರೆಸಿ ಪ್ರಕಟಿಸಿದೆ.

83 ಪುಟಗಳ ಈ ಬರಹದಲ್ಲಿ ಲೇಖಕರು ಡಾ. ಸುಂಕಾಪುರ ಅವರ ಹುಟ್ಟಿನಿಂದ ಸಾವಿನವರೆಗಿನ ವಿವಿಧ ಮಜಲುಗಳ ಸ್ಥೂಲ ಪರಿಚಯ ಮಾಡಿಕೊಟ್ಟಿದ್ದಾರೆ. ಜೊತೆಗೆ, ಅವರ ಸಾಹಿತ್ಯ ಸೇವೆ, ಅವರ ಜಾನಪದ ಕೃತಿಗಳ ಒಂದೆರಡು ಮಾತುಗಳ ಕಿರು ಪರಿಚಯ, ಅವರನ್ನು ಕುರಿತ ಆತ್ಮೀಯರ ಅಭಿಪ್ರಾಯಗಳು, ಅವರಿಗೆ ದೊರೆತ ಸನ್ಮಾನ-ಗೌರವಗಳು, ಕೊನೆಯಲ್ಲಿ ಅನುಬಂಧವಾಗಿ ಡಾ. ಸುಂಕಾಪುರ ಅವರ ಮೂರ್ನಾಲ್ಕು ಜಾನಪದೀಯ ಲೇಖನಗಳು- ಇವುಗಳನ್ನೆಲ್ಲಾ ಸಂಗ್ರಹಿಸಿ ಕೊಟ್ಟಿದ್ದಾರೆ. ಅಷ್ಟಲ್ಲದೆ ಡಾ. ಸುಂಕಾಪುರ ಅವರ ಮಕ್ಕಳು, ಅವರ ಅಳಿಯಂದಿರು, ಸೊಸೆಯರು ಅವರ ಮೊಮ್ಮಕ್ಕಳು.... ಇವರ ವಿವರಗಳನ್ನು ಒದಗಿಸಿಕೊಟ್ಟಿದ್ದಾರೆ. ಹಾಗಾಗಿ ಪುಸ್ತಕದಲ್ಲಿ ಡಾ. ಸುಂಕಾಪುರ ಅವರ ಛಾಯಾಚಿತ್ರಗಳು ಮೂರೇ ಇದ್ದರೆ, ಇತರರ ಚಿತ್ರಗಳು ಐದು ಇವೆ.

ಒಂದೇ ಓದಿಗೆ ಮುಗಿಸಬಹುದಾದ (ಕಣ್ಣಾಡಿಸಬಹುದಾದ?) ಈ ಹೊತ್ತಿಗೆ ಡಾ. ಸುಂಕಾಪುರ ಅವರ ಬಗೆಗೆ ಒಂದು 'ಆತ್ಮೀಯ ವ್ಯಕ್ತಿ ಚಿತ್ರ' ಕಟ್ಟಿಕೊಡುವಲ್ಲಿ ಸಫಲವಾಗಿದೆ. ಆದರೂ, ಲೇಖಕರ ಉದ್ದೇಶವೇ ಸೀಮಿತ ದೃಷ್ಟಿಕೋನದ್ದಾಗಿರುವುದರಿಂದ ಇಲ್ಲಿ ವಿವರಣೆ ಮೊಟಕಾಗಿದೆ. ವ್ಯಕ್ತಿತ್ವದ ವಿಮರ್ಶೆ ಹೋಗಲಿ, ಕೃತಿಗಳ ಮೌಲ್ಯಮಾಪನವೂ ಓದುಗನಿಗೆ ಲಭ್ಯವಾಗುವುದಿಲ್ಲ. ಲೇಖಕರ ನಿರೂಪಣಾ ಶೈಲಿಯೂ ಸಾಂಪ್ರದಾಯಿಕ ಸಂಕಥನ ಮಾದರಿಯಲ್ಲಿದ್ದು ಶರಣ ಕಥಾಕಾಲಕ್ಷೇಪವನ್ನು ನೆನಪಿಗೆ ತರುತ್ತದೆ ನೋಡಿ.

''ಸುಂಕಾಪುರ ಅವರ ಮನೆ ಒಂದರ್ಥದಲ್ಲಿ ದಾಸೋಹದ ಮನೆಯಾಗಿತ್ತು. ಶರಣರ, ಯೋಗಿ-ಶಿವಯೋಗಿಗಳ ವಿಚಾರವಂತರ ಮಹಾಮನೆಯಾಗಿತ್ತು. ಬಡಬಗ್ಗರಿಗಂತೂ ತವನಿಧಿಯಾಗಿತ್ತು.

ಇವನಾರವ ಇವನಾರವ ಇವನಾರವನೆಂದೆನ್ನದೆ
ಇವ ನಮ್ಮವ ಇವನಮ್ಮವ ಇವ ನಮ್ಮ
ಮನೆಯ ಮಗ

ಎಂದೆನ್ನುವ ಶರಣ ಸಂಸ್ಕೃತಿಯ ಮನೆಯಾಗಿತ್ತು ಸುಂಕಾಪುರ ಅವರದು'' (1)

'ಜೀವನಚರಿತ್ರೆಯ' ಮುಕ್ತಾಯ ಆಗುವುದು ಹೀಗೆ:

''.... ಮಹಾನ್ ವ್ಯಕ್ತಿ ಡಾ.ಎಂ.ಎಸ್. ಸುಂಕಾಪುರ ಅವರು ನಡೆದ ದಾರಿಯಲ್ಲಿ ನಾವೂ ನಡೆದಿದ್ದರೆ ನಮ್ಮ ಜೀವನವೂ ಪಾವನ. ಇವರ ಚರಿತ್ರೆಯನ್ನು ಓದುವುದೆಂದರೆ ಇವರಲ್ಲಿಯ ಸದ್ಗುಣಗಳನ್ನು ಅಳವಡಿಸಿಕೊಳ್ಳಲು ಅಂತಹ ಸದ್ಬುದ್ಧಿಯನ್ನು ಶಿವ ಕರುಣಿಸಲಿ ಎಂದು ಪ್ರಾರ್ಥಿಸಿ ದಿ.ಡಾ.ಎಂ.ಎಸ್. ಸುಂಕಾಪುರ ಅವರ ಈ ಸಂಕ್ಷಿಪ್ತ ಚರಿತ್ರೆಗೆ ಮಂಗಳ ಹಾಡುವೆ,'' (46)

4. ವ್ಲಾಡಿಮಿರ್ ಜೆ. ಪ್ರಾಪ್

ಜಾನಪದ ಅಧ್ಯಯನಕ್ಕೆ ಒಂದು ಶಿಸ್ತನ್ನೂ ಖಚಿತತೆಯನ್ನೂ ತಂದು ಕೊಟ್ಟು ಅದನ್ನು ವಿಜ್ಞಾನವಾಗಿ ಬೆಳೆಸಲು ಕಾಲಕಾಲಕ್ಕೆ ಹಲವು ತಜ್ಞರು ಶ್ರಮಿಸುತ್ತಾ ಬಂದಿದ್ದಾರೆ. ಅಂತಹ ಕೆಲವೇ ಪ್ರಮುಖರಲ್ಲಿ ರಷ್ಯಾದ ವಿ.ಜೆ. ಪ್ರಾಪ್ (1895-1970) ಸಹ ಗಮನಾರ್ಹರು. ಆತ ಬರೆದ ಬೆರಳೆಣಿಕೆಯ ಗ್ರಂಥಗಳೇ ಆತನ ಕ್ರಿಯಾಶೀಲ ವಿದ್ವತ್ತಿನ ಪ್ರತೀಕಗಳಾಗಿದ್ದವು; ಅಂತರಾಷ್ಟ್ರೀಯ ಮಟ್ಟದಲ್ಲಿ ಆತನ ಹೆಸರನ್ನು ವಿಸ್ತಾರಗೊಳಿಸಿದವು. ಅದರಲ್ಲೂ ಆತನ Morphology of the folk tale ಜಾನಪದ ವಿದ್ವತ್ತಿನ ಒಂದು ಅನನ್ಯ ಗ್ರಂಥ. ರಷ್ಯನ್ ಕಿನ್ನರ ಕತೆಗಳ ಅಧ್ಯಯನದಿಂದ ಆತ ಪ್ರತಿಪಾದಿಸಿದ 'ಜನಪದ ಕತೆಯ ರೂಪ (ರಚನಾ) ತತ್ವ' ಜಗತ್ತಿನಾದ್ಯಂತ ಹೆಚ್ಚು ಚರ್ಚಿತವಾದ, ಪ್ರಭಾವ ಬೀರಿದ ಸಿದ್ಧಾಂತ; ಜನಪದ ಕತೆಗಳ ವೈಜ್ಞಾನಿಕ ಅಧ್ಯಯನಕ್ಕೆ - ವರ್ಗೀಕರಣಕ್ಕೆ- ಹೊಸ ಚಾಲನೆ ಕೊಟ್ಟ ಈ ಸಿದ್ಧಾಂತದ ಗುಣದೋಷದ ಬಗೆಗೆ ಮುಕ್ತ ಪ್ರಶಂಸೆಗಳೂ ತೀವ್ರ ಟೀಕೆಗಳೂ ಬಂದಿದ್ದರೂ ಜಾನಪದ ವಿದ್ಯಾರ್ಥಿಗಳು ಅದನ್ನು ಗಮನಿಸದೇ ಮುಂದೆ ಹೋಗಲಾರದಷ್ಟು ಅದು ಮಹತ್ವ ಪಡೆದಿದೆ.

ಡಾ. ಹಿರಿಯಣ್ಣ ಬಹಳ ವರ್ಷಗಳಿಂದ ಜಾನಪದ ಎಂ.ಎ. ತರಗತಿಗೆ ಪಾಠ ಹೇಳುತ್ತಾ ಬಂದವರು. ಈ ಕಾರಣ ಪ್ರಾಪ್ ಬಗೆಗೆ ಆಳವಾಗಿ ಅಭ್ಯಾಸ ಮಾಡಬೇಕಾದುದು ಅನಿವಾರ್ಯ. ಇದರ ಫಲ ಶ್ರುತಿಯಾಗಿ ಅವರು ಈಗಾಗಲೇ ಕೆಲ ಲೇಖನ ಬರೆದಿದ್ದಾರೆ. ಈಗ ಸುದೀರ್ಘ ಲೇಖನದಂತಹ ಈ ಪುಸ್ತಿಕೆ ಬರೆದು ಪ್ರಾಪ್ ಬಗೆಗೆ ಇನ್ನಷ್ಟು ವಿವರಗಳನ್ನು ಇಲ್ಲಿ ಕನ್ನಡದ ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಟ್ಟಿದ್ದು, ಅಕಾಡೆಮಿ ಪ್ರಕಟಿಸಿದ್ದು ಸ್ವಾಗತಾರ್ಹವಾಗಿದೆ.

ಕೃತಿಯ ಶೀರ್ಷಿಕೆ 'ವ್ಲಜಿಮಿರ್ ಜೆ. ಪ್ರಾಪ್' ಎಂದಿದ್ದರೂ ಇಲ್ಲಿ ಆತನ ಜೀವನ ಪರಿಚಯ ಕೇವಲ ನಾಲ್ಕೈದು ವಾಕ್ಯಗಳಲ್ಲಿ ಮುಗಿದುಹೋಗುತ್ತದೆ. ಇಂಗ್ಲಿಷ್ ಆಕರಗಳಲ್ಲೂ ಈ ಕೊರತೆ ಇರುವುದನ್ನು ಲೇಖಕರು ಸೂಚ್ಯವಾಗಿ ಹೇಳಿದ್ದಾರೆ (5). ಅಂತೆಯೇ ಇಲ್ಲಿ ಆತನ ಕೃತಿಗಳು, ಆತನ ಸಿದ್ಧಾಂತದ ಮೂಲ ಪ್ರೇರಣೆ, ಪ್ರಾಪ್ ಸಿದ್ಧಾಂತದ ಸೋದಾಹರಣ ನಿರೂಪಣೆ, ಅದರ ಬಗೆಗೆ ವ್ಯಕ್ತವಾಗಿರುವ ಪ್ರಶಂಸೆ, ಟೀಕೆಗಳು.... ಈ ಎಲ್ಲವನ್ನೂ ಸ್ಥೂಲವಾಗಿ ಸರಳವಾಗಿ ಪರಿಚಯಿಸಲಾಗಿದೆ. ಈ ಎಲ್ಲೂ ಪ್ರಾಪ್ ಬಗೆಗೆ ಅತೀವ ಪ್ರಶಂಸೆಯನ್ನಾಗಲೀ ಅನಗತ್ಯ ಟೀಕೆಯನ್ನಾಗಲೀ ಸ್ವತಃ ಲೇಖಕರು ವ್ಯಕ್ತಪಡಿಸುವುದಿಲ್ಲ ಎಂಬುದೂ ಗಮನಾರ್ಹ. ಬದಲು ಸಾಂದರ್ಭಿಕವಾಗಿ ಒಂದೆರಡು ಮಾತಿನಲ್ಲಿ ತಮ್ಮ ಅಭಿಪ್ರಾಯ ಹೇಳಿಬಿಡುತ್ತಾರೆ.

ಬರೀ 68 ಪುಟಗಳ ಸುದೀರ್ಘ ಲೇಖನದಂತಿದ್ದರೂ ಒಂದೇ ಹಿಡಿತಕ್ಕೆ ಓದಿ ಮುಗಿಸುವಂಥಾದ್ದಲ್ಲ ಎಂಬುದಕ್ಕೆ ವಿಷಯದ ಕ್ಲಿಷ್ಟತೆಯೇ ಕಾರಣ. ಆದರೂ ಜಾನಪದ ಸಿದ್ಧಾಂತಗಳ ಬಗೆಗೆ ಪ್ರಾಥಮಿಕ ಪರಿಶ್ರಮವಿದ್ದವರಿಗೆ ಇಲ್ಲಿ ಇನ್ನಷ್ಟು ವ್ಯಾಪಕವಾದ ತಿಳಿವಳಿಕೆ ಮೂಡಿಸುವಂತಹ ವಿವರಗಳಿವೆ. (ಕೆಲವೆಡೆ ಇನ್ನಷ್ಟು ವಿವರಣೆ ಬೇಕೆನಿಸುತ್ತದೆ).

ಇನ್ನೊಂದು ಮಾತು. ಇಂಗ್ಲಿಷ್ ಆಕರಗಳಿಂದ ಲೇಖಕರು ಮಾಹಿತಿಯನ್ನು ಕನ್ನಡಕ್ಕೆ ತರುವಾಗ ಒಂದೆರಡು ಕಡೆ ಪದಶಃ ಅನುವಾದಕ್ಕೆ ತೊಡಗಿದಂತೆ ಕಾಣುತ್ತದೆ. ಉದಾ-''ನಿದ್ದೆಯ ಗುಟುಕು'' (ಪು-26) ಸರಿಯಾಗಿ ಅರ್ಥವಾಗುವುದಿಲ್ಲ. ಹಾಗೆಯೇ Victimized hero ಎಂಬುದನ್ನು ''ಆಹುತಿಗೊಳಗಾದ ನಾಯಕ'' (32) ಎಂದು ಅನುವಾದಿಸಿರುವುದೂ ಸರಿ ಹೊಂದಲಾರದು ಎನಿಸುತ್ತದೆ. ನಿಘಂಟುಗಳಲ್ಲಿ ಈ ಅರ್ಥವೂ ದೂರಾನ್ವಯವಾಗಿ ಇದ್ದಿರಬಹುದು. ಆದರೂ ಕನ್ನಡದ ಸಂದರ್ಭದಲ್ಲಿ ಈ ಶಬ್ದ ಅಷ್ಟು ಸಮರ್ಪಕವಾಗಿ ಹೊಂದಾಣಿಕೆಯಾಗದೆನಿಸುತ್ತದೆ. ಅದನ್ನು 'ಬಲಿಪಶುವಾದ ನಾಯಕ' ಅಥವಾ 'ತೊಂದರೆಗೊಳಗಾದ ನಾಯಕ' ಎಂದು ಕರೆಯಬಹುದೇನೋ. ತೀರ್ಮಾನ ತಜ್ಞರಿಗೇ ಬಿಟ್ಟದ್ದು.

ಈ ನಾಲ್ಕೂ ಕೃತಿಗಳನ್ನು ಪರಸ್ಪರ ಹೋಲಿಸಿ ಹೇಳಬೇಕಾದ ಒಂದೆರಡು ಅಂಶಗಳಿವೆ. ಇವುಗಳಲ್ಲಿ 'ಜೀಶಂಪ ಸಂಸ್ಮರಣೆ' ಮುಖಪುಟ ಅಕ್ಷರಶಃ ವರ್ಣರಂಜಿತವಾಗಿದೆ. ಉಳಿದವುಗಳಿಗೆ ಆ ಯೋಗ ಇಲ್ಲ. ಮೊದಲ ಪುಸ್ತಕವನ್ನು ಹೊರತುಪಡಿಸಿ (ಶ್ರೀಕಂಠೇಶಗೌಡರ ಹಳೆಯ ಪಡಿಯಚ್ಚು ಬಳಕೆಯಾಗಿರುವ ಈ ಪುಸ್ತಕದ ಮುಖಪುಟದ ಅಕ್ಷರಗಳೇ ಸ್ಪಷ್ಟ ಕಾಣುವುದಿಲ್ಲ.) ಉಳಿದವುಗಳಲ್ಲಿ ಮುದ್ರಣ ದೋಷಗಳ ಪೀಡೆ 'ಇಲ್ಲ' ಎನ್ನುವುದು ಅಭಿನಂದನೀಯ. ಅಕಸ್ಮಾತ್ ಉಳಿದ ಒಂದೆರಡು ದೋಷಗಳನ್ನು ಬುದ್ಧಿವಂತ ಓದುಗರು ಸ್ವತಃ ತಿದ್ದಿಕೊಳ್ಳಬಹುದು. ಉದಾ.ಗೆ:- 'ಜೀಶಂಪ....' ಗ್ರಂಥದ ಪು.132ರ ''ಜನತೆಯನ್ನು ಕಾಡಿಗೆ...'' ಎಂಬುದು, 'ಜಾನಕಿಯನ್ನು ಕಾಡಿಗೆ' ಎಂದಾಗಬೇಕು. ಇಬ್ಬರು ಸಂಪಾದಕರಿದ್ದ 'ಶ್ರೀಕಂಠೇಶಗೌಡರ....' ಕೃತಿಯಲ್ಲಿ ಮಾತ್ರ ಅಡಿಗಡಿಗೆ ತಪ್ಪುಗಳು, ಸಾಲುಗಳ ಪುನರಾವರ್ತನೆಗಳು (34;44). ವಾಕ್ಯದೋಷಗಳು ಇರಬಾರದಿತ್ತು.

'ಜೀಶಂಪ....' ಗ್ರಂಥದಲ್ಲಿ 'ಸಾಹಸಯಾತ್ರಿ' ಕೃತಿ ಕರಾಕ್ರ ಅವರನ್ನು ಕುರಿತ ಜೀವನಚರಿತ್ರೆ ಎಂದು ಪು. 98ರಲ್ಲಿ ಇದ್ದರೆ, ಪು.108ರಲ್ಲಿ ಅದು ಟಿ.ಆರ್. ತಿಪ್ಪೇಸ್ವಾಮಿಯವರ 'ಜಾನಪದ ಸಂಗ್ರಹದ ಕತೆ' ಎಂದು ಇದೆ. 'ಶ್ರೀಕಂಠೇಶಗೌಡ...' ಗ್ರಂಥದ ಪು-60ರಲ್ಲಿ ಶ್ರೀಕಂಠೇಶಗೌಡರು "ಜನ್ಮಸ್ಥಳವಾದ ದೇಶಹಳ್ಳಿ...." ಎಂದಿದ್ದರೆ ಪು-73ರಲ್ಲಿ ಬೇರೆ ವಿದ್ವಾಂಸರು ".... ನಾಗಮಂಗಲ ತಾಲ್ಲೂಕಿನ ಲಕ್ಕೇನಹಳ್ಳಿಯಲ್ಲಿ ಹುಟ್ಟಿದರು'' ಎಂದು ಬರೆದಿದ್ದಾರೆ. ಓದುಗರಲ್ಲಿ ಇದು ಅನವಶ್ಯಕ ಗೊಂದಲಕ್ಕೆ ಕಾರಣವಾಗುತ್ತದೆ.

ಮನುಷ್ಯನ ವ್ಯಕ್ತಿತ್ವದ ಸಂಕೀರ್ಣತೆಯಿಂದಾಗಿ ಯಾರದೇ ಜೀವನಚರಿತ್ರೆ ಸಮಗ್ರವಾಗಿ ಬರೆಯುವುದು ಸುಲಭವಲ್ಲ (ಆತ್ಮಕತೆಗಳೂ ಸ್ವಯಂ ಪರಿಪೂರ್ಣವಾಗಿರುವುದಿಲ್ಲ). ಆದರೂ ಅವು ಏಕಪಕ್ಷೀಯ, ವ್ಯಕ್ತಿನಿಷ್ಠವಾಗದಿರುವುದು ಅಪೇಕ್ಷಣೀಯ. ಸಾರ್ವಜನಿಕ ಕ್ಷೇತ್ರದ ಸಮಕಾಲೀನ- ಸಾಂಸ್ಕೃತಿಕ ಬದುಕಿನ ದಾಖಲೆಯೂ (ಚರಿತ್ರೆಯೂ) ಆಗುತ್ತದೆ. ಅಧ್ಯಯನಕಾರರಿಗೆ ಬೇರೆ ಬೇರೆ ಸಂದರ್ಭಗಳಲ್ಲಿ ಆಕರವಾಗುವ ಇಂತಹ ಕೃತಿಗಳನ್ನು ಬರೆಸಿ ಪ್ರಕಟಿಸುವುದು ಶ್ರಮಸಾಧ್ಯವಾದ ಕಾರ್ಯ. ಅಂತಹ ಮಹತ್ವದ ಕಾರ್ಯದಲ್ಲಿ ತೊಡಗಿರುವ ಅಕಾಡೆಮಿ ಅಭಿನಂದನೀಯವಾಗಿದೆ. ಇದು ಇನ್ನಷ್ಟು ಅರ್ಥಪೂರ್ಣವಾಗಿ ಮುಂದುವರೆಯುವಂತಾಗಲಿ. ಅಲ್ಲದೆ, ಇಂಥ ವಿದ್ವಾಂಸರ ಹಾಗೆ ಹಿರಿಯ, ಅನುಭವಸ್ಥ ಕಲಾವಿದರು, ವ್ಯಕ್ತಿಗಳ ಬಗೆಗೂ ಪುಸ್ತಕಗಳನ್ನು ಹೊರತರುವುದು ಅಗತ್ಯವೆಂದು ಸೂಚಿಸಬಯಸುತ್ತೇನೆ.

ಸಂಪಾದಕರ ಟಿಪ್ಪಣಿ

ನೆನಪಿನ ರಂಗಸ್ಥಳ

(ಆತ್ಮ ಕಥನ)-ಕೆರೆಮನೆ ಶಿವರಾಮ ಹೆಗಡೆ, ನಿರೂಪಣೆ-

ಡಾ. ಜಿ.ಎಸ್. ಭಟ್ಟ

ಕರ್ನಾಟಕದ ಶ್ರೇಷ್ಠ ಯಕ್ಷಗಾನ ಕಲಾವಿದರಲ್ಲಿ ಒಬ್ಬರಾಗಿದ್ದ ದಿ. ಕೆರೆಮನೆ ಹೆಗಡೆ ಅವರ ಆತ್ಮಕಥನವಿದು. ಅವರು ಕಥಿಸಿದ್ದನ್ನು ಡಾ. ಜಿ.ಎಸ್. ಭಟ್ಟರು ಒಪ್ಪವಾಗಿ ಬರಹ ರೂಪಕ್ಕಿಳಿಸಿ ಅಚ್ಚಿಗೆ ಸಿದ್ಧಮಾಡಿ ಕೊಟ್ಟಿದ್ದಾರೆ. ಅಕ್ಷರ ಪ್ರಕಾಶನದವರು ಅಷ್ಟೇ ಚೆಂದವಾಗಿ ಇದನ್ನು ಮುದ್ರಿಸಿದ್ದಾರೆ.

ಶಿವರಾಮ ಹೆಗಡೆಯವರು ಯಕ್ಷಗಾನದ ಇತಿಹಾಸದಲ್ಲಿ ಕೆಲವು ಹೊಸ ಅಧ್ಯಾಯಗಳನ್ನು ಬರೆದವರು. ನಿಜವಾದ ಅರ್ಥದಲ್ಲಿ ಯಕ್ಷಗಾನದ ಮೊದಲ ವ್ಯವಸಾಯೀ ಮೇಳವನ್ನು ಕಟ್ಟಿದವರವರು. ಟೆಂಟು ಹೊಲಿಸಿ ಡೇರೆ ಹಾಕಿ ಯಕ್ಷಗಾನ ಆಡುವ, ಟಿಕೇಟು ಇಟ್ಟು, ಆಟ ಆಡುವ ಪದ್ಧತಿಗಳ ಪ್ರವರ್ತಕರು ಅವರು. ಆಧುನಿಕ ಸಂಪರ್ಕಸಾಧನೆಗಳೊಂದೂ ಇಲ್ಲದೆ, ನಡೆದುಕೊಂಡು, ಎತ್ತಿನ ಗಾಡಿಯ ಮೇಲೆ ಓಡಾಡಬೇಕಿದ್ದ ದಿನಗಳಲ್ಲಿ ಇಂತಹವನ್ನೆಲ್ಲ ಮಾಡಿದವರು ಅವರು. ಇವೆಲ್ಲ ಕ್ರಮಗಳು ಉತ್ತರ/ದಕ್ಷಿಣ ಜಿಲ್ಲೆಯ ಯಕ್ಷಗಾನ ರಂಗದಲ್ಲೂ ಹೊಸ ಬದಲಾವಣೆಗಳಿಗೆ ಪ್ರೇರಕವಾದವು. ತನ್ಮೂಲಕವಾಗಿ ಹೆಚ್ಚು ಶಿಸ್ತುಬದ್ಧವಾದ ಯಕ್ಷಗಾನದ ವ್ಯವಸಾಯೀ ರಂಗ ನಮಗಿಂದು ಕಾಣ ಸಿಗುತ್ತದೆ.

ಇಷ್ಟೆಲ್ಲ ಮಾಡುವಾಗ ಈ ವ್ಯಕ್ತಿ ತಾನು ಅನುಭವಿಸಿದ ಏಳುಬೀಳುಗಳು, ಎದುರಿಸಿದ ಎಡರುತೊಡರುಗಳು, ತನ್ನ ಕಾಲದಲ್ಲಿದ್ದ ಯಕ್ಷಗಾನ ಸಂಪ್ರದಾಯಗಳು, ಹಿರಿಯ ಹಾಗೂ ಸಮಕಾಲೀನ ಕಲಾವಿದರು ಇತ್ಯಾದಿಗಳ ಬಗ್ಗೆ ಹೇಳಿದರೆ ಅದು ಗತಕಾಲಕ್ಕೊಂದು ಪ್ರಯೋಜನಕಾರಿ ಪಯಣವಾಗುತ್ತದೆ. ಈ ಕೃತಿಯನ್ನು ಓದುವಾಗ

ಆಗುವ ಅನುಭವವೂ ಅದೇ. ಇಲ್ಲಿ ಯಕ್ಷಗಾನ ರಂಗದ ಆಧುನಿಕ ಬೆಳವಣಿಗೆಯ ಚರಿತ್ರೆ ಇದೆ. ಆ ಹಂತಗಳಲ್ಲಿ ಅನುಭವಿಸಿದ ಪ್ರಸವವೇದನೆಯ ವಿವರವಿದೆ. ಹೊಸ ಪ್ರಸಂಗಗಳನ್ನು ಹೇಳಿ ಬರೆಯಿಸಿದ, ಆಡುವ ರೂಢಿ ತಪ್ಪಿ ಹೋಗಿದ್ದ ಪ್ರಸಂಗಗಳನ್ನು ಮತ್ತೆ ಆಡಲು ಹಚ್ಚಿದ ಸಂಗತಿಗಳು ದಾಖಲೆಯಿದೆ. ವೈಯಕ್ತಿಕ ಸುಖಕಷ್ಟಗಳ ವಿವರವಂತೂ ಸರಿಯೇ ಸರಿ. ಯಕ್ಷಗಾನ ವಿಭಾಗದ ಅಧ್ಯಯನದ ದೃಷ್ಟಿಯಿಂದ ದಾಖಲೆಗೊಳ್ಳಬೇಕಾದ ಅನೇಕ ಸಂಗತಿಗಳು ಸ್ವಾರಸ್ಯಕರವಾಗಿ ಇಲ್ಲಿ ದಾಖಲಾಗಿವೆ. ಸಾಮಾನ್ಯ ಓದುಗರು ಹಾಗೂ ಜಾನಪದಾಸಕ್ತರು ಇಬ್ಬರಿಗೂ ಸಂತೋಷಕೊಡುವಂಥ ಕೃತಿ. ನಿರೂಪಕ ಜಿ.ಎಸ್. ಭಟ್ಟರು ಹಾಗೂ ಪ್ರಕಾಶಕರು ಇಬ್ಬರ ಶ್ರಮವೂ ಸಾರ್ಥಕವಾಗಿದೆ.

ಜನಪದ ಗೀತ ಸಂಗ್ರಹಗಳು

ಎಂ. ಎಲ್. ನರಸಿಂಹಮೂರ್ತಿ

ಇತ್ತೀಚಿನ ವರ್ಷಗಳಲ್ಲಿ ವಿರಳವಾಗಿ ಪ್ರಕಟವಾಗುತ್ತಿರುವ ಜನಪದ ಸಾಹಿತ್ಯ ಸಂಗ್ರಹಗಳನ್ನು ಗಮನಿಸಿದಾಗ ಸಂಗ್ರಹ ಕಾರ್ಯ ಮುಗಿದು ಹೋಯಿತೋ ಅಥವಾ ಅಕ್ಷರ ಸಂಸ್ಕೃತಿಯ ಈ ದಿನಗಳಲ್ಲಿ ಕಂಠಸ್ಥ ಪರಂಪರೆಯನ್ನು ರೂಢಿಸಿಕೊಂಡವರು ಅಪರೂಪವಾಗುತ್ತಿರುವ ಪರಿಯೇ ಇದಕ್ಕೆ ಕಾರಣವೇನೋ ಎಂಬ ಅನುಮಾನ ಸಹಜವಾಗಿ ಮೂಡುತ್ತದೆ. ಅಲ್ಲದೆ ಜಾನಪದದ 'ಡೆಸ್ಕ್‌ವರ್ಕ್' ಪ್ರಾರಂಭವಾದ ನಂತರ ಕ್ಷೇತ್ರಕಾರ್ಯದ ಬಗೆಗೆ ಮೂಡುತ್ತಿರುವ ನಿರಾಸಕ್ತಿಯನ್ನು ಪೂರಕವಾಗಿ ಗುರುತಿಸಬಹುದು.

ಈ ವರ್ಷ ಬೆಳಕು ಕಂಡಿರುವ 'ಹೂವು ಬಿದ್ದಾವ ನೆಲಕ' ಮತ್ತು 'ದುಂಡ ಮಲ್ಲಿಗಿ ಹೂವ ಬುಟ್ಟಿಲಿ ಬಂದಾವ' ಎಂಬ ಎರಡು ಜನಪದ ಗೀತೆಗಳ ಸಂಗ್ರಹಗಳಲ್ಲಿ ಉತ್ತರ ಕರ್ನಾಟಕದ ಭಾಗದಲ್ಲಿ ಸಂಗ್ರಹಿಸಿದ ಜನಪದ ಗೀತೆಗಳಿವೆ.

'ಹೂವು ಬಿದ್ದಾವ ನೆಲಕ' ಎಂಬ ಸಂಗ್ರಹದ ಪದಗಳು ಡಾ. ಕಮಲ ಹೆಮ್ಮಿಗೆಯವರು ಉತ್ತರ ಕರ್ನಾಟಕದ ಭಾಗದಲ್ಲಿ ಸಂಗ್ರಹಿಸಿರುವ 40 ಹಾಡುಗಳ ಸಂಕಲನ. ಇದರಲ್ಲಿ 11 ಮದುವೆ ಹಾಡುಗಳು, 17 ಸ್ತುತಿಪರ ಗೀತೆಗಳು ಮತ್ತು 12 ಇತರ ಸಂದರ್ಭದ ಹಾಡುಗಳಿವೆ.

ಮದುವೆಯಲ್ಲಿ ಗಂಡಸರ ಉತ್ಸಾಹಕ್ಕಿಂತ ಹೆಂಗಸರ ಉತ್ಸಾಹವೇ ಹೆಚ್ಚು. ಅಂತಹ ಸಂದರ್ಭದಲ್ಲಿ ಬಗೆಬಗೆಯ ಶಾಸ್ತ್ರವಿಧಿಗಳನ್ನು ನೆರವೇರಿಸುತ್ತ ಸಮಾರಂಭಕ್ಕೆ ವಿಶೇಷತೆಯನ್ನು ತಂದುಕೊಡುತ್ತಾರೆ. ಬಹುತೇಕ ಆಚರಣೆಗಳೊಂದಿಗೆ ಹಾಡುಗಳನ್ನು ಹೇಳುತ್ತಾರೆ. ಆಯಾ ಸಂದರ್ಭಗಳು ನಿಖರವಾದ ಕಲ್ಪನೆ ಇವುಗಳದಾಗಿರುತ್ತದೆ. 'ಸೋಬಾನ ಈ ಹೊತ್ತು ಆಡೋವಲ್ಲ, ಶಿವನಿಗೂ ಪಾರ್ವತಿಗೂ ಮದುವೆಯಾದಾಗ ಹುಟ್ಟಿ ಬೆಳೆದೋವು.'

ಇವನ್ನೆಲ್ಲ ಗಮನದಲ್ಲಿರಿಸಿಕೊಂಡು ಹೆಮ್ಮಿಗೆಯವರು 'ಸೋಬಾನ ಅನ್ನೋದ' ''ಎನಂ ತಿಳಿಯಬೇಕರಿ', 'ಅಣ್ಣತಂಗಿಯ ಮಾತು', 'ಬೀಗ ಬಂದಾನವ್ವ', 'ಹೆಸರ ತರಬೇಕ'. ಮುಂತಾದ ಮದುವೆ ಹಾಡುಗಳನ್ನು ಸಂಗ್ರಹಿಸಿದ್ದಾರೆ.

ಜಾನಪದರ ಭಕ್ತಿ ಅಂತಃಕರಣದಿಂದ ಅರಳಿ ಬಂದದ್ದು ಅವರ ಪಾಲಿಗೆ ಎಲ್ಲವೂ ದೇವರೇ. ಗ್ರಾಮದೇವತೆ ದ್ಯಾಮವ್ವನ ಕುರಿತ 'ಹಣ್ಣ ತುಂಬ್ಯಾರೆ', ಮೈಲಾರಲಿಂಗನನ್ನು ಕುರಿತ ನನಕೂಡ ಮಾತಡ', ಸವದತ್ತಿ ಎಲ್ಲಮ್ಮನ ಕುರಿತ' 'ಗಲ್ಲದ ಮ್ಯಾಲ ತುದಿ ಸೆರಗ' ಮೊದಲಾದ ಸ್ತುತಿಪರ ಗೀತೆಗಳಿವೆ.

ಇವುಗಳ ಜೊತೆಗೆ 'ಬಯಕಿ ಕಾಡುತಾವ', 'ಜೋಕಾಲ್ಯಾಡೋಣು', 'ನಾಗರ ಪಂಚಮಿ ಹೂವು ಬಿದ್ದಾವ ನೆಲಕ', 'ಮಳಿಗಾಲ್ಯಕ ತಡದಾವ' ಮೊದಲಾದ ಇಂತಹ ಸಂದರ್ಭದ ಹಾಡುಗಳಿವೆ.

ಇಲ್ಲಿನ ಹಾಡುಗಳಲ್ಲಿ ಕೆಲವು ತ್ರಿಪದಿ ರೂಪದಲ್ಲೂ, ಮತ್ತೆ ಕೆಲವು ದ್ವಿಪದಿ ರೂಪದಲ್ಲೂ ಕಂಡುಬರುತ್ತವೆ. ಕೆಲವಕ್ಕೆ ಲಯವಿದೆ, ಛಂಧೋ ರೂಪವಿಲ್ಲ. ಸಂಗ್ರಹಕಾರರು ಹೇಳುವಂತೆ 'ಹಬ್ಬ ಜಾತ್ರೆ, ಜೋಕಾಲಿಯಾಟದಂಥ ಕ್ರೀಡೆ, ನಂಬಿಕೆ, ಐತಿಹ್ಯಗಳನ್ನು ಇವು ಪ್ರತಿನಿಧಿಸುತ್ತವೆ'. ಭಾಷೆಯ ದೃಷ್ಟಿಯಿಂದ ಪ್ರಾದೇಶಿಕತೆಯನ್ನು ಪ್ರತಿಬಿಂಬಿಸುತ್ತವೆ. ಈ ಗೀತೆಗಳು ಯಾವ ಸಂಪ್ರದಾಯದಲ್ಲಿ ಹಾಡುವ ಸಲುವಾಗಿ ರಚಿತವಾದುವೋ ಅಲ್ಲಿ ಇವು ಉಚಿತವಾಗಿಯೇ ಇರುತ್ತವೆ.

ಪುಸ್ತಕದ ಕೊನೆಯಲ್ಲಿ ಬಹುಪಾಲು ಗೀತೆಗಳಿಗೆ ಸಾಂದರ್ಭಿಕ ಟಿಪ್ಪಣಿ, ಕಠಿಣ ಪದಗಳಿಗೆ ಅರ್ಥವನ್ನು ಕೊಡಲಾಗಿದೆ. ಪುಸ್ತಕದ ಆರಂಭದಲ್ಲಿ 22 ಪುಟಗಳಷ್ಟು ದೀರ್ಘವಾದ ಪ್ರಸ್ತಾವನೆಯಿದ್ದು, ಅಲ್ಲಿ ಜಾನಪದದ ಬಗ್ಗೆ ವಿಚಾರ ಮಾಡಲಾಗಿದೆಯಾದರೂ ಹೊಸ ವಿಚಾರಗಳೇನೂ ಕಂಡುಬರುವುದಿಲ್ಲ.

ಈ ಕಾಲದಲ್ಲಿ ಕೇಳಿಸದಂತಾಗುತ್ತಿರುವ ಇವನ್ನು ಕಾಪಾಡಿಕೊಳ್ಳಬೇಕಾದ ಹೊಣೆಯನ್ನು ಅರಿತ ಹೆಮ್ಮಿಗೆಯವರು ಶ್ರಮವಹಿಸಿ ಸಂಗ್ರಹಿಸಿದ್ದಾರೆ. ಆದರೆ ವ್ಯಕ್ತಿಗಳ ಹಿನ್ನೆಲೆ, ಅವರು ಹಾಡುಗಳನ್ನು ಕಲಿತ ಬಗೆ, ಕಲಿಸಿದವರ ಸೂಕ್ಷ್ಮ ಪರಿಚಯ ಮುಂತಾದ ಉಪಯುಕ್ತವಾದ ವಿವರಣೆಗಳ ಕೊರತೆ ಕಾಣುತ್ತದೆ. ವ್ಯಕ್ತಿಗಳ ಭಾವಚಿತ್ರದೊಂದಿಗೆ, ಹಾಡಿನ ಸಂದರ್ಭವನ್ನು ಸಚಿತ್ರಗೊಳಿಸುವ ಕೆಲವು ಫೋಟೊಗಳಿದ್ದರೆ ಚೆನ್ನಾಗಿತ್ತು. ಈ ದೃಷ್ಟಿಯಿಂದ 'ಸೋಬಾನೆ ಚಿಕ್ಕಮ್ಮನ ಪದ'ಗಳಿಗೆ ನಾಗೇಗೌಡರು ಒದಗಿಸಿದ ಸಾಮಗ್ರಿ ನಮ್ಮೆಲ್ಲ ಸಂಗ್ರಹಕಾರರಿಗೆ ಈಗಲೂ ಮಾದರಿಯಾಗಬೇಕಿದೆ.

'ದುಂಡ ಮಲ್ಲಿಗಿ ಹೂವ ಬುಟ್ಟಿಲಿ ಬಂದಾವ' ಸಂಕಲನದಲ್ಲಿರುವ ಉತ್ತರ ಕರ್ನಾಟಕದ 'ಜಾನಪದ ಗೀತೆ'ಗಳನ್ನು 'ಜನಪದ ಗೀತೆಗಳು ಎಂದು ಕರೆದಿರುವುದರಲ್ಲಿ ವಿಶೇಷತೆ ಕಂಡುಬರುತ್ತದೆ. ಹೀಗೆ ಕರೆದಿರುವುದಕ್ಕೆ ಸಮರ್ಥನೆ ಎಂಬಂತೆ, ಈ ಸಂಕಲನದ

ಮುನ್ನುಡಿಯಲ್ಲಿ ಎಚ್.ಎಲ್. ನಾಗೇಗೌಡರು "ಜಾನಪದ ಸಾಹಿತ್ಯ ಕೇವಲ ಮೌಖಿಕವಷ್ಟೇ ಅಲ್ಲ. ಲಿಖಿತರೂಪವಾಗಿರಲೂ ಬಹುದು. ಗ್ರಾಮೀಣ ಜನರು ಅದರ ಕರ್ತೃಗಳಾಗಿರಬಹುದು. ಅಥವಾ ನಗರದವರೇ ಗ್ರಾಮೀಣ ನುಡಿಯಲ್ಲಿ ಜನಪದ ಶೈಲಿಯಲ್ಲಿ ರಚಿಸಿರಬಹುದು. ಇಂಥವೂ ಜನಪದ ಸಾಹಿತ್ಯವಾಗಬಹುದುರ. ಉತ್ತರ ಕರ್ನಾಟಕದಲ್ಲಿ ದಾಸ ಸಾಹಿತ್ಯ ಮತ್ತು ಶರಣ ಸಾಹಿತ್ಯದ ಪ್ರಭಾವದಿಂದ ತಾವು ಅಥವಾ ಬೇರೆಯವರು ರಚಿಸಿದ ಅನೇಕ ಹಾಡುಗಳನ್ನು ಜನಪದ ಸಾಹಿತ್ಯವೆಂದೇ ಭಾವಿಸಿರುವುದು ಕಂಡುಬರುತ್ತಿದೆ. ಈ ಸಂಗ್ರಹದಲ್ಲಿ ಅಂಥ ಅನೇಕ ಹಾಡುಗಳನ್ನು ಕಾಣಬಹುದಾಗಿದೆ. ಈ ಕಾರಣ ಈ ಸಂಗ್ರಹಕ್ಕೆ "ಉತ್ತರ ಕರ್ನಾಟಕದ ಜನಪದರ ಗೀತೆಗಳನ್ನು ಎಂದು ಹೆಸರಿಟ್ಟಿದ್ದೇವೆ" ಎಂದು ಬರೆದಿದ್ದಾರೆ.

ಎಚ್.ಎಲ್. ನಾಗೇಗೌಡರು ಬಿಜಾಪುರ ಜಿಲ್ಲೆಯಲ್ಲಿ ಧ್ವನಿಮುದ್ರಿಸಿಕೊಂಡು ಬಂದಿರುವ 'ಜನಪದ ಗೀತೆ'ಗಳನ್ನು ಡಾ. ಎಂ.ಎನ್. ವಾಲಿಯವರು ಸಹ ಸಂಪಾದಕರಾಗಿ ಬರಹರೂಪಕ್ಕೆ ತಂದಿದ್ದಾರೆ. ಈ ಸಂಕಲನದಲ್ಲಿರುವ 159 ಗೀತೆಗಳನ್ನು ಆಯಾ ಗೀತೆಗಳ ಧಾಟಿಯನ್ನು ಆಧರಿಸಿ ಜೋಗುಳಪದಗಳು, ಮದುವೆಯ ಕಾಲಕ್ಕೆ ಬೀಗರ ಹಾಡುಗಳು ಬೀಸುವ-ಕುಟ್ಟುವ ಹಾಡುಗಳು, ಪ್ರೇಮಗೀತೆಗಳು, ಭಕ್ತಿಗೀತೆಗಳು, ಸೋಬಾನ ಹಾಡುಗಳು, ಸಂವಾದ ಗೀತೆಗಳು, ಹಂತಿಯ ಹಾಡುಗಳು, ಹಬ್ಬದ ಹಾಡುಗಳು, ಕೋಲುಪದಗಳು ಮುಂತಾಗಿ 19 ವಿಭಾಗಗಳಾಗಿ ವಿಂಗಡಿಸಿದ್ದಾರೆ.

ಗೆಜ್ಜೆಕಾಲಿನ ಕುಣಿತ, ಕೋಲಿನ ಬಡಿತದ ಲಯಕ್ಕನುಗುಣವಾಗಿ ಹಾಡುವ 'ಕಾಸೀಮ ಗೌಡನ ಹಾಡು', 'ಅಪ್ಪನ ಶರಣರಿಗಿ' ಕೋಲುಪದಗಳಲ್ಲಿ ವಿಷಯ ವೈವಿಧ್ಯವಿದೆ. 'ಭಜನಾ ಪದ'ಗಳಾದ 'ತಾಯಿಯ ಘನತೆ', 'ತೇರಿನ ಮಠದಾಗ', 'ಎಲ್ಲಿಹಾನ ತೋರಿಸಿರವ್ವಾ' ದಂಥ ಭಕ್ತಿಗೀತೆಗಳಲ್ಲಿ ಭಕ್ತಿಯ ಪರವಶತೆಯಿದೆ. ನೀತಿಯು ಈ ಹಾಡುಗಳ ಜೀವಾಳವಾಗಿದೆ. ಭಾವಸಾಗರವನ್ನು ದಾಟಿಸಲು ಅಂಬಿಗರಣ್ಣ (ಪರಮಾತ್ಮ)ನನ್ನು ಪ್ರಾರ್ಥಿಸುವ ರೀತಿ ಅನುಪಮ. ಈ ಹಾಡುಗಳು ಜನಪದರ ಬಾಳಿನ 'ದಾರಿದೀಪಗಳು'.

'ಕಥನ ಗೀತೆಗಳು' ವಿಭಾಗದಲ್ಲಿ 'ಕೆರೆಗೆ ಹಾರ', 'ಕಿತ್ತೂರುಮಟ್ಟಿ ಕಾಶಿಬಾಯಿ' ಹೆಚ್ಚು ಗಮನ ಸೆಳೆಯುತ್ತವೆ. ಈಗಾಗಲೇ ಜನಪ್ರಿಯವಾಗಿರುವ 'ಪತ್ರ'ಕ್ಕಿಂತ ಭಿನ್ನರೀತಿಯಲ್ಲಿ ನಿರೂಪಿತವಾಗಿರುವ ಈ ಗೀತೆಗಳಲ್ಲಿ ವಸ್ತು ಮಾತ್ರ ಹಾಗೇ ಉಳಿದಿದೆ. ಸಾಹಿತ್ಯಿಕವಾಗಿ ಉತ್ತಮವಾಗಿವೆ. ಇಲ್ಲಿನ ಉಳಿದ ಗೀತೆಗಳಲ್ಲಿ ಕರುಣರಸ ಮಡುಗೊಂಡಿದೆ. ಇವನ್ನು ಹಾಡುತ್ತ ಹೋದಂತೆ ಚಿತ್ತದಲ್ಲಿ ಚಿತ್ರಪಟಗಳು ಸಾಲಾಗಿ ಸಾಗಿದ ಅನುಭವವಾಗುತ್ತದೆ.

ಚೌಡಿಕೆ ಹಾಡು, ಗೀಗೀ ಹಾಡುಗಳು, ಮೈಲಾರಲಿಂಗನ ಹಾಡುಗಳಲ್ಲಿ ವಿಷಯ ವೈವಿಧ್ಯವಿದ್ದರೆ ರಿವಾಯತ ಹಾಡುಗಳಲ್ಲಿ ಮುಸ್ಲಿಂ ಸಂತರ ಬದುಕು, ಕುರಾನಿನ

ಪಾವಿತ್ರ್ಯತೆ, ಮೊಹರಂ ಹಬ್ಬದ ವರ್ಣನೆ, ಪೈಗಂಬರರ ಆಶಯ ಕಂಡುಬರುತ್ತದೆ. ಈ ಹಾಡುಗಳಲ್ಲಿ ಉರ್ದು ಹಾಗೂ ಫಾರಸೀ ಶಬ್ದಗಳು ಹೆಚ್ಚಾಗಿ ಬಳಕೆಯಾಗಿವೆ.

ಇಲ್ಲಿನ ಪ್ರತಿಯೊಂದು ಗೀತೆಯ ಮೊದಲಲ್ಲಿ ಹಾಡಿದವರ, ವಾದ್ಯಗೂಡಿಸಿದವರ ಹೆಸರುಗಳನ್ನು ಕೊಡಲಾಗಿದೆ. ಡಾ. ವಾಲಿಯವರು ಪುಸ್ತಕದ ಆರಂಭದಲ್ಲಿ ಉಪಯುಕ್ತವಾದ ಪ್ರಸ್ತಾವನೆಯನ್ನು, ಕೊನೆಯಲ್ಲಿ ಬಹುಪಾಲು ಗೀತೆಗಳಿಗೆ 'ಟೀಕೆ-ಟಿಪ್ಪಣಿ' ಶಬ್ದಾರ್ಥ (ವಿಶೇಷ ವಿಚಾರ) ಬರೆದಿದ್ದಾರೆ ಇದರಿಂದ ಸಂಕಲನಕ್ಕೆ ಅಚ್ಚುಕಟ್ಟುತನ ಬಂದಿದೆ. ಶಾಸ್ತ್ರೀಯವಾಗಿ, ಅರ್ಥಪೂರ್ಣವಾಗಿ ಬಂದಿರುವ ಈ ಕೃತಿಯ ಹಿಂದಿನ ಶ್ರಮ ಸಾರ್ಥಕವಾಗಿದೆ. ಕೃತಿ ಸ್ವಾಗತಾರ್ಹ ಮತ್ತು ಸಂಗ್ರಹಯೋಗ್ಯವಾಗಿದೆ.

ಗಾದೆಗಳು, ಒಡಪುಗಳು

ಪಿ. ರಾಮಕೃಷ್ಣ

ಕಳೆದ ವರ್ಷ ಗಾದೆ ಮತ್ತು ಒಡಪುಗಳ ತಲಾ ಒಂದೊಂದು ಸಂಗ್ರಹಗಳು ಮಾತ್ರ ಪ್ರಕಟವಾಗಿರುವುದು ನಮ್ಮ ಗಮನಕ್ಕೆ ಬಂದಿದೆ. ಎಲ್.ಆರ್. ಹೆಗಡೆಯವರು ಈ ವರ್ಷ ಗಾದೆಗಳ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಜಾನಪದ ಕ್ಷೇತ್ರಕ್ಕೆ ಹೊಸದಾಗಿ ಪಾದಾರ್ಪಣೆ ಮಾಡುತ್ತಿರುವ ಬಿ.ಎಸ್. ಭಜಂತ್ರಿಯವರು ಒಡಪುಗಳ ಸಂಗ್ರಹವನ್ನು ಪ್ರಕಟಿಸಿದ್ದಾರೆ.

ಕನ್ನಡ ಗಾದೆಗಳು-ಎಲ್.ಆರ್. ಹೆಗಡೆ

ಉತ್ತರ ಕನ್ನಡ ಜಿಲ್ಲೆಯ ಜಾನಪದದ ಸಂಗ್ರಹಣೆ ಬಹುಶಃ ಡಾ. ಎಲ್.ಆರ್. ಹೆಗಡೆಯವರಿಂದಲೇ ಆರಂಭವಾಯಿತೆನಿಸುತ್ತದೆ. ಎಪ್ಪತ್ತರ ಹೊಸ್ತಿಲಲ್ಲೂ ಉತ್ಸಾಹ ಕಳೆದುಕೊಳ್ಳದೆ ಈಗಲೂ ಕೃತಿಗಳನ್ನು ಪ್ರಕಟಿಸುತ್ತಲೇ ಇದ್ದಾರೆ. 1995ರಲ್ಲಿ ಡಾ. ಎಲ್.ಆರ್. ಹೆಗಡೆ ಅವರು ಪ್ರಕಟಿಸಿರುವ 'ಕನ್ನಡ ಗಾದೆಗಳು' ಸಂಗ್ರಹಯೋಗ್ಯವಾದುದಾಗಿದೆ. ಇದರಲ್ಲಿ ಉತ್ತರ ಕನ್ನಡ ಜಿಲ್ಲೆಯ ಗಾದೆಗಳೇ ಹೆಚ್ಚಾಗಿವೆ. ಧಾರವಾಡ ಜಿಲ್ಲೆಯ ಮೂವರು ವ್ಯಕ್ತಿಗಳ ಗಾದೆಗಳಿದ್ದರೂ ಅವು ಈ ಜಿಲ್ಲೆಯ ಗಡಿಗೆ ತಾಗಿದ ಭಾಗಗಳದ್ದೇ. ಇದರಲ್ಲಿ ಸುಮಾರು ಏಳುನೂರು ಗಾದೆಗಳಿವೆ.

ಇದರಲ್ಲಿನ ಕೆಲವು ಗಾದೆಗಳು ಭಾಗಶಃ ಎಲ್ಲರೂ ಕೇಳಿರುವಂತಹುಗಳೇ ಆಗಿದ್ದರೂ ಅವುಗಳನ್ನು ಬಳಸುವ ಸಂದರ್ಭಗಳು, ಸನ್ನಿವೇಶಗಳೂ ಕಡಿಮೆಯಾಗಿರುವುದರಿಂದ, ಅವುಗಳನ್ನು ಸ್ಮರಿಸಲು, ಆ ಮುಖಾಂತರ ಜೀವನದ ಅನುಭವವನ್ನು ಮೆಲುಕು ಹಾಕಲು ಈ ಗಾದೆಗಳು ಸಹಾಯಕವಾಗಿವೆ ಎಂದು ಹೇಳಬಹುದು. ಇನ್ನು ಇಲ್ಲಿನ ಗಾದೆಗಳ ಅರ್ಥವನ್ನು ಪದಗಳನ್ನು ನೋಡಿದಾಗ ಇವುಗಳಲ್ಲಿ ಕೆಲವು ಪ್ರಾದೇಶಿಕ ಭಾಷಾ ಸಂಸ್ಕೃತಿ, ಮತ್ತು ಅಲ್ಲಿನ

ಜೀವನಶೈಲಿಗಳಿಗನುಗುಣವಾಗಿ ಅರ್ಥ ವ್ಯತ್ಯಾಸವಾಗಿರುವುದನ್ನು ಗಮನಿಸಬಹುದು. ಉದಾ-ದಕ್ಷಿಣ ಕನ್ನಡ ಕೊಡಗು ಹಾಗೂ ಬಯಲುಸೀಮೆ; ಅಲ್ಲದೆ ಕೆಲವು ಗಾದೆಗಳು ತಂಬಾ ದೀರ್ಘವಾಗಿದ್ದು ವಿಶೇಷ ಅರ್ಥಗಳನ್ನೇನೂ ಹೊಂದಿಲ್ಲದೆ ಆಕರ್ಷಣೆ ಮತ್ತು ಬಳಕೆಯಲ್ಲಿ ದುರ್ಬಲವಾಗಿರುತ್ತವೆ. ಮತ್ತೆ ಕೆಲವು ಗಾದೆಗಳು ಬಹಳಷ್ಟು ಪುನರಾವರ್ತನೆ ಕೂಡ ಆಗಿರುತ್ತವೆ. ಇಂಥವನ್ನು ಪಾಠಾಂತರದ ದಾಖಲೀಕರಣ ಎಂಬಂತೆ ನಮೂದಿಸಿದ್ದರೆ ಸಂಪಾದನೆ ಪ್ರೌಢವೆನಿಸುತ್ತಿತ್ತು. ಇದರಲ್ಲಿನ ಕೆಲವು ವಾಕ್ಯಗಳಲ್ಲಿ-ಅರ್ಥಗಳನ್ನು (ಪಾಠಾಂತರವೆನಿಸುವಂತೆ) ಕಂಸದಲ್ಲಿ ನಮೂದಿಸಿರುವುದು (ಅಡಿಟಿಪ್ಪಣಿಯಲ್ಲಿ ನೀಡುವ ಬದಲು) ಗೌಣ ಆದರೆ ಗಮನಿಸಬಹುದಾದ ದೋಷವೆಂದು ನನ್ನ ಅನಿಸಿಕೆ. ಇಂತಹ ಕೆಲವು ಮಿತಿಗಳ ನಡುವೆಯೂ ಈ ಸಂಗ್ರಹ ಕೃತಿ ಕನ್ನಡ ಜಾನಪದ ಕ್ಷೇತ್ರಕ್ಕೊಂದು ಕೊಡುಗೆಯಾಗಿ ಹೆಗಡೆಯವರ ಶ್ರಮ ಸಾರ್ಥಕವಾಗಿದೆಯೆಂದು ಯಾವುದೇ ಲೇಖನ ಉತ್ತಮ ಕೊಡುಗೆಯನ್ನು ಬಲ್ಲವರು ಹೇಳಬಹುದಾದ ಮೆಚ್ಚುಗೆಯ ಮಾತಾಗಿದೆ.

ಜನಪದ ಒಡಪುಗಳು

ಬಿ.ಎಸ್. ಭಜಂತ್ರಿ ಅವರ 'ಜನಪದ ಒಡಪುಗಳು' ಸಂಗ್ರಹದಲ್ಲಿ ಬೆಳಗಾಂ ಜಿಲ್ಲೆಯ ನಾಲ್ಕೈದು ಗ್ರಾಮಗಳಲ್ಲಿ ಸಂಗ್ರಹಿಸಿದ ನಾನೂರು ಒಡಪುಗಳಿವೆ. ಈ ಒಡಪುಗಳು ಜನಪದರ ವಿನೋದ ಪ್ರಿಯತೆಗೆ ಹಿಡಿದ ಕನ್ನಡಿಯಂತಿವೆ. ಅಂದರೆ ಜನಸಾಮಾನ್ಯರ ಬದುಕಿನ ಬದಿಯಲ್ಲಿ, ಬದುಕಿನಲ್ಲಿ ನಡೆಯುವ ಹಲವಾರು ಮಗ್ಗುಲುಗಳನ್ನು ಪರಿಚಯಿಸುತ್ತವೆ. ಈ ಒಡಪುಗಳು ಭಾಷೆಯ ಸೊಗಸನ್ನು ಅದರ ವಕ್ತೃಗಳ ಹಿನ್ನೆಲೆಯನ್ನು ಸಹ ಸೂಚ್ಯವಾಗಿ ತಿಳಿಸುವಂಥವಗಳಾಗಿವೆ. ಈ ಒಡಪುಗಳ ಸಂಗ್ರಹ ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ನಡೆದಿರುವುದು ಗಮನಕ್ಕೆ ಬರುತ್ತದೆ. ಆದರೂ ಕೆಲವು ಒಡಪುಗಳು ಕರ್ನಾಟಕದ ಇತರೆ ಭಾಗಗಳಲ್ಲೂ ಬಳಕೆಯಲ್ಲಿವೆ. ಇದರಿಂದ ಒಡಪುಗಳ ವ್ಯಾಪ್ತಿ ಗೊತ್ತಾಗುತ್ತದೆ. ಸಂಗ್ರಹಕಾರರು ಒಡಪುಗಳನ್ನು ಸಂಗ್ರಹಿಸಿರುವುದು ಮೆಚ್ಚುವಂತಹ ಕೆಲಸವಾದರೂ ಕೆಲವು ಒಡಪುಗಳು ತೀರಾ ಒಗಟಾಗಿಯೇ ಅರ್ಥವಾಗದೆ ಉಳಿಯುತ್ತವೆ. ಆದ್ದರಿಂದ ಕೆಲವು ಗ್ರಾಮ್ಯ ಪದಗಳಿಗೆ ಅರ್ಥಗಳನ್ನು ನೀಡಿದ್ದರೆ ಹೆಚ್ಚು ಸೂಕ್ತವಾಗುತ್ತಿತ್ತು.

ಇನ್ನು ಕೆಲವು ಒಡಪುಗಳನ್ನು ಗಮನಿಸಿದಾಗ ಅವು ನಿಜವಾಗಿಯೂ ಗ್ರಾಮ್ಯ ಜನರಿಂದ ಸಂಗ್ರಹಿತವಾದುವುಗಳೇ ಎಂಬ ಆಶ್ಚರ್ಯ ಮತ್ತು ಸಂದೇಹಗಳೆರಡೂ ಒಟ್ಟಿಗೇ ಮೂಡುತ್ತವೆ. ಉದಾ- 60 ಮತ್ತು 68279ನೇ ಒಡಪುಗಳು.

ನೋಡಿ-

ಸಿರಿಗೆ ಸಾಂತಿ ಬೇಕು
ದೊರೆಗೆ ರಾಜ್ಯ ಬೇಕು
ಕರೆಗೆ ಮನ್ನನೆ ಬೇಕು
ಅರ್ಕರಿಗೆ ಆಯುಧ ಬೇಕು

ದಾಸಿ ಸೇವೆಗೆ ಬೇಕು
ಮಾತು ಬಾಯಿಗೆ ಬೇಕು
ನೀತಿ ನೇಮಕ್ಕೆ ಬೇಕು
ಅತ್ತೆ ಮಾವರು ಬೇಕು
ನಾ ಬೇಕು ನನ್ನ ಪತಿ ದೇವರಿಗೆ (279)

ಇನ್ನು ಕೆಲವು-ಸಂಗಗಳಾಗಿವೆಯೇ ಹೊರತು ಯಾವುದೇ ಅರ್ಥವಾಗಲೀ, ಗಂಭೀರತೆಯಾಗಲೀ, ವಿನೋದವಾಗಲೀ ಅವುಗಳಲ್ಲಿರುವುದಿಲ್ಲ. ಉದಾಹರಣೆಗೆ ಗಂಡ್ಮಕ್ಕಳ ಕೆಲವು ಒಡಪುಗಳು.

ಕೊನೆಯದಾಗಿ ಈ ಕೃತಿಯ ಪ್ರಸ್ತಾವನೆ ತುಂಬಾ ದೀರ್ಘವಾಗಿರುತ್ತದೆ. ಅಷ್ಟು ವಿವರಣೆ ಸಂಗ್ರಹ ಕೃತಿಗೆ ಭಾರವೆನಿಸುತ್ತದೆ. ಈಗಾಗಲೇ ಪ್ರಕಟವಾಗಿರುವ ಇಮ್ರಾಪೂರ, ಜ್ಯೋತಿ ಹೊಸೂರ, ಲಕ್ಷ್ಮೆ ಮೊದಲಾದವರ ಪ್ರಸಿದ್ಧ ಸಂಕಲನಗಳ ಪ್ರಸ್ತಾವನೆಯಲ್ಲೂ ಒಡಪುಗಳನ್ನು ಕುರಿತು ಪ್ರಕಟವಾಗಿರುವ ಲೇಖನಗಳಲ್ಲೂ ಹೇಳಿರುವ ಮಾತುಗಳೇ ಇಲ್ಲಿದ್ದು ಕೇವಲ ಪುನರುಕ್ತಿ ಆಗಿರುವುದರಿಂದ, ಅಧ್ಯಯನ ಇಷ್ಟೊಂದು ಬೆಳೆದಿರುವ ಈ ದಿನಗಳಲ್ಲಿ ಈ ದೀರ್ಘತೆ ಅನಗತ್ಯವಾಗಿತ್ತು. ಪ್ರಸ್ತುತ ಸಂಗ್ರಹದ ಒಗಟುಗಳ ಬಗ್ಗೆ ಹಾಗೂ ವಕ್ತೃಗಳು, ಅವರ ಪರಿಸರದ ಬಗ್ಗೆ ಎಂಟು-ಹತ್ತು ಪುಟಗಳಷ್ಟು ಬರೆದಿದ್ದರೆ ಸಾಕೆತ್ತೆನಿಸುತ್ತದೆ. ಆದರೆ ಲೇಖಕರ ಉತ್ಸಾಹ ಅಭಿನಂದನೀಯ. ಏನೇ ಆದರೂ ಸುಮಾರು 400 ಒಡಪುಗಳ ಸಂಗ್ರಹದ ಅವರ ಶ್ರಮ ಜನಪದ ಕ್ಷೇತ್ರಕ್ಕೆ ಒಂದು ಕೊಡುಗೆಯಾಗಿಯೇ ನಿಲ್ಲುತ್ತದೆ. ಅಷ್ಟರ ಮಟ್ಟಿಗೆ ಭಜಂತ್ರಿಯವರು ಅಭಿನಂದನಾರ್ಹರಾಗಿರುತ್ತಾರೆ.

ಪತ್ರಿಕಾ ಲೇಖನಗಳು

ಡಾ. ಎಸ್.ಪಿ. ಪದ್ಮಪ್ರಸಾದ್

1995ರಲ್ಲಿ ಕರ್ನಾಟಕದ ಪ್ರಮುಖ ಪತ್ರಿಕೆಗಳಲ್ಲಿ (ಪ್ರಜಾವಾಣಿ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ, ಸುಧಾ, ತರಂಗ, ಕರ್ಮವೀರ, ಕಸ್ತೂರಿ, ತುಷಾರ, ಜಾನಪದ ಜಗತ್ತು, ಸಾಧನೆ, ಪ್ರಬುದ್ಧ ಕರ್ನಾಟಕ, ಹಾಗೂ ಕರ್ನಾಟಕ ಭಾರತಿ) ಪ್ರಕಟವಾಗಿರುವ ಜಾನಪದ ಲೇಖನಗಳು ಒಟ್ಟು ಐವತ್ತಕ್ಕಿಂತ ಸ್ವಲ್ಪ ಹೆಚ್ಚು ಅಷ್ಟೆ. ಇದರಲ್ಲಿ ಹತ್ತು ಬರಹಗಳು 'ಜಾನಪದ ಜಗತ್ತು' ಒಂದರಲ್ಲೇ ಪ್ರಕಟವಾಗಿವೆ. ಉಳಿದೆಲ್ಲಾ ಪತ್ರಿಕೆಗಳು ಸೇರಿ ಪ್ರಕಟಿಸಿರುವ ಜಾನಪದ ಲೇಖನಗಳ ಸಂಖ್ಯೆಯು. ಒಂದು ವರ್ಷದಲ್ಲಿನ ಆ ಪತ್ರಿಕೆಗಳ ಒಟ್ಟು ಪುಟ ಸಂಖ್ಯೆಗೆ ಹೋಲಿಸಿದರೆ ಶೇ. ಐದಕ್ಕಿಂತ ಹೆಚ್ಚು ಆಗಲಿಕ್ಕಿಲ್ಲ. ಇದು ಹೇಳಿಕೊಳ್ಳುವಂಥಾ ಸಂಖ್ಯೆ ಏನಲ್ಲ. ಇಷ್ಟೇ ಅಲ್ಲ-ಈ ಲೇಖನಗಳ ಪೈಕಿ ಕೂಡ ಹೆಚ್ಚಿನವು ಸಾಮಾನ್ಯ ಪರಿಚಯಾತ್ಮಕ ಲೇಖನಗಳು. ಅದಕ್ಕಿಂತ ಮೇಲ್ಮಟ್ಟದವು ಒಂದು ಹತ್ತು ಲೇಖನಗಳಷ್ಟೆ. ಪ್ರೌಢ ಪ್ರಬಂಧಗಳೆನ್ನಬಹುದಾದವು ಹೆಚ್ಚೆಂದರೆ ನಾಲ್ಕೈದು ಮಾತ್ರ. ಅಂದರೆ ಪ್ರಕಟವಾಗುವ ಜಾನಪದ ಸಂಬಂಧಿ ಬಿಡಿ ಲೇಖನಗಳಲ್ಲಿ ಶೇ. ಹತ್ತರಷ್ಟು ಮಾತ್ರ ಸಂಶೋಧನೆ ವಿಶ್ಲೇಷಣೆ ಸಂಬಂಧಿಯಾದ ಪ್ರೌಢಲೇಖನಗಳಾಗಿರುತ್ತವೆ. ಉಳಿದದ್ದೆಲ್ಲ ಕೇವಲ ಸಾಮಾನ್ಯ ಪರಿಚಯ, ಅಥವಾ ಅದಕ್ಕಿಂತ ಮೇಲ್ಮಟ್ಟಕೇರಿಯೂ ಮಾಹಿತಿ ನೀಡುವ ಮಟ್ಟದಲ್ಲಿಯೇ ಉಳಿಯುವಂಥವು. ಇವುಗಳಿಗೂ ಮಹತ್ವವಿದೆ ನಿಜ. ಆದರೆ ವಿಶ್ಲೇಷಣಾತ್ಮಕವಾದ ಲೇಖನಗಳು ನಮ್ಮ ಪತ್ರಿಕೆಗಳಲ್ಲಿ ಪ್ರಕಟವಾಗದಿರುವುದರ ಬಗ್ಗೆ ನಮ್ಮ ಪತ್ರಿಕೆಗಳವರು ಸ್ವಲ್ಪ ಯೋಚಿಸಬೇಕು. ಪುಸ್ತಕ ರೂಪದಲ್ಲಿ ತಮ್ಮ ಪ್ರೌಢಲೇಖನಗಳನ್ನು ಹಣ ಹಾಕಿ ಪ್ರಕಟಿಸುವ ರಿಸ್ಕ್ ತೆಗೆದುಕೊಳ್ಳಲು ಇಚ್ಛಿಸಿದ, (ಅಥವಾ-ಒಮ್ಮೆ ಪ್ರಕಟಿಸಿದರೂ ಅದು ಪತ್ರಿಕೆ ತಲುಪುವಷ್ಟು ಹೆಚ್ಚು ಜನಕ್ಕೆ ತಲುಪುದಿಲ್ಲವಾದ್ದರಿಂದ) ಲೇಖಕರ ಬೌದ್ಧಿಕತೆಯ ಫಲವನ್ನು ಜನರಿಗೆ ತಲುಪಿಸುವ ಜವಾಬ್ದಾರಿ ಪತ್ರಿಕೆಗಳದ್ದಾಗಿದೆ.

ಇಷ್ಟು ಪೀಠಿಕೆಯ ನಂತರ 1995ರಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ನಮ್ಮ ಗಮನಕ್ಕೆ ಬಂದಿರುವ ಲೇಖನಗಳನ್ನೀಗ ಸಮೀಕ್ಷಿಸೋಣ.

ಜಾನಪದಕ್ಕೆ ಮೀಸಲಾದ ಏಕೈಕ ಕನ್ನಡ ಪತ್ರಿಕೆಯಾಗಿದ್ದೂ (ಅದೂ ತ್ರೈಮಾಸಿಕ) ಬಡತನದಲ್ಲೇ ಏಗುತ್ತಾ ನಡೆದಿರುವ 'ಜಾನಪದ ಜಗತ್ತು' ಪತ್ರಿಕೆಯ ಒಟ್ಟು ಎರಡು ಸಂಚಿಕೆಗಳು ಮಾತ್ರ 1995ರಲ್ಲಿ ಪ್ರಕಟವಾಗಿವೆ. ಈ ಸಂಚಿಕೆಗಳಲ್ಲಿ ಸಂಪಾದಕೀಯ, ಪ್ರಕಾಶಕವಾದ ಕರ್ನಾಟಕ ಜಾನಪದ ಪರಿಷತ್ತಿನ ಕಾರ್ಯಕ್ರಮಗಳ ವರದಿ, ಪುಸ್ತಕ ವಿಮರ್ಶೆ, ಕೆಲವು ಸಣ್ಣ ಹಾಡುಗಳ ಪ್ರಕಟಣೆ-ಇಂಥವನ್ನು ಬಿಟ್ಟರೆ ಉಳಿದಂತೆ ಹತ್ತು ಬರಹಗಳು ಪ್ರಕಟವಾಗಿವೆ. ಇದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗುತ್ತಿರುವ 'ಮಲೆ ಮಾದೇಶ್ವರ ಕಥಾಧಾರೆಯ' ಎರಡನೇ ಕಂತೂ ಸೇರಿದೆ. (ಮುಂದಿನ ಸಂಚಿಕೆಯಲ್ಲಿ ಈ ಕಥೆಯ ಮುಂದಿನ ಕಂತು ಇಲ್ಲ.) ಈ ಪೈಕಿ ಗಂಭೀರ ಲೇಖನಗಳೆನ್ನಬಹುದಾದವು ನಾಲ್ಕೈದು ಮಾತ್ರ. ಅವೆಂದರೆ-ಹೋರಿ ಓಡಿಸುವ ಕ್ರೀಡೆ (ಎ.ಆರ್. ಸುರೇಶ್), ಲಂಬಾಣಿ ಜನಾಂಗದ ಉಡಿಗೆ ತೊಡಿಗೆಗಳು (ಹರಿಲಾಲ್ ಪವಾರ್), ಬೀದರ್ ಜಿಲ್ಲೆಯ ಜನಪದ ವೃತ್ತಿ ಕಲಾವಿದರು '(ಜಗನ್ನಾಥ ಹೆಬ್ಬಾಳೆ), ತುಳುನಾಡಿನ ಜನಪದ ಆಟಗಳು-ಪ್ರಾತ್ಯಕ್ಷಿಕೆ ಮತ್ತು ದಾಖಲಾತಿ ಕಮ್ಮಟ (ವಾಮನ ನಂದಾವರ).

'ಹೋರಿ ಓಡಿಸುವ ಕ್ರೀಡೆ'-ಒಂದು ಪರಿಚಯಾತ್ಮಕ ಲೇಖನ. ಕರ್ನಾಟಕದ ಯಾವೆಡೆಗಳಲ್ಲಿ ಈ ಕ್ರೀಡೆ ಚಾಲ್ತಿಯಲ್ಲಿದೆ, ಕ್ರೀಡೆಯ ವಿಧಾನ, ನಡೆಯುವ ದಿನಗಳು, ಕರ್ನಾಟಕ, ತಮಿಳು ನಾಡು, ಆಂಧ್ರಗಳಲ್ಲಿ ಇದಕ್ಕಿರುವ ಬೇರೆ ಬೇರೆ ಹೆಸರುಗಳು, ಇಂಥ ಮಾಹಿತಿಗಳೆಲ್ಲ ಇಲ್ಲಿವೆ. ಈ ಕ್ರೀಡೆಯಲ್ಲಿ ಅಭಿರುಚಿಯನ್ನು ಬೆಳೆಸುವ ಕೆಲಸ ಹೇಗೆ ಆಗಬೇಕು ಎಂಬುದಕ್ಕೆ ಕೆಲ ಸಲಹೆಗಳನ್ನೂ ನೀಡುವಲ್ಲಿಗೆ ಲೇಖನ ಮುಕ್ತಾಯಗೊಂಡಿದೆ. ಲಂಬಾಣಿಗರ ಉಡುಗೆ ತೊಡುಗೆಗಳನ್ನು ವಿವರವಾಗಿ ಪರಿಚಯಿಸುವ ಹರಿಲಾಲ್ ಪವಾರರ ಲೇಖನ ದೀರ್ಘವಾದದ್ದು ಮತ್ತು ತುಂಬು ಮಾಹಿತಿಗಳಿಂದ ಕೂಡಿದ್ದು. ವೈಶಿಷ್ಟ್ಯಗಳೇ ತುಂಬಿರುವ ಹೆಣ್ಣುಮಕ್ಕಳ ಉಡುಗೆ, ಆಭರಣಗಳ ಬಗ್ಗೆ ಇಲ್ಲಿ ಸಹಜವಾಗಿಯೇ ಮುಕ್ಕಾಲು ಪಾಲು ವಿವರಗಳಿವೆ. ಇದರಲ್ಲಿ ದೊಡ್ಡವರ ಉಡುಪುಗಳು, ಹುಡುಗಿಯರ ಉಡುಪುಗಳು, ಮದುವೆ, ಹಬ್ಬ ಹರಿದಿನಗಳು, ಋತುಮತಿಯಾದಾಗ, ಬಾಣಂತಿಯಾದಾಗ, ದುಡಿಮೆ ಹೀಗೆ ಹಲವು ಸಂದರ್ಭದಲ್ಲಿ ಸ್ತ್ರೀಯರು ತೊಡುವ ಉಡುಪು, ಆಭರಣಗಳನ್ನು ಕ್ರಮಬದ್ಧವಾಗಿ ಪರಿಚಯಿಸಿದ್ದಾರೆ. ಅದೇರೀತಿ ಗಂಡಸರು ಸಾಮಾನ್ಯ ಹಾಗೂ ವಿಶೇಷ ಸಂದರ್ಭಗಳಲ್ಲಿ ತೊಡುವ ಉಡುಪುಗಳ ಬಗ್ಗೆಯೂ ಸಾಕಷ್ಟು ವಿವರ ನೀಡಿದ್ದಾರೆ. ಆದರೆ ಕ್ಷೇತ್ರ ಕಾರ್ಯ ಮಾಹಿತಿ ನೀಡುವಲ್ಲಿ ಗೆಲ್ಲುವ ಪವಾರರು ಏನಾದರೂ ವಿಶ್ಲೇಷಣೆ ಮಾಡುವಾಗ ಮಾತ್ರ ಸೋಲುತ್ತಾರೆ. ಉದಾಹರಣೆಗೆ ಲೇಖಕರ ಆರಂಭದಲ್ಲಿ ಲಂಬಾಣಿ ಹೆಣ್ಣುಮಕ್ಕಳು ತೊಡುವ ಲಂಗ-ಕುಪ್ಪಸಗಳಿಗೆ ಕನ್ನಡಿ ಚೂರುಗಳನ್ನು ಜೋಡಿಸಿರುವುದಕ್ಕೆ ಕಾರಣ- ''ಕಟ್ಟಿಗೆ ಹೊರೆಯನ್ನು ತಲೆ ಮೇಲೆ ಹೊತ್ತು ಸುಡುಬಿಸಿಲಲ್ಲಿ ಅಲೆದು

ಮಾರುತ್ತಿದ್ದುದರಿಂದ, ಆ ಬಿಸಿಲಿನ ಬೇಗೆ ಮೈಗೆ ತಾಗದಂತೆ ಪ್ರತಿಫಲಿತವಾಗಿಬಿಡಲಿ ಎಂಬುದು''-ಎಂದು ಪವಾರರು ಊಹಿಸುತ್ತಾರೆ. ಇದು ಮೇಲ್ನೋಟಕ್ಕೆ ಮಾತ್ರ ಸರಿ ಎನಿಸಬಹುದಾದ ಊಹೆ. ರಾಜಾಸ್ಥಾನೀ ಹೆಣ್ಣುಮಕ್ಕಳಿಗೆ ತಮ್ಮ ಉಡುಪಿನ ಕುರಿತಾಗಿ ಇರುವ ವಿಶಿಷ್ಟ ಸೌಂದರ್ಯಪ್ರಜ್ಞೆಯೇ ಇದಕ್ಕೆ ಕಾರಣ ಎಂದು ಊಹಿಸುವುದೇ ಸಮರ್ಪಕ. ಯಾಕೆಂದರೆ, ಹೀಗೆ ಸಾಧ್ಯವಾದಲ್ಲೆಲ್ಲ ಕನ್ನಡಿಗಳನ್ನು ಅಂಟಿಸಿಕೊಳ್ಳುವುದು ರಾಜಾಸ್ಥಾನಿ ಸಂಸ್ಕೃತಿಯಲ್ಲಿ ಕಂಡುಬರುವಷ್ಟು ಇನ್ನೆಲ್ಲೂ ಕಾಣದು. ಅಲ್ಲಿನ ಮುಂದುವರೆದ ಜನಾಂಗಗಳ ಹೆಣ್ಣುಮಕ್ಕಳೂ ತಮ್ಮ ಉಡುಗೆಗಳಿಗೆ ಕನ್ನಡಿಚೂರುಗಳನ್ನು ಹೊಲಿದುಕೊಳ್ಳುತ್ತಾರೆ. 'ಶೀಷ್ ಮಹಲ್' ವಾಸ್ತುಶಿಲ್ಪದ ಜನ್ಮಭೂಮಿ ಕೂಡಾ ಆ ರಾಜ್ಯವೇ. ವಸ್ತು ವಿಶ್ಲೇಷಣೆ ಮಾಡುವಾಗ ಇಂಥ ಅಂಶಗಳು ನಮ್ಮ ಮನಸ್ಸಿನಲ್ಲಿರಬೇಕು.

ಡಾ. ಹೆಬ್ಬಾಳೆ ಜಗನ್ನಾಥ ಅವರ 'ಬೀದರ್ ಜಿಲ್ಲೆಯ ಜನಪದ ವೃತ್ತಿ ಕಲಾವಿದರು' ಲೇಖನದಲ್ಲಿ ಆ ಜಿಲ್ಲೆಯಲ್ಲಿ ಹದಿನಾಲ್ಕು ಪ್ರಮುಖ ವೃತ್ತಿ ಕಲಾವಿದರುಗಳ ಕಲಾಜೀವನದ ರೀತಿನೀತಿಗಳನ್ನು ಪರಿಚಯಿಸಲಾಗಿದೆ. 'ಬುಡುಬುಡುಕೆಯವರು, ಕಿನ್ನರಿ ಜೋಗಿಗಳು, ಸುಡುಗಾಡು ಸಿದ್ಧರು, ಬಹುರೂಪಿಗಳು, ಭೂತೇದರು, ದೊಂಬರು, ಹಾವಾಡಿಗರು, ಕೋತಿ, ಕರಡಿಗಳನ್ನು ಕುಣಿಸುವರು-'ಇತ್ಯಾದಿ ಜನ ಇಲ್ಲಿ ಪರಿಚಯಿಸಲ್ಪಟ್ಟಿದ್ದಾರೆ.

ಇದೇ ಸಂಚಿಕೆಯಲ್ಲಿರುವ ಧಾರಾವಾಹಿ 'ಮಲೆಮಾದೇಶ್ವರನ ಕಥಾಧಾರೆ'ಯ ಎರಡನೇ ಕಂತಿನಲ್ಲಿ ಡಾ. ಪಿ.ಕೆ. ರಾಜಶೇಖರ ಅವರು ತಾವು ಬಹು ಹಿಂದೆಯೇ ಸಂಪಾದಿಸಿ ಪ್ರಕಟಿಸಿದ್ದ ಜನಪದ ಮಹಾಕಾವ್ಯ 'ಮಲೆಮಾದೇಶ್ವರ'ದ ಸರಳೀಕೃತ ಗದ್ಯಾನಾವಾದವನ್ನು ಆದಷ್ಟೂ ಮೂಲ ವಕ್ಯವಿನ ಧಾಟಿಯಲ್ಲೇ ಕೊಟ್ಟಿರುವ ಎರಡು ಪುಟಗಳು ಒಂದು ಬರಹವಿದೆ. ಇದನ್ನೇ ಓದಿಕೊಂಡು ಮೂಲದ ಸವಿಯನ್ನು ಅನುಭವಿಸಬಹುದಾದಷ್ಟು ಹತ್ತಿರವಿದೆ ಈ ಕಥಾಸಾರ ಲೇಖನದ ಶೈಲಿ. ಓದಿ ಸಂತೋಷಿಸಬಹುದು.

ಜಾನಪದ ಜಗತ್ತಿನ ಎರಡನೇ ಸಂಪುಟ 1995ರ ಸೆಪ್ಟೆಂಬರ್‌ನಲ್ಲಿ ಪ್ರಕಟವಾಗಿದೆ. ಇದರಲ್ಲಿಯೂ-ಪುಸ್ತಕ ವಿಮರ್ಶೆ, ನಡೆದ ಕಾರ್ಯಕ್ರಮಗಳ ಪರಿಚಯ, ಸಂಪಾದಕೀಯ-ಇವುಗಳಲ್ಲಿದೆ. ಒಟ್ಟು ಆರು ಬರಹಗಳು ಜಾನಪದ ಸಂಬಂಧಿಯಾಗಿವೆ. ಆದರೆ ಇದರಲ್ಲಿ ಒಂದು ಜನಪದ ಕಥೆಯಾಗಿದೆ. ಇನ್ನೊಂದು ಐತಿಹ್ಯ ಕತೆಯಾಗಿದೆ. ಮೂರು ಪರಿಚಯ ಲೇಖನಗಳಾಗಿವೆ. 'ತುಳುನಾಡಿನ ಜನಪದ ಆಟಗಳು' ಎಂಬ ಒಂದೇ ಒಂದು ಲೇಖನ ಮಾತ್ರ ವಿಶ್ಲೇಷಣಾತ್ಮಕವಾದ ಲೇಖನವಾಗಿದೆ. ಆದರೂ ಇದು ಕಮ್ಮಟವೊಂದರ ವರದಿ ಮಾತ್ರ.

ಮಂಗಳೂರು ವಿ.ವಿ.ಯ ತುಳುಪೀಠವು ಏರ್ಪಡಿಸಿದ್ದ ತುಳುನಾಡಿನ ಜನಪದ ಆಡಗಳ ಪ್ರಾತ್ಯಕ್ಷಿಕೆ ಮತ್ತು ದಾಖಲಾತಿ ಕಮ್ಮಟ (ಮೇ 5 ರಿಂದ 7, 1995)ದಲ್ಲಿ

ಪ್ರದರ್ಶಿತಗೊಂಡ ಆಯ್ದ ಜನಪದ ಆಟಗಳ ಬಗ್ಗೆ ನಡೆದ ಚರ್ಚೆಯಲ್ಲಿ ವ್ಯಕ್ತವಾದ ಸ್ವಾರಸ್ಯಕರ ಅಂಶಗಳನ್ನು ಡಾ. ವಾಮನ ನಂದಾವರ ಅವರು ತಮ್ಮ 'ತುಳುನಾಡಿನ ಜನಪದ ಆಟಗಳು' ಲೇಖನದಲ್ಲಿ ಸೆರೆಹಿಡಿದಿದ್ದಾರೆ. ಚೆನ್ನಮಣೆ, ಹುಲಿದನ, ಲಗೋರಿ, ಕಾಗೆ-ಗಿಳಿ ಇತ್ಯಾದಿ ಆಟಗಳ ಪ್ರೇರಣೆ, ಸಾಂಕೇತಿಕತೆಗಳ ಬಗೆಗೆ ನಡೆದ ಚರ್ಚೆಯ ಮುಖ್ಯಾಂಶಗಳೂ ಇಲ್ಲಿ ನಿರೂಪಿತವಾಗಿರುವುದೊಂದು ಪ್ರಯೋಜನಕಾರಿಯಾದ ಅಂಶ.

ಈ ಸಂಚಿಕೆಯಲ್ಲಿನ ಇನ್ನುಳಿದ ಲೇಖನಗಳ ಪೈಕಿ ಮೂರು ಪರಿಚಯ ಲೇಖನಗಳು. ಒಂದು-ಜೀಶಂಪ ಅವರನ್ನು ಕುರಿತ ಸಂಸ್ಮರಣ ಲೇಖನ ವ.ನಂ. ಶಿವರಾಮು ಅವರದ್ದು. ಜೀಶಂಪ ಅವರ ಜೀವನ ಸಾಧನೆಗಳನ್ನು ಕುರಿತ ಈ ಲೇಖನ ನಮಗೆ ಹೊಸದೇನನ್ನೂ ಹೇಳುವುದಿಲ್ಲವಾದರೂ ತನ್ನ ಸೀಮಿತ ಉದ್ದೇಶವನ್ನು ಸಾಧಿಸುವಲ್ಲಿ ಯಶಸ್ವಿಯೇ ಆಗಿದೆ. ಇನ್ನೊಂದು ಪರಿಚಯ ಲೇಖನ ವ.ನಂ. ಶಿವರಾಮು ಅವರನ್ನೇ ಕುರಿತದ್ದು. ಕರ್ನಾಟಕ ಜಾನಪದ ಟ್ರಸ್ಟಿನಲ್ಲಿ ನೌಕರರಾಗಿ ಸೇರಿ, ಜಾನಪದ ಜಗತ್ತು 'ಪತ್ರಿಕೆಯ ಉಪ ಸಂಪಾದಕರಾಗಿ ಹಲವು ವರ್ಷ ದುಡಿದು, ಬಳಿಕ ಕಾಲೇಜು ಉಪನ್ಯಾಸಕರಾಗಿ, ಇದೀಗ ಜಾನಪದ ಅಕಾಡೆಮಿಯ ಸದಸ್ಯರಾಗಿರುವ ಈ ತರುಣ ಲೇಖಕನ ಜಾನಪದ ಬೆಳವಣಿಗೆಯನ್ನು ಸಂಕ್ಷೇಪವಾಗಿ ಶ್ರೀಮತಿ ಸರ್ವಮಂಗಳ ಅವರು ಪರಿಚಯಿಸಿದ್ದಾರೆ. ಮತ್ತೊಂದು ಪರಿಚಯ ಲೇಖನದಲ್ಲಿ ಎಂ. ಭೈರೇಗೌಡ ಅವರು ತಮಿಳುನಾಡಿನ ಗಡಿಯಲ್ಲಿನ ಕಬ್ಬೆದೊಡ್ಡಿಯಲ್ಲಿನ ಕಾರಯ್ಯ ಎಂಬ ಇರುಳಿಗ ಜನಾಂಗದ ಒಬ್ಬ ಶ್ರಮಜೀವಿ ಎಷ್ಟು ಸೊಗಸಾಗಿ ಕಥನಕಾವ್ಯಗಳನ್ನು ಹಾಡಬಲ್ಲ ಎಂಬುದರ ಪರಿಚಯ ಮಾಡಿಕೊಟ್ಟಿದ್ದಾರೆ.

'ಕೋಥಳಿ ಪದ್ಮಾವತಿ ದೇವಿ'-ಹುಣಸೇ ಪಾಳ್ಯದ ರಾಜಣ್ಣ ಅವರು ಸಂಗ್ರಹಿಸಿದ ಜೈನ ಯಕ್ಷಿ ಪದ್ಮಾವತಿಗೆ ಸಂಬಂಧಿಸಿದ ಒಂದು ಐತಿಹ್ಯ ಕತೆ. ಜೈನ ಜನಪದ ಸಾಹಿತ್ಯಕ್ಕೆ ಇದೊಂದು ಹೊಸ ಸೇರ್ಪಡೆ. ಬೆಳಗಾಂ ಜಿಲ್ಲೆಯ ಕೋಥಳಿ ಒಂದು ಪ್ರಸಿದ್ಧ ಜೈನ ಕ್ಷೇತ್ರ. ಪದ್ಮಾವತಿ ಯಕ್ಷಿ ಇಲ್ಲಿನ ಅಧಿದೇವತೆ. ಈ ದೇವಿಯ ಮೂಲ ಕ್ಷೇತ್ರ ಶಿವಮೊಗ್ಗಾ ಜಿಲ್ಲೆಯಲ್ಲಿನ ಹೊಂಬುಜ (ಹುಂಜ) ಕ್ಷೇತ್ರವೆಂಬುದು ಅನೇಕರಿಗೆ ತಿಳಿದಿದೆ. ಅಲ್ಲಿಂದ, ಭಕ್ತನೊಬ್ಬನ ಭಕ್ತಿಗೆ ಮೆಚ್ಚಿ ದೇವಿಯು ಕೋಥಳಿಗೆ ಬಂದು ನೆಲೆಸಿದ ವಿಚಾರ ಈ ಕಥೆಯಲ್ಲಿ ಬಂದಿದೆ.

'ಜಂಬೂರು ನಾಗೇಗೌಡ್ರು' ಕತೆ ಕ.ಜಾ. ಪರಿಷತ್ತಿನ ಧ್ವನಿಮುದ್ರಣ ಭಂಡಾರದ್ದು. ಕಿರಿಸೊಸೆಯ ಮೇಲೆ ಮಾತ್ಸರ್ಯ ಪಡುವ ವಾರಗಿತ್ತಿಯರು, ಅವಳಿಗೆ ಗಂಡನಿಂದ ತಿರಸ್ಕಾರ, ದೊರೆಮಗ ಇವಳನ್ನು ವಶಪಡಿಸಿಕೊಳ್ಳಲು ಹಲವು ಕಠಿಣ ಸವಾಲುಗಳನ್ನು ಹಾಕುವುದು ಸೊಸೆ-ಬುದ್ಧಿವಂತಿಕೆ ಹಾಗೂ ಪಾತಿವ್ರತ್ಯ ಮಹಿಮೆಯಿಂದ ಅವನ್ನೆಲ್ಲ ಗೆಲ್ಲುವುದು- ಹೀಗೆ ಒಂದು ಮಾದರಿ ಜನಪದ ಕಥೆಯಲ್ಲಿನ ಹಲವು ಆಶಯಗಳೇ ಇಲ್ಲಿವೆ. ಆದರೂ ನಿರೂಪಣಾ ಶೈಲಿಯಿಂದಾಗಿ ಆಕರ್ಷಕವಾಗಿ ಓದಿಸಿಕೊಳ್ಳುವ ಕಥೆ.

ಹೀಗೆ, 'ಜಾನಪದ ಜಗತ್ತು' ಪತ್ರಿಕೆಯಲ್ಲಿಯೂ ಸಂಶೋಧನಾತ್ಮಕ ಲೇಖನಗಳ ಸಂಖ್ಯೆ ಇಡೀ ವರ್ಷದಲ್ಲೆ ಕಡಿಮೆ. ಇದು ಒಳ್ಳೆಯ ಲಕ್ಷಣವೇನಲ್ಲ. ಇದಕ್ಕೆ ಕಾರಣವೇನು? ಲೇಖನಗಳ ಕೊರತೆಯೆ? ಪ್ರಧಾನ ಸಂಪಾದಕ ನಾಗೇಗೌಡರು ಆಗಾಗ ಹೇಳುವುದುಂಟು "ಅದೂ ನಿಜ. ಒಳ್ಳೆ ಲೇಖನಗಳ ಕೊರತೆ ನಮಗೆ ಇದ್ದೇ ಇದೆ. ಜೊತೆಗೆ ನಮ್ಮ ಪತ್ರಿಕೆಯ ಚಂದಾದಾರರು ಯಾರು? ಜಾನಪದ ವಿದ್ವಾಂಸರು, ಅಧ್ಯಾಪಕರು, ವಿದ್ಯಾರ್ಥಿಗಳಲ್ಲ. ಅವರಿಗಿಂತ ಹೆಚ್ಚಾಗಿ ಹಳ್ಳಿಗಳಲ್ಲಿರುವ ಸಾಮಾನ್ಯ ಜನ. ಇವರಿಗೂ ನಾವು ನ್ಯಾಯ ಒದಗಿಸಬೇಕಲ್ಲ? ಹೀಗಾಗಿ ಒಂದೊಂದು ಕತೆ, ಹಾಡು, ಇವನ್ನೆಲ್ಲ ಹಾಕ್ತೇವೆ. ಅಲ್ಲದೆ, ಧ್ವನಿಮುದ್ರಿತವಾಗಿರುವ ಈ ಮೂಲ ಸರಕನ್ನು ನಾವು ಹೊರತರುವುದಾದರೂ ಹೇಗೆ?"-ಹಾಗಾದರೆ ಇದಕ್ಕೆ ಪರಿಹಾರ? ಬಹುಶಃ ಗಂಭೀರ ಓದುಗರು ಹೆಚ್ಚು ಸಂಖ್ಯೆಯಲ್ಲಿ ಚಂದಾದಾರರಾದರೆ ಮಾತ್ರ ತಕ್ಕಮಟ್ಟಿನ ಪರಿಹಾರ ದೊರೆಯಬಹುದೇನೋ!

ಕರ್ಮವೀರ ಪತ್ರಿಕೆ ನಾವು ಗಮನಿಸಿರುವಂತೆ 1995ರಲ್ಲಿ ಹದಿನೈದು ಜಾನಪದ ಸಂಬಂಧಿ ಲೇಖನಗಳನ್ನು ಪ್ರಕಟಿಸಿದೆ. ಇವೆಲ್ಲ 1-10-95 ರಿಂದ 24-12-95ರ ವರೆಗಿನ ಹನ್ನೊಂದು ವಾರಗಳ ಅವಧಿಯಲ್ಲಿ ಪ್ರಕಟವಾದವುಗಳು. ಅದಕ್ಕಿಂತ ಮುನ್ನಿನ ಒಂಭತ್ತು ತಿಂಗಳುಗಳಲ್ಲಿ ಈ ಪತ್ರಿಕೆ ಜಾನಪದ ಲೇಖನಗಳನ್ನು ಪ್ರಕಟಿಸಿರಲಿಲ್ಲ. ಆ ಬಳಿಕವಾದರೂ ಎಲ್ಲ ಸಂಚಿಕೆಗಳಲ್ಲಿಯೂ ಜಾನಪದ ಲೇಖನ, ಟಿಪ್ಪಣಿಗಳನ್ನು ಪ್ರಕಟಿಸಿರುವುದು ಅಭಿನಂದನೀಯವಾಗಿದೆ.

ಈ ಹದಿನೈದ್ಕ ಪೈಕಿ ಜಾತ್ರೆಗಳಿಗೆ ಸಂಬಂಧಿಸಿದ ಲೇಖನಗಳೇ ಒಂಭತ್ತು ಇದ್ದು ಅವೇ ಸಿಂಹಪಾಲು ಪಡೆದಿವೆ. ಉಳಿದವುಗಳಲ್ಲಿ ಸ್ಥಳ ವಸ್ತು, ಸಂಪ್ರದಾಯಗಳ ಕುರಿತ ಪರಿಚಯ ಲೇಖನಗಳಿವೆ.

ಕಠಿಣ ವಿಮರ್ಶೆಯನ್ನು ತಾಳಿಕೊಳ್ಳುವಂಥ ಲೇಖನಗಳು ಇವಲ್ಲವಾದ್ದರಿಂದ, ಹಾಗೂ ಇವು ಸಾಮಾನ್ಯ ಓದುಗರನ್ನು ಮಾತ್ರ ಉದ್ದೇಶಿಸಿ ಬರೆದಿದ್ದು ಆ ಮಟ್ಟದಲ್ಲಿ ಇವು ಯಶಸ್ವಿಯೇ ಆಗಿರುವುದರಿಂದ (ಎಲ್ಲ ಜನಪ್ರಿಯ ನಿಯತಕಾಲಿಕಗಳಲ್ಲಿನ ಜಾನಪದ ಲೇಖನಗಳ ಪರಿಯೂ ಇಷ್ಟೇ), ಈ ಲೇಖನಗಳಲ್ಲಿನ ಮಾಹಿತಿಗಳನ್ನೀಗ ಅವಲೋಕಿಸಬಹುದು.

ಲವಂಗದ ನಾಡಿನ ಶವಸಂಸ್ಕಾರ ಪದ್ಧತಿಗಳು-ಎಂಬುದು ಶ್ರೀ ಚೈತ್ರ ಅವರ ಲೇಖನ (4.12.95). ಜಾವಾ ದ್ವೀಪದಲ್ಲಿನ ಟೋರಜಾ ಎಂಬ ಸ್ಥಳದ ನಿವಾಸಿಗಳ ಶವಸಂಸ್ಕಾರ ಪದ್ಧತಿಯ ವಿವರಣೆ ಇಲ್ಲಿದೆ. ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮವನ್ನು ಅನುಸರಿಸುವ ಈ ಜನ ವಿವಾಹಕ್ಕೆ ಬಿಳಿ ಹೊಗೆಯನ್ನೂ, ಸಾವಿನ ಸೂಚನೆಗೆ ಕರಿ ಹೊಗೆಯನ್ನು ಹೊಮ್ಮಿಸುತ್ತಾರಂತೆ. 'ಶಾಂಬುಸೋಲೋ' ಅನ್ನುವುದು ಇವರ ಶವಸಂಸ್ಕಾರ ಪದ್ಧತಿಯ ಹೆಸರು. ಯಾರಾದರೂ ಸತ್ತಾಗ ಆ ಮನೆಯವರು ಅಳುವುದಿಲ್ಲ. ಅದಕ್ಕಾಗಿ

ಬೇರೊಂದು ವರ್ಗವಿದೆಯಂತೆ. (ಉತ್ತರ ಭಾರತದ ಕೆಲವು ಬುಡಕಟ್ಟುಗಳಲ್ಲಿ 'ರುಡಾಲಿ'ಗಳಿದ್ದ ಹಾಗೆ) ತಿಂಗಳುಗಟ್ಟಲೆ ಅಥವಾ ವರ್ಷಗಟ್ಟಲೆ ಶವವನ್ನು ರಕ್ಷಿಸಿ ಇಡುವ, ದಿಬ್ಬದ ಮೇಲಕ್ಕೆ ತೆಗೆದುಕೊಂಡು ಹೋಗಿ ಗವಿಯೊಂದರಲ್ಲಿ ಸಂಸ್ಕಾರ ಮಾಡುವ ಮೆರವಣಿಗೆಯಲ್ಲಿ ಕೇಣಗಳನ್ನು ಬಳಸುವ, ಕೋಣನ ಬಲಿ ಕೊಡುವ, ಹಲ್ಲು ಮೂಡದ ಮಕ್ಕಳ ಶವವನ್ನು ಬಿದಿರು ವನದಲ್ಲಿ ನೇತಾಡಿಸುವ ವಿಚಿತ್ರ ಸಂಪ್ರದಾಯಗಳನ್ನು ಹೊಂದಿರುವ ಜನಾಂಗವೊಂದರ ಪರಿಚಯ ನಮಗೆ ಈ ಲೇಖನದಿಂದ ಆಗುತ್ತದೆ. ತೌಲನಿಕ ಅಧ್ಯಯನಕ್ಕೆ ಇಂಥ ಲೇಖನಗಳಿಂದ ಸಿಗುವ ಮಾಹಿತಿಗಳು ತುಂಬ ಉಪಯುಕ್ತವಾಗುತ್ತವೆ.

ಮುಕುಂದ ರಾಜುಪುರೋಹಿತರ 'ಕಾರ್ತಿಕದ ವಿಶೇಷ-ಆನೆಹಬ್ಬ' ಲೇಖನ ಶ್ರೀವೈಷ್ಣವರಲ್ಲಿನ ಒಂದು ವಿಶಿಷ್ಟ ಸಂಪ್ರದಾಯವನ್ನು ಪರಿಚಯಿಸಿದೆ. ಅವರುಗಳು ಆ ದಿನದಂದು ಮಣ್ಣಿನಲ್ಲಿ ಆನೆ ಮಾಡಿ ದೇವರ ಮುಂದಿಟ್ಟು-ಕುಂಕುಮ, ದೀಪ ಧೂಪಗಳಿಂದ ಪೂಜಿಸುತ್ತಾರೆ. ಈ ಆನೆಯ ಮೇಲೆ ಬಿಳೀಛತ್ರಿ ಅಥವಾ ಕೃಷ್ಣನನ್ನು ಇಟ್ಟಿರುತ್ತಾರೆ. ಒಂದು, ಮೂರು ಅಥವಾ ಐದು ದಿನಗಳ ಕಾಲ ಹೀಗೆ ಪೂಜಿಸಿ, ಅನಂತರ ವಿಸರ್ಜಿಸುತ್ತಾರೆ. ಇಂದ್ರನ ಐರಾವತವಾಗಿರುವುದರಿಂದ ಆನೆ ಹೀಗೆ ಪೂಜಾ ಯೋಗ್ಯ ಎಂದು ಅವರು ಭಾವಿಸುತ್ತಾರಂತೆ. ಹೆಣ್ಣುಮಗಳಿಗೆ ಮದುವೆಯಾದ ಮೊದಲ ವರ್ಷವಾಗಿದ್ದರೆ ತೌರುಮನೆಯಿಂದ ಎಣ್ಣೆ ಪಾತ್ರೆಯಲ್ಲಿ ಎಣ್ಣೆ ಇಟ್ಟು ದೀಪ ಹಚ್ಚಿಸಿ ಆನೆಯನ್ನು ಕಳುಹಿಸುವುದುಂಟು. - ಈ ಎಲ್ಲ ವಿವರಗಳು ಹೊಸ ಸಂಪ್ರದಾಯವೊಂದರ ಪರಿಚಯ ಮಾಡಿಕೊಡುತ್ತವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಉಪನ್ಯಾಸಕ ತುಕಾರಮಾ ಪೂಜಾರಿ ಎಂಬುವರು 'ತುಳು ಬದಕ' ಎಂಬ ಜಾನಪದ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲು ವಸ್ತುಗಳನ್ನು ಕೂಡಿಸುತ್ತಿದ್ದಾರೆ. ಇವರ ಪರಿಚಯ ನೀಡುವ' 'ತುಳು ಬದಕ' ಎಂಬ ಪುಟ್ಟ ಲೇಖನ 1.10.95ರಲ್ಲಿ ಪ್ರಕಟವಾಗಿದೆ.

ಕೊಡಗು ಜಿಲ್ಲೆಯ ಗೋಣಿಕೊಪ್ಪಲಿನಲ್ಲಿ ದಸರಾ ಹಬ್ಬವು ಈಚೆಗೆ 16 ವರ್ಷಗಳಿಂದ ಒಂದು ಸಾರ್ವಜನಿಕ ಉತ್ಸವವಾಗಿ ನಡೆಯುತ್ತಿರುವ ಬಗೆಯನ್ನು 'ಗೋಣಿ ಕೊಪ್ಪಲಿನ ನಾಡಹಬ್ಬ ದಸರಾ, ಲೇಖನದ ಮೂಲಕ ಬಿ.ಕೆ. ಗಣೇಶ ಪರಿಚಯಿಸಿದ್ದಾರೆ. (8.10.95). ಮಡಿಕೇರಿಯಲ್ಲಿ ಇದೇ ಮಾದರಿಯಲ್ಲಿ ಎಷ್ಟೋ ಕಾಲದಿಂದ ನಡೆಯುತ್ತಿದ್ದ ಹಬ್ಬವು ಪಕ್ಕದೂರಿನಲ್ಲೂ ಅದೇ ಮಾದರಿಯಲ್ಲಿ ನಡೆಯತೊಡಗಿದ್ದನ್ನು ಪರಿಚಯಿಸುವ ಈ ಲೇಖನ ಜಾನಪದ ಆಚರಣೆಗಳು ಪ್ರಸರಣಗೊಳ್ಳುವ ಬಗೆಯನ್ನು, ಅದೂ ನಮ್ಮ ಸಮಕಾಲೀನ ದಿನಗಳಲ್ಲಿಯೂ ಕೂಡಾ, ದಾಖಲು ಮಾಡುತ್ತದೆ. ಇದೇ ಸಂಚಿಕೆಯಲ್ಲಿನ ಎ.ಎಸ್. ಚಂದ್ರಪ್ರಭ ಅವರ 'ನಾಡ ಹಬ್ಬ ನವರಾತ್ರಿ' ಎಂಬ ಪುಟ್ಟ ಲೇಖನವು ಸಾಮಾನ್ಯ ಪರಿಚಯಾತ್ಮಕವಾದುದಾಗಿದ್ದು ಈ ಹಬ್ಬದ ಪೌರಾಣಿಕ ಹಿನ್ನೆಲೆ, ಕೆಲವು ವಿಧಿಗಳನ್ನು ಪರಿಚಯಿಸುತ್ತದೆ.

ತಿರುಪತಿ ವೆಂಕಟೇಶ್ವರನನ್ನು ಕುರಿತ ಕೆಲವು ಐತಿಹ್ಯಗಳು, ಅಲ್ಲಿನ ಕೆಲವು ಪೂಜಾಸಂಪ್ರದಾಯಗಳು, ನಂಬಿಕೆಗಳು, ವೆಂಕಟರಮಣನಿಗೆ ತೊಡಿಸುವ ಕೆಲವು ಒಡವೆಗಳನ್ನು ಕುರಿತ ವಿವರಗಳನ್ನು ಶ್ರೀಮತಿ ಕೆ. ಶಾಂತಕುಮಾರಿ ಅವರ 'ವೆಂಕಟೇಶ್ವರನ ಒಡವೆ, ವೈಭವ' ಲೇಖನ (22.10.95) ನೀಡುತ್ತದೆ. ಇದೇ ಸಂಚಿಕೆಯಲ್ಲೇ 'ನಕ್ಷತ್ರಗಳ ಪ್ರಕಾರ ಮಳೆ' ಎಂಬೊಂದು ಪುಟ್ಟ ಟಿಪ್ಪಣಿ, ಶ್ರೀಮತಿ ಮೈತ್ರಿ ಭಾಗವತ್ ಅವರದ್ದು, ಪ್ರಕಟವಾಗಿದೆ. ಇದರಲ್ಲಿ ವಿವಿಧ ನಕ್ಷತ್ರಗಳಲ್ಲಿ ಬೀಳುವ ಮಳೆ ಹಾಗೂ ಆ ಕುರಿತ ಕೆಲವು ಗಾದೆಗಳಿವೆ.

ದೀಪಾವಳಿ ಸಂದರ್ಭದಲ್ಲಿ ಗೋಪೂಜೆ ನಡೆಯುವುದು ಸಾಮಾನ್ಯ. ಆದರೆ ಇದರಲ್ಲೂ ಪ್ರದೇಶವಾರಾಗಿ ವೈವಿಧ್ಯಗಳಿರುವಂತೆ ಕಾಣುತ್ತದೆ. 1.10.95ರ ಕರ್ಮವೀರ ಸಂಚಿಕೆಯಲ್ಲಿ ವೀರೇಂದ್ರ ಕುಲಕರ್ಣಿಯವರು ಬರೆದಿರುವ 'ದನಗಾಹಿಗಳಿಂದ ಬೆಳಕಿನ ಹಬ್ಬ' ಎಂಬ ಪುಟ್ಟ ಲೇಖನ ಇಂಥ ಒಂದು ವೈವಿಧ್ಯದ ಪರಿಚಯ ಮಾಡಿಕೊಡುತ್ತದೆ. ದನಕಾಯುವ ಹುಡುಗರು ಅಪು ಎಂಬ ವಿಶೇಷ ಬಗೆಯ ಹುಲ್ಲಿನಿಂದ ಹಾವಿನ ಹೆಡೆಯಾಕಾರದ ಅಕೃತಿಯನ್ನು ತಯಾರಿಸಿ ಅದರಲ್ಲಿ ದೀಪವನ್ನಿಟ್ಟು ನರಕ ಚತುರ್ದಶಿಯ ಹಿಂದಿನ ದಿನದಿಂದ ಹಿಡಿದು ಐದು ದಿನ ಹಾಡುತ್ತಾ ಬೆಳಗುವ ಪದ್ಧತಿ ಕೆಲವು ಕಡೆಗಳಲ್ಲಿದೆಯಂತೆ. ಇದರ ಚಿತ್ರ ಸಹಿತ ಪರಿಚಯ ಇಲ್ಲಿದೆ.

'ಹೋರಿ ಬೆದರಿಸುವ ಸ್ಪರ್ಧೆ' ರಾಜ್ಯದ ಅನೇಕ ಕಡೆಗಳಲ್ಲಿ ನಡೆಯುವ ಒಂದು ಜಾನಪದ ಕ್ರೀಡೆ. ಶಿವಮೊಗ್ಗ, ಧಾರವಾಡ, ಉ.ಕ. ಜಿಲ್ಲೆಯ ಕೆಲವು ಭಾಗಗಳಲ್ಲಿ ಇದು ವ್ಯಾಪಕವಾಗಿ ರೂಢಿಯಲ್ಲಿದೆ. ಇದರ ಬಗೆಗಿನ ಕೆಲವು ವಿವರಗಳು ಶ್ರೀ ಚಂದ್ರಶೇಖರ ಎಂ. ಗೌಡರ ಅವರು ಬರೆದಿರುವ ಇದೇ ಹೆಸರಿನ ಲೇಖನದಲ್ಲಿ (1.10.95) ನೀಡಲ್ಪಟ್ಟಿವೆ.

ಜಿ. ವೀರಣ್ಣನವರ 'ಸವದತ್ತಿ, ಚಂದ್ರಗುತ್ತಿ ಮತ್ತು ದೇವದಾಸಿ' ಲೇಖನದಲ್ಲಿ (5.11.95) ದೇವದಾಸಿ ಮತ್ತು ಬೆತ್ತಲೆಸೇವೆ ಸಂಪ್ರದಾಯಗಳ ಬಗೆಗೆ ಇರುವ ನಂಬಿಕೆಗಳು ಅದರ ರೀತಿರಿವಾಜುಗಳು, ಇವುಗಳನ್ನು ಕುರಿತ ಚಿಂತನೆ ಇದೆ. ಇದೇ ಸಂಚಿಕೆಯಲ್ಲಿ ಶ್ರೀ ಶಂಕರ ಬೈಚನಾಳ ಅವರು ಅಳಿಯುತ್ತಿರುವ ಕಂಬಿ ಸಂಪ್ರದಾಯ ಎಂಬ ಒಂದು ಟಿಪ್ಪಣಿ ಬರೆದಿದ್ದಾರೆ. ಶ್ರೀ ಶೈಲದ ಜಾತ್ರೆಗೆ ಹೋಗುವ ಜಂಗಮರು ಹೆಗಲ ಮೇಲೆ ಅಡ್ಡ ಕಂಬಿಯೊಂದನ್ನಿಟ್ಟುಕೊಂಡು ಅದರ ತುದಿಗಳಲ್ಲಿ ಕಟ್ಟಿರುವ ಪಾತ್ರೆಗಳಲ್ಲಿ ಪ್ರಸಾದ, ಪಾದೋದಕ ಇಟ್ಟುಕೊಂಡು ಊರೂರಲ್ಲಿ ಹಂಚುತ್ತಾ ಹೋಗುವ ಸಂಪ್ರದಾಯವಿದೆ. ಇದೇ-ಕಂಬಿ ಸಂಪ್ರದಾಯ. ಈ ಬಗ್ಗೆ ಕೆಲ ವಿವರಗಳು ಇಲ್ಲಿವೆ.

ಸ್ಥಳನಾಮಗಳ ಅಧ್ಯಯನ ಈಚೆಗೆ ಒಂದು ಹೊಸಶಾಖೆಯಾಗಿ ಬೆಳೆದು ಕನ್ನಡದಲ್ಲಿಯೂ ಇದು ತಕ್ಕಮಟ್ಟಿಗೆ ಚೆನ್ನಾಗಿಯೇ ನಡೆದಿದೆ. ಈ ವಿಷಯಕ್ಕೆ ಸಂಬಂಧಿಸಿದ 'ಈ ಊರುಗಳಿಗೆ ಪ್ರಾಣಿಪಕ್ಷಿಗಳದೇ ಹೆಸರು' ಎಂಬ ಅರ್ಧ ಪುಟದ ಟಿಪ್ಪಣಿಯೊಂದು

(ಲೇ: ವಿಜಯೇಂದ್ರ ಕುಲಕರ್ಣಿ) 12.11.95ರ ಸಂಚಿಕೆಯಲ್ಲಿ ಪ್ರಕಟವಾಗಿದೆ. ಇದರಲ್ಲಿ ಅವರು-ಅನೇಕ ಸ್ವಾರಸ್ಯಕರ ಸ್ಥಳನಾಮಗಳು ಹೇಗೆ ಪ್ರಾಣಿಪಕ್ಷಿಗಳ ಹೆಸರಿನಿಂದ ರೂಪುಗೊಂಡಿವೆ ಎಂಬುದನ್ನು ಉದಾಹರಣೆ ಸಮೇತ ವಿವರಿಸಿದ್ದಾರೆ. ಭಾಷಾ ವಿಜ್ಞಾನ ಹಾಗೂ ಜಾನಪದ ಎರಡೂ ದೃಷ್ಟಿಗಳಿಂದ ಉಪಯುಕ್ತ ಟಿಪ್ಪಣಿ.

ಹಿಂದೂ ಮುಸ್ಲಿಮರೆಲ್ಲ ನಡೆದುಕೊಳ್ಳುವ ಮಂದಿರ, ಮಸೀದಿ, ದರ್ಗಾಗಳು ಈ ರಾಷ್ಟ್ರದಲ್ಲಿ ಸಾಕಷ್ಟಿವೆ. ಗುಜರಾತಿನ ಬುದಿಯಾದ್ ಜಿಲ್ಲೆಯಲ್ಲಿನ ಇಂಥ ಒಂದು ದರ್ಗಾದ ಬಗ್ಗೆ ಅರುಣನಾರಾಯಣ ಅವರು- 'ಕೋಮುಸೌಹಾರ್ದದ ಪ್ರತೀಕ-ಪೀರ್ ಬುಖಾರಿ ದರ್ಗಾ'-ಎಂಬ ಕಿರು ಲೇಖನವನ್ನು 19.11.95ರ ಸಂಚಿಕೆಯಲ್ಲಿ ಬರೆದಿದ್ದಾರೆ. ಈ ದರ್ಗಾಕ್ಕೆ ಜನ ನಡೆದುಕೊಳ್ಳುವ ಬಗೆ, ಐತಿಹ್ಯಗಳು, ಸಂಪ್ರದಾಯಗಳು ಈ ಕುರಿತ ಕೆಲ ವಿವರಗಳು ಇವೆ.

ಇದೇ ಸಂಚಿಕೆಯಲ್ಲಿ ಜಂಬುನಾಥ ಕಂಚ್ಯಾಣಿಯವರು- 'ವಿಶಿಷ್ಟ ಸಂಪ್ರದಾಯಗಳ ಗೌರಿ ಜಾತ್ರೆ' ಎಂಬ ಲೇಖನ ಬರೆದು ಬಿಜಾಪುರ ಜಿಲ್ಲೆಯ ಬಸವನ ಬಗೇವಾಡಿ ತಾಲೂಕಿನಲ್ಲಿಯ ಮುಳುವಾಡದ ಆರಾಧ್ಯ ದೇವತೆ ಗೌರಿದೇವಿಯ ಜಾತ್ರೆಯ ವಿಶಿಷ್ಟ ಸಂಪ್ರದಾಯಗಳನ್ನು ಪರಿಚಯಿಸಿದ್ದಾರೆ. ಇದೇರೀತಿ ಶರಣಪ್ಪ ಬಾಚಲಾಪುರ ಅವರು 'ಗ್ರಾಮೀಣ ಬದುಕಿನ ಸೊಗಡು-ಗೌರಿಹಬ್ಬ' ಎಂಬ ಕಿರು ಲೇಖನದಲ್ಲಿ ಉತ್ತರ ಕರ್ನಾಟಕದ ಗೌರಿ ಹಬ್ಬದ ಸಾಮಾನ್ಯ ಕ್ರಮವನ್ನು ಪರಿಚಯಿಸಿದ್ದಾರೆ.

ಕನ್ನಡಿಗರ ಅಚ್ಚುಮೆಚ್ಚಿನ ಸುಧಾ ಪತ್ರಿಕೆ 1995ರಲ್ಲಿ ಜಾನಪದಕ್ಕೆ ಸಂಬಂಧಿಸಿದಂತೆ ಒಂದು ಗಂಭೀರ ಲೇಖನವನ್ನು ಪ್ರಕಟಿಸಿದಂತಿಲ್ಲ. ಮೂರು ಸಾಮಾನ್ಯ ಲೇಖನಗಳನ್ನು ಆ ವರ್ಷದ ಏಪ್ರಿಲ್ ಸೆಪ್ಟೆಂಬರ್‌ನಲ್ಲಿ ಪ್ರಕಟಿಸಿದೆ. 'ಬಣ್ಣದ ವೇಷದ ಹೊಳಪಿನ ಮುಖಗಳು' (23.4.95) ಕಿರು ಲೇಖನದಲ್ಲಿ ಸಿ.ಬಿ. ಪ್ರಸನ್ನ ಅವರು ಉಡುಪಿಯ ಯಕ್ಷಗಾನ ಕಲಾರಂಗ ಅವರು ನಡೆಸಿದ ಮೇಕಪ್ ಶಿಕ್ಷಣ ಶಿಬಿರವೊಂದರ ಪರಿಚಯ ಮಾಡಿಕೊಡುತ್ತಾ ಪ್ರಾಸಂಗಿಕವಾಗಿ ಯಕ್ಷಗಾನದಲ್ಲಿ ಈ ಕಲೆ ಕುರಿತಂತೆ ಇರುವ ಸಂಪ್ರದಾಯಿಕ ಪರಂಪರೆಯ ಬಗ್ಗೆ ಕೆಲವು ಮಾಹಿತಿ ನೀಡಿದ್ದಾರೆ ಅಷ್ಟೆ. ಇದನ್ನು ಬಿಟ್ಟರೆ ಇನ್ನೊಂದು ಪರಿಚಯ ಲೇಖನ ಇದರ ಹಿಂದಿನ ಸಂಚಿಕೆಯಲ್ಲಿ (16.4.95) ಪ್ರಕಟವಾಗಿದೆ. ಅದು 'ಸುಗ್ಗಿಯ ಹಿಗ್ಗಿನ ವೈಶಾಖಿ ಎಂಬ ಪರಮ್‌ಜಿತ್ ಠಾಕೂರ್ ಅವರ ಲೇಖನ, ಪಂಜಾಬಿನ ವೈಶಾಖಿ ಹಬ್ಬದ ಆಚರಣೆಯನ್ನು ಪರಿಚಯಿಸುವ ಉದ್ದೇಶದ್ದು. ಆದರೆ ಆ ಕೆಲಸವನ್ನೂ ಅದು ಸರಿಯಾಗಿ ಮಾಡಿಲ್ಲ. ಆ ಹಬ್ಬದ ಸಂಪ್ರದಾಯಗಳನ್ನು ಕುರಿತ ವಾಕ್ಯಗಳೇ ತುಂಬ ಕಡಮೆ. ಈಗೆಲ್ಲ ಬದಲಾಗಿ ಯಾಂತ್ರಿಕವಾಗಿ ಹೋಗಿದೆ-ಎನ್ನುವುದೇ ಇಡೀ ಲೇಖನದ ಸಾರಾಂಶ. ಸೆಪ್ಟೆಂಬರ್ 1.95ರ ಒಂದು ಸಂಚಿಕೆಯಲ್ಲಿ ಮುಳುಗಡೆಯ ನೆಲದಿಂದ ಸೆಲೆಯೊಡೆದ ಕಲೆ' ಎಂಬ ಟಿ.ಎಂ. ಶೇಷಗಿರಿಯವರ ಲೇಖನವು, ಯಕ್ಷಗಾನದಲ್ಲಿ ಪರಿಶ್ರಮವಿದ್ದ ಕುಟುಂಬವೊಂದು ತನ್ನೂರು ಬಿಟ್ಟು ಬೇರೆ ಕಡೆಗೆ ವಲಸೆ ಬಂದು ಅಲ್ಲಿ ಯಕ್ಷಗಾನ ಪರಿಸರವನ್ನು

ಹುಟ್ಟು ಹಾಕಿ ಬೆಳೆಸಿದ್ದರ ಪರಿಚಯವಿದೆ. ಪ್ರಾಸಂಗಿಕವಾಗಿ ಯಕ್ಷಗಾನ ಕಲೆಯ ಬಗ್ಗೆ ಕಲವು ವಿವರಗಳಿವೆ. ಪಾರಂಪರಿಕ ಕಲೆಯೊಂದು ಕುಡಿಯೊಡೆದುಕೊಳ್ಳು ಪರಿಗೆ ಇಲ್ಲಿ ವಿವರಿಸಿರುವ ಘಟನೆ, ಕ್ರಮಗಳು ಒಂದು ನಿದರ್ಶನ.

ಸುಧಾ ಪತ್ರಿಕೆಯದ್ದೂ ಈ ಹಣೆಬರಹವಾದರೆ 'ಸಮಗ್ರ ಕುಟುಂಬಕ್ಕೆ ಸಮೃದ್ಧ ಸಾಪ್ತಾಹಿಕ'ವೆಂಬ ಘೋಷಣೆಯೊಡನೆ, ನಾಲ್ಕೈದು ಧಾರಾವಾಹಿಗಳ ಸಮೇತ ಪ್ರಕಟವಾಗುವ 'ತರಂಗ'ದ ರೀತಿಯೂ ಭಿನ್ನವೇನಲ್ಲ. 1995ರಲ್ಲಿ ಇದು ಪ್ರಕಟಿಸಿದ, 'ಜನಪದಕ್ಕೆ ಸಂಬಂಧಿಸಿದ್ದು' ಎನ್ನಬಹುದಾದ, ಆದರೆ ವಾಸ್ತವವಾಗಿ ಜಾನಪದ ಶಾಸ್ತ್ರಕ್ಕೆ ಯಾವ ವಿಧದಲ್ಲೂ ಪೋಷಕವಲ್ಲದ ಲೇಖನಗಳ ಸಂಖ್ಯೆ ನಾಲ್ಕು. ಇದರಲ್ಲಿ ಮೂರು-ಯಕ್ಷಗಾನ ಕಲಾವಿದರನ್ನು ಪರಿಚಯ ಲೇಖನಗಳು. ಇನ್ನೊಂದು-ಜಾನಪದ ಶೈಲಿಯ ಹೋಟೆಲೊಂದರ ಪರಿಚಯ. ಕಲಾವಿದರುಗಳ ಪೈಕಿ ಕಡತೋಕಾ ಮಂಜುನಾಥ ಭಾಗವತ, ಮರವಂತೆ ನರಸಿಂಹದಾಸ ಹಾಗೂ ಐರೋಡಿ ರಾಮಗಾಣಿಗರ ಬಗ್ಗೆ ಲೇಖನ, ಚಿತ್ರಗಳಿವೆ. ಪ್ರಾಸಂಗಿಕವಾಗಿ ಯಕ್ಷಗಾನ ಭಾಗವತಿಕೆ ಬಗೆಗೆ ಕೆಲವು ಮಾಹಿತಿಗಳೂ ಇವೆ.

ಗುಜರಾತಿನ ಪಾರಂಪರಿಕ ಗ್ರಾಮೀಣ ಮನೆ, ಊಟ, ಜೀವನ ಶೈಲಿಯನ್ನು ಅನುಕರಿಸಿ ನಿರ್ಮಿಸಲಾಗಿರುವ ಒಂದು ಹಳ್ಳಿ ಹೋಟಿಲು, 'ವಿಶಾಲಾ' ಎಂಬುದು ಅಹಮದಾಬಾದಿನ ಹೊರವಲಯದಲ್ಲಿದೆ. ಇಲ್ಲಿ ಹೇಗೆ ಗ್ರಾಮೀಣ ಭೋಜನ, ವಾಸ ಹಾಗೂ ಸಂಗೀತ ಶೈಲಿಯನ್ನು ಪುನರುಜ್ಜೀವಿಸಿ, ವಾರಾಂತ್ಯ ಕಳೆಯಲು ಬರುವವರಿಗೊಂದು ಒಳ್ಳೆಯ ಬದಲಾವಣೆ ದೊರೆಯುವ ಹಾಗೆ ನಡೆಸಿಕೊಂಡು ಬರಲಾಗುತ್ತಿದೆ ಎಂಬುದರ ಪರಿಚಯವನ್ನು ಒಳ್ಳೆಯ ಚಿತ್ರಗಳೊಂದಿಗೆ ನೀಡಲಾಗಿದೆ. ಯು.ಬಿ. ರಾಜಲಕ್ಷ್ಮಿ ಅವರು 9.4.95 ರ 'ತರಂಗ' ಸಂಚಿಕೆಯಲ್ಲಿ ಬರೆದಿರುವ 'ವಿಶಾಲಾ-ಗುಜರಾತಿನ ಕಂದೀಲು ಬೆಳಕಿನ ವಿಶಿಷ್ಟ ಹಳ್ಳಿ ಹೋಟಿಲು' ಎಂಬ ಲೇಖನದಲ್ಲಿ.

ಕಸ್ತೂರಿ ಮಾಸಪತ್ರಿಕೆ 1995ರಲ್ಲಿ ಜಾನಪದಕ್ಕೆ ಸಂಬಂಧಿಸಿದ್ದು ಎಂದು ಹೇಳಬಹುದಾದ ಒಂದೇ ಲೇಖನವನ್ನು ಸೆಪ್ಟೆಂಬರ್ ಸಂಚಿಕೆಯಲ್ಲಿ ಪ್ರಕಟಿಸಿದೆ. ಅದು ಜೀ. ಶಂ. ಪರಮಶಿವಯ್ಯನವರನ್ನು ಕುರಿತ ಒಂದು ವ್ಯಕ್ತಿ ಚಿತ್ರ ಅಷ್ಟೆ.

ಸಂಯುಕ್ತ ಕರ್ನಾಟಕ ದಿನಪತ್ರಿಕೆ ತನ್ನ 'ಸಾಪ್ತಾಹಿಕ ಸೌರಭ'ದಲ್ಲಿ ಇಡೀ ವರ್ಷದಲ್ಲಿ ಒಟ್ಟು ಐದು ಜಾನಪದ ಲೇಖನಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ ಎರಡು-ಪರಿಚಯ ಲೇಖನಗಳು. ಅದನ್ನು ಬಿಟ್ಟರೆ ಉಳಿದ ಮೂರು ಉತ್ತಮವೆನ್ನಬಹುದಾದ ಲೇಖನಗಳು. ಪರಿಚಯಿಸಲ್ಪಟ್ಟಿರುವ ಕಲಾಕಾರನೆಂದರೆ ಸೋಮಣ್ಣ ಚಿತ್ರಗಾರ ಎಂಬುವರು ಕಿನ್ನಾಳ ಕಲೆ ಎಂಬುದು ಕೊಪ್ಪಳದ ಸಮೀಪದ ಕಿನ್ನಾಳ ಗ್ರಾಮದಲ್ಲಿ ಬೇರೂರಿರುವ ಮರಗೆಲಸದ ಒಂದು ಜಾನಪದ ಕಲೆ. ಕಟ್ಟಿಗೆಯಲ್ಲಿ ಪುಟ್ಟ ಕಾಲ್ಮಣೆಗಳು, ಟೀಪಾಯಗಳು, ಇವನ್ನು ತುಂಬ ಕಲಾತ್ಮಕವಾಗಿ ಕೆತ್ತಿ ಅವಕ್ಕೆ

ತಾವೇ ತಯಾರಿಸಿದ ವಿಶೇಷ ರೀತಿಯ ರಂಗು ತುಂಬಿ ಅವನ್ನು ಹೊಳೆ ಹೊಳೆಯುವ ಆಕರ್ಷಕ ವಸ್ತುವನ್ನಾಗಿ ಮಾಡುತ್ತಾರೆ ಕನ್ನಾಳದ ಬಡಗಿಗಳು. ಇದರಲ್ಲಿ ತುಂಬ ಪ್ರಸಿದ್ಧರಾದ ಸೋಮಣ್ಣ ಅವರ ಪರಿಚಯವನ್ನು 5.2.95ರ ಸಾಪ್ತಾಹಿಕ ಸೌರಭದಲ್ಲಿ ವಾಸುದೇವಾಚಾರ್ಯ ಹುಲಿಗಿಯವರು ತುಂಬ ಚೆನ್ನಾಗಿ ಮಾಡಿಕೊಟ್ಟಿದ್ದಾರೆ.

ಇದೇ ಸಂಚಿಕೆಯಲ್ಲೇ (5.2.95) 'ಜಾನಪದ ಹಾಡುಗಳಲ್ಲಿ ಗೊರೂರು ಜಾತ್ರೆ ಎಂಬ ಗೊರೂರು ಅನಂತರಾಜು ಅವರ ಲೇಖನವಿದೆ. ಜನಪದ ಗೀತೆಗಳನ್ನು ಇದರಲ್ಲಿ ಉಲ್ಲೇಖಿಸಿರುವುದು ಮೂರ್ನಾಲ್ಕು ಮಾತ್ರ. ಆದರೆ ವಿವರಣೆ ನೀಡುವಾಗ ಜಾತ್ರೆಯ ವಿಧಿವಿಧಾನಗಳ ಕೆಲವು ಮಾಹಿತಿಗಳನ್ನು ನೀಡಿದ್ದು ಅವು ಉಪಯುಕ್ತವಾಗಿವೆ.

ಮಧುರ ಅವರ 'ಆದಿವಾಸಿಗಳ ಜಾನಪದ ನೃತ್ಯಲೋಕ' ಒಂದು ವಿಸ್ತೃತ ಅಧ್ಯಯನಪೂರ್ಣ ಲೇಖನ. ರಾಜಸ್ಥಾನ, ಒರಿಸ್ಸಾ, ಬಿಹಾರಿ ಮಿಜೋರಾಂ, ಇತ್ಯಾದಿ. ಹಲವು ರಾಜ್ಯಗಳಲ್ಲಿನ ವಿವಿಧ ಆದಿವಾಸಿ ಪಂಗಡಗಳಲ್ಲಿ ರೂಢಿಯಲ್ಲಿರುವ ಜಾನಪದ ನೃತ್ಯಗಳನ್ನು ವಿವರವಾಗಿ ಪರಿಚಯಿಸಿದ್ದಾರೆ.

ಇಂಥದೇ ಅಧ್ಯಯನಪೂರ್ಣವಾದ ಇನ್ನೊಂದು ಲೇಖನ-ಡಾ.ಎಸ್.ಪಿ. ಪದ್ಮಪ್ರಸಾದರ - 'ಮಳೆ- ನಂಬಿಕೆ, ಆಚರಣೆಗಳ ಖಜಾನೆ' ಎಂಬುದು. ಅವರ 'ಮಳೆ-ಒಂದು ಜಾನಪದೀಯ ಅಧ್ಯಯನ' ಗ್ರಂಥದಿಂದ ಸಂಗ್ರಹಿತವಾದ ಈ ಲೇಖನ ಮಳೆಯ ಬಗ್ಗೆ ತುಂಬ ವ್ಯಾಪಕವಾಗಿ ಹರಡಿರುವ ನಂಬಿಕೆ, ಆಚರಣೆಗಳ ಮಾಹಿತಿ ನೀಡಿ ಅವುಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿದೆ.

ಇದೇ ಸಂಚಿಕೆಯಲ್ಲಿ ಡಾ. ಡಿ.ಕೆ. ರಾಜೇಂದ್ರ ಅವರು ತಮ್ಮ ಗುರುಗಳಾದ, ಈಚೆಗೆ ನಿಧನರಾದ ಡಾ. ಜೀಶಂಪ ಅವರನ್ನು ಕುರಿತು ಬರೆದ ಪರಿಚಯ ಲೇಖನವೊಂದು ಜೀಶಂಪ ಅವರ ಬದುಕು, ಸಾಧನೆಗಳನ್ನು ಸಾಕಷ್ಟು ಚೆನ್ನಾಗಿಯೇ ಪರಿಚಯಿಸಿ ಕೊಟ್ಟಿದೆ.

ಕನ್ನಡದಲ್ಲಿ ಅತಿ ಹೆಚ್ಚು ಪ್ರಸಾರ ಹೊಂದಿರುವ ದಿನಪತ್ರಿಕೆ ಪ್ರಜಾವಾಣಿ ಇಡೀ ವರ್ಷದಲ್ಲಿ ಕೇವಲ ಎರಡು ಜಾನಪದ ಲೇಖನಗಳನ್ನು ಮಾತ್ರ ಒಂದೇ ಸಂಚಿಕೆಯಲ್ಲಿ (12.12.95) ಪ್ರಕಟಿಸಿ ಅನಂತರ ಈ ಬಗ್ಗೆ ಮೌನ ತಾಳಿಬಿಟ್ಟಿದೆ. ಇದರಲ್ಲಿ ಒಂದು -ಕಂಬಳ ಕ್ರೀಡೆಯನ್ನು ಕುರಿತ ಬಾಲುಪುತ್ತಿಗೆ ಅವರ ಲೇಖನ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ ವಿವರಗಳೇ ಇಲ್ಲಿವೆ. ಇನ್ನೊಂದು ಲೇಖನ- ಎಂ.ಪಿ. ಸುಶೀಲ ಅವರ- 'ನಶಿಸುತ್ತಿರುವ ಸಾಂಜಿ ಕಲೆಗೆ ಪುನರುಜ್ಜೀವನ' ಎಂಬ ಸಚಿತ್ರ ಲೇಖನ. ಸಾಂಜಿ ಕಲೆ ಎಂಬುದು ಪಶ್ಚಿಮ ಬಂಗಾಳದ ಕಾಗದ ಕತ್ತರಿಸಿ ಚಿತ್ರ ಮಾಡುವ ಕಲೆ. ಅವನತಿಯ ಅಂಚಿನಲ್ಲಿರುವ ಈ ಕಲೆಯನ್ನು ಅಲ್ಲಿನ ಪ್ರಬಾಲ್ ಪ್ರಮಾಣಿಕ್ ಎಂಬುವರ ಪರಿಶ್ರಮದಿಂದ ಕಲಿತು, ಪ್ರಚಾರ ಮಾಡುತ್ತಿದ್ದಾರೆ. ಈ ಕಲೆಯನ್ನು ಕಲಾವಿದರನ್ನು ಕುರಿತ ಪರಿಚಯ ಒಳ್ಳೆಯ ಚಿತ್ರಗಳ ಸಮೇತ ಇಲ್ಲಿ

ಪ್ರಕಟಗೊಂಡಿದ್ದು ಹೊಸ ವಿಷಯವೊಂದನ್ನು ಕನ್ನಡ ಓದುಗರಿಗೆ ಪರಿಚಯ ಮಾಡಿಕೊಟ್ಟಂತಾಗಿದೆ.

ಕನ್ನಡ ಪ್ರಭ ಪತ್ರಿಕೆ ಇಡೀ ವರ್ಷದಲ್ಲಿ ಒಂದೇ ಒಂದು ಜಾನಪದ ಲೇಖನವನ್ನು ಪ್ರಕಟಿಸಿರುವಂತಿದೆ. ಅದು-ಡಾ. ಎಸ್.ಪಿ. ಪದ್ಮ ಪ್ರಸಾದ್‌ರ-'ಹುಯ್ಯೋ ಹುಯ್ಯೋ ಮಳೆರಾಯ' ಎಂಬ ದೀರ್ಘಲೇಖನ (9.7.95) ಮಳೆಯನ್ನು ಕುರಿತ ನಂಬಿಕೆಗಳು, ಆಚರಣೆಗಳು ಮಳೆ ಲೆಕ್ಕಾಚಾರದಿಂದ ವಿವಿಧ ಅಂಶಗಳು ಇವುಗಳನ್ನೆಲ್ಲ ವಿಶ್ಲೇಷಿಸುವ ಇದೊಂದು ವಿಸ್ತೃತ ಲೇಖನವಾಗಿದೆ.

ಬೆಂಗಳೂರು ವಿ.ವಿ.ಯ ಸಾಧನೆ, ಕಳೆದ ವರ್ಷದಲ್ಲಿ ಒಂದೇ ಒಂದು ಜಾನಪದ ಲೇಖನವನ್ನು ಪ್ರಕಟಿಸಿದೆ. ಅದು ಡಾ. ಮಂಜುನಾಥ ಬೇವಿನ ಕಟ್ಟಿ ಅವರ 'ಜನ ಜಾನಪದ' ಎಂಬುದು. ಪ್ರೌಢಲೇಖನವೆಂಬಂತೆ' ಇದು ಪ್ರಕಟವಾಗಿದ್ದರೂ, ವಿಚಾರಣೀಯ ಅಂಶಗಳು ಇದರಲ್ಲಿ ಕೆಲವು ಇದ್ದರೂ ಲೇಖಕರ ಕೆಲವು ತಪ್ಪು ಕಲ್ಪನೆಗಳಿಂದಾಗಿ ಇದೊಂದು ಗಲಿಬಿಲಿಗೊಳಿಸುವ ಲೇಖನವಾಗಿದೆ Meta Folklore ಎಂಬ ಪದಕ್ಕೆ ಪರ್ಯಾಯವಾಗಿ 'ಜನ ಜಾನಾಪದ' ಎಂಬುದನ್ನು ಬಳಸುತ್ತಿದ್ದೇನೆ.-ಎನ್ನುತ್ತಾರೆ. ಲೇಖಕರು. ಆ ಶಬ್ದಕ್ಕೆ ಹಿಂದೆಯೇ 'ಅಧಿ ಜಾನಪದ' ಎಂಬ ಶಬ್ದವನ್ನು ವಿದ್ವಾಂಸರು ಬಳಸಿದ್ದಾರೆ. 'ಅಧಿ-ಎನ್ನುವುದು ಸಂಸ್ಕೃತದಿಂದ ಬಂದುದು. ಅದಕ್ಕೆ ಬದಲಾಗಿ ಕನ್ನಡದಲ್ಲೇ ಜನ ಎಂಬ ಪದ ಸೂಕ್ತವಾದುದರಿಂದ 'ಜನ ಜಾನಪದ' ಎಂದು ಕರೆಯಲಾಗಿದೆ' - ಎಂಬು ಲೇಖಕರು ಹೇಳುತ್ತಾರೆ. ಆದರೆ ಜನ ಎಂಬುದು ಕನ್ನಡ ಶಬ್ದವೆ? ಜಾನಪದ ಎಂಬುದೇ ಸಂಸ್ಕೃತ ಶಬ್ದವಲ್ಲವೆ? ಇದು ಹೋಗಲಿ, ಇಂಗ್ಲಿಷಿನ Meta ಎಂಬುದಕ್ಕೆ 'ಜನ ಎಂಬ ಶಬ್ದ ಹೇಗೆ ಸೂಕ್ತ? Meta ಎಂಬುದಕ್ಕೆ ಇರುವ ಅರ್ಥಗಳಲ್ಲಿ ಜನ ಎಂಬ ಶಬ್ದ ಬಳಕೆ ಎಲ್ಲಾದರೂ ಆಗಿದೆಯೆ? Meta ಎಂಬುದಕ್ಕೆ 'ಅಧಿ' ಎಂಬುದು ಸಮಾನಾರ್ಥಕ ಎಂಬುದು ನಿಷ್ಪತ್ತಿಯಿಂದಲೂ ಪ್ರಯೋಗದಿಂದಲೂ ಸಿದ್ಧವಾಗಿದೆ (ಉದಾ Meta Physical ಅಧಿಭೌತಿಕ) ಹೀಗಿರುವಾಗ ಸುಮ್ಮಸುಮ್ಮನೆ ಅದನ್ನು ತಿರಸ್ಕರಿಸಿ ಜನ ಎಂಬ ಶಬ್ದವನ್ನು ಎಳೆದು ತಂದು ಅದಕ್ಕೆ ಸೇರಿಸಿ ಓದುಗರನ್ನು ಗಲಿಬಿಲಿಗೊಳಿಸುವ ಅಗತ್ಯವಾದರೂ ಏನಿದೆ? ಹೊಸ ಸೃಷ್ಟಿ ಆಗಬೇಕು ನಿಜ. ಆದರೆ ಅದು ಹೀಗಲ್ಲ.

ಹೀಗೆ ತಪ್ಪು ಪಾರಿಭಾಷಿಕದ ಚಲಾವಣೆ ಒಂದೆಡೆಯಾದರೆ ಇನ್ನೊಂದೆಡೆ ಈ ಮೆಟಾ ಫೋಕಲೋರೆಗೆ ಉದಾಹರಣೆಯಾಗಿ ಇವರು ನೀಡುವ ಉದಾಹರಣೆಗಳೂ ಕೆಲವೆಡೆ ತಪ್ಪಾಗಿವೆ. 'ಜನ ಜಾನಪದ ಎಂದರೆ ಜಾನಪದದ ಬಗೆಗಿನ ಜಾನಪದ' ಎಂದು ವ್ಯಾಖ್ಯೆ ನೀಡುವ ಇವರು ಇದಕ್ಕೆ ಉದಾಹರಣೆಯಾಗಿ ಜೋಗುಳ ಪದದ ಈ ತ್ರಿಪದಿಯನ್ನು ಒಂದೆಡೆ ಉಲ್ಲೇಖಿಸುತ್ತಾರೆ- 'ಜೋಗುಳ ಹಾಡಿದರೆ ಆಗಾರೆ ಕೇಳ್ಯಾನು ಹಾಲ ಹಂಬಲವ ಮರೆತಾನು-ಕಂದಯ್ಯ ಜೋಗುಳದಾಗೆ ಅತಿ ಮುದ್ದು' ಇದು ಸಹಜವಾದ ಒಂದು ಸಾಮಾನ್ಯ ಅನುಭವದ ನಿರೂಪಣೆ ಅಷ್ಟೆ. ಜೋಗುಳ ಹಾಡುಗಳ

ಬಗ್ಗೆ ಇರುವ ನಂಬಿಕೆ ಪ್ರತೀತಿಗಳನ್ನು ಇದು ಹೇಳುವುದಿಲ್ಲ. ಇದು ಹೇಗೆ ಸಮರ್ಪಕ ಉದಾಹರಣೆಯಾಗುತ್ತವೆ? ಆದರೆ ಕಥೆಗಳನ್ನು ಯಾಕೆ ಹೇಳುತ್ತಿರಬೇಕು ಎಂಬ ಬಗ್ಗೆ ಕಥೆಗಳು ಹೊಲೆಯರಲ್ಲಿ ಯಾಕೆ ಹೆಚ್ಚು ಇವೆ ಎಂಬ ಬಗ್ಗೆ ಇವರು ಉಲ್ಲೇಖಿಸುವ ಕಥೆಗಳು ಖಂಡಿತವಾಗಿ ಅಧಿ ಜಾನಪದಕ್ಕೆ ಒಳ್ಳೆ ಉದಾಹರಣೆಗಳು.

ಒಟ್ಟಾರೆಯಾಗಿ ಹೇಳುವುದಾದರೆ- ಕಥೆ, ಕವಿತೆ, ವಿಮರ್ಶೆ, ನಾಟಕ ಇತ್ಯಾದಿ ಕ್ಷೇತ್ರಗಳಿಗೆ ನಮ್ಮ ಪತ್ರಿಕೆಗಳು ಕೊಟ್ಟಷ್ಟು ಅವಕಾಶವನ್ನು ಜಾನಪದ ಶಾಸ್ತ್ರದ ಬೆಳವಣಿಗೆಗೆ ಕೊಟ್ಟಿಲ್ಲ. ಜನಸಾಮಾನ್ಯರಿಗಾಗಿ ಪ್ರಕಟವಾಗುವ ಪತ್ರಿಕೆಗಳು ಜಾನಪದದ ವಿದ್ವತ್‌ಪೂರ್ಣ ಲೇಖನಗಳನ್ನೇ ಪ್ರಕಟಿಸುವುದು ಸಾಧ್ಯವಿಲ್ಲ ಎಂಬುದು ಜಯ. ಪರಿಚಯಾತ್ಮಕ ಲೇಖನಗಳು ಸಾಮಾನ್ಯ ಓದುಗರಿಗೆ ಹಿಡಿಸುವಂತೆಯೇ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೂ ಒಂದು ಮಟ್ಟದವರೆಗಾದರೂ ಅಗತ್ಯ ಮಾಹಿತಿಗಳನ್ನು ನೀಡುತ್ತವೆ ಎಂಬುದೂ ನಿಜ. ಆದರೆ ವರ್ಷದ ಐವತ್ತೆರಡು ವಾರಗಳಲ್ಲಿ ಒಂದು ಪತ್ರಿಕೆ ಮೂರ್‍ನಾಲ್ಕು ಗಂಭೀರ ಜಾನಪದ ಲೇಖನಗಳನ್ನು ಪ್ರಕಟಿಸಲು ಸಾಧ್ಯವಿಲ್ಲ ಎಂದರೆ ಅದು ನಂಬುವ ಮಾತಲ್ಲ, ಈ ಬಗ್ಗೆ ಪತ್ರಿಕೆಗಳು ಗಮನಹರಿಸಿಲ್ಲ ಅಷ್ಟೇ. ಈಗ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡುವವರು ಹೆಚ್ಚಾಗಿದ್ದಾರೆ. ಸ್ವಂತ ಪ್ರಕಟಣೆ ತುಂಬ ಕಷ್ಟವಾಗಿದೆ. ಈ ಸನ್ನಿವೇಶದಲ್ಲಿ ಪತ್ರಿಕೆಗಳು ಅಧ್ಯಯನಪೂರ್ಣ ಗಂಭೀರ ಜಾನಪದ ಲೇಖನಗಳನ್ನು ಆಹ್ವಾನಿಸಿ ಪ್ರಕಟಿಸಬೇಕು. ನವ್ಯ ಸಾಹಿತ್ಯದ ಚಿಗುರು ಕಾಲದಲ್ಲಿ ಕನ್ನಡ ಪತ್ರಿಕೆಗಳು ಅದನ್ನು ಹೇಗೆ ಬೆಳೆಸಿದವು ಎಂಬುದು ನಮಗೆಲ್ಲ ಗೊತ್ತಿದೆ. ಅದೇ ಪಾತ್ರವನ್ನು ಅವು ಜಾನಪದದ ಬಗೆಗೆ ಈಗ ವಹಿಸಬೇಕಾಗಿದೆ. ಕಳೆದ ವರ್ಷದ ಮಟ್ಟಿಗೆ ಹೇಳುವುದಾದರೆ-ಕರ್ಮವೀರ, ಸಂಯುಕ್ತ ಕರ್ನಾಟಕ ಪತ್ರಿಕೆಗಳು ಜಾನಪದ ಅಧ್ಯಯನದ ಬೆಳವಣಿಗೆಗೆ, ಉಳಿದ ಪತ್ರಿಕೆಗಳಿಗಿಂತ ಉತ್ತಮ ಸೇವೆ ಸಲ್ಲಿಸಿವೆ.

ಮತ್ತೊಂದು ಟಿಪ್ಪಣಿ

ಈ ಲೇಖನ ಬರೆದು ಬೆರಳಚ್ಚು ಆದ ಬಳಿಕ ಮತ್ತೆ ಮೂರು ಪುಟ್ಟ ಲೇಖನಗಳು 1995ರಲ್ಲಿ ಪ್ರಕಟವಾಗಿದ್ದದ್ದು ನನ್ನ ಗಮನಕ್ಕೆ ಬಂದಿವೆ. ಈ ಮೂರೂ ಲೇಖನಗಳು ಕವಿ ಶ್ರೀ ದೊಡ್ಡರಂಗೇಗೌಡರು ಬರೆದವುಗಳು. ಇವುಗಳಲ್ಲಿ ಒಂದು ಯುಗಾದಿಯನ್ನು ಕುರಿತ ಲೇಖನ (ಕನ್ನಡ ಪ್ರಭ-2.4.95) 'ಜನಪದ ಸಾಹಿತ್ಯದಲ್ಲಿ ಹೆಣ್ಣು' ಎಂಬ ಲೇಖನ (ಶ್ರುತಿ ಸಂಗಮ-ಹೊಸಕೋಟೆ, 5.2.95) ಹಾಗೂ-ಹಳ್ಳಿ ಹಾಡುಗಳಲ್ಲಿ ದೇವರು, ಧರ್ಮ ಚಿತ್ರಿತವಾಗಿರುವ ಬಗೆಯನ್ನು ಕುರಿತು ಒಂದು ಲೇಖನ (ಚಾಮುಂಡೇಶ್ವರಿ ಪತ್ರಿಕೆ-19.3.95). ಇವಲ್ಲದೆ ಇವರು ಇನ್ನೂ ಒಂದೆರಡು ಪುಟ್ಟ ಜಾನಪದ ಟಿಪ್ಪಣಿಗಳನ್ನೂ ಈ ವರ್ಷ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆಂದು ತಿಳಿದು ಬಂದಿದ್ದರೂ ಆ ಲೇಖನಗಳು ನೋಡಲು ದೊರೆತಿಲ್ಲ.

ಮೇಲೆ ಉಲ್ಲೇಖಿಸಿದ ಮೂರು ಲೇಖನಗಳು ಅನಂತರ ಬೇರೆ ಪತ್ರಿಕೆ/ಸಂಸ್ಮರಣ ಸಂಪುಟಗಳಲ್ಲೂ ಪುನರ್ಮುದ್ರಣಗೊಂಡಿವೆ.

ಈ ಮೂರು ಲೇಖನಗಳೂ ವಿಸ್ತಾರದಲ್ಲಿ ಕಿರಿದಾಗಿದ್ದು ಜನಪ್ರಿಯ ಪತ್ರಿಕೆಗಳಿಗಾಗಿ ಬರೆಯಲ್ಪಟ್ಟವುಗಳು. ಹೀಗಾಗಿ ಸ್ವಾಭಾವಿಕವಾಗಿಯೇ ಪರಿಚಯಾತ್ಮಕವಾಗಿವೆ. ಹಿರಿದಾದ ಅಧ್ಯಯನಶೀಲತೆಯಾಗಲೀ ಗಂಭೀರ ಅಂಶಗಳ ಚರ್ಚೆಯಾಗಲೀ ಇಲ್ಲ. (ಬಹಳಷ್ಟು ಪತ್ರಿಕಾ ಲೇಖನಗಳು ಹೀಗೆ ಇರುವುದನ್ನು ಗಮನಿಸಿದ್ದೇವೆ.) ಆದರೂ-ಈ ಮೂರು ಲೇಖನಗಳಲ್ಲಿ ಕಂಡುಬರುವ ಒಂದು ಅನನ್ಯತೆ ಎಂದರೆ-ಲೇಖಕರು ಅಷ್ಟಾಗಿ ಪರಿಚಯವಿಲ್ಲದ ಪದ್ಯಗಳನ್ನು ಉದಾಹರಣೆಯಾಗಿ ಉಲ್ಲೇಖಿಸಿರುವುದು. ಉಗಾದಿ ಹಬ್ಬವನ್ನು ಕುರಿತ ಲೇಖನದಲ್ಲಿ ಒಂದು ಸಮಗ್ರತೆ ಇದೆ. ಉಗಾದಿಯನ್ನು ಕುರಿತ ಸಂಭ್ರಮದ ಭಾವನೆಗಳನ್ನು ಉಲ್ಲೇಖಿಸುವಂತೆಯೇ ಅದರ ಮರುದಿನದ ಮಾಂಸದೂಟವನ್ನು ಕುರಿತ ತ್ರಿಪದಿಯನ್ನು ಹಬ್ಬ ಆಚರಿಸಲಾಗದ ಬವಣೆಯ ಪದ್ಯಗಳನ್ನು ಅವರು ಉಲ್ಲೇಖಿಸುತ್ತಾರೆ. ಉದಾಹರಣೆ ನೋಡಿ-

ಬ್ಯಾಸಿಗೆ ಕಾಲಕೆ ಬರುತ್ತೈತೋ ವರುಷ ತಡಕು
ಆಸೆ ನಾಲಗೆಗಾಗ್ಲೇ ಖಾರದಡುಗೆ-ಮಸ್ತಾಗಿ
ವೊಸ ಬಟ್ಟೆ, ವೊಸ ವೇಷ, ಚೆಂದ.

ಉಗಾದಿ ಬಂದರೇನು ಉಗಾದಿ ಹೋದರೇನು
ತಗಾದಿಯಂತೂ ತಪ್ಪಲಿಲ್ಲ ನಮ್ಮಂಥೋರಿಗೆ-ಊರ್‍ನಾಗೆ
ನಗೆಯಿಲ್ಲವೋ ಬಡವರ ಮಕದಾಗೆ!

ಆಯ್ಕೆಂಡು ತಿನ್ನೋ ನಮಗ್ಯಾಕೋ ಸಾವ್ಕಾರ್‍ರುಗಾದಿ
ಸಾಯೋತನಕ್ಕ ತಪ್ಪ ಕಣೋ ಬವಣೆ ತಗಾದಿ-ತಮ್ಮಾ
ಬಾಯ್ ಬಾಯ್ ಯಾಕೆ ಬಿಡ್ತಿಯೋ ವೋಳಿಗೆ ಉಣ್ಣೆ!

ಇಂಥದೇ ಅಪರೂಪದ ಉದಾಹರಣೆಗಳನ್ನು ಇಷ್ಟು ಸಮಗ್ರತೆ ಇಲ್ಲದ, ಪ್ರಶಂಸೆಯ ಚಿತ್ರಣವನ್ನೇ ಕೊಡುವ ಉಳಿದೆರಡು ಲೇಖನಗಳಲ್ಲೂ ನೋಡಬಹುದು.

ದೀಪಿಲ್ಲ ಮನೆಯಾಗೆ ದೀಪ ಕಾಣೋ ಹೆಂಡತಿ
ದೀಪದ ಮಲ್ಲಿ ನನ್ನಾಕೆ ಸೊಗಸುಗಾತಿ-ಖನಾತಿ
ದೀಪ ತುಂಬಿದ ಮ್ಯಾಗೇನೆ ಭೋ ಪ್ರೀತಿ!

ಅದೇರೀತಿ-

ತೊಡೆ ತಟ್ಟಿ ಕಾಲ್ಕೆರೆದು ಯಾಕಾರ ಮೆರೆದೀಯಾ
ದಡ ಕಾಣಿಸೋ ನಮ್ಮಪ್ಪ ಮೇಲವನೇ-ಮಲ್ಲಯ್ಯ
ಒಡಕು ಮಡಕೇನಂಗೆ ದುಡುಕ್ಯಾತಕೋ!

ಇಂಥ ಅಪರೂಪದ ತ್ರಿಪದಿಗಳನ್ನು ಉದಾಹರಿಸುವ ಲೇಖಕರ ಬಳಿ ಸಾಕಷ್ಟು ಸರಕು ಇರಬಹುದೆನಿಸುತ್ತದೆ. ಒಂದೆಡೆ ಅವರೇ ತಾವು ಇಪ್ಪತ್ತೈದು ವರ್ಷಗಳಿಂದ ನಾಡಿನ ಹಲವೆಡೆ ಜಾನಪದ ಗೀತೆಗಳನ್ನು ಸಂಗ್ರಹಿಸಿರುವುದಾಗಿ ಸಾಂದರ್ಭಿಕವಾಗಿ ಹೇಳುತ್ತಾರೆ. ಅದು ನಿಜವಿದ್ದರೆ ಇವರ ಬಳಿ ಸಾಕಷ್ಟು ಸ್ವಂತ ಸಂಗ್ರಹವೂ, ಆ ಬಗ್ಗೆ ಗಂಭೀರವಾಗಿ ಬರೆಯುವಷ್ಟು ಅಧ್ಯಯನವೂ ಇರಲೇಬೇಕು. ಪ್ರಸ್ತುತ ಪರಿಶೀಲನೆಗೊಳಪಟ್ಟ ಲೇಖನಗಳು ಆ ಅನುಮಾನವನ್ನುಂಟುಮಾಡುತ್ತವೆ.

ಸಂಕೀರ್ಣ

ಡಾ. ಕಮಲಾ ಹಂಪನಾ

ಈ ವಿಭಾಗದಲ್ಲಿ ಪರಾಮರ್ಶೆಗಾಗಿ ಆರು ಕೃತಿಗಳನ್ನು ಸಂಪಾದಕರು ಕಳುಹಿಸಿಕೊಟ್ಟಿದ್ದಾರೆ. ಇವುಗಳಲ್ಲಿ ನಾಲ್ಕು ಸಾಹಿತ್ಯ ಸಂಬಂಧಿ ಕೃತಿಗಳಾದರೆ ಎರಡು ಜನಪದ ವೈದ್ಯ ಮಾಹಿತಿ ಸಂಗ್ರಹಗಳು. ಇವುಗಳನ್ನಿಲ್ಲಿ ಸ್ಥೂಲವಾಗಿ ವಿಮರ್ಶಿಸಲಾಗಿದೆ.

1. ಊರೌಷಧಿಗಳ ಚಿಕಿತ್ಸೆ - ಡಾ. ಎಲ್.ಅರ್. ಹೆಗಡೆ

ಉತ್ತರ ಕನ್ನಡ ಜಿಲ್ಲೆಯ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ತಮ್ಮ ಬದುಕನ್ನೇ ಮೀಸಲಿಟ್ಟು ಕೆಲಸ ಮಾಡಿದ ಡಾ. ಎಲ್.ಆರ್. ಹೆಗಡೆಯವರು ಈಚಿನ ವರ್ಷಗಳಲ್ಲಿ ಜನಪದ ವೈದ್ಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ ವ್ಯವಸ್ಥಿತವಾಗಿ ಸಂಪಾದಿಸಿ ಗ್ರಂಥರೂಪದಲ್ಲಿ ಪ್ರಕಟಿಸುವ ಕೆಲಸವನ್ನೂ ಮಾಡುತ್ತಿದ್ದಾರೆ. ಹೋಮಿಯೋಪತಿ ಹಾಗೂ ಆಯುರ್ವೇದ ವೈದ್ಯವನ್ನೂ ಅಭ್ಯಾಸ ಮಾಡಿಕೊಂಡಿರುವ ಅವರು ಈ ಕೆಲಸವನ್ನು ಅಧಿಕಾರಯುತವಾಗಿಯೇ ಮಾಡಬಲ್ಲವರಾಗಿದ್ದಾರೆ.

ಈ ಪುಸ್ತಕವನ್ನು ರಚಿಸಿರುವುದು ಸಾಮಾನ್ಯರಿಗಾಗಿ. ವೈದ್ಯಕೀಯಜ್ಞಾನದಲ್ಲಿ ಅತಿ ಸಾಮಾನ್ಯರೇ ಆದ ನಮ್ಮಂಥವರು ಇಂಥ ಪುಸ್ತಕದ ಬಗ್ಗೆ ಅಭಿಪ್ರಾಯ ನೀಡುವುದೂ ಸಹ ಸಾಮಾನ್ಯರಿಗೆ ಇದು ಅರ್ಥವಾಗುವ ರೀತಿಯಲ್ಲಿದೆಯೇ, ಬರವಣಿಗೆ ವ್ಯವಸ್ಥಿತವಾಗಿದೆಯೆ ಎಂಬ ಅಂಶಗಳನ್ನಷ್ಟೆ ಗಮನಿಸಿ.

ಈ ಕೃತಿಯಲ್ಲಿ ಮಾನವರಿಗೆ ಬರುವ 113 ವಿವಿಧ ರೋಗಗಳು, ನ್ಯೂನತೆಗಳಿಗೆ ಜನಪದರಲ್ಲಿ ಪ್ರಚಲಿತವಿರುವ ಚಿಕಿತ್ಸಾಕ್ರಮಗಳನ್ನು ಸೂಚಿಸಿದ್ದಾರೆ. ಆಶ್ಚರ್ಯವೆಂದರೆ- ಸಡಿಲಸ್ತನಗಳು ಬಿಗಿಯಾಗಲು, ಗಂಡುಮಗುವಾಗಲು, ಅತಿಕಾಮ ನಿವಾರಣೆಗೆ ಸಹ ಇಲ್ಲಿ ಚಿಕಿತ್ಸೆಗಳು ಸೂಚಿಸಲ್ಪಟ್ಟಿವೆ. ಪ್ರಯೋಗ ಮಾಡಿ ನೋಡಿದರೆ ತಾನೆ ಇವುಗಳ ಸಾರ್ಥಕತೆ ತಿಳಿಯುವುದು?

ಕೊನೆಯಲ್ಲಿ ವಕ್ಯಗಳು ಪಟ್ಟಿಯನ್ನೂ ಕೊಟ್ಟಿದ್ದಾರೆ. ಕೆಲವು ವೈದ್ಯರಿಂದಲೂ ಇವರು ಮಾಹಿತಿ ಸಂಗ್ರಹಿಸಿರುವುದು ತಿಳಿಯುತ್ತದೆ.

ಒಂದೆರಡು ಸಲಹೆಗಳೆಂದರೆ-ಔಷಧಿ ತಯಾರಿಸುವುದನ್ನು ಹೇಳುವಾಗ ಉಪಯೋಗಿಸುವ ಪಾರಿಭಾಷಿಕ ಪದಗಳ ಅರ್ಥವನ್ನು ಒಂದೆಡೆ ಕೊಡಬೇಕಿತ್ತು. ಉದಾ.ಗೆ-ಕಲ್ಕ ಮಾಡಿ... ಎಂದು ಕೆಲವೆಡೆ ಬಂದಿದೆ. ಹಾಗೆಂದರೇನೆಂದು ಹೇಳಿಲ್ಲ. ಅದೇ ರೀತಿ-ಒಂದು ಕಾಯಿಲೆಗೆ ಕೆಲವಾರು ಚಿಕಿತ್ಸೆಗಳನ್ನು ಹೇಳುವಾಗ ಅವು ಪ್ರತಿಯೊಂದೂ ಬೇರೆ ಬೇರೆ, ಹಾಗೂ, ಅವುಗಳ ಪೈಕಿ ಯಾವುದಾದರೊಂದನ್ನು ಮಾಡಿದರೆ ಸಾಕು ಎಂಬುದನ್ನು ಸೂಚಿಸುವ ದೃಷ್ಟಿಯಿಂದ ಪ್ರತಿಯೊಂದು ಚಿಕಿತ್ಸೆಗೂ ಕ್ರಮಸಂಖ್ಯೆ ಹಾಕಬೇಕು.

ಅಲೋಪಥಿ ಔಷಧಿ ಚಿಕಿತ್ಸೆ, ಮಾತ್ರೆಗಳು-ತುಂಬ ದುಬಾರಿಯಾಗಿರುವ ಈ ದಿನಗಳಲ್ಲಿ ನಾಡವೈದ್ಯದ ಕಡೆ ನಾವು ದೃಷ್ಟಿಹರಿಸಬೇಕಾದುದು ಅನಿವಾರ್ಯವಾಗಿದೆ. ಈ ಕಾರಣದಿಂದ ಇಂಥ ಪುಸ್ತಕಗಳು ನಮಗೆ ಉಪಯುಕ್ತ. ಗಂಭೀರ ರೋಗಕ್ಕೆ ವೈದ್ಯರ ಬಳಿ ಹೋಗಲೇಬೇಕು. ಸಾಧಾರಣ ತೊಂದರೆಗಳಿಗೆ ಇಂಥವುಗಳು ನೆರವಾಗಬಲ್ಲವು.

2. ಪಶುವೈದ್ಯ ರತ್ನಾಕರ-ಡಾ.ಎಲ್.ಆರ್. ಹೆಗಡೆ

ಇದು ಪಶುಗಳಿಗೆ ಬರುವ ಸುಮಾರು ಒಂದುನೂರಾ ಇಪ್ಪತ್ತು ಬಗೆಯ ಬಾಹಿಲೆಗಳಿಗೆ ಗೃಹಚಿಕಿತ್ಸೆಯನ್ನು ಸೂಚಿಸುವ ಕೃತಿ. ಇದರಲ್ಲಿ ಹಸು, ಎತ್ತು, ಎಮ್ಮೆ, ನಾಯಿ ಮೊದಲಾದ ಸಾಕುಪ್ರಾಣಿಗಳಿಗೆ ವಿವಿಧ ಬಾಹಿಲೆಗಳಿಗೆ ಏನು ಚಿಕಿತ್ಸೆ ಮಾಡಬೇಕೆಂಬ ಬಗ್ಗೆ ಸೂಚಿಸಿದ್ದಾರೆ. ಪ್ರಾರಂಭದ ಅಧ್ಯಾಯದಲ್ಲಿ ಅಗತ್ಯ ಪೂರ್ವ ಸೂಚನೆಗಳನ್ನು ನೀಡಿದ್ದಾರೆ. ಒಂದು ಸಸ್ಯಕ್ಕೆ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಹೆಸರಿರುವುದನ್ನು ಸೂಚಿಸಿ, ಸಂಸ್ಕೃತದ ಹೆಸರನ್ನೂ ಹೇಳಿ ಓದುಗರಿಗೆ ಸ್ಪಷ್ಟತೆಯುಂಟಾಗುವಂತೆ ಮಾಡಿದ್ದಾರೆ. ಅದೇರೀತಿ-ಬೇರೆ ಬೇರೆ ಜಾತಿಯ ಆಕಳುಗಳಿಗೆ (ಜರ್ಸಿಯಂಥ ಮಿಶ್ರತಳಿಯ ದೊಡ್ಡಹಸುಗಳು, ಸ್ಥಳೀಯ ಸಾಮಾನ್ಯ ತಳಿಗಳು ಇತ್ಯಾದಿ) ಕೊಡಬೇಕಾದ ಔಷಧದ ಪ್ರಮಾಣ ಬೇರೆ ಬೇರೆ ಎಂಬುದರ ಸ್ಪಷ್ಟನೆ ಇದೆ. (ಇದನ್ನೆಲ್ಲ ಬೇರೆ ಬೇರೆ ಉಪಶೀರ್ಷಿಕೆಗಳಲ್ಲಿ ಕೊಟ್ಟಿದ್ದರೆ ಸುಲಭವಾಗುತ್ತಿತ್ತು.) ಅನಂತರದ ಅಧ್ಯಾಯದಲ್ಲಿ ಪಶುಗಳನ್ನು ಹೇಗೆ ಆರೋಗ್ಯವಂತವಾಗಿ ನೋಡಿಕೊಳ್ಳಬೇಕೆಂಬ ಬಗ್ಗೆ ಒಳ್ಳೆಯ ಸೂಚನೆಗಳಿವೆ.

ಮುಂದಿನ ಅಧ್ಯಾಯಗಳಲ್ಲಿ ಪ್ರತಿಯೊಂದು ಬಗೆಯ ರೋಗಕ್ಕೂ ಹಲವಾರು ಚಿಕಿತ್ಸೆಗಳನ್ನು ಸೂಚಿಸಿದ್ದಾರೆ. ಆರಂಭದಲ್ಲಿ ಆಯಾ ರೋಗದ ಲಕ್ಷಣಗಳನ್ನು ಹೇಳಿದ್ದಾರೆ ಅನಂತರ ಅದಕ್ಕೆ ವಿವಿಧ ಔಷಧಿಗಳನ್ನು ತಯಾರಿಸಿ ಕೊಡಬೇಕಾದ ಕ್ರಮಗಳನ್ನು ವಿವರಿಸಿದ್ದಾರೆ. ಇಂಥ ಗ್ರಂಥಗಳಲ್ಲಿ ಸ್ಪಷ್ಟತೆ ಬಹುಮುಖ್ಯ. ಲೇಖಕರು ಎಚ್ಚರದಿಂದ ಆ ಕೆಲಸ ಮಾಡಿದ್ದಾರೆ.

ಈ ಗ್ರಂಥ ರಚನೆಯಲ್ಲಿ ಲೇಖಕರು ಅಕ್ಷರಶಃ ನೂರಾರು ಗ್ರಾಮೀಣ ವ್ಯಕ್ತಿಗಳಿಂದ ಅವರ ಅನುಭವದ ಮಾಹಿತಿ ಸಂಗ್ರಹಿಸುವುದಲ್ಲದೆ ಪಶುವೈದ್ಯರು ಹಾಗೂ ಪಶು ಸಾಕಣೆ ಕುರಿತ ಪತ್ರಿಕೆಗಳಿಂದಲೂ ಮಾಹಿತಿ ಸಂಗ್ರಹಿಸಿ ಇಲ್ಲಿ ಕ್ರೋಢೀಕರಿಸಿದ್ದಾರೆ. ಹೋಮಿಯೋಪಥಿಯಲ್ಲಿ ಲಭ್ಯವಿರುವ ವಿವಿಧ ಔಷಧಿಗಳ ಬಗೆಗೂ ಇಲ್ಲಿ ಮಾಹಿತಿ ಇದೆ.

ಪಾಶ್ಚಾತ್ಯ ವೈದ್ಯ ಪದ್ಧತಿಯ ಹಿಂದೆ ದೌಡಾಯಿಸುತ್ತಾ ನಮ್ಮ ಜನಗಳ ಶಕ್ತಿಗೆ ಮೀರಿದ ಚಿಕಿತ್ಸಾ ಭಾರವನ್ನು ಅವರ ಮೇಲೆ ಹೇರಲು ಪ್ರಯತ್ನಿಸುತ್ತಿರುವ ಆಡಳಿತಗಾರರನ್ನು ಅವರಷ್ಟಕ್ಕೆ ಬಿಟ್ಟು ನಮ್ಮಲ್ಲಿ ಪರಂಪರಾಗತವಾಗಿ ಬಂದು ಅನುಭವದಿಂದಾಗಿ 'ಸರಿ' ಎಂದು ಕಂಡುಕೊಳ್ಳಲ್ಪಟ್ಟಿರುವ ದೇಶೀಯ ಚಿಕಿತ್ಸೆಗಳನ್ನು ಸರಿಯಾಗಿ ನಡೆಸುವುದನ್ನು ನಮ್ಮವರು ಕಲಿಯಬೇಕಾಗಿದೆ. ಹಳ್ಳಿಗರಿಗಂತೂ ಪಶುಗಳು ಅಮೂಲ್ಯ ಸಂಪತ್ತು. ಗ್ರಾಮೀಣ ಪ್ರದೇಶಗಳಲ್ಲಿ ಪಶುಚಿಕಿತ್ಸಾಲಯಗಳೂ, ಅಲ್ಲಿ ಔಷಧಿಗಳ ಸಂಗ್ರಹವೂ ಕಡಮೆ. ಇಂಥ ಪರಿಸ್ಥಿತಿಯಲ್ಲಿ ಇಂಥ ಗ್ರಂಥಗಳಿಂದ ಆಗುವ ಉಪಯೋಗ ದೊಡ್ಡದು.

ಆದರೆ ಯಾವುದೇ ವೈದ್ಯ ಗ್ರಂಥವನ್ನು ಸಾಮಾನ್ಯನು ಅನುಸರಿಸುವಾಗ ಸಾಕಷ್ಟು ಎಚ್ಚರಿಕೆ, ಸಾವಧಾನದ ಓದು ಅಗತ್ಯ ಅಂಥ ಪೂರ್ವ ಸೂಚನೆಗಳನ್ನೂ ಲೇಖಕರು ನೀಡಿದ್ದಾರೆ. ಓದುಗರು ಜವಾಬ್ದಾರಿಯಿಂದ ಈ ಮಾಹಿತಿಗಳನ್ನು ಬಳಸಿಕೊಳ್ಳಬೇಕಾಗುತ್ತದೆ. ವ್ಯಕ್ತಿ ಅಥವಾ ಪಶು ಅನಾರೋಗ್ಯ ಪೀಡಿತವಾದಾಗ ಮಾತ್ರ ಥಡಕ್ಕನೆ ಪುಸ್ತಕ ತೆಗೆದು ಹಾಳೆ ಮುಗುಚಿ ಯಾವುದೋ ರೋಗ ಲಕ್ಷಣಗಳನ್ನು ಅಲ್ಲಿ ಕಂಡು ಅದರ ಚಿಕಿತ್ಸೆಗೆ ಧುಮುಕುವುದಿಲ್ಲ. ಈ ಪುಸ್ತಕಗಳನ್ನೂ ಬಿಡುವಿನಲ್ಲಿ ಓದುತ್ತಿದ್ದು ಸರಿಯಾಗಿ ಮೊದಲು ಗ್ರಹಿಸಿಕೊಂಡು, ನೆರೆಕೆರೆಯ ಅನುಭವಿಕರರೊಡನೆ ಚರ್ಚಿಸುತ್ತಿದ್ದು, ಸಮಯ ಒದಗಿದಾಗ ಈ ಜ್ಞಾನದ ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ.

3. ಮಾಯಾ ಕೋಲಾಹಲ (ಯಕ್ಷಗಾನ ಪ್ರಸಂಗ):
ಮಂಜುನಾಥ ಭಾಗವತ್, ಹೊಸ್ತೋಟ

ಇದು ಹೊಸದಾಗಿ ರಚಿಸಲ್ಪಟ್ಟಿರುವ ಯಕ್ಷಗಾನ ಪ್ರಸಂಗ. ಯಕ್ಷಗಾನ ಬಯಲಾಟವು ಹಳೆಯ ಕಲೆಯಾದರೂ ಅದರಲ್ಲಿ ಆಗಾಗ ಹೊಸ ಪ್ರಸಂಗಗಳನ್ನು ಬರೆಯಿಸಿ ಪ್ರಯೋಗಿಸುವ ಪದ್ಧತಿ ಇದೆ. ಪಾರ್ತಿಸುಬ್ಬ ಎನ್ನುವ ಪ್ರಸಿದ್ಧ ಪ್ರಸಂಗಕರ್ತನು ನೂರು ವರ್ಷಗಳಿಗಿಂತ ತುಸು ಹಿಂದೆ ಬಾಳಿ ಹಲವು ಸ್ಮರಣೀಯ ಪ್ರಸಂಗಗಳನ್ನು ರಚಿಸಿದ. ನಮ್ಮ ನಂದಳಿಕೆ ಲಕ್ಷ್ಮೀನಾರಾಯಣಪ್ಪನೂ ಕೆಲವು ಯಕ್ಷಗಾನ ಪ್ರಸಂಗಗಳನ್ನು ಬರೆದಿದ್ದದ್ದಿದೆ (ಆದರೆ ಅವು ಹೆಚ್ಚು ಪ್ರಯೋಗವಾದಂತಿಲ್ಲ). ಕೆರೆಮನೆ ಶಿವರಾಮ ಹೆಗಡೆಯವರು ಪ್ರಥಮಬಾರಿಗೆ ವ್ಯವಸಾಯಿ ಮೇಳ ಕಟ್ಟಿದಾಗ ಪರಿಚಯದ ಭಾಗವತರಿಂದ ಹೊಸ ಪ್ರಸಂಗಗಳನ್ನು ಬರೆಸಿದ ಬಗ್ಗೆ ಹೇಳಿಕೊಂಡಿದ್ದಾರೆ. ಇದೇ

ಪರಂಪರೆಯಲ್ಲಿ ಈಗಲೂ ಹೊಸ ಪ್ರಸಂಗಗಳ ರಚನೆಯಾಗುತ್ತಿದೆ. ಈ ಸಾಲಿಗೆ ಇತ್ತೀಚಿನ ಸೇರ್ಪಡೆ-ಪ್ರಸಿದ್ಧ ಯಕ್ಷಗಾನ ಭಾಗವತರಾದ ಶ್ರೀ ಹೊಸತೋಟ ಮಂಜುನಾಥ ಭಾಗವತರ ಈ ಕೃತಿ-ಮಾಯಾ ಕೋಲಾಹಲ. 1995ರಲ್ಲಿ ಇದು ಪ್ರಕಟವಾಗಿದ್ದರೂ ಇನ್ನೂ ಕೆಲವು ವರ್ಷಗಳ ಹಿಂದೆಯೇ ಇದು ರಚಿತಗೊಂಡು ಪ್ರಯೋಗಿಸಲ್ಪಟ್ಟಿರುವಂತೆ, ಹಾಗೂ ಮೂವತ್ತು ವರ್ಷಗಳ ಹಿಂದಿನಿಂದಲೇ ಈ ವಸ್ತು ಇವರ ಅಂತರಂಗವನ್ನು ಪ್ರಚೋದಿಸಿದ್ದಂತೆ ಲೇಖಕರ ಮಾತಿನಿಂದ ತಿಳಿಯುತ್ತದೆ.

ಈ ಹೊಸ ಪ್ರಸಂಗಕ್ಕೆ ಪ್ರಸಿದ್ಧವಾದ ಚಾಮರಸನ 'ಪ್ರಭುಲಿಂಗಲೀಲೆಯೇ ಆಧಾರ. ಅಲ್ಲಿ ಬರುವ-ಅಲ್ಲಮ ಮಾಯೆಯನ್ನು ಸೋಲಿಸಿ ಆಕೆಯ ಗರ್ವಭಂಗ ಮಾಡಿದ ಪ್ರಸಂಗವೇ ಇಲ್ಲಿಯ ವಸ್ತು. ಯಕ್ಷಗಾನದ ಎರಕಕ್ಕೆ ತಕ್ಕಂತೆ ಆರಂಭದಲ್ಲಿ ಒಂದು ಸಮಸ್ಯಾ ಸನ್ನಿವೇಶದ ಸೃಷ್ಟಿ (ಶಿವನೊಡನೆ ಪಾರ್ವತಿ ಸವಾಲು ಹಾಕಿ ಅಲ್ಲಮನ ನೈತಿಕತೆಯನ್ನು ಪರೀಕ್ಷಿಸಲು ನಿರ್ಧರಿಸುವುದು), ಅನಂತರ ಸಮಸ್ಯೆಯನ್ನೊಡ್ಡುವ ಪಾತ್ರದ ಸೃಷ್ಟಿ, ಬೆಳವಣಿಗೆ (ಇಲ್ಲಿ ಶಿವೆಯ ತಾಮಸ ಕಳೆಯಾದ ಮಾಯೆ ಭೂಮಿಯಲ್ಲಿ ಹುಟ್ಟಿ ಅತಿಸುಂದರವಾಗಿ ಬೆಳೆಯುವುದು), ವಿರುದ್ಧ ಪಾತ್ರಗಳ (ಮಾಯೆ-ಅಲ್ಲಮ) ಮಿಲನ, ಮಾಯೆಯೇ ಅಲ್ಲಮನಿಂದ ಆಕರ್ಷಿತಳಾಗಿ ಅವನನ್ನು ವಶೀಕರಿಸಿಕೊಳ್ಳಲೆತ್ನಿಸುವುದು, ಅಲ್ಲಮನ ನಿಶ್ಚಲತೆ ಹಾಗೂ ಬಯಲ ಸ್ವರೂಪ, ಮಾಯೆಯನ್ನು ಅವಳ ಸ್ವಾರ್ಥಕ್ಕಾಗಿ ತಿರಸ್ಕರಿಸುವುದು, ಕೊನೆಗೆ ಪಾರ್ವತಿ ಅಲ್ಲಮನ ನಿಶ್ಚಲತೆಯನ್ನೂ ನಿರ್ಮೋಹತ್ವವನ್ನೂ ಒಪ್ಪಿಕೊಳ್ಳುವುದು-ಹೀಗೆ ಸಾಗುತ್ತದೆ ಇಲ್ಲಿನ ಕಥಾ ನಿರೂಪಣೆಯ ಕ್ರಮ. ಕಥೆಯ ಮೂಲದ್ದೇಶವಾದ, ವೀರಶೈವ ಸಿದ್ಧಾಂತಕ್ಕನುಗುಣವಾದ ಸಾಯುಜ್ಯದ ಸ್ವರೂಪ, ಅದರ ಸಂಪಾದನೆಗೆ, ಶಿವಕೃಪೆಗೆ ಬೇಕಾದ ಅರ್ಹತೆ, ಸಂಪಾದಿಸಬೇಕಾದ ವಿಧಾನ-ಇವುಗಳೆಲ್ಲ ಸಮರ್ಪಕ ರೀತಿಯಲ್ಲಿ ಪ್ರಭಾವೀ ಶಬ್ದಜೋಡಣೆ ಸಹಿತವಾಗಿ ನಿರೂಪಿಸಲ್ಪಟ್ಟಿವೆ. ಚಾಮರಸನ ಕೆಲವು ಪದ್ಯಗಳನ್ನು ಹಾಗೆಯೇ ಬಳಸಿಕೊಳ್ಳಲಾಗಿದೆ. ಯಕ್ಷಗಾನ ಪ್ರದರ್ಶನಕ್ಕೆ ನಿಜವಾಗಿ ರಂಗು ಕೊಡುವ ಆರ್ಭಟದ ವೀರತ್ವದ ಸನ್ನಿವೇಶಗಳು ಇಲ್ಲಿಲ್ಲ. ಪಾರ್ವತಿಯ ತಾಮಸ ಕಳೆ ಪ್ರವೇಶಿಸುವ ನಾಲ್ಕಾರು ನಿಮಿಷಗಳ ಸಂದರ್ಭ ಒಂದರಲ್ಲಿ ಮಾತ್ರ ಅದಕ್ಕೆ ಅವಕಾಶವಿದೆ. ಮತ್ತೆಲ್ಲೂ ಇಲ್ಲ. ಹಾಸ್ಯಕ್ಕೆ-ಮಾಯೆಯ ದಾಸಿಯರ ಮಾತುಗಳಲ್ಲಿ ಅವಕಾಶ ಸಿಕ್ಕಿದೆ. ಒಟ್ಟಿನಲ್ಲಿ ಶಾಂತತೆಗೆ ಪ್ರಧಾನತೆ ಸಿಕ್ಕಿರುವ ಅಟಾಟೋಪವಿಲ್ಲದ ಪ್ರಸಂಗವಿದು. ಪ್ರಯೋಗ ಜನಮನ್ನಣೆ ಪಡೆದಿದೆ ಎಂಬ ಮಾತನ್ನು ಲೇಖಕರು ಹೇಳಿಕೊಂಡಿದ್ದಾರೆ. ಹಾಗಿದ್ದರೆ ಸಂತೋಷವೇ ಸರಿ. ಪ್ರಸಂಗಕರ್ತರು ಬೇರೆ ಬೇರೆ ರಾಗಕ್ಕೆ ಹೊಂದಿಸಿ ಹಾಡುಗಳನ್ನು ರಚಿಸಿದ್ದಾರೆ.

4. ಸಿರಿ ಚುಂಚನಗಿರಿ (ಜನಪದ ಕಾವ್ಯದ ವಚನ ರೂಪ): ಡಾ. ಪಿ.ಕೆ. ರಾಜಶೇಖರ.

ಓದಲು ತುಂಬ ಆಕರ್ಷಕವಾದ ಹೊತ್ತಗೆ, ಚುಂಚನಗಿರಿಯ ಭೈರವೇಶ್ವರನನ್ನು ಹಾಗೂ ಅದಕ್ಕೆ ಸಾಗಿಕೊಂಡ ಇತರ ಕೆಲವು ಕತೆಗಳನ್ನು ಇದು ಮನಗೆಲ್ಲುವ ಶೈಲಿಯಲ್ಲಿ ಹೇಳುತ್ತಾ ಹೋಗುತ್ತದೆ.

ಇದು ಪರಾಮರ್ಶನ ಗ್ರಂಥವಾಗಲೀ ಸಂಶೋಧನ, ವಿಮರ್ಶನ ಕೃತಿಯಾಗಲೀ ಅಲ್ಲ. ಬಹುಶಃ ಸಾಮಾನ್ಯ ಓದುಗರಿಗೆ ಭೈರವೇಶ್ವರ ಸಂಬಂಧಿ ಕತೆಗಳನ್ನು ರಂಜನೀಯವಾಗಿ ಹೇಳುವುದನ್ನು ಗುರಿಯಾಗಿಟ್ಟುಕೊಂಡು ರಚಿತವಾದ ಕೃತಿ. ಈ ಸಂಬಂಧಿಯಾದ ಕೆಲವನು ಕಥನ ಗೀತೆಗಳನ್ನು ಮೂಲಭಾಷೆಯ ಧಾಟಿಯಲ್ಲೇ ಗದ್ಯದಲ್ಲಿ ನಿರೂಪಿಸಿರುವಂತೆ ಕಾಣುತ್ತದೆ. ಯಾವ ಸೂತ್ರವನ್ನಿಟ್ಟುಕೊಂಡು ತಾವು ಈ ಕೃತಿಯನ್ನು ರಚನೆ ಮಾಡಿದ್ದೇವೆಂಬುದನ್ನು ಲೇಖಕರು ಸ್ಪಷ್ಟಪಡಿಸಿಲ್ಲ. ಪ್ರತಿಯೊಂದು ಪ್ರಸಂಗವೂ ಒಂದೊಂದೇ ಹಾಡಿನ ವಚನ ರೂಪವೋ ಅಥವಾ ಹಲವು ಹಾಡುಗಳಿಂದ ವಿವಿಧಾಂಶಗಳನ್ನು ತೆಗೆದುಕೊಳ್ಳಲಾಗಿದೆಯೋ ಎಂಬುದೂ ಸ್ಪಷ್ಟವಿಲ್ಲ. ಹಾಗಾಗಿ-ಇಲ್ಲಿನ ನಿರೂಪಣೆಯಲ್ಲಿ ಲೇಖಕರ ಪಾಲೆಷ್ಟು ಮೂಲ ಜನಪದ ಕಾವ್ಯದ ಪಾಲೆಷ್ಟು ಎಂಬುದು ನಮಗೆ ಗೊತ್ತಾಗುವುದಿಲ್ಲ.

ಪುಸ್ತಕದಲ್ಲಿ ಐದು ಭಾಗಗಳಿವೆ ಮೊದಲ ಅಧ್ಯಾಯದಲ್ಲಿ ಚುಂಚನಗಿರಿಯ ಪರಿಚಯವಿದೆ ಕ್ಷೇತ್ರದರ್ಶನ, ಗುರುಪರಂಪರೆ, ಜೋಗಿ ಪದ್ಧತಿ, ಅಲ್ಲಿ ಮಠಕ್ಕೆ ರಾಜಶ್ರಯ ದೊರೆತ ವಿಚಾರ-ಇವೆಲ್ಲವನ್ನು ಸುಮಾರು ಇಪ್ಪತ್ತೈದು ಪುಟಗಳ ಪರಿಮಿತಿಯಲ್ಲಿ ವಿವರಿಸಿದ್ದಾರೆ ಇಲ್ಲಿ ಅಧ್ಯಯನಶೀಲ ಲೇಖಕರು ಕಾಣುತ್ತಾರೆ. ಸಂಶೋಧನ ದೃಷ್ಟಿ ಇಲ್ಲಿ ಸ್ಪಷ್ಟವಾಗುತ್ತದೆ. ಸ್ವಲ್ಪ ಮಟ್ಟಿಗೆ ಇಲ್ಲಿಯೂ ಭಕ್ತನ ಧಾಟಿಯೇ ಇದ್ದರೂ ಲೇಖಕರ ಕಣ್ಣೆದುರು ಸಾಮಾನ್ಯ ಓದುಗರು ಮಾತ್ರವೇ ಇದ್ದಾರೆಂಬುದು ನಿಜವಾದರೆ ಅದು ಕ್ಷಮ್ಯವಾಗುತ್ತದೆ.

ಎರಡನೆಯ ಅಧ್ಯಾಯ- 'ಭೂಮಿಗೆ ಬಂದ ಭೈರವೇಶ್ವರ'. ಇಲ್ಲಿ ಶಿವನಿಂದ ಬ್ರಹ್ಮನ ಶಿರಚ್ಛೇದನವಾದದ್ದು, ಆ ತಲೆ ಇವನ ಬೆರಳಿಗೆ ಅಂಟಿಕೊಂಡು ಬಾಧೆ ಕೊಟ್ಟದ್ದು ಅವನು ಚುಂಚನಗಿರಿಗೆ ಬಂದದ್ದು, ಲಕ್ಷ್ಮಿಯನ್ನು ಮದುವೆಯಾದದ್ದು- ಈ ಕಥೆಗಳ ನಿರೂಪಣೆ ಇದೆ.

ಮೂರನೆಯ ಅಧ್ಯಾಯದಲ್ಲಿ ಬಂಗಾರ ಗಿರಿಯಲ್ಲಿ ತಿಮ್ಮಪ್ಪ ಮತ್ತು ಭೈರವರು ಪಂಥಕಟ್ಟಿ ಪಗಡೆ ಆಡಿದ್ದು, ಭೈರವ ಸೋತು ಬಂಧಿಯಾದದ್ದು, ಅನಂತರ ತಪ್ಪಿಸಿಕೊಂಡು ತಿಮ್ಮಪ್ಪನ ಚಿನ್ನದ ತೇರನ್ನು ಕದ್ದುಕೊಂಡು ಚುಂಚನಗಿರಿಗೆ ಓಡಿಬಂದದ್ದು-ಈ ಕತೆಗಳ ನಿರೂಪಣೆ ಇದೆ. ನಾಲ್ಕನೆಯ ಅಧ್ಯಾಯದಲ್ಲಿ ಅರ್ಜುನ ಜೋಗಿ ಹಾಡಿನ ಗದ್ಯರೂಪವಿದೆ. ಕೊನೆಯ ಭಾಗದಲ್ಲಿ ಅರಣೀಯ ದೀಪಕರಾಜನ ಕತೆಯಿದೆ.

ಒಳ್ಳೆಯ ಕಥಾ ಸಂಗ್ರಹದಂತೆ ಓದಿಸಿಕೊಂಡು ಹೋಗುವ ಈ ಕೃತಿ ಸುಂದರವಾಗಿ ಮುದ್ರಿತವಾಗಿ ಚುಂಚನಗಿರಿಗೆ ಸಂಬಂಧಿಸಿದ, ಚಿತ್ರಗಳನ್ನೂ ಹೊಂದಿದೆ. ಹದಿನೈದು ರೂಪಾಯಿ ಬೆಲೆ ಇದಕ್ಕೆ ಹೆಚ್ಚಲ್ಲ.

5. ಚಾಮುಂಡಿ ಸಿರಿ ಚಾಮುಂಡಿ: ಡಾ. ಪಿ.ಕೆ. ರಾಜಶೇಖರ

ಇದು ಈ ಲೇಖಕರೇ ಹಿಂದೆ ಸಂಪಾದಿಸಿ ಪ್ರಕಟಿಸಿದ್ದ 'ಬೆಟ್ಟದ ಚಾಮುಂಡಿ'

ಜನಪದ ಪುರಾಣಕಾವ್ಯದ ವಚನರೂಪ. ಹಾಗೆಂದು ಲೇಖಕರೇ ಸ್ಪಷ್ಟಪಡಿಸಿದ್ದಾರೆ. ಈ ರೀತಿ ಗದ್ಯರೂಪಕ್ಕೆ ತರುವುದರ ಹಿಂದೆಯೂ ಸಾಮಾನ್ಯ ಜನ ಇದನ್ನು ಓದಿ ಸಂತೋಷಿಸಲು ಸಾಧ್ಯವಾಗಬೇಕು ಎಂಬ ಆಕಾಂಕ್ಷೆಯೇ ಇದ್ದಿರಬೇಕು. ಆ ಗುರಿ ಇಲ್ಲಿ ಸಾಧಿತವಾಗಿದೆ. ಸುಂದರವಾದ ಭಾಷಾ ಶೈಲಿ, ಕಾವ್ಯದಲ್ಲಿ ಪ್ರಯೋಗವಾಗಿರುವ ನುಡಿಗಟ್ಟುಗಳ ಬಳಕೆ, ಅಲ್ಲಿರುವ ಪುನರಾವರ್ತನೆಯನ್ನು ಇಲ್ಲಿ ಇಲ್ಲವಾಗಿಸಿರುವುದು ನಡುನಡುವೆ ಕಾವ್ಯ ಭಾಗದ ಉಲ್ಲೇಖ ಇಂಥ ಹಲವಾರು ಅಗತ್ಯ ತಂತ್ರಗಳ ಮೂಲಕ ಈ ಗದ್ಯಾನುವಾದ ತುಂಬ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಒಳ್ಳೆಯ ಕಾಗದ, ಉತ್ತಮ ಮುದ್ರಣ, ಸುಂದರ ಚಿತ್ರಗಳು ಈ ಪುಸ್ತಕದ ಆಕರ್ಷಣೀಯತೆಯನ್ನು ಹೆಚ್ಚಿಸಿವೆ. ಮೊದಲ ಅಧ್ಯಾಯದಲ್ಲಿ ಮೈಸೂರು ಸ್ಥಳನಾಮದ ವ್ಯುತ್ಪತ್ತಿ, ಅದು ಚಾಮುಂಡಿ ಕ್ಷೇತ್ರವಾಗಿ ಬೆಳೆದ ಬಗೆ, ಜೈನಯಕ್ಷಿಯು ಅನ್ಯರಿಂದ ನಾಶಗೊಳಿಸಲ್ಪಟ್ಟ ಅಥವಾ ಪರಿವರ್ತನಗೊಳಿಸಲ್ಪಟ್ಟ ಚಾಮುಂಡಿಯಾದ ರೀತಿ, ಆ ದೇವಸ್ಥಾನ ಅಭಿವೃದ್ಧಿ ಬಗೆ-ಇತ್ಯಾದಿಗಳನ್ನೆಲ್ಲ ಒಬ್ಬ ನುರಿತ ಅಧ್ಯಯನ ಶೀಲನ ಧಾಟಿಯಲ್ಲಿ ನಿರೂಪಿಸಿದ್ದಾರೆ. ಈ ಅಧ್ಯಾಯದ ಕೊನೆಯಲ್ಲಿ ಮೂಲ 'ಬೆಟ್ಟದ ಚಾಮುಂಡಿ' ಕಾವ್ಯದ ಸ್ವರೂಪ, ಮಾರ್ಪಾಟು ಮಾಡುವಾಗ ಅನುಸರಿಸಿದ ಮಾತ್ರಗಳು ಇತ್ಯಾದಿಗಳ ಬಗ್ಗೆ ಒಂದೆರಡು ಪುಟಗಳಷ್ಟು ಹೇಳಬೇಕಿತ್ತು. ಅದೇ ರೀತಿ ಆರಂಭದ ''ಸ್ನೇಹ ಸಂಜೀವಿನಿ'' ಎಂಬ ಭಾಗದಲ್ಲಿ ಸ್ನೇಹದ ಬಗೆಗೆ ವಿವಿಧ ಕವಿಗಳು ಹೇಳಿದ ಮಾತುಗಳ ಉಲ್ಲೇಖವಲ್ಲ ಅನಗತ್ಯವಾಗಿತ್ತು.

6. ಕರಪಾಲ ಬಸವ ಪುರಾಣ: (ಸಂ) ಡಾ. ಪಿ.ಕೆ. ರಾಜಶೇಖರ

ಸುದೀರ್ಘ ಜನಪದ ಕಾವ್ಯಗಳನ್ನು ಸಂಗ್ರಹಿಸಿ ಸಂಪಾದಿಸಿ ಕೊಡುವಲ್ಲಿ ಬಹುಶಃ ಡಾ. ರಾಜಶೇಖರ ಅವರ ಸಂಖ್ಯೆಯನ್ನು ಯಾರೂ ಸರಿಗಟ್ಟಿಲ್ಲವೇನೋ. ಇದು ಅವರ ನಿಷ್ಠೆಯೂ ಹೌದು. ಅದೃಷ್ಟವೂ ಹೌದು. 'ಮಲೆಯ ಮಾದೇಶ್ವರ'-ಜನಪದ ಮಹಾಕಾವ್ಯವನ್ನು ಸಂಗ್ರಹಿಸಿ ಸಂಪಾದಿಸಿ ಪ್ರಕಟಿಸಿದವರು ಅವರು. ಅನಂತರದಲ್ಲಿ - ಬೆಟ್ಟದ ಚಾಮುಂಡಿ, ಪಿರಿಯಾ ಪಟ್ಟಣದ ಕಾಳಗ, ಚುಂಚನಗಿರಿಯ ಭೈರವೇಶ್ವರ' ಇಂಥ ದೀರ್ಘ ಕಾವ್ಯಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಇದೇ ಸಾಲಿಗೆ ಸೇರುವಂಥ ಇನ್ನೊಂದು ಸುದೀರ್ಘ ಜನಪದ ಕಾವ್ಯವನ್ನೂ ಇವರು ಇದೀಗ ಪ್ರಕಟಿಸಿದ್ದಾರೆ. ಇದೇ ಕರಪಾಲ ಬಸವ ಪುರಾಣ.

ತುಮಕೂರು ಜಿಲ್ಲೆಯ ತುರುವೇಕೆರೆ ತಾಲೂಕಿನ ಕರಪಾ ತಿಮ್ಮಪ್ಪ ಎಂಬ ಕಲಾವಿದರು ಹೇಳಿದ ಕರಪಾಲ ಶೈಲಿಯ ಬಸವ ಪುರಾಣ ಈ ಕೃತಿ. ಹದಿಮೂರು ವರ್ಷಗಳ ಹಿಂದೆ ಅವರಿಂದ ಸಂಪಾದಕರು ಇದನ್ನು ಸಂಗ್ರಹಿಸಿದರು. 1995ರಲ್ಲಿ ಗದುಗಿನ ಶ್ರೀ ತೋಂಟರಾಧ್ಯ ಮಠದಿಂದ ಇದು ಪ್ರಕಟವಾಯಿತು.

ಈ ಕರಪಾಲ ಬಸವ ಪುರಾಣಕ್ಕೆ ಶಿಷ್ಟ ಕಾವ್ಯ ಬಸವ ಪುರಾಣವೇ ಆಧಾರ. ಆದರೆ ಇದು ಅದರ ನಕಲಲ್ಲ. ಕಥೆಯ ನಿರೂಪಕರಾದ ಕರಪಾಲ ಕಲಾವಿದ ತಿಮ್ಮಪ್ಪನವರು

ಪುನರ್ ರೂಪಿಸಿಕೊಂಡಿರುವ ಪಠ್ಯವಿದು. ಏಕಮುಖಿ ನಿರೂಪಣೆಯಲ್ಲಿ ಸಾಗುವ ಶಿಷ್ಟ ಕಾವ್ಯವೊಂದಕ್ಕೆ ನಮ್ಮ ಜನಪದ ಗಾಯಕರು ಎಷ್ಟು ಚೆನ್ನಾಗಿ ನಾಟಕೀಯ ಸ್ವರೂಪ ಕೊಡಬಲ್ಲರೆಂಬುದನ್ನು ಈ ಕೃತಿ ಸಾರಿ ಹೇಳುತ್ತದೆ. ಮೂಲ ಬಸವ ಪುರಾಣದ ಜೊತೆಗೆ ಇಲ್ಲಿ ತಿಮ್ಮಪ್ಪನವರು-ಸರ್ವಜ್ಞನ ಪದಗಳು, ಶರಣರ ವಚನಗಳು, ನೀತಿಶತಕ, ಸಿನಿಮಾ ಹಾಡುಗಳು, ಪ್ರಸಿದ್ಧವಾದ ಲಿಂಗಾಷ್ಟಕ, ಇತ್ಯಾದಿ ಹಲವು ಮೂಲಗಳಿಂದ ಉಚಿತ ಸಾಮಗ್ರಿಗಳನ್ನು ಸೇರಿಕೊಂಡು ಶಿಷ್ಯರೊಡನೆ ಸಂಭಾಷಣೆ ಮಾಡುತ್ತಾ ತುಂಬ ನಾಟಕೀಯ ಶೈಲಿಯಲ್ಲಿ ಕಥೆಯನ್ನು ನಿರೂಪಿಸಿದ್ದಾರೆ. ಅದನ್ನು ಸಂಪಾದಕರು ಹಾಗೆಯೇ ಬರೆದುಕೊಂಡು ಅಚ್ಚಿಗೆ ಸಿದ್ಧಪಡಿಸಿದ್ದಾರೆ. ಕೃತಿ ಆಕರ್ಷಕವಾಗಿದ್ದು ಓದಿಸಿಕೊಂಡು ಹೋಗುತ್ತದೆ.

ಎಲ್ಲ ಸರಿ. ಆದರೆ ಸಂಪಾದನಾ ಕಾರ್ಯಕ್ಕೆ ಸಂಬಂಧಿಸಿದಂತೆ ಒಂದೆರಡು ಮಾತುಗಳನ್ನು ಹೇಳಬೇಕೆನಿಸುತ್ತದೆ. ಕೆಲವು ಕಡೆ ವಚನಗಳನ್ನು ಕಲಾವಿದ ಹಾಡುವಾಗ ತಪ್ಪಾಗಿದೆ. ಇನ್ನು ಕೆಲವು ಕಡೆ (ಉದಾ- ಪುಟ 40 ಮತ್ತು 41) ವಚನಗಳನ್ನು ಸೂಕ್ತವಲ್ಲದ ಸಂದರ್ಭಗಳಿಗೆ ಬಳಸಲಾಗಿದೆ. ಅದೇರೀತಿ ಸಂಸ್ಕೃತ ಶ್ಲೋಕಗಳನ್ನೂ ಕೆಲವೆಡೆ ಅಷ್ಟೇನೂ ಉಚಿತವಲ್ಲದ ಸನ್ನಿವೇಶಗಳಲ್ಲಿ ತುರುಕಲಾಗಿದೆ. ಉದಾ.ಗೆ 50ನೇ ಪುಟದಲ್ಲಿ 'ಗರ್ಭಿಣಿ ಸ್ತ್ರೀಯರು ಉಚಿತವಾದ ಮಿತಾಹಾರವನ್ನು ಸೇವಿಸಬೇಕೇ ವಿನ: ಪಿಷ್ಠ ಪದಾರ್ಥಗಳನ್ನು ಸೇವಿಸಬಾರದು. ಕಾರಣವೇನೆಂದರೆ-'ಎಂದು ನಿರೂಪಕ ಹೇಳಿ ಜನ್ಮಕುಂಡಲಿಯನ್ನು ಬರೆಯುವಾಗ ಆರಂಭದಲ್ಲಿ ಬರೆಯುವ ''ಜನನೀ ಜನ್ಮ ಸೌಖ್ಯಾನಾಂ ವರ್ಧಿನೀ ಕುಲ ಸಂಪದೇ....'' ಎಂಬ ಶ್ಲೋಕವನ್ನು ಉಲ್ಲೇಖಿಸುತ್ತಾನೆ. ಈ ಶ್ಲೋಕಕ್ಕೂ ಸನ್ನಿವೇಶಕ್ಕೂ ಸಂಬಂಧವಿಲ್ಲ. ಕಲಾವಿದನಿಗೇನೋ ರಸವತ್ತಾಗಿ ಕತೆಯ ನಿರೂಪಣೆ ಮಾಡುವುದೊಂದೇ ಗುರಿ. ಸಾಮಾನ್ಯ ಜನ ಮಾತ್ರ ಅವನ ದೃಷ್ಟಿಯಲ್ಲಿರುತ್ತಾರೆ. ಆಯಾ ಸಂದರ್ಭಕ್ಕೆ ನೆನಪಿಗೆ ಬಂದುದನ್ನು ಆತ ಹೇಳುತ್ತಿರುತ್ತಾನೆ. ಆದರೆ ಸಂಪಾದಕರು ಇಂಥ ವಿಚಾರಗಳನ್ನು ಗಮನಿಸಿ ಅಡಿಟಿಪ್ಪಣಿಯಲ್ಲಿ ಕಾಣಿಸುವುದು ಉಚಿತ. ಕೆಲವು ಸಿನಿಮಾ ಹಾಡುಗಳನ್ನು ಕುರಿತಂತೆ ಸಂಪಾದಕರು ಹೀಗೆ ಸೂಚಿಸಿದ್ದಾರೆ. ಉಳಿದಂತೆ ಯಾವ ಬಗೆಯ ಅಡಿಟಿಪ್ಪಣಿಗಳೂ ಗ್ರಂಥದಲ್ಲಿಲ್ಲ. ಅಧ್ಯಯನಕಾರರಿಗೆ ಸುಲಭವಾಗುವಂತೆ ಕೆಲವು ಅಡಿಟಿಪ್ಪಣಿಗಳು ಅಗತ್ಯವಿದ್ದವು.

ಉಳಿದ ವಿಚಾರಗಳಿಗೆ ಸಂಬಂಧಿಸಿದಂತೆ ಸಂಪದನಾ ಕಾರ್ಯ ಸಮರ್ಪಕವಾಗಿದೆ. ಆರಂಭದಲ್ಲಿ ದೀರ್ಘವಾದ ವಕ್ತೃ ವಿವರವಿದೆ. ಪ್ರಸ್ತಾವನೆಯಲ್ಲಿ ಕರಪಾಲ ಕಲೆ, ಕರಪಾಲ ಮೇಳಗಳ ಬಗೆಗೆ ಅಗತ್ಯ ವಿವರಗಳಿವೆ. ಅಂಗೈ ಹಾಗೂ ಬೆರಳುಗಳ ಕುಣಿತದ ಮೂಲಕ (ಅವುಗಳಿಗೆ ಮುಖವಾಡಗಳನ್ನೂ ತೊಡಿಸಿ) ಕಥೆಗಳನ್ನು ಪ್ರದರ್ಶಿಸುವ ಕಲೆ ಜೆಕೊಸ್ಲಾವಾಕಿಯಾದಂಥ ದೇಶದಲ್ಲೂ ಶತಮಾನಗಳಿಂದ ಇದೆ. ಇಂಥ ಅಂಶಗಳನ್ನೂ ನಾವು ಗಮನಿಸಬೇಕು.

ಒಟ್ಟಿನಲ್ಲಿ ಒಳ್ಳೆಯ ಒಂದು ಜನಪದ ಕಾವ್ಯವನ್ನು ಸಂಪಾದಿಸಿಕೊಟ್ಟಿರುವುದಕ್ಕಾಗಿ ಲೇಖಕರನ್ನು ಅಭಿನಂದಿಸಬೇಕು.

ಅನುಬಂಧ

ತಡವಾಗಿ ದೊರೆತ ಪುಸ್ತಕ

ಕೋಣ್ಣೂರ ಶ್ರೀ ಕರಿಸಿದ್ಧೇಶ್ವರ ದೇವರು: ಡಾ. ಶ್ರೀ ರಾಮ ಇಟ್ಟಣ್ಣವರ

ಪ್ರ: ನಿಂಗಪ್ಪ ಕರಿಯಪ್ಪ ಪೂಜೇರ, ಬೀಳಾಗಿ, ಬಿಜಾಪುರ ಜಿಲ್ಲೆ.
ಪುಟಗಳು 62+13 ಬೆಲೆ ರೂ. 15-00

ಬಿಜಾಪುರ ಜಿಲ್ಲೆಯ ಕೋಣ್ಣೂರು ಗ್ರಾಮದಲ್ಲಿರುವ ಕರಿಸಿದ್ದೇಶ್ವರ ದೇವರು ಕುರುಬ ಜನಾಂಗದವರ ಆರಾಧ್ಯ ದೈವ. ಈ ದೇವಸ್ಥಾನದ ಕುರಿತಾದ ಐತಿಹ್ಯಗಳು. ಇಲ್ಲಿ ನಡೆಯುವ ಆರಾಧನೆಗಳು, ಬಕ್ತರಲ್ಲಿ ಈ ಕುರಿತು ಇರುವ ನಂಬಿಕೆಗಳು, ಜಾತ್ರೆ-ಇತ್ಯಾದಿ, ದೇವರು-ದೇವಸ್ಥಾನ, ಹಾಗೂ ಅನುಸರಿಸುವ ಭಕ್ತಸಮೂಹ ಇವುಗಳನ್ನು ಕುರಿತ ನೂರಾರು ವಿವರಗಳನ್ನು ಇಲ್ಲಿ ವರ್ಗೀಕರಿಸಿ ವಿವಿಧ ಅಧ್ಯಾಯಗಳಲ್ಲಿ ನೀಡಲಾಗಿದೆ. ಈ ವಿವರಗಳನ್ನು ಕುರಿತ ವಿಶ್ಲೇಷಣೆ ಇಲ್ಲಿಲ್ಲ. ಆದರೆ ಅದು ಲೇಖಕರು ಉದ್ದೇಶವೂ ಅಲ್ಲ ಎಂಬುದನ್ನು ಅವರು ಆರಂಭದಲ್ಲಿಯೇ ಸ್ಪಷ್ಟಪಡಿಸಿದ್ದಾರೆ. ಮನಸ್ಸು ಮಾಡಿದ್ದರೆ ಅವರು ಈ ವಿಶ್ಲೇಷಣೆ ನಡೆಸಲು ಆರಂಭದಲ್ಲಿಯೇ ಸಾಧ್ಯವಿತ್ತು. ಆದರೆ ಒಂದು ದೇವಸ್ಥಾನದ ಪೂಜಾರಿಗಳು ಪ್ರಕಟಿಸುವ, ಭಕ್ತರ ನಡುವೆ ಮಾರಾಟಕ್ಕೆಂದೇ ಉದ್ದೇಶಿತವಾದ ಒಂದು ಪುಸ್ತಕದಲ್ಲಿ ಈ ಬಗೆಯ ವಸ್ತುನಿಷ್ಠ ವಿಶ್ಲೇಷಣೆ ಕೊಡುವುದು ಸಾಧ್ಯವಿಲ್ಲ. ಆದ್ದರಿಂದ ಲೇಖಕರು ಕೇವಲ ಆಚರಣೆ, ಐತಿಹ್ಯಗಳ ಮಾಹಿತಿಗಳನ್ನಷ್ಟೇ ನೀಡಿ ವ್ರತ ಕೆಡದಂತೆ ತಮ್ಮನ್ನು ಕಾಪಾಡಿಕೊಂಡಿದ್ದಾರೆ.

ಆದರೆ ಇಲ್ಲಿ ನೀಡಲಾಗಿರುವ ಮಾಹಿತಿಗಳು ಸಂಶೋಧಕರಿಗೆ ಆಧಾರವಾಗಬಲ್ಲ ಮೂಲಭೂತ ಮಾಹಿತಿಗಳಾಗಿವೆ. ಕುರುಬ ಜನಾಂಗದ ಸಾಂಸ್ಕೃತಿಕ ಅಧ್ಯಯನಕ್ಕೆ, ಉಳಿದ ಜನಾಂಗಗಳವರೊಡನೆ ಆಚರಣೆಗಳ ತೌಲನಿಕ ಅಧ್ಯಯನಕ್ಕೆ ಇಲ್ಲಿರುವ ಮಾಹಿತಿಗಳು ತುಂಬ ನೆರವಾಗಬಲ್ಲವು.

ಪುಸ್ತಕದ ಕೊನೆಯಲ್ಲಿ ಈ ದೇವರಿಗೆ ಸಂಬಂಧಿಸಿದ ಕೆಲವು ಜನಪದ ಗೀತೆಗಳನ್ನು ನೀಡಿದ್ದಾರೆ. ಆಯಾ ಗೀತೆಯ ವಕ್ತೃ ಯಾರೆಂಬುದನ್ನೂ ತಿಳಿಸಿದ್ದಾರೆ. ಆದರೆ ಅಷ್ಟೇ ಸಾಲದು ವಕ್ತೃವಿನ ವಯಸ್ಸು, ಸಂಗ್ರಹಿಸಿದ ದಿನಾಂಕ, ವಕ್ತೃ ಇದನ್ನು ಯಾರಿಂದ ಎಷ್ಟು ವರ್ಷಗಳ ಹಿಂದೆ ಕಲಿತರು-ಎಂಬಂಥ ವಿವರಗಳೂ ಅಗತ್ಯ.

ಒಂದು ಜಾನಪದ ದೈವ, ಅದರ ಗುಡಿ, ಅದಕ್ಕೆ ಹೊಂದಿಕೊಂಡ ಆಚರಣೆಗಳು ಮನೋಭಾವಗಳ ಬಗೆಗೆ ಎಲ್ಲ ಪ್ರಾಥಮಿಕ ಅಂಶಗಳನ್ನು ನೀಡುವ ಕೃತಿ ಇದೆಂದು ಹೇಳಬಹುದು.

ಅನುಬಂಧ - 1

ಜಾನಪದ ಗ್ರಂಥಸೂಚಿ - 1995

ಮಾಹಿತಿ ಅನುಕ್ರಮಣಿಕೆ-ಪುಸ್ತಕದ ಹೆಸರು, ಲೇಖಕರ ಹೆಸರು, ಪ್ರಕಾಶಕರು, ಆಕಾರ, ಪುಟಸಂಖ್ಯೆಯ, ಬೆಲೆ)

ಜಾತ್ರೆಗಳು

(ಎಲ್ಲ ಕ.ಜಾ.ಯ. ಅಕಾಡೆಮಿಯ ಪ್ರಕಟಣೆಗಳು, ಡೆಮಿ ಅಷ್ಟದಳ ಆಕಾರ, ಬೆಲೆ-ತಲಾ ಹತ್ತು ರೂ.)

1. ದೇವರ ಗುಡ್ಡ-ಡಾ. ಎಸ್.ಎಸ್. ಭದ್ರಾಪೂರ. 12+79.
2. ಸವದತ್ತಿ ಎಲ್ಲಮ್ಮ - ಡಾ. ಕಮಲಾ ಹೆಮ್ಮಿಗೆ. 12+47.
3. ಹೆತ್ತಗೋನಹಳ್ಳಿ ಮಾಯಮ್ಮ - ಎಚ್.ಆರ್. ಚೇತನ, 12+48.
4. ಮಲೆಯ ಮಾದೇಶ್ವರ - ಡಾ. ಬಿ.ಎಸ್. ಸ್ವಾಮಿ, 12+79.
5. ಮಧುಗಿರಿಯ ದಂಡಿನ ಮಾರಮ್ಮ-ಎಂ.ಎಲ್. ನರಸಿಂಹಮೂರ್ತಿ, 12+88
6. ಇಂಡವಾಳು ಹಿರಿಯಮ್ಮ-ಡಾ. ಡಿ.ಎ. ಗಿರಿಜಮ್ಮ 12+89
7. ವೀರಭದ್ರ-ಡಾ. ಜಗನ್ನಾಥ ಹೆಬ್ಬಾಳೆ, 12+80

ಸಂಶೋಧನೆ ವಿಮರ್ಶೆ

8. ಕಾಡು, ಕಾಂಕ್ರೀಟ್ ಮತ್ತು ಜಾನಪದ - ಹಿ.ಚಿ. ಬೋರಲಿಂಗಯ್ಯ, ಅಕ್ಷರ ಪ್ರಕಾಶನ ಹೆಗ್ಗೋಡು, ಶಿವಮೊಗ್ಗ ಜಿಲ್ಲೆ, ಡೆಮಿ 1/8, 8+112, ರೂ. 30-00
9. ಕರ್ನಾಟಕದ ಹೆಳವರು, ಒಂದು ಜಾನಪದೀಯ ಅಧ್ಯಯನ-ಡಾ. ಹರಿಲಾಲ್ ಕೆ. ಪವಾರ್ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಡೆಮಿ 1/8, 8+220, ರೂ. 34-00.

10. ಕೊಣ್ಣೂರು ಕರಿಸಿದ್ದೇಶ್ವರ ದೇವರು - ಡಾ. ಶ್ರೀರಾಮ ಇಟ್ಟಣ್ಣವರ, ನಿಂಗಪ್ಪ ಕರಿಯಪ್ಪ (ಜಾನಪದ ಅಧ್ಯಯನ) ಪೂಜಾರ. ಕರಿಸಿದ್ದೇಶ್ವರ ಪೂಜಾರಿಗಳು, ಕೊಣ್ಣೂರು (ಬಿಜಾಪುರ ಜಿಲ್ಲೆ) ಪು. 62. ರೂ. 20-00

11. ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ-ಡಾ. ಎಂ.ಜಿ. ಈಶ್ವರಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಡೆಮಿ 1/8, 8+356, ರೂ. 48.00

12. ಜಾತ್ರೆಗಳ ಒಂದು ಜಾನಪದೀಯ ಅಧ್ಯಯನ - ಡಾ. ಚಂದ್ರಶೇಖರ ದಾಮ್ಲೆ, ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ ಉಡುಪಿ. ಕ್ರೌನ್ 1/8, 1 2+159, ರೂ. 50-00

13. ಜಾನಪದ-1992. ಸಂ. ಡಾ. ವೀರಣ್ಣ ದಂಡೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ಡೆಮಿ 1/8, 12+304, ರೂ. 35-00

14. ಕೋಟದವರು-ಡಾ. ಪಾ.ನ. ಮಯ್ಯ (ವಿವರಗಳು ತಿಳಿದಿಲ್ಲ).

15. ತೇರದಾಳದ ಲಾವಣಿಕಾರರು-ಡಾ. ಸಂಗಮೇಶ ಬಿರಾದಾರ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಡೆಮಿ 1/8, 7+107, ರೂ. 25-00

16. ಬಯಲಾಟ ಪದಗಳಲ್ಲಿ ಸಂಸ್ಕೃತಿ - ಡಾ. ಕೆ.ಆರ್. ದುರ್ಗಾದಾಸ್, ಪ್ರಸಾರಂಗ, ಕರ್ನಾಟಕ ವಿ.ವಿ. ಧಾರವಾಡ, ಫುಲ್‌ಸ್ಕೇಪ್ 1/8: 7+41, ರೂ. 2-00

17. ಬಂಡಾಯ ಜಾನಪದ - ರಂಗಾರೆಡ್ಡಿ ಕೋಡಿರಾಂಪುರ, ಕ.ಜಾ.ಯ ಅಕಾಡೆಮಿ ಕ್ರೌನ್ 1/8, 7+184, ರೂ. 35-00

18. ಬಂಟರ ಮೂಲ, ಅಧ್ಯಯನ-ಶಿರೂರು ಶಿವರಾಮ ಶೆಟ್ಟಿ, ಬಂಟರ ಯಾನೆ ನಾಡವರ ಸಂಘ, ಮಂಗಳೂರು, ರೂ. 100-00

19. ಮ್ಯಾಸ ನಾಯಕರು, ಒಂದು ಜನಾಂಗಿಕ ಅಧ್ಯಯನ-ಡಾ. ಕರಿಶೆಟ್ಟಿ ರುದ್ರಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಡೆಮಿ 1/8, 8+200, ರೂ. 30.00

20. ಯಡಕುಂಟೆ ಗಣೆಸಾಲು-ಎಸ್.ಜಿ. ಸಿದ್ದರಾಮಯ್ಯ, ಅನ್ವೇಷಣೆ ಪ್ರಕಾಶನ, ವಿಜಯನಗರ, ಬೆಂಗಳೂರು ಕ್ರೌನ್ 1/8, 214, ರೂ. 50-00

21. ಯಕ್ಷವಿಂಶತಿ-ಸಂ. ಡಾ. ಪಿ.ಪಿ. ಅತಿಕಾರಿ, ಎಚ್.ವಿ. ನರಸಿಂಹಮೂರ್ತಿ, ಭಂಡಾರಕಾರ್ಸ್ ಆರ್ಟ್ ಮತ್ತು ಸಾಯನ್ಸ್ ಕಾಲೇಜು, ಕುಂದಾಪುರ, ಡೆಮಿ, 1/8, 14+201 ರೂ. 80-00.

22. ಯಕ್ಷಗಾನ ಪರಿಶೀಲನ-ಜಿ.ಎಸ್. ಭಟ್ಟ ಕ.ಜಾ.ಯ ಅಕಾಡೆಮಿ ಡೆಮಿ 1/8, 12+36, ರೂ. 35-00.

23. ಯಕ್ಷಗಾನ ಹಸ್ತಾಭಿನಯ ದರ್ಪಣ, - ಡಾ. ಜಿ.ಎಸ್. ಹೆಗಡೆ, ಕ.ಜಾ.ಯ ಅಕಾಡೆಮಿ, ಡೆಮಿ 1/8, 60, ರೂ. 15-00

24. ಸಂಸ್ಕೃತಿ ವಿಕಾಸ-ಡಾ. ನಂ. ತಪಸ್ವೀಕುಮಾರ್, ಭಾರತೀ ಪ್ರಕಾಶನ, ಮೈಸೂರು-9, ಡೆಮಿ 1/8, 370. ರೂ. 65-00

25. ಸಿರಿ-(ಅಮೃತ ಸೋಮೇಶ್ವರ ಅಭಿನಂದನಾ ಸಂಪುಟ) ಸಂ-ಪುರುಷೋತ್ತಮ ಬಿಳಿಮಲೆ, ಎ.ವಿ. ನಾವಡ, ರಾಮಚಂದ್ರ ಉಚ್ಚಿಲ, ಕಲಾಗಂಗೋತ್ರಿ, ಸೋಮೇಶ್ವರ ಉಚ್ಚಿಲ, ಮಂಗಳೂರು-ಡೆಮಿ 1/4. 12+478, ರೂ. 350.00

26. ಸೀಮೆ-ಸಂ. ಅರಣಕುಮಾರ್. ಎಸ್.ಆರ್., ಜಾನಪದ ಸಂಘ ವಿಜಯ ಕಾಲೇಜು, ಮುಲ್ಕಿ, ದ.ಕ. 12+121 ರೂ. 30.00

26 B. ಗೊಳಸಂಗಿಶ್ರಮ ಸಂಸ್ಕೃತಿ ಅಧ್ಯಯನ-ಡಾ. ಅರ್ಜುನ ಯ. ಗೊಳಸಂಗಿ. ಪ್ರ: ಮಲ್ಲಿಕಾರ್ಜುನ ಪ್ರಕಾಶನ, ಗೆಳಸಂಗಿ-586231, (ಬಿಜಾಪುರ ಜಿಲ್ಲೆ) ರೂ. 45.00

ಸಂಗ್ರಹಗಳು

27. ಜನಪದ ಒಡಪುಗಳು - ಸಂ. ಬಿ.ಎಸ್. ಭಜಂತ್ರಿ, ಚೈತನ್ಯ ಪ್ರಕಾಶನ, ಪಂಚಗಾಂವ, 591130, ಕ್ರೌನ್ 1/8, 8+28+74. ರೂ. 20-00

28. ಕನ್ನಡ ಗಾದೆಗಳು-ಸಂ. ಡಾ. ಎಲ್.ಆರ್. ಹೆಗಡೆ, ಜ್ಞಾನಸಾಧನ ಗ್ರಂಥಮಾಲೆ - ಸಿದ್ದಾಪುರ (ಉ.ಕ.) ಕ್ರೌನ್ 1/8, 60, ರೂ. 12-00

29. ದುಂಡಮಲ್ಲಿಗಿ ಹೂವ ಬುಟ್ಟಿಲಿ ಬಂದಾವ, (ಉತ್ತರ ಕರ್ನಾಟಕದ ಜನಪದರ ಗೀತೆಗಳು) ಸಂ-ಎಚ್. ಎಲ್. ನಾಗೇಗೌಡ, ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು-20, ಕ್ರೌನ್ 1/8, 22+268, ರೂ. 60-00.

30. ಹೂವು ಬಿದ್ದಾವ ನೆಲಕ (ಸಂಪ್ರದಾಯದ ಪದಗಳು)-ಸಂ.ಡಾ.ಕಮಲ ಹೆಮ್ಮಿಗೆ, ಪ್ರಭಾ, ಪಬ್ಲಿಷನ್ಸ್ ಧಾರವಾಡ, ಕ್ರೌನ್ 1/8, 70, ರೂ. 40-00.

31. ಜಾನಪದ ಕಥಾವಳಿ (ಜನಪದ ಕತೆಗಳು) - ಸಂ. ಡಾ. ಎಚ್.ಜಿ. ಲಕ್ಕಪ್ಪ ಗೌಡ, ಲಕ್ಷ್ಮೀ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು-1, ಕ್ರೌನ್ 1/8, ಪು. 250, ಬೆಲೆ ರೂ. 40-00.

32. ಸಂಕಥಾ (ಜನಪದ ಕಥೆಗಳು) - ಸಂ. ಡಾ. ಪ್ರಣೂರ್ತಿರಹನ್: ಸಮುದಾಯ ಅಧ್ಯಯನ ಕೇಂದ್ರ ಮೈಸೂರು-2, ಕ್ರೌನ್ 1/8, 18+200, ರೂ. 50.00

ಜೀವನ ಚರಿತ್ರೆ, ಆತ್ಮಕಥೆ ಸಂಸ್ಮರಣ ಗ್ರಂಥಗಳು

33. ಶ್ರೀಕಂಠೇಶಗೌಡರ ಜಾನಪದ ಕೊಡುಗೆ. (ಸಂಸ್ಮರಣ ಗ್ರಂಥ)
ಸಂ. ವ.ನಂ. ಶಿವರಾಮು, ಹ.ಕ. ರಾಜೇಗೌಡ, ಕ.ಜಾ.ಯ ಅಕಾಡೆಮಿ, ಬೆಂಗಳೂರು, ಡೆಮಿ 1/8, 190, ರೂ. 30-00

34. ಜೀಶಂಪ ಸಂಸ್ಮರಣೆ (ಸಂಸ್ಮರಣ ಗ್ರಂಥ)
ಸಂ. ಎಚ್.ಟಿ. ಲಕ್ಕಪ್ಪ ಗೌಡ; ಕ.ಜ.ಯ. ಅಕಾಡೆಮಿ, ಬೆಂಗಳೂರು, ಡೆಮಿ 1/8 12+184; ರೂ. 40-00

35. ಡಾ. ಎಂ.ವಿ. ಸುಂಕಾಪೂರ (ಜೀವನ ಚರಿತ್ರೆ)
ಎಂ.ಎಸ್. ಲಠ್ಠೆ; ಕ.ಜ.ಯ. ಅಕಾಡೆಮಿ, ಬೆಂಗಳೂರು, ಡೆಮಿ 1/8, 84, ರೂ. 15-00.

36. ವ್ಲಾಬಿಮಿರ್ ಜೆ. ಪ್ರಾಪ್ (ಜೀವನ ಚರಿತ್ರೆ)

ಡಾ. ಅಂಬಳಿಕೆ ಹಿರಿಯಣ್ಣ; ಕ.ಜ.ಯ. ಅಕಾಡೆಮಿ, ಬೆಂಗಳೂರು, ಡೆಮಿ 1/8, 7+72, ರೂ. 15-00

37. ನೆನಪಿನ ರಂಗಸ್ಥಳ (ಆತ್ಮಕಥನ) - ಕೆರೆಮನೆ ಶಿವರಾಮ ಹೆಗಡೆ, ನಿರೂಪಣೆ- ಡಾ. ಜಿ.ಎಸ್. ಭಟ್ಟ, ಅಕ್ಷರ ಪ್ರಕಾಶನ-ಹೆಗ್ಗೋಡು, ಡೆಮಿ 1/8, ಪುಟಗಳು - 12+136, ರೂ. 55-00

ಸಂಕೀರ್ಣ (ಕಾವ್ಯ ಮತ್ತು ವೈದ್ಯ)

38. ಊರೌಷಧಿಗಳ ಚಿಕಿತ್ಸೆ- ಡಾ. ಎಲ್.ಆರ್. ಹೆಗಡೆ, ಜ್ಞಾನ ಜ್ಯೋತಿ ಪ್ರಕಟಣೆಗಳು, ಸಿದ್ದಾಪುರ, (ಉ.ಕ.), ಕ್ರೌನ್ 1/8, 210 ಪುಟಗಳು, ರೂ. 38.00

39. ಪಶುವೈದ್ಯ ರತ್ನಾಕರ - ಡಾ. ಎಲ್. ಆರ್. ಹೆಗಡೆ,
ಸಾಹಿತ್ಯ ಪ್ರಕಾಶನ, ದಾಜಿಬಾನೆ ಪೇಟೆ-ಹುಬ್ಬಳ್ಳಿ, ಕ್ರೌನ್ 1/8, ಪು-180, ರೂ. 42.00

40. ಚಾಮುಂಡಿ ಸಿರಿ ಚಾಮುಂಡಿ - (ಜನಪದ ಪುರಾಣಕಾವ್ಯದ ವಚನರೂಪ) ಡಾ.ಪಿ.ಕೆ. ರಾಜಶೇಖರ, ಹೊನ್ನಾರು ಜನಪದ ಗಾಯಕರು, ಎಲ್-24 ಮಾನಸಗಂಗೋತ್ರಿ, ಮೈಸೂರು-7 ಕ್ರೌನ್ 1/8, 16+116; 24-00

41. ಸಿರಿ ಚುಂಚನಗಿರಿ (ಜನಪದ ಕಾವ್ಯದ ವಚನ ರೂಪ) ಡಾ.ಪಿ.ಕೆ. ರಾಜಶೇಖರ, ಹೊನ್ನಾರು ಜನಪದ ಗಾಯಕರು, ಎಲ್-24 ಮಾನಸಗಂಗೋತ್ರಿ, ಮೈಸೂರು-7 ಕ್ರೌನ್ 1/8, 8+88, ರೂ. 15-00

42. ಮಾಯಾ ಕೋಲಾಹಲ (ಯಕ್ಷಗಾನ) - ಮಂಜುನಾಥ ಭಾಗವತ ಹೊಸ್ತೋಟ, ವೀರಶೈವ ಅಧ್ಯಯನ ಸಂಸ್ಥೆ, ಗದಗ. ಡೆಮಿ 1/8; 6+42. ರೂ.20-00

43. ಕರಪಾಲ ಬಸವ ಪುರಾಣ - ಸಂ.ಡಾ.ಪಿ.ಕೆ. ರಾಜಶೇಖರ, ಮಧುರಚೈತ್ರ ಪ್ರಕಾಶನ,
ಸಣ್ಣಯ್ಯನವರ ಬೀದಿ, ಪಿರಿಯಾಪಟ್ಟಣ, ಮೈಸೂರು ಜಿಲ್ಲೆ, ಡೆಮಿ 1/8, 24+136, ರೂ. 45-00.

ಮಾನವಪದ ಶಾಸ್ತ್ರ :

ಲೇ: ಎಸ್.ಎಸ್. ಹಿರೇಮಠ, ಪ್ರ: ಸಮತಾ ಪ್ರಕಾಶನ, ಮುದಿಯಪ್ಪನ ಗುಡಿ ಹತ್ತಿರ, ಹೊಸಪೇಟೆ. ಪುಟ 139; ಬೆಲೆ ರೂ. 40-00.

ಇದೊಂದು ಶುದ್ಧಶಾಸ್ತ್ರ ಚರ್ಚೆಯ ಕೃತಿ. 'ಜಾನಪದ' ಅಥವಾ 'ಜಾನಪದ ಶಾಸ್ತ್ರ' ಎಂಬ ಶಬ್ದಗಳು ತಾವು ಅಧ್ಯಯನಿಸಬೇಕಾಗಿರುವುದೆಲ್ಲವನ್ನೂ ಸಮಗ್ರವಾಗಿ ಸೂಚಿಸುವುದಿಲ್ಲವೆಂದೂ ಅದಕ್ಕಾಗಿ ಅವುಗಳ ಬದಲಿಗೆ 'ಮಾನವಪದ ಶಾಸ್ತ್ರ' ಎಂಬುದನ್ನು ಪಾರಿಭಾಷಿಕವಾಗಿ ಬಳಸಬೇಕೆಂದೂ ಲೇಖಕರು ಸೂಚಿಸುತ್ತಾರೆ. ಈ ಮಾನವಪದಶಾಸ್ತ್ರದ ಅಂತರ್ಗತವಾಗಿ- ಗಿರೀಪದ, ಜನಪದ, ಜಾನಪದ, ಸಮಾಜೀಯ ಪದ ಎಂಬುದೆಲ್ಲ ಬರುತ್ತವೆಂದೂ ಹೇಳಿ ಅವುಗಳಿಗೆ ತಾವು ನೀಡುವ ಅರ್ಥ ಪರಿಕಲ್ಪನೆಗಳನ್ನು ವಿವರಿಸುತ್ತಾರೆ.

ಲೇಖಕರ ಚಿಂತನೆ ಹಾಗೂ ಪ್ರಾಮಾಣಿಕತೆಗಳನ್ನು ನಾವು ಮೆಚ್ಚಬಹುದಾದರೂ ಅವರು ಸೂಚಿಸುವ ಪಾರಿಭಾಷಿಕಗಳನ್ನೂ ಮೆಚ್ಚಿಕೊಳ್ಳುವುದು ಕಷ್ಟವಾಗುತ್ತದೆ. ಇದಕ್ಕೆ ಇರುವ ಕಾರಣಗಳು ಹಲವು. ಮೊದಲನೆಯದಾಗಿ - 'ಮಾನವಪದ ಶಾಸ್ತ್ರ' ಎಂದು ಯಾವುದಕ್ಕೆ ಹೇಳಬೇಕೆಂದು ಲೇಖಕರು ವಾದಿಸುತ್ತಾರೋ, ಆ ಎಲ್ಲ ಅರ್ಥವನ್ನೂ 'ಜಾನಪದ ಶಾಸ್ತ್ರ' ಎಂಬುದು ಈಗ ನೀಡುತ್ತಿದೆ. ಅಂದರೆ ಈ ಶಬ್ದ ತನ್ನ ಅರ್ಥವ್ಯಾಪ್ತಿಯನ್ನು ಈ ಅಧ್ಯಯನವು ವಿಸ್ತಾರಗೊಂಡಂತೆ ತಾನಾಗಿ ಹಿಗ್ಗಿಸಿಕೊಂಡಿದೆ. ಹೀಗೆ ಶಬ್ದದ ಅರ್ಥ ವಿಶಾಲಗೊಳ್ಳುವುದು, ಅಥವಾ ಸಂಕುಚಿತಗೊಳ್ಳುವುದು ಕಾಲಸಹಜವಾದ ಒಂದು ಪ್ರಕ್ರಿಯೆ. ಎರಡನೆಯದಾಗಿ - ನಾವು ಉಪಯೋಗಿಸುವ ಪಾರಿಭಾಷಿಕಗಳಲ್ಲಿ ಅರ್ಥವನ್ನು ಸರ್ಕಸ್ಸು ಮಾಡಿ ಹೊರಡಿಸುವಂತಿರಬಾರದು. ಅದು ಸುಲಭವಾಗಿ ಹೊಮ್ಮುವಂತಿರಬೇಕು. ಆಗ ಅದು ಚಲಾವಣೆಯಲ್ಲಿ ನಿಲ್ಲುತ್ತದೆ. ಕುವೆಂಪು, ತಿ.ತಾ. ಶರ್ಮ ಇಂಥವರು ಸೃಷ್ಟಿಸಿದ ಎಷ್ಟೋ ಶಬ್ದಗಳು ನಿಂತಿರುವುದು ಈ ಸಹಜ ಅರ್ಥ ಸಂಪುಷ್ಟಿಯಿಂದಲೇ. ಹಿರೇಮಠರು ನೀಡುವ ಪಾರಿಭಾಷಿಕಗಳಿಗೆ ಈ ಗುಣವಿಲ್ಲ. ಆದ್ದರಿಂದ ಇವು ಸುಲಭವಾಗಿ ಸ್ವೀಕಾರಾರ್ಹವಾಗುವುದಿಲ್ಲ. ಮೂರನೆಯದಾಗಿ - ಜನ, ಜಾನ ಎಂಬುವು ಬೇರೆ ಪದಗಳೆಂದೂ 'ಪದ' ಎಂಬುದೇ ಬೇರೆ ಪದವೆಂದೂ ಹೇಳುವ ಹಿರೇಮಠದ ನಿಲುವು ಸರಿಯಲ್ಲ. ಜನಪದ, ಜಾನಪದ -ಎಂಬ ಶಬ್ದಗಳನ್ನು ಒಂದು ಇಡಿಯಾದ ಘಟಕವೆಂದೇ ನಾವು ಬಳಸುತ್ತಿದ್ದೇವೆ.

ಹೀಗೆ - ಪಾರಿಭಾಷಿಕ ಪದಗಳನ್ನು ಸ್ವೀಕರಿಸುವಲ್ಲಿ ನಮಗೆ ಕೆಲವು ತೊಡಕುಗಳಿದ್ದರೂ ಹಿರೇಮಠರು ಮುಂದಿಡುವ ಇನ್ನು ಕೆಲವು ವಿಚಾರಗಳಿಂದಾಗಿ ಈ ಪುಸ್ತಕ ಓದಲು ಅರ್ಹವಾಗಿದೆ.

-ಡಾ. ಎಸ್.ಪಿ. ಪದ್ಮಪ್ರಸಾದ್

ಜಾನಪದ ಮಾರ್ಗ :

ಲೇ. ಡಾ. ಎಂ.ಎಂ. ಕಲಬುರ್ಗಿ, ಪ್ರ : ಲಕ್ಷ್ಮಿ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, 341, ಕಾಳಮ್ಮನ ಗುಡಿ ಬೀದಿ. ಮೈಸೂರು - 570001, ಪು : 220, ಬೆಲೆ.ರೂ. 40-00

ಇದು ಖ್ಯಾತ ಸಂಶೋಧಕ ಡಾ. ಕಲಬುರ್ಗಿಯವರ ಮೂವತ್ತು ಬಿಡಿ ಲೇಖನಗಳ ಸಂಗ್ರಹ. ಎರಡು ಭಾಗಗಳಲ್ಲಿ ಸಂಕಲನಗೊಂಡಿರುವ ಈ ಲೇಖನಗಳ ಪೈಕಿ ಮೊದಲನೆಯ ಭಾಗ- 'ದೇವತೆ-ಆಚರಣೆ'ಗಳನ್ನು ಕುರಿತದ್ದು. ಇಲ್ಲಿ ಹದಿನಾಲ್ಕು ಲೇಖನಗಳಿವೆ. ಎಕ್ಕಲಮ್ಮ-ಎಲ್ಲಮ್ಮ, ಮೈಲಾರ-ಮಾಳಚಿ, ಬಳರಿ ದೇವತೆ, ಬಾದುಬ್ಬೆ, ಲಜ್ಜಾಗೌರಿ, ಉಡುಚಾದೇವಿ, ಇತ್ಯಾದಿ ಲೇಖನಗಳು ಇಲ್ಲಿವೆ. ಎರಡನೆಯ ಭಾಗ 'ಸಾಹಿತ್ಯ - ಸಂಶೋಧನೆ'ಗೆ ಸಂಬಂಧಿಸಿದ್ದು. ಇಲ್ಲಿ ಹದಿನಾರು ಲೇಖನಗಳಿವೆ. 'ಮಾರ್ಗಸಾಹಿತ್ಯ ಮತ್ತು ಜನಪದ ಸಾಹಿತ್ಯ', ಓವನಿಗೆ, ಜಾಣಪದ ಸಾಹಿತ್ಯ, ಸಣ್ಣಾಟ - ಒಂದು ವಿವೇಚನೆ, ಜಾನಪದ ಪ್ರೇಕ್ಷಕ ವರ್ಗ, ಒಕ್ಕಲಿಗರ ಅನುಭವಗಳು, ಅಣೆಸೋಣೇ- ಒಂದು ಜಾನಪದ ಗೀತ ಪ್ರಕಾರ -ಮೊದಲಾದವು ಈ ವಿಭಾಗದಲ್ಲಿಯ ಲೇಖನಗಳು; ಇವೆಲ್ಲ ಲೇಖಕರು ಆಗಾಗ ಬರೆದಿರುವ ಲೇಖನಗಳಾಗಿವೆ.

ಜಾನಪದದ ಯಾವುದೇ ಒಂದು ಪ್ರಕಾರ ಅಥವಾ ವಿಷಯವನ್ನು ಕುರಿತಂತೆ ವಿವೇಚನೆ ನಡೆಸುವುದನ್ನೇ ಗುರಿಯಾಗಿಟ್ಟುಕೊಂಡು ರಚಿತವಾದ ಸೋದ್ದೇಶ್ಯದ ಕೃತಿ ಇದಲ್ಲ ಎಂಬುದು ಸ್ಪಷ್ಟ. ಅಷ್ಟೇ ಅಲ್ಲ - ಇಲ್ಲಿಯ ಎಷ್ಟೋ ಲೇಖನಗಳು ಜಾನಪದದ ವಿವೇಚನೆಯನ್ನೇ ಪ್ರಧಾನವಾಗಿಟ್ಟುಕೊಂಡು ಬರೆಯಲ್ಪಟ್ಟವಲ್ಲ. ಲೇಖಕರ ಗಮನವನ್ನು ಸೆಳೆದ ಒಂದು ಶಾಸನ ಅಥವಾ ಕಾವ್ಯದಲ್ಲಿಯ ಉಲ್ಲೇಖ, ಕಿವಿಗೆ ಬಿದ್ದ ಅಪರೂಪದ ಒಂದು ಗಾದೆ/ನುಡಿಗಟ್ಟು, ಕಣ್ಣಿಗೆ ಬಿದ್ದ ಒಂದು ಆಚರಣೆ, ಇತ್ಯಾದಿಗಳು ಲೇಖಕರನ್ನು ಕೆಣಕಿ ವಿಚಾರ ಮಾಡಲು ಹಚ್ಚಿ ಆ ಕಾರಣವಾಗಿ ಅವರನ್ನು ದುಡಿಸಿಕೊಂಡು ಹೊರಹೊಮ್ಮಿದ ಬರಹಗಳಾಗಿವೆ ಇವು. ಆದರೆ ಒಂದು ಅಂಶ ಸ್ಪಷ್ಟ. ಬಹುಜ್ಞತೆ ಇಲ್ಲದ ವ್ಯಕ್ತಿಯೊಬ್ಬ ಇಲ್ಲಿಯ ಯಾವೊಂದು ಲೇಖನವನ್ನೂ ಬರೆಯಲು ಸಾಧ್ಯವಿಲ್ಲ. ಇಲ್ಲಿನ ಬಹುತೇಕ ಲೇಖನಗಳಲ್ಲಿ ಲೇಖಕರ - ಜಾನಪದ ಕ್ಷೇತ್ರ ಮಾಹಿತಿ, ಶಾಸನಜ್ಞಾನ, ಶಬ್ದನಿಷ್ಪತ್ತಿ ಶಾಸ್ತ್ರದ ತಿಳಿವು, ಹಳಗನ್ನಡ ಕಾವ್ಯಗಳ ಆಳವಾದ ಪರಿಜ್ಞಾನ - ಇವೆಲ್ಲ ವ್ಯಕ್ತವಾಗುತ್ತವೆ. ಅಂದರೆ- ಇಂಥ ಹಲವು ಶಿಸ್ತುಗಳ ಜ್ಞಾನಬಲದಿಂದ ಇಲ್ಲಿನ ಲೇಖನಗಳು ರೂಪುಗೊಳ್ಳಲು ಸಾಧ್ಯವಾಗಿದೆ. ಅಥವಾ - ಸ್ಪಷ್ಟ. ಈ ಕಾರಣದಿಂದಲೇ ಈಚಿನ ನಮ್ಮ ಎಷ್ಟೋ ಜಾನಪದ ಲೇಖಕರ ಲೇಖನಗಳಿಗಿಲ್ಲದ

ಒಂದು ಮೌಲಿಕತೆ, ಜಾನಪದ ಮಾರ್ಗದ ಲೇಖನಗಳಿಗೆ ಒದಗಿ ಬಂದಿದೆ.

ಇಷ್ಟೆಲ್ಲ ಹೇಳಿದ ಮಾತ್ರಕ್ಕೆ ಇಲ್ಲಿನ ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳೆಲ್ಲ ಸ್ವೀಕಾರಾರ್ಹ ಎಂದೇನೂ ಅಲ್ಲ. ಉದಾಹರಣೆಗೆ ಅವರು - 'ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಜಾನಪದ ಶುದ್ಧವಾಗಿ ನಿಂತಹಾಗೆ ದಕ್ಷಿಣ ಕರ್ನಾಟಕದಲ್ಲಿ ನಿಲ್ಲಲಿಲ್ಲ. ಇದಕ್ಕೆ ಕಾರಣ ಆಂಗ್ಲರ ನಾಗರಿಕತೆ ದಕ್ಷಿಣ ಕರ್ನಾಟಕದ ಹಳ್ಳಿಗಳಿಗೆ ಪ್ರವೇಶಿಸಿದಷ್ಟು ಉತ್ತರ ಕರ್ನಾಟಕದ ಹಳ್ಳಿಗಳಿಗೆ ಪ್ರವೇಶಿಸಲಿಲ್ಲ'- ಎಂಬರ್ಥದ ಮಾತುಗಳನ್ನು ಹೇಳುತ್ತಾರೆ. (ಪು.99). ಇದು ಎಷ್ಟರಮಟ್ಟಿಗೆ ಸರಿ? ದಕ್ಷಿಣ ಕರ್ನಾಟಕದಲ್ಲೂ ಆಂಗ್ಲ ಪ್ರಭಾವ ಪ್ರವೇಶಿಸದ ಬೇಕಾದಷ್ಟು ಹಳ್ಳಿಗಳು ಇಪ್ಪತ್ತು ವರ್ಷಗಳ ಹಿಂದಿನವರೆಗೂ ಇದ್ದವು. ಅದೇ ರೀತಿ, ಹವ್ಯಕ ಬ್ರಾಹ್ಮಣರಲ್ಲಿನ ಜನಪದ ಸಾಹಿತ್ಯವನ್ನು ಒಂದೇ ಮಾತಿನಲ್ಲಿ ನಿರಾಕರಿಸಿ ಬಿಡುತ್ತಾರೆ. (ಪು.94). ವೈಶಿಷ್ಟ್ಯಪೂರ್ಣವಾದ ದೇಸಿಯುಳ್ಳ ಈ ಜನಪದಗೀತೆಗಳನ್ನು ಹಾಗೆ ಸಾರಾಸಗಟಾಗಿ ನಿರಾಕರಿಸುವುದೆಂತು? ಇಂಥ ನಾಲ್ಕೆಂಟು ಭಿನ್ನಾಭಿಪ್ರಾಯಗಳಿಗೆಡೆ ಇದ್ದರೂ ಈ ಗ್ರಂಥವು ಜಾನಪದ ಅಧ್ಯಯನಾಸಕ್ತರು ಗಮನಿಸಬೇಕಾದ ಕೃತಿಯಾಗಿದೆ.

ಎಸ್.ಪಿ. ಪದ್ಮಪ್ರಸಾದ್

ಘಟ್ಟದ ಕೋರೆ ಯಕ್ಷಗಾನ ಮತ್ತು ಕೋಳಗಾಲ

ಲೇ: ಜಯಚಂದ್ರರಾಜ ಅರಸು. ಪ್ರ: ಪ್ರಣವಶ್ರೀ ಪ್ರಕಾಶನ, 531, 16ನೇ ಕ್ರಾಸ್, 4ನೇ ಮುಖ್ಯರಸ್ತೆ, 4ನೇ ಹಂತ, ಜೆ.ಪಿ. ನಗರ - ಬೆಂಗಳೂರು - 78

ಪುಟ: 180-20. ಬೆಲೆ : ರೂ. 50-00

ಇದು 'ಘಟ್ಟದ ಕೋರೆ ಯಕ್ಷಗಾನ' ಎಂದು ಪರಿಚಿತವಾಗಿರುವ ಯಕ್ಷಗಾನದ ಒಂದು ಪರಂಪರೆಯನ್ನು ವಿವರವಾಗಿ ಅಧ್ಯಯನಿಸಿ ದಾಖಲಿಸಿರುವ ಕೃತಿ. ಮೈಸೂರು ಜಿಲ್ಲೆ ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿರುವ ಕೋಳಗಾಲ ಎಂಬ ಗ್ರಾಮದಲ್ಲಿ ಈ ಪರಂಪರೆಯ ಯಕ್ಷಗಾನ ನೆಲೆ ನಿಂತು ಬೆಳವಣಿಗೆ ಹೊಂದಿತು. ಈ ಕೃತಿಯ ಲೇಖಕರ ಹಿಂದಿನ ಆರನೇ ತಲೆಮಾರಿನ ವ್ಯಕ್ತಿ ಕೊಯಮತ್ತೂರು ಕಡೆಯಿಂದ ಬಂದು ಕೋಳಗಾಲದಲ್ಲಿ ನೆಲೆಸಿದರು. ಸ್ವತಃ ಉತ್ತಮ ಯಕ್ಷಗಾನ ಕಲಾವಿದರಾಗಿದ್ದ ಆತ ತನ್ನ ಪರಿಸರದಲ್ಲಿ ಈ ಕಲೆಯನ್ನು ಪ್ರಸಾರ ಮಾಡಿದರು. ಅದಕ್ಕೆ ಇಂಬುಕೊಡುವಂತೆ ಅವರ ಮಕ್ಕಳು ಮೊಮ್ಮಕ್ಕಳೂ ಸಹ ಈ ಕಲೆಯನ್ನು ಹಿರಿಯರಿಂದ ಕಲಿತು ಉಳಿಸಿ, ಪ್ರಸಾರ ಮಾಡುತ್ತಾ ಬಂದರು. ತತ್ಪರಿಣಾಮವಾಗಿ ಈ ಕಲೆ ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ತನ್ನ ವಿಶಿಷ್ಟಾಂಶಗಳೊಡನೆ ಬದುಕಿ ಉಳಿದು ಖ್ಯಾತಿ ಪಡೆಯಿತು.

ಸುಂದರವಾಗಿ ಅಚ್ಚಾಗಿರುವ ಈ ಕೃತಿಯಲ್ಲಿ 'ಸಮಾರೋಪ'ದ ಹೊರತಾಗಿ ಏಳು ಅಧ್ಯಾಯಗಳಿವೆ. ಈ ಅಧ್ಯಾಯಗಳಲ್ಲಿ ಘಟ್ಟದ ಕೋರೆ ಯಕ್ಷಗಾನವು ಕೋಳಗಾಲಕ್ಕೆ ಬಂದು ಅರಳಿದ ಬಗೆ, ಈ ಪದ್ಧತಿಯಲ್ಲಿ ಪ್ರಸಂಗದ ಪೂರ್ವ ಸಿದ್ಧತೆ ಮತ್ತು ಪ್ರಯೋಗ, ಮೂಡಲಪಾಯ, ಪಡುವಲಪಾಯ, ದೊಡ್ಡಾಟ ಹಾಗೂ ಘಟ್ಟದಕೋರೆ ಯಕ್ಷಗಾನಗಳಿಗಿರುವ ಹೋಲಿಕೆ-ವ್ಯತ್ಯಾಸಗಳು, ಈ ಯಕ್ಷಗಾನ ಪ್ರಕಾರವು ಕೋಳಗಾಲದಲ್ಲಿ ಬೆಳವಣಿಗೆ ಹೊಂದಿದ ಕಾಲಘಟ್ಟಗಳು, ಹಸ್ತಪ್ರತಿ ರೂಪದಲ್ಲಿರುವ ಸಾಹಿತ್ಯ ಹಾಗೂ ಸಾಹಿತ್ಯಕಾರರು, ಇವುಗಳ ಬಗ್ಗೆ ಅಧಿಕೃತವಾದ ವಿವರಗಳು ಇವೆ. ಇವುಗಳ ಜೊತೆಗೆ-ಕೋಳಗಳಾದ ಪರಿಸರ ಹಾಗೂ ಜನಜೀವನ ಇಂದು ಹೇಗಿದೆ ಎಂಬುದರ ವಿವರವಿದೆ. ಕೊನೆಯ 'ಸಮಾರೋಪ'ವೆಂಬ ಕಿರುಭಾಗದಲ್ಲಿ ಕೋಳಗಾಲದ

ಜನಜೀವನ ಬದಲಾಗುತ್ತಿರುವ ಹೃದಯಸ್ಪರ್ಶಿ ನಿರೂಪಣೆಯಿದೆ. ಹೀಗೆ ಈ ಕೃತಿಯಲ್ಲಿ ಒಂದು ಜಾನಪದ ಕಲಾ ಪ್ರಕಾರದ ಅಧ್ಯಯನವಷ್ಟೇ ಅಲ್ಲ, ಒಂದು ಗ್ರಾಮದ ಸಾಮಾಜಿಕ ಅಧ್ಯಯನವೂ ಸೇರಿಕೊಂಡಿದೆ. ಆ ಹಳ್ಳಿಯ ಕೆಲ ಜನಪದ ಗೀತೆಗಳು, ಔಷಧಿಗಳು-ಇತ್ಯಾದಿಗಳನ್ನೂ ಲೇಖಕರು ಸಂಗ್ರಹಿಸಿಕೊಟ್ಟಿದ್ದಾರೆ

ಒಟ್ಟಿನಲ್ಲಿ ಇದೊಂದು ಶಿಸ್ತುಬದ್ಧ ಅಧ್ಯಯನದ ಕೃತಿ. ಲೇಖಕರು ತಮ್ಮ ಪೂರ್ವಿಕರ ಹಾಗೂ ಹುಟ್ಟೂರಿನ ಋಣವನ್ನು ಈ ಕೃತಿ ರಚನೆಯ ಮೂಲಕ ತೀರಿಸಿದ್ದಾರೆಂದು ಹೇಳಬಹುದು. ವಿಶ್ಲೇಷಣೆ ಸಮರ್ಪಕವಾಗಿದೆ.

ಎಸ್.ಪಿ. ಪದ್ಮಪ್ರಸಾದ್

ಜಾನಪದ ವರ್ಷ - 1995

ತನಿಎರೆದವರೆ-

ಡಾ. ಜಿ.ವಿ. ದಾಸೇಗೌಡ ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪುಟಗಳು 8-160. ಬೆಲೆ ರೂ. 24-00, 1995

ಇದು ಡಾ. ಜಿ.ವಿ. ದಾಸೇಗೌಡ ಅವರು 1985ರಲ್ಲಿಯೇ ಪ್ರಕಟಣೆಗೆಂದು ಕನ್ನಡ ಸಾಹಿತ್ಯ ಪರಿಷತ್ತಿಗೆಂದು ಒಪ್ಪಿಸಿದ ಜನಪದ ಗೀತೆಗಳ ಸಂಗ್ರಹ. ಆಗಲೇ ಸ್ವೀಕೃತವಾಗಿದ್ದರೂ ಮುದ್ರಣಯೋಗ ಬರಬೇಕಾದರೆ ಹತ್ತು ವರ್ಷಗಳ ಅಜ್ಞಾತವಾಸ ಕಳೆಯಬೇಕಾಯಿತು. ಈಗ ಕೃತಿ ಹೊರ ಬಂದಿದೆ. ಸಾಕಷ್ಟು ಚೆನ್ನಾಗಿಯೇ ಮುದ್ರಣವಾಗಿದೆ. ಇದು ಸಮಾಧಾನದ ಸಂಗತಿ.

ಮಂಡ್ಯ ಜಿಲ್ಲೆಯ ಗುತ್ತಲು, ಕಾಳಮುದ್ದನ ದೊಡ್ಡಿ, ಮಣ್ಣಿಗೆರೆ, ಗೊಲ್ಲರದೊಡ್ಡಿ ಮೊದಲಾದ ಆಸುಪಾಸಿನ ಗ್ರಾಮಗಳ ಕೆಲವು ವಕ್ತೃಗಳಿಂದ ಸಂಗ್ರಹಿಸಿದ ಸುಮಾರು ಐವತ್ತು ಜನಪದ ಗೀತೆಗಳು ಇಲ್ಲಿವೆ. ಸಾಹಿತ್ಯಕ ಸೌಂದರ್ಯದ ದೃಷ್ಟಿಯಿಂದ ಹಾಗೂ ಭಾಷಾ ವಿಜ್ಞಾನದ ದೃಷ್ಟಿಯಿಂದ ಇದೊಂದು ಒಳ್ಳೆಯ ಸಂಕಲನ. ಪ್ರಸ್ತಾವನೆಯಲ್ಲಿ ಸಂಪಾದಕರು ಈ ಗೀತೆಗಳಲ್ಲಿ ಸ್ತುತಿಸಲ್ಪಟ್ಟಿರುವ ದೇವರುಗಳಾದ ಗುತ್ತಲು ಅರ್ಕೇಶ್ವರಸ್ವಾಮಿ, ಚೌಡೇಶ್ವರಿ, ವೆಂಕಟರಮಣ ಸ್ವಾಮಿ, ಹನುಮಂತರಾಯ, ಮಾರಪ್ಪ, ನಂಜನಗೂಡಿನ ನಂಜಪ್ಪ-ಇತ್ಯಾದಿ ದೇವರುಗಳು ಇರುವ ಸ್ಥಾನ, ಗುಡಿಯ ಸ್ವರೂಪ, ಜಾತ್ರೆ, ಐತಿಹ್ಯಗಳು, ನಂಬಿಕೆಗಳು-ಇತ್ಯಾದಿ ಸಂಬಂಧಿಸಿದ ಹಲವು ಅಂಶಗಳ ಬಗ್ಗೆ ಉಪಯುಕ್ತ ಟಿಪ್ಪಣಿಗಳನ್ನು ನೀಡಿದ್ದಾರೆ. ಇದು ಅಭ್ಯಾಸಿಗಳಿಗೆ ಉಪಯುಕ್ತವಾಗಿದೆ. ತೌಲನಿಕ ಅಧ್ಯಯನ ಮಾಡಬೇಕೆನ್ನುವವರಿಗೂ ಈ ಟಿಪ್ಪಣಿಗಳು ಹಾಗೂ ಗೀತೆಗಳಲ್ಲಿ ಸಾಕಷ್ಟು ಮಾಹಿತಿಗಳು ದೊರೆಯುತ್ತವೆ.

ಸಂಗ್ರಹದ ಗೀತೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಿ ಕೊಟ್ಟಿದ್ದಾರೆ. ಮೊದಲ ಭಾಗ 'ಜನಪದ ದೇವರು' ಎಂಬುದು. ಇಲ್ಲಿ ಮೇಲೆ ಉದಾಹರಿಸಿದಂಥ

ಪರಿಸರದ ದೇವರುಗಳ ಬಗೆಗಿನ ಗೀತೆಗಳಿವೆ. ಎರಡನೆಯ ಭಾಗ-'ಜನಪದ ಸಂಕೀರ್ಣ ಗೀತೆಗಳು' ಎಂಬುದು. ಇಲ್ಲಿ ಮದುವೆ ಹಾಡುಗಳು, ಕೋಲಾಟದ ಹಾಡುಗಳು, ಅಣ್ಣ-ತಂಗಿ-ತೌರಿಗೆ ಸಂಬಂಧಿಸಿದ ಹಾಡುಗಳು, ದೂರಿಪದ, ಪ್ರಣಯಗೀತೆಗಳು ಇತ್ಯಾದಿಗಳಿವೆ. ಈ ವಿಭಾಗೀಕರಣವೇನೋ ಸಮರ್ಪಕವೇ. ಆದರೆ ಇನ್ನಷ್ಟು ವೈಜ್ಞಾನಿಕವಾಗಿ ವಿಭಾಗಿಸಬಹುದಿತ್ತು.

ಸಂಪಾದನಾಕಾರ್ಯ ಇನ್ನಷ್ಟು ವೈಜ್ಞಾನಿಕವಾಗಿರಬೇಕಾಗಿದ್ದದ್ದು ಅಪೇಕ್ಷಣೀಯ. ಒಟ್ಟು ಹಾಡುಗಳ ಸಂಖ್ಯೆ ಎಷ್ಟೆಂಬುದನ್ನು ನಾವು ಲೆಕ್ಕ ಮಾಡಿಯೇ ತಿಳಿಯಬೇಕು. ಅವಕ್ಕೆ ಕ್ರಮ ಸಂಖ್ಯೆ ಹಾಕಿಲ್ಲ. ವಕ್ತೃ ವಿವರ ಇದೆ. ಆದರೆ ಸಾಲದು. ಹಾಡುಗಳನ್ನು ಸಂಗ್ರಹಿಸಿದ ದಿನಾಂಕ, ವಕ್ತೃಗಳ ಆಯಾ ಹಾಡನ್ನು ಯಾರಿಂದ ಎಲ್ಲಿ ಕಲಿತರು ಎಂಬ ವಿವರಗಳು ಅಲ್ಲಿಲ್ಲ. ಆಯಾ ಹಾಡುಗಳ ಕುರಿತಾದ ನಂಬಿಕೆಗಳೇನಾದರೂ ಇದೆಯೇ ಎಂಬುದು ಪ್ರಸ್ತಾವನೆಯಲ್ಲಿ ಇರಬೇಕಿತ್ತು. ಅಂಥದೇನೂ ಅಲ್ಲಿಲ್ಲ.

ಈ ಒಂದೆರಡು ದೋಷಗಳಿದ್ದರೂ ಅಧ್ಯಯನಕಾರರಿಗೇನೂ ಇದರಿಂದ ಅಷ್ಟು ಅಡಚಣೆಯಾಗುವುದಿಲ್ಲ.. ಕೊನೆಯಲ್ಲಿ ಅರ್ಥಕೋಶವನ್ನೂ ಕೊಟ್ಟಿದ್ದಾರೆ. ಒಂದು ಉಪಯುಕ್ತ ಸಂಕಲನವಿದು ಎನ್ನಬಹುದು.

ಗೊಳಸಂಗಿ ಗ್ರಾಮ: ಒಂದು ಸಾಂಸ್ಕೃತಿಕ ಅಧ್ಯಯನ

ಲೇ: ಡಾ. ಅರ್ಜುನ. ಯ. ಗೊಳಸಂಗಿ; ಪ್ರ: ಮಲ್ಲಿಕಾರ್ಜುನ ಪ್ರಕಾಶನ,
ಗೊಳಸಂಗಿ-586231, ತಾ: ಬಸವನ ಬಾಗೇವಾಡಿ, ಬಿಜಾಪುರ ಜಿಲ್ಲೆ.
ಪು. 10-152. 1995. ಬೆಲೆ. ರೂ. 45-00.

ತಾಳ್ಮೆಯಿಂದ ಕೈಗೊಳ್ಳುವ ವಿಸ್ತಾರವಾದ ಕ್ಷೇತ್ರಕಾರ್ಯ, ದೊರಕಿದ ಮಾಹಿತಿಗಳ ವ್ಯವಸ್ಥಿತ ಜೋಡಣೆ-ಇವುಗಳ ಫಲವಾಗಿ ರೂಪಗೊಂಡ ಕೃತಿ-'ಗೊಳಸಂಗಿ ಗ್ರಾಮ-ಒಂದು ಸಾಂಸ್ಕೃತಿಕ ಅಧ್ಯಯನ.' ಆ ಗ್ರಾಮಕ್ಕೆ ಸಂಬಂಧಿಸಿದ ಎಲ್ಲ ಭೌತಿಕ, ಸಾಮಾಜಿಕ, ಸಾಂಸ್ಕೃತಿಕ ವಿವರಗಳನ್ನು ಲೇಖಕರು ಎಚ್ಚರಿಕೆಯಿಂದ ಕಲೆ ಹಾಕಿ ಸರಿಯಾಗಿ ವಿಂಗಡಿಸಿ ವಿವಿಧ ಅಧ್ಯಾಯಗಳಲ್ಲಿ ಸೂಕ್ತ ಶೀರ್ಷಿಕೆ-ಉಪಶೀರ್ಷಿಕೆಗಳೊಡನೆ ಜೋಡಿಸಿದ್ದಾರೆ. ಆ ಗ್ರಾಮದ ಪೂರ್ವೇತಿಹಾಸ, ಅಲ್ಲಿನ ವಿವಿಧ ಜನಪದ ವರ್ಗಗಳು, ಅವರುಗಳ ಸಾಂಸ್ಕೃತಿಕ ಬದುಕು, ಜನಪದ ದೇವತೆಗಳು, ಜಾತ್ರೆ, ಉತ್ಸವ, ಕಲೆಗಳು, ಹಬ್ಬ-ಹರಿದಿನ, ಆಟಗಳು ಇವುಗಳಿಗೆ ಸಂಬಂಧಿಸಿದ ಎಲ್ಲ ವಿವರಗಳು ಇಲ್ಲಿವೆ. ನಡುನಡುವೆ ಸಾಧ್ಯವಾದೆಡೆ ಐತಿಹ್ಯಗಳನ್ನು ಕಲೆಹಾಕಿ ಸೂಕ್ತವಾದ ಎಡೆಗಳಲ್ಲಿ ಉಲ್ಲೇಖಿಸಿದ್ದಾರೆ. ಪುಸ್ತಕದ ನಿರೂಪಣೆಯ ಭಾಗ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದ ನೂರಾರು ಅಡಿಟಿಪ್ಪಣಿಗಳು ಇಲ್ಲಿವೆ. ಅನುಬಂಧದಲ್ಲಿ ಗ್ರಾಮದಲ್ಲಿ ಹಾಡಲ್ಪಡುವ ಕೆಲವು ಜನಪದ ಗೀತೆಗಳು, ಕೆಲವು ಚಿತ್ರಗಳು, ಕಲಾವಿದರ ಪಟ್ಟಿ-ಇತ್ಯಾದಿ ಸಂಬಂಧಿತ ಮಾಹಿತಿಗಳಿವೆ.

ಹೀಗೆ ಶ್ರಮಪೂರ್ಣವಾಗಿ ಸಿದ್ಧಪಡಿಸಲಾದ ಈ ಕೃತಿಯು ಒಂದು ದೃಷ್ಟಿಯಲ್ಲಿ ಪರಿಮಿತವಾದದ್ದು. ಯಾಕೆಂದರೆ ಇಲ್ಲಿ ಮಾಹಿತಿಗಳನ್ನು ಸಂಗ್ರಹಿಸಿ ನೀಡುವ ಉದ್ದೇಶವಿದೆಯೇ ಹೊರತು ಅದನ್ನು ವಿಶ್ಲೇಷಿಸಿ ನೋಡುವ ಉದ್ದೇಶವಿಲ್ಲ. ಸಾಂಸ್ಕೃತಿಕ ಮಾನವಶಾಸ್ತ್ರದ ದೃಷ್ಟಿಯಿಂದ ನಡೆಸಿದ ಶೋಧನೆ ಇದಲ್ಲ. ಬೇರೆ ಗ್ರಾಮಗಳ ಬದುಕಿನ ಜೊತೆ ಹೋಲಿಸಿ ನೋಡುವ, ಸಾಮ್ಯ ವ್ಯತ್ಯಾಸಗಳು ಏಕಿವೆ ಎಂದು ತಿಳಿಯುವ ಪ್ರಯತ್ನ ಇಲ್ಲಿಲ್ಲ. ಅದೆಲ್ಲ ಇದ್ದರೆ ಇದೊಂದು (ಅಥವಾ ಇಂಥ ಯಾವುದೇ ಕೃತಿ) ಮಹತ್ಕೃತಿಯಾಗುತ್ತಿತ್ತು. ಈಗಿರುವಂತೆ ಇದು ಮುಂದಿನ ಸಂಶೋಧಕರಿಗೆ ಉಪಯುಕ್ತವಾಗುವ ಕಚ್ಚಾ ಸಾಮಗ್ರಿಗಳನ್ನು ಒದಗಿಸಿಕೊಡುವ ಕೃತಿ ಮಾತ್ರವಾಗಿ ರೂಪಗೊಂಡಿದೆ. ಆದರೆ ಇದೂ ಕೂಡಾ ಸುಲಭದಲ್ಲಿ ಆಗುವ ಕೆಲಸವಲ್ಲ. ಇದು ಮುಂದಿನ ಸಂಶೋಧಕರಿಗೆ ಭಾರೀ ಶ್ರಮವನ್ನು ತಪ್ಪಿಸುತ್ತದೆ. ಹಾಗೂ ಮುಂದಿನ ಹತ್ತು ವರ್ಷಗಳ ನಂತರ ಇದೇ ಗ್ರಾಮದ ಬಗ್ಗೆ ಬೇರೊಬ್ಬರು ಇಂಥಹುದೇ ಅಧ್ಯಯನ ಕೈಗೊಂಡರೆ ಆಗ ಊರಿನ ಬದುಕು ಬದಲಾಗಿರುವ ರೀತಿಯನ್ನು ತಿಳಿಯಲು ಪ್ರಸ್ತುತ ಕೃತಿ ಸಹಾಯ ಮಾಡುತ್ತದೆ.

ಕರ್ನಾಟಕದಲ್ಲಿ ಒಂದು ಗ್ರಾಮದ ಅಧ್ಯಯನ ಕುರಿತಂತೆ ಕೆಲವು ಕೃತಿಗಳು ಬಂದಿವೆ. ಅವುಗಳ ಪೈಕಿ 'ಚೆನ್ನಾದೇವಿ ಅಗ್ರಹಾರ-ಒಂದು ಅಧ್ಯಯನ' (ಡಾ. ಟಿ. ಗೋವಿಂದರಾಜು) ಬಹುಶಃ ಒಂದು ಮಾದರಿಯಾಗಬಲ್ಲ ಕೃತಿ. ಅದೇರೀತಿ ಕೋಟದವರು' (ಡಾ. ಪಿ.ಎನ್. ಮಯ್ಯ) ಕೂಡಾ ಒಂದು ಒಳ್ಳೆಯ ಅಧ್ಯಯನ. ಇಂಥ ಕೆಲವನ್ನು ಬಿಟ್ಟರೆ ಉಳಿದವು ಯಾವುದೇ ಮಹತ್ವಾಕಾಂಕ್ಷೆಯನ್ನಿಟ್ಟು ಕೊಳ್ಳದಿರುವುದರಿಂದ ಎರಡನೆಯ ಸಾಲಿನಲ್ಲಿ ನಿಲ್ಲುವಂಥ ಕೃತಿಗಳಾಗುತ್ತವೆ. ಇಲ್ಲಿಯೂ ಕೂಡ ತಾರತಮ್ಯಗಳಿವೆ. ಅರ್ಜುನ ಗೊಳಸಂಗಿಯವರ ಪ್ರಸ್ತುತ ಕೃತಿ ಚನ್ನಣ್ಣ ವಾಲೀಕಾರರ 'ಒಂದು ಗ್ರಾಮದ ಜಾನಪದೀಯ ಅಧ್ಯಯನ'ಕ್ಕಿಂತ ಉತ್ತಮವಾದುದು.

ಲೇಖಕರ ಉತ್ಸಾಹ ಮತ್ತು ಶ್ರದ್ಧೆ ಮೆಚ್ಚುವಂಥದು. ಒಂದು ಉಪಯುಕ್ತ ಕೃತಿ ನೀಡಿರುವುದಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ.

ಅನುಬಂಧ - 2

ಜಾನಪದ ಲೇಖನಸೂಚಿ - 1995

ಕ್ರಮ ಸಂಖ್ಯೆ	ಲೇಖನದ ಹೆಸರು	ಲೇಖಕರು	ಪತ್ರಿಕೆ	ದಿನಾಂಕ
1.	ಲವಂಗದ ನಾಡಿನ ಶವಸಂಸ್ಕಾರ ರೀತಿಗಳು	ಚೈತ್ರ	ಕರ್ಮವೀರ	24.12.1995
2.	ಕಾರ್ತಿಕದ ವಿಶೇಷ-ಆನೆಹಬ್ಬ	ಮುಕಂದರಾಜ ಪುರೋಹಿತ	‘’	17.12.1995
3.	ಗೋಣಿಕೊಪ್ಪಲಿನ ಸಾರ್ವಜನಿಕ ಹಬ್ಬ-ದಸರಾ	ಬಿ.ಕೆ. ಗಣೇಶ	‘’	8.10.1995
4.	ತುಳು ಬದ್‌ಕ್ (ಪರಿಚಯ ಲೇಖನ)	-	‘’	1.10.1995
5.	ನಾಡಹಬ್ಬ - ನವರಾತ್ರಿ	ಎ.ಎಸ್. ಚಂದ್ರಪ್ರಭ	‘’	8.10.1995
6.	ವೆಂಕಟೇಶ್ವರನ ಒಡವೆ, ವೈಭವ	ಕೆ. ಶಾಂತಕುಮಾರಿ	‘’	22.10.1995
7.	ನಕ್ಷತ್ರಗಳ ಪ್ರಕಾರ ಮಳೆ (ಟಿಪ್ಪಣಿ)	ಮೈತ್ರಿ ಭಾಗವತ್	‘’	22.10.1995
8.	ದನಗಾಹಿಗಳಿಂದ ಬೆಳಕಿನ ಹಬ್ಬ	ವಿಜಯೇಂದ್ರ ಕುಲಕರ್ಣಿ	‘’	29.10.1995
9.	ಹೋರಿ ಬೆದರಿಸುವ ಸ್ಪರ್ಧೆ	ಚೆಂದ್ರಶೇಖರ ಎಂ. ಗೌಡರ	‘’	29.10.1995
10.	ಸವದತ್ತಿ ಚಂದ್ರಗುತ್ತಿ ಮತ್ತು ದೇವದಾಸಿ	ಜೀ. ವೀರಣ್ಣ	‘’	5.11.1995

11.	ಅಳಿಯುತ್ತಿರುವ ಕಂಬಿ ಸಂಪ್ರದಾಯ	ಶಂಕರ ಮ. ಬೈಚನಾಳ	''	5.11.1995
12.	ಈ ಊರುಗಳಿಗೆ ಪ್ರಾಣಪಕ್ಷಿಗಳದೇ ಹೆಸರು (ಅನು)	ವಿಜಯೇಂದ್ರ ಕುಲಕರ್ಣಿ	''	12.11.1995
13.	ಕೋಮು ಸೌಹಾರ್ದದ ಪ್ರತೀಕ-ಪೀರ ಬುಖಾರಿ ದರ್ಗಾ	ಅರುಣನಾರಾಯಣ	''	19.11.1995
14.	ವಿಶಿಷ್ಟ ಸಂಪ್ರದಾಯಗಳ 'ಗೌರಿ ಜಾತ್ರೆ'	ಜಂಬುನಾಥ ಕಂಚ್ಯಾಣಿ	''	19.11.1995
15.	ಗ್ರಾಮೀಣ ಬದುಕಿನ ಸೊಗಡು-ಗೌರಿಹಬ್ಬ	ಶರಣಪ್ಪ ಬಾಚಲಾಪುರ	''	19.11.1995
16.	ಬಣ್ಣದ ವೇಷದ ಹೊಳಪಿನ ಮುಖಗಳು	ಪಿ.ಬಿ. ಪ್ರಸನ್ನ	ಸುಧಾ	23.4.1995
17.	ಸುಗ್ಗಿಯ ಹಿಗ್ಗಿನ ವೈಶಾಖಿ	ಪರಮಜಿತ್ ಠಾಕೂರ್	''	16.4.1995
18.	ಐರೋಡಿ ರಾಮ ಗಾಣಿಗ	ದಯಾನಂದ ಬಳ್ಕೂರ್	ತರಂಗ	14.5.1995
19.	ವಿಶಾಲಾ-ಗುಜರಾತಿನ ಕಂದೀಲು ಬೆಳಕಿನ ವಿಶಿಷ್ಟ ಹಳ್ಳಿ - ಹೋಟೆಲು	ಯು.ಬಿ. ರಾಜಲಕ್ಷ್ಮಿ	ತರಂಗ	9.4.1995
20.	ಕಡತೋಕಾ ಮಂಜುನಾಥ ಭಾಗವತ್	ಬಿ. ಗಣಪತಿ	ತರಂಗ	29.1.1995
21.	ಮರವಂತೆ ನರಸಿಂಹದಾಸ	ಬಿ. ಗಣಪತಿ	ತರಂಗ	11.6.1995
22.	ಡಾ. ಜೀ. ಶಂ. ಪರಮಶಿವಯ್ಯ	ಪುರುಷೋತ್ತಮ ಬಿಳಿಮಲೆ	ಕಸ್ತೂರಿ	9.1995
23.	ಆದಿವಾಸಿಗಳ ಜಾನಪದ ನೃತ್ಯಲೋಕ	ಮಧುರ	ಸಂಯುಕ್ತ ಕರ್ನಾಟಕ	15.1.1995
24.	ಕಿನ್ನಾಳ ಕಲೆಯ ಜೀವನಾಡಿ-ಸೋಮಣ್ಣ ಚಿತ್ರಗಾರ	ವಾಸುದೇವಚಾರ್ಯ, ಹುಲಿಗಿ	ಸಂ.ಕ.	5.2.1995
25.	ಜಾನಪದ ಹಾಡುಗಳಲ್ಲಿ ಗೊರೂರು ಜಾತ್ರೆ	ಗೊರೂರು ಅನಂತರಾಜು	''	5.2.1995
26.	ಮಳೆ-ನಂಬಿಕೆ ಆಚರಣೆಗಳ ಖಜಾನೆ	ಡಾ. ಎಸ್.ಪಿ. ಪದ್ಮಪ್ರಸಾದ್	''	9.7.1995

27.	ಕಂಬಳ	ಬಾಲು ಪುತ್ತಿಗೆ	ಪ್ರಜಾವಾಣಿ	12.2.1995
28.	ನಶಿಸುತ್ತಿರುವ ಸಾಂಜಿಕಲೆಗೆ ಪುನಶ್ಚೇತನ	ಸುಶೀಲ ಎಂ.ಪಿ.	''	12.2.1995
29.	ಹುಯ್ಯೋ ಹುಯ್ಯೋ ಮಳೆರಾಯಾ	ಡಾ. ಎಸ್.ಪಿ. ಪದ್ಮಪ್ರಸಾದ್	ಕನ್ನಡ ಪ್ರಭ	9.7.1995
30.	ಕಣ್ಮರೆಯಾದ ಜಾನಪದ ಮಹಾಮತ್ಸ್ಯ	ಡಾ. ಡಿ.ಕೆ. ರಾಜೇಂದ್ರ	ಸಂ.ಕ.	9.7.1995
31.	ಜಾನಪದ ಕಲಾ ಭಂಡಾರ	ಹಾಸಾಕೃ	ಕ.ಪ್ರ.	
32.	ಮಹಿಳಾ ಯಕ್ಷಗಾನ: ಬಡಗುತಿಟ್ಟಿಗೆ ಹೊಸ ಮೆರುಗು	ಮಂಜುನಾಥ ಬೀರಗದ್ದೆ	ಪ್ರ.ವಾ.	24.9.1995
33.	ಹೋರಿ ಓಡಿಸುವ ಕ್ರೀಡೆ	ಎ.ಆರ್. ಸುರೇಶ್	ಜಾನಪದ ಜಗತ್ತು	ಜನವರಿ 95 ಜೂನ್ 95
34.	ಲಮಾಣಿ ಜನಾಂಗದ ಉಡಿಗೆ ತೊಡಿಗೆಗಳು	ಡಾ. ಹರಿಲಾಲ್. ಕೆ. ಪವಾರ್	''	ಜನವರಿ 95 ಜೂನ್ 95
35.	ಬೀದರ್ ಜಿಲ್ಲೆಯ ಜನಪದ ವೃತ್ತಿ ಕಲಾವಿದರು	ಡಾ. ಹೆಬ್ಬಾಳೆ ಜಗನ್ನಾಥ	ಜಾನಪದ ಜಗತ್ತು	ಜನವರಿ 95 ಜೂನ್ 95
36.	ಜಂಬೂರು ನಾಗೇಲಗೌಡ್ರು (ಕತೆ)	ರಂಗಮ್ಮ (ವಕ್ತೃ) ಅನ್ನಪೂರ್ಣದೇವಿ (ಸಂ)	''	''
37.	ಜೀಶಂಪ-ಒಂದು ನೆನಪು	ವ.ನಂ. ಶಿವರಾಮು	''	''
38.	ಕೋಥಳಿ ಪದ್ಮಾವತಿ ದೇವಿ	ರಾಜಣ್ಣ ಹುಣಸೇಪಾಳ್ಯ	''	''
39.	ಟ್ರಸ್ಟ್‌ನಿಂದ ಅಕಾಡೆಮಿಯವರೆಗೆ-ವ.ನಂ. ಶಿವರಾಮು	ಸರ್ವಮಂಗಳ	''	''

40.	ಕಂಚಿನ ಕಂಠದ ಕಥನಕಾವ್ಯ ಗಾಯಕ-ಕಾರಯ್ಯ	ಎಂ. ಭೈರೇಗೌಡ	''	''
41.	ಜನ ಜಾನಪದ	ಡಾ. ಮಂಜುನಾಥ ಬೇವಿನಕಟ್ಟೆ	ಸಾಧನೆ	ಏಪ್ರಿಲ್ 95 ಜೂನ್ 95
42.	ಜನಪದ ಸಾಹಿತ್ಯದಲ್ಲಿ ಹೆಣ್ಣು	ದೊಡ್ಡರಂಗೇಗೌಡ	ಶೃತಿ ಸಂಗಮ ವಾರಪತ್ರಿಕೆ (ಹೊಸಕೋಟೆ)	5.2.1995
43.	ಬೇವುಬೆಲ್ಲ ಹಬ್ಬ ಬಂತಮ್ಮೋ ಬಂತು	– '' –	ಕನ್ನಡ ಪ್ರಭ	2.4.1995
44.	ಹಳ್ಳಿ ಹಾಡುಗಳಲ್ಲಿ ದೇವರು ಧರ್ಮ	– '' –	ಚಾಮುಂಡೇಶ್ವರಿ ಪತ್ರಿಕೆ	19.3.1995

ಅನುಬಂಧ - 3

ಜಾನಪದ ವರ್ಷ-95 - ಲೇಖಕರ ವಿಳಾಸಗಳು

1. ಡಾ. ಎಸ್.ಪಿ. ಪದ್ಮಪ್ರಸಾದ್,
ಪ್ರಾಚಾರ್ಯರು,
ಶ್ರೀ ಟಿ.ವಿ.ವಿ. ಶಿಕ್ಷಣ ಕಾಲೇಜು
ಅಂಚೆ: ಮಧುಗಿರಿ-572132, ತುಮಕೂರು ಜಿಲ್ಲೆ

2. ಪ್ರೊ. ಎಸ್.ಜಿ. ಸಿದ್ದರಾಮಯ್ಯ
ಮುಖ್ಯಸ್ಥರು-ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು, ಅಂಚೆ-ತುಮಕೂರು

3. ಡಾ. ಜಿ.ಎಂ. ಹೆಗಡೆ
6ನೇ ತಿರುವು, ಕಲ್ಯಾಣ ನಗರ,
ಧಾರವಾಡ - 580 007

4. ಡಾ. ಟಿ. ಗೋವಿಂದರಾಜು
ಇ-69, ಒಂದನೇ ಹಂತ, ಕುವೆಂಪು ನಗರ,
ಮೈಸೂರು - 570 023

5. ಎಂ.ಎಲ್. ನರಸಿಂಹಮೂರ್ತಿ
ಉಪನ್ಯಾಸಕರು-ಕನ್ನಡ ವಿಭಾಗ,
ಟಿ.ವಿ. ವೆಂಕಟಸ್ವಾಮಿ ಪ್ರಥಮದರ್ಜೆ ಕಾಲೇಜು,
ಮಧುಗಿರಿ - 572 132

6. ಪಿ. ರಾಮಕೃಷ್ಣ
ಉಪನ್ಯಾಸಕರು
ಟಿ.ವಿ. ವೆಂಕಟಸ್ವಾಮಿ ಶಿಕ್ಷಣ ಕಾಲೇಜು,
ಮಧುಗಿರಿ - 572 132

7. ಡಾ. ಕಮಲಾ ಹಂಪನಾ
1079-ಸ್ವನಿಮಾ, 18ಎ ಮುಖ್ಯರಸ್ತೆ, 36ನೇ ಅಡ್ಡ ರಸ್ತೆ,
5ನೇ ವಿಭಾಗ-ರಾಜಾಜಿನಗರ, ಬೆಂಗಳೂರು - 560 010